ಕಬ್‌ಮಾಸ್ಟರುಗಳ ಕೈಪಿಡಿ

ಮೂಲ ಲೇಖಕರು:

ಟಿ.ವಿ. ನೀಲಕಂಠಂ

ಮಾಜಿ ಕ್ಯಾಂಪ್ ಛೀಫ್ (ಸ್ಕೌಟ್ಸ್), ಇಂಡಿಯ

ಕನ್ನಡ ಅನುವಾದ ಮತ್ತು ಪರಿಷ್ಕರಣೆ:

ರಾ. ಚಂದ್ರಶೇಖರನ್, ಎಲ್.ಟಿ. (ಕಬಸ್)

ಮಾಜಿ ಸ್ಥಾನಿಕ ಆಯುಕ್ತ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಪ್ರಧಾನ ಕಾರ್ಯಾಲಯ

ನಂ.39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು 560 001

ಸ್ಕೌಟ್ಸ್ ಮತ್ತು ಗೈಡ್ಸ್ ಪ್ರಾರ್ಥನೆ

ದಯಾ ಕರ್ ದಾನ್ ಭಕ್ತೀ ಕಾ
ಹಮೇ ಪರಮಾತ್ಮಾ ದೇನಾ ।
ದಯಾ ಕರನಾ ಹಮಾರೀ
ಆತ್ಮಾ ಮೆ ಶುದ್ಧತಾ ದೇನಾ ॥

ಹಮಾರೆ ಧ್ಯಾನ್ ಮೆ ಆವೋ
ಪ್ರಭು, ಆಂಖೋಮೆ ಬಸ್ ಜಾವೋ ।
ಅಂಧೇರೆ ದಿಲ್ ಮೆ ಆಕರ್ ಕೆ
ಪರಂಜ್ಯೋತಿ ಜಗಾದೇನಾ ॥

ಬಹಾ ದೋ ಪ್ರೇಮ್ ಕೀ ಗಂಗಾ,
ದಿಲೋ ಮೆ ಪ್ರೇಮ್ ಕಾ ಸಾಗರ್ ।
ಹಮೆ ಆಪಸ್ ಮೆ ಮಿಲ್ ಜುಲ್ ಕರ್
ಪ್ರಭು, ರೆಹನಾ ಸಿಖಾದೇನಾ ॥

ಹಮಾರಾ ಕರ್ಮ್ ಹೋ ಸೇವಾ,
ಹಮಾರಾ ಧರ್ಮ್ ಹೋ ಸೇವಾ ।
ಸದಾ ಈಮಾನ್ ಹೋ ಸೇವಾ,
ವಹ್ ಸೇವಕ್ ಚರ್ ಬನಾದೇನಾ ॥

ವತನ್ ಕೆ ವಾಸತೆ ಜೀನಾ,
ವತನ್ ಕೆ ವಾಸತೆ ಮರನಾ ।
ವತನ್ ಪರ್ ಜಾನ್ ಫಿದಾ ಕರ್‌ನಾ
ಪ್ರಭು, ಹಮ್‌ಕೋ ಸಿಖಾ ದೇನಾ
॥ ದಯಾಕರ್ ॥

ಧ್ವಜಗೀತೆ

ಭಾರತ್ ಸ್ಕೌಟ್ ಗೈಡ್ ಝಂಡಾ
ಊಂಚಾ ಸದಾ ರಹೇಗಾ ।
ಊಂಚಾ ಸದಾ ರಹೇಗಾ ಝಂಡಾ
ಊಂಚಾ ಸದಾ ರಹೇಗಾ ॥

ನೀಲಾ ರಂಗ್ ಗಗನ್ ಸಾ ವಿಸ್ತೃತ
ಭಾತೃ ಭಾವ್ ಫೈಲಾತಾ ।
ತ್ರಿದಲ ಕಮಲನಿತ್ ತೀನ್
ಪ್ರತಿಜ್ಞಾವೊಂ ಕೀ ಯಾದ್ ದಿಲಾತಾ ।
ಔರ್ ಚಕ್ರ ಕಹತಾಹೈ
ಪ್ರತಿಪಲ್ ಆಗೆ ಕದಂ ಬಢೇಗಾ ॥

ಊಂಚಾ ಸದಾ ರಹೇಗಾ ಝಂಡಾ
ಊಂಚಾ ಸದಾ ರಹೇಗಾ ।
ಭಾರತ್ ಸ್ಕೌಟ್ ಗೈಡ್ ಝಂಡಾ
ಊಂಚಾ ಸದಾ ರಹೇಗಾ ॥

ಕಬ್‌ಮಾಸ್ಟರುಗಳ ಕೈಪಿಡಿ

ಮೂಲ ಲೇಖಕರು

ಟಿ.ವಿ. ನೀಲಕಂಠಂ

ಮಾಜಿ ಕ್ಯಾಂಪ್ ಛೀಫ್ (ಸ್ಕೌಟ್ಸ್) ಇಂಡಿಯ

ಕನ್ನಡ ಅನುವಾದ ಮತ್ತು ಪರಿಷ್ಕರಣೆ

ರಾ. ಚಂದ್ರಶೇಖರನ್, ಎಲ್.ಟಿ. (ಕಬ್ಸ್)

ಮಾಜಿ ಸ್ಥಾನಿಕ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಪ್ರಧಾನ ಕಾರ್ಯಾಲಯ

ನಂ.39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ಪ್ರಕಾಶಕರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
ರಾಜ್ಯ ಪ್ರಧಾನ ಕಾರ್ಯಾಲಯ
ನಂ.39, ಶಾಂತಿಗೃಹ
ಅರಮನೆ ರಸ್ತೆ, ಬೆಂಗಳೂರು - 560 001

ಹಕ್ಕುಗಳು : ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಪ್ರಥಮ ಮುದ್ರಣ : 1995; 2000 ಪ್ರತಿಗಳು
ಎರಡನೇ ಮುದ್ರಣ : 2004; 1000 ಪ್ರತಿಗಳು
ಮೂರನೇ ಮುದ್ರಣ : 2013; 1000 ಪ್ರತಿಗಳು
ನಾಲ್ಕನೇ ಮುದ್ರಣ : 2021; 500 ಪ್ರತಿಗಳು

ಪುಟಗಳು : **viii + 184 = 192**

ಬೆಲೆ : **₹ 90/-**

ಮುಖಪುಟ : ರಾಜ್ಯಪಾಲರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವ ಮರಿ

ಮುದ್ರಕರು:
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
16/1, 2ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,
ಮೈಸೂರು ರಸ್ತೆ, ಕಸ್ತೂರಿಬಾ ನಗರ,
ಬೆಂಗಳೂರು-560 026. ದೂ: 080-2674881l

ಮುನ್ನುಡಿ

"ಬೆಳೆಯುವ ಪೈರು ಮೊಳಕೆಯಲ್ಲಿಯೇ" ಎಂಬ ನಾಣ್ಣುಡಿಯಂತೆ, ಬೆಳೆಯುತ್ತಿರುವ ಮಕ್ಕಳು ಯಾವುದರಲ್ಲಿ ಆಸಕ್ತಿ ತೋರುತ್ತಿದ್ದಾರೆ, ಅದು ಅವರ ಏಳಿಗೆಗೆ ಪೂರಕವಾಗಿ, ಮುಂದೆ ಅವರ ಭವಿಷ್ಯ ಚೆನ್ನಾಗಿರುತ್ತದೆ. ಬೆಳೆಯುವ ಮಕ್ಕಳನ್ನು ಬಾಲ್ಯದಲ್ಲಿಯೇ ಬೇಕಾದಂತೆ ತಿದ್ದಿಕೊಳ್ಳಬೇಕು. ಬಾಲ್ಯದಲ್ಲಿ ಕಲಿಸಿದಾಗ ಎಲ್ಲವನ್ನೂ ಮಗು ಕಲಿತುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಕಬ್ & ಬುಲ್‌ಬುಲ್ ವಿಭಾಗಗಳು, ಸ್ಕೌಟಿಂಗ್/ಗೈಡಿಂಗ್‌ಕಡೆಗೆ ಮಕ್ಕಳಲ್ಲಿ ಚಿಂತನಶೀಲತೆಯನ್ನು ಹುಟ್ಟುಹಾಕುವ ಬಹು ಮುಖ್ಯವಾದ ವಿಭಾಗವಾಗಿದೆ. ಇದು ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆಗೆ ಅಡಿಪಾಯವೂ ಹೌದು.

ಮುಂದೆ ಸ್ಕೌಟ್-ಗೈಡ್‌ಗಳಾಗಬೇಕೆಂದು ಆಶಿಸುವ ಪುಟಾಣಿಗಳಿಗೆ, ಶಿಸ್ತು, ಸೇವೆ, ರಾಷ್ಟ್ರೀಯತೆ, ಸಾಹಸಪ್ರಿಯತೆ, ಕ್ರೀಡಾಮನೋಭಾವ, ಸಚ್ಚಾರಿತ್ರ, ಕ್ರಿಯಾಶೀಲತೆ ಮತ್ತಿತರ ಗುಣಗಳನ್ನು ವೃದ್ಧಿಪಡಿಸುವ ಶಿಕ್ಷಣವನ್ನು ನೀಡುವಲ್ಲಿ **"ಕಬ್ ಮಾಸ್ಟರ್"**ಗಳ ಪಾತ್ರ ತುಂಬಾ ದೊಡ್ಡದು. ಈ ಬಗ್ಗೆ ರಾಷ್ಟ್ರೀಯ ತರಬೇತಿ ಶಿಬಿರದ ಮುಖ್ಯಸ್ಥರಾಗಿದ್ದ ದಿ॥ ಟಿ.ವಿ. ನೀಲಕಂಠಂ ಅವರು ಇಂಗ್ಲೀಷ್‌ನಲ್ಲಿ ಬರೆದಿರುವ **"Hand Book for Cub Masters"** ಪುಸ್ತಕವನ್ನು ಸಂಸ್ಥೆಯ ಹಿರಿಯ ಕಬ್‌ಮಾಸ್ಟರ್‌ರಾದ ಶ್ರೀ ರಾ. ಚಂದ್ರಶೇಖರನ್ ರವರು ಆಂಗ್ಲ ಭಾಷೆಯ ಕೈಪಿಡಿಯನ್ನು ಕನ್ನಡಕ್ಕೆ ಅನುವಾದಿಸುವ ಉತ್ತಮ ಕೆಲಸವನ್ನು ಮಾಡಿದ್ದಾರೆ. ಈಗಾಗಲೇ ಈ ಕೈಪಿಡಿಯ ಮೂರು ಮುದ್ರಣಗಳಾಗಿದ್ದು, ಈಗ ನಾಲ್ಕನೆಯ ಮುದ್ರಣ ಪ್ರಕಟಿಸಲಾಗುತ್ತಿದೆ.

ಸ್ಕೌಟಿಂಗ್‌ಗಾಗಿ, ಅದರಲ್ಲೂ ಮರಿಗಳ ವಿಭಾಗಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು, ಇಂದಿಗೂ ಲವಲವಿಕೆಯಿಂದಿರುವ ನಮ್ಮೆಲ್ಲರ ಸಾಕ್ಷಿಪ್ರಜ್ಞೆಯಾಗಿರುವ ಶ್ರೀ ರಾ. ಚಂದ್ರಶೇಖರನ್‌ರವರು ನಮ್ಮ ರಾಜ್ಯ ಸಂಸ್ಥೆಯ ಹೆಮ್ಮೆ. ಈ ವಿಭಾಗದಲ್ಲಿ ಅತ್ಯಂತ ಬದ್ಧತೆಯಿಂದ ಸೇವೆಯಲ್ಲಿ ತೊಡಗಿರುವ ಇವರು ವಿಶೇಷವಾಗಿ ಮರಿಗಳಿಗಾಗಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅಂತಹ ಪುಸ್ತಕಗಳ ಸರಣಿಯಲ್ಲಿ, ಈ **"ಕಬ್‌ಮಾಸ್ಟರ್‌ಗಳ ಕೈಪಿಡಿ"**ಯೂ ಒಂದು. ಇದು ನಮ್ಮ ರಾಜ್ಯದ ಕಬ್ ಮಾಸ್ಟರ್‌ಗಳಿಗೆ ಉಪಯುಕ್ತ ಕೈಪಿಡಿಯಾಗಿ ಈಗಾಗಲೇ ಜನಪ್ರಿಯವಾಗಿರುತ್ತದೆ.

ಶ್ರೀ ರಾ. ಚಂದ್ರಶೇಖರನ್ ರವರಿಗೆ ಉತ್ತಮ ಆಯುರಾರೋಗ್ಯವನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ, ಅವರ ಸಾಹಿತ್ಯ ಬತ್ತಳಿಕೆಯಿಂದ ಚಳವಳಿಯ ಬೆಳವಣಿಗೆಗೆ ಪೂರಕ ಹಾಗೂ ಉಪಯುಕ್ತವಾದ ಇನ್ನೂ ಅನೇಕ ಕೃತಿಗಳು ಹೊರಬರಲೆಂದು ಆಶಿಸುತ್ತೇನೆ.

ಕೈಪಿಡಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿರುವ ಸತ್ಯಶ್ರೀ ಪ್ರಿಂಟರ್ಸ್ ಪ್ರೈ.ಲಿ.,ನ ಮಾಲೀಕರು ಮತ್ತು ಸಿಬ್ಬಂದಿವರ್ಗದವರಿಗೆ ಧನ್ಯವಾದಗಳು.

ಪಿ.ಜಿ.ಆರ್.ಸಿಂಧ್ಯ
ರಾಜ್ಯ ಮುಖ್ಯ ಆಯುಕ್ತರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಅನುವಾದಕನ ಮಾತು

ಮರಿಗಳ ಶಿಕ್ಷಣವು (ಕಬ್ಬಿಂಗ್) ಸ್ಕೌಟಿಂಗ್ ಆಟದ ಭಾಗವಾಗಿದೆ. ಇದನ್ನು ಒಳ್ಳೆಯ ಪೌರತ್ವದೆಡೆಗೆ ಮುನ್ನಡೆಯುವ ಪ್ರಯಾಣದಲ್ಲಿನ ಮೊದಲ ಹೆಜ್ಜೆಯೆಂದೇ ಹೇಳಬೇಕು. ನಡತೆಯನ್ನು ತಿದ್ದುವುದು ಅದರ ಗುರಿ. ಬಾಲಕರಲ್ಲಿ ಸ್ವಶಿಸ್ತು ಹಾಗೂ ಇತರರ ಬಗ್ಗೆ ಕಾಳಜಿ ವ್ಯಕ್ತಪಡಿಸುವ, ಗುಣಗಳನ್ನು ವೃದ್ಧಿಪಡಿಸುವ ಶಿಕ್ಷಣವನ್ನು ಕೊಡುವುದು ಅದರ ರೀತಿ.. ಮಕ್ಕಳ ಕೋಮಲ ಮನಸ್ಸಿನಲ್ಲಿ ಪರಿಣಾಮಕಾರಿಯಾಗಿ ನಿಲ್ಲಬೇಕಾದರೆ, ಶಿಕ್ಷಣವು ಸರಳವಾಗಿಯೂ, ನಿಷ್ಕಪಟವಾಗಿಯೂ ಇರಬೇಕೆಂದೂ, ಬಾಲಕರನ್ನು ಅರಿತುಕೊಳ್ಳುವುದು ಅಕೇಲರ ಕಾರ್ಯಭಾರದ ಅರ್ಧದಷ್ಟೆಂದೂ, ಗುರುತಿಸಲಾಗಿದೆ.

ಉಳಿದ ಅರ್ಧ ಭಾಗದಲ್ಲಿ, ಉದ್ದೇಶವನ್ನು ಮರೆಯದೆ, ಅದನ್ನು ಪೂರ್ತಿಯಾಗಿ ಸಾಧಿಸುವ ರೀತಿ ನೀತಿಯನ್ನು ಕಂಡುಕೊಳ್ಳುವುದಾಗಿದೆ. ಅಕೇಲರು ಬಾಲಕರನ್ನು ಅರ್ಥಮಾಡಿಕೊಂಡು, ತದನುಗುಣವಾಗಿ ಶಿಕ್ಷಣವನ್ನು ನೀಡಬೇಕು. ಬಾಲಕರ ಅವಶ್ಯಕತೆಗಳಿಗೆ ಸ್ಪಂದಿಸಿ ಸಾಕಷ್ಟು ಕಲ್ಪನಾಶಕ್ತಿಯುಳ್ಳವರಾಗಿ ತಮಗೂ, ಅವರಿಗೂ ಒಪ್ಪುವಂತಹ ಸಮರ್ಪಕ ಕಾರ್ಯ ಚಟುವಟಿಕೆಗಳನ್ನು ಯೋಜಿಸಲು ಶಕ್ತರಾಗಿರಬೇಕು. ಹಿಂಡಿನ ಜೀವನದಲ್ಲಿ ಕೆಲಸ ಮತ್ತು ಆಟಗಳು, ಸಾಹಸ ಮತ್ತು ಕಲ್ಪನೆ ಇವುಗಳನ್ನು ಮರಿಗಳಿಗೆ ಒದಗಿಸಿ, ತನ್ಮೂಲಕ ಹಿಂಡಿನಲ್ಲಿ ಆರೋಗ್ಯಕರ, ಆಕರ್ಷಕ ಹಾಗೂ ಸೌಹಾರ್ದಯುತ ವಾತಾವರಣವನ್ನು ಕಲ್ಪಿಸಬೇಕು. ಇದರಿಂದ ಮರಿಗಳ ಬೆಳವಣಿಗೆ ಸುಲಭವಾಗುತ್ತದೆ.

ಹಿಂಡಿನ ಜೀವನವು, ಸಂತೋಷದಾಯಕ ಚಟುವಟಿಕೆಗಳ ಮೂಲಕ, ಮರಿಗಳು ತಮ್ಮ ಪರೀಕ್ಷಾಂಶಗಳಲ್ಲಿ ಪ್ರಗತಿ ಹೊಂದುತ್ತಾ ಪದಕಗಳನ್ನು ಪಡೆಯುವುದರ ಮೂಲಕ ಪ್ರಾಸಂಗಿಕವಾಗಿ ಈ ಪ್ರಗತಿ ಸಾಧನೆಗೆ ಅನುಕೂಲವಾಗುತ್ತದೆ. ಮರಿಗಳು ಯಾವತ್ತೂ ಮುನ್ನಡೆಯಲು ಕಾತುರರಾಗಿರುತ್ತಾರೆ. ಅವರಿಗೆ ನೀಡುವ ಶಿಕ್ಷಣ ಮತ್ತು ಮಾಡುವ ಪರೀಕ್ಷೆಗಳು ಎಂದಿಗೂ ಹೊರೆಯಾಗಬಾರದು. ಅವು ಸಂತೋಷದಾಯಕವಾಗಿರಬೇಕು.

ಅಕೇಲರಿಗೆ ಅವರ ಈ ಕಾರ್ಯಭಾರವು ಆಶಾದಾಯಕವಾದುದಷ್ಟೇ ಅಲ್ಲದೆ, ಮಾತೃಭೂಮಿಯ ಸೇವೆಯಲ್ಲಿ ಮಹತ್ವಪೂರ್ಣವುಳ್ಳದ್ದಾಗಿದೆ. ಆ ಕಾರ್ಯದಲ್ಲಿ ಈ ಕೈಪಿಡಿಯೊಂದು ಮಾರ್ಗದರ್ಶಿ. ನಾನು ಕಬ್‌ಮಾಸ್ಟರಾಗಿದ್ದಾಗಿನ ಕನ್ನಡ ಪುಸ್ತಕಗಳ ಬೇಡಿಕೆ ಹಾಗೆಯೇ ಉಳಿದು ಬಂದು, ನಾನು ಕಂಡ ಕನಸನ್ನು ನನಸಾಗಿಸುವ, ಆ ಬೇಡಿಕೆಯನ್ನು ಕಿಂಚಿತ್ತಾದರೂ ಪೂರೈಸುವ ಭಾಗ್ಯ ನನಗೆ ದೊರಕಿದ್ದು ನನ್ನ ಅದೃಷ್ಟವೆಂದು ಭಾವಿಸುತ್ತೇನೆ. 1995ರಲ್ಲಿ ಬಿಡುಗಡೆಯಾದ ಪುಸ್ತಕದ ಈಗಿನ ಪರಿಷ್ಕರಣೆಯೂ ನನ್ನ ಕೈಸೇರಿದ್ದು ಮಹದ್ಭಾಗ್ಯವೆಂದು ಭಾವಿಸುತ್ತೇನೆ.

ಸ್ಕೌಟಿಂಗ್‌ಗಾಗಿ, ಅದರಲ್ಲೂ ಮರಿಗಳ ವಿಭಾಗಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿರಿಸಿ, ವಿಶೇಷವಾಗಿ ಮರಿಗಳಿಗಾಗಿ ಪುಸ್ತಕಗಳನ್ನು ಬರೆದು, ದೇಶದಲ್ಲೇ ಪ್ರಥಮವಾದ, ಇಂದಿಗೂ ನಡೆಯುತ್ತಾ ಬಂದಿರುವ 94 ವರ್ಷಗಳು ಸಂದಿರುವ ಬೆಂಗಳೂರು ಶ್ರೀ ಚಾಮುಂಡಿ ಸ್ಕೌಟ್ ಮುಕ್ತದಳವನ್ನು ಸ್ಥಾಪಿಸಿ, ಸಾರ್ಥಕತೆ ಹೊಂದಿದ ನನ್ನ ಪೂಜ್ಯ ತಂದೆಯವರಾದ ದಿ॥ ಎಂ.ಹೆಚ್. ರಾಮಚಂದ್ರರಾಯರನ್ನೂ ಸ್ಕೌಟಿಂಗಿಗಾಗಿ ಅದೇ ರೀತಿ ತಮ್ಮನ್ನರ್ಪಿಸಿಕೊಂಡಿದ್ದ ಪೂಜ್ಯರಾದ ದಿ॥ ನೀಲಕಂಠಂ ರವರು, ಬಾಲ್ಯದಿಂದಲೂ ನನ್ನನ್ನು ಗಮನಿಸುತ್ತಿದ್ದು, ನನ್ನ ಏಳ್ಗೆಯಲ್ಲಿ ತಮ್ಮ ಸಂತೋಷವನ್ನು ಕಂಡುಕೊಂಡ, ದಿ॥ ಮು. ವೆಂಕಟಕೃಷ್ಣಪ್ಪ ಮತ್ತು ದಿ॥ ಕೆ. ಕಾಶೀನಾಥ್ (ಇವರಿಬ್ಬರೂ ಕರ್ನಾಟಕ ರಾಜ್ಯ ಸಂಸ್ಥೆಯ ಮರಿಗಳ ವಿಭಾಗದ ಎಲ್.ಟಿ.,ಗಳಾಗಿದ್ದು "ಬೆಳ್ಳಿ ಆನೆ" ಪ್ರಶಸ್ತಿ ಪಡೆದಿದ್ದವರು) ಇವರುಗಳನ್ನೂ ಸ್ಮರಿಸಿ ನನ್ನ ಕೃತಜ್ಞತಾಶ್ರು ಗಳನ್ನರ್ಪಿಸುತ್ತೇನೆ.

ರಾ. ಚಂದ್ರಶೇಖರನ್
ಅನುವಾದಕ

ಅನುಕ್ರಮಣಿಕೆ

ಅಧ್ಯಾಯ	ವಿಷಯ	ಪುಟಸಂಖ್ಯೆ
	ಮುನ್ನುಡಿ	iii
	ಅನುವಾದಕನ ಮಾತು	v
1.	ಮರಿಯ ವಯಸ್ಸಿನ ಬಾಲಕ	1–9
2.	ಹಿಂಡು ಮತ್ತು ಷಟ್ಕಗಳು	10–11
3.	ಮರಿಗಳ ಶಿಕ್ಷಣ	12–13
4.	ಪದಕಗಳಿಗೆ ತಯಾರಾಗುವುದು	14–16
5.	ಪ್ರವೇಶ್ ಮರಿ	17–32
6.	ಮರಿಗಳ ದೀಕ್ಷಾ ಸಮಾರಂಭ	33–36
7.	ಸಮವಸ್ತ್ರ, ಪದಕಗಳು ಮತ್ತು ಲಾಂಛನ	37–41
8.	ಹಿಂಡಿನ ವಾತಾವರಣ	42–44
9.	ಹಿಂಡಿನ ಜೀವನದಲ್ಲಿ ಉದಂತಗಳು ಮತ್ತು ಕಥೆಗಳು	45–48
10.	ಮರಿಗಳಿಗೆ ನಾಟಕ ಕಲೆ	49–53
11.	ಕರಕುಶಲ ಕಲೆಗಳು	54–58
12.	ಪ್ರಕೃತಿ ವೀಕ್ಷಣೆ	59–60
13.	ಮರಿಗಳ ಆಟಗಳು	61–65
14.	ಮರಿಯ ಪ್ರಗತಿಯ ಮಾರ್ಗ	66–67
15.	ಪ್ರಥಮ ಚರಣ್ ಪದಕದ ಪರೀಕ್ಷಾಂಶಗಳು	68–88
16.	ದ್ವಿತೀಯ ಚರಣ್ ಪದಕದ ಪರೀಕ್ಷಾಂಶಗಳು	89–100
17.	ತೃತೀಯ ಚರಣ್ ಪದಕದ ಪರೀಕ್ಷಾಂಶಗಳು	101–113
18.	ಚತುರ್ಥ ಚರಣ್ ಪದಕದ ಪರೀಕ್ಷಾಂಶಗಳು	114–127
19.	ಪ್ರವೀಣತಾ ಪದಕಗಳು	128–130

	ಅನುಬಂಧ–ಪ್ರವೀಣತಾ ಪದಕಗಳ ಪಠ್ಯಾಂಶಗಳು	**131–142**
20.	ಹಿಂಡಿನ ಚಟುವಟಿಕೆಗಳು	143–147
21.	ಹಿಂಡಿನ ಶಿಸ್ತು	148–149
22.	ಷಟ್ಕ ಪದ್ಧತಿ	150–153
23.	ಹಿಂಡಿನ ಗುಹೆ/ಕೋಣೆ	154
24.	ಮರಿಗಳ ಹಿಂಡು ಮತ್ತು ಸ್ಕೌಟ್‌ದಳ	155–158
25.	ಹಿಂಡಿನ ಲಿಖಾವಟ್ಟುಗಳು	159–164
26.	ಗುಂಪು (ಮಂಡಲ, ಗ್ರೂಪ್)	165–169
27.	ಹಿಂಡನ್ನು ಸಂಘಟಿಸುವುದು ಮತ್ತು ನಡೆಸುವುದು	170–175
28.	ಸಹಕಾರ	176–178
29.	ಕಬ್‌ಮಾಸ್ಟರು ಮತ್ತು ಅವರ ತರಬೇತಿ	179–180
30.	ನಮ್ಮ ಇಂದಿನ ಸವಾಲುಗಳು ಮತ್ತು ದತ್ತು ಸ್ವೀಕಾರ	181–182

◆

ಅಧ್ಯಾಯ-1

ಮರಿಯ ವಯಸ್ಸಿನ ಬಾಲಕ

ಈ ಪುಸ್ತಕದಲ್ಲಿ ಮರಿಗಳ ಬಗ್ಗೆ ಎಲ್ಲಾ ವಿಷಯಗಳನ್ನೂ ತಿಳಿಸಲಾಗಿದೆ. ಇನ್ನೂ ಸಾಕಷ್ಟು ವಯಸ್ಸಾಗದ, ಆದರೆ ಮುಂದೆ ಸ್ಕೌಟುಗಳಾಗಬೇಕೆಂದು ಆಶಿಸುವ, ಪುಟಾಣಿಗಳಿಗೆ ಮರಿಗಳು ಎನ್ನುತ್ತಾರೆ. ಸ್ಕೌಟುಗಳಾಗಬೇಕಾದರೆ, ಅವರು 10 ವರ್ಷ ವಯಸ್ಸಾಗುವವರೆಗೆ ಕಾಯಬೇಕಾಗುತ್ತದೆ. ಮುಂದೆ ಒಳ್ಳೆಯ ಸ್ಕೌಟುಗಳಾಗಲು ಶಿಕ್ಷಣ ಪಡೆಯಬಹುದು.

ಕಬ್ಬಿಂಗ್ ಬಹಳ ಸ್ವಾರಸ್ಯಕರವಾದ, ಮಹತ್ವದ ಆಟ. ಮಕ್ಕಳು ಕಲ್ಪನಾ ಪ್ರಪಂಚದಲ್ಲಿ ವಿಹರಿಸುತ್ತಾರೆ. ವಿವಿಧ ಪಾತ್ರಗಳ ಅಭಿನಯದಲ್ಲಿ ಕಾಲ ಕಳೆಯುತ್ತಾರೆ. ವಸ್ತುಗಳನ್ನು ತಯಾರಿಸಲು ಕಲಿಯುತ್ತಾರೆ. ಆಟಗಳಲ್ಲಿಯೂ, ಸ್ಪರ್ಧೆಗಳಲ್ಲಿಯೂ ಭಾಗವಹಿಸಿ, ಆನಂದದಿಂದ ನಲಿಯುತ್ತಾರೆ. ಅವರಿಗೆ ಅವರದೇ ಆದ, ಸುವ್ಯವಸ್ಥಿತ ಕಾರ್ಯಕ್ರಮವಿದೆ. ಕಬ್‌ಮಾಸ್ಟರರ ಆದರ್ಶ ಮಾರ್ಗದರ್ಶನದಲ್ಲಿ ಉಪಯುಕ್ತ ಜ್ಞಾನವನ್ನು ಪಡೆಯುತ್ತಾರೆ. ಹೊಸ ಹೊಸ ಕೌಶಲಗಳನ್ನು ಕಲಿಯುತ್ತಾರೆ. ಹಂತ ಹಂತವಾಗಿ ಮೇಲೇರುತ್ತಾರೆ. ಕಷ್ಟಪಡುತ್ತಾರೆ, ಪದಕಗಳನ್ನು ಸಂಪಾದಿಸುತ್ತಾರೆ. ಹೆಮ್ಮೆಯಿಂದ ಸಮವಸ್ತ್ರವನ್ನು ಧರಿಸುತ್ತಾರೆ.

ಮರಿಗಳು –5+ ರಿಂದ 10 ವರ್ಷಗಳ ಬಾಲಕರನ್ನು ಮರಿಗಳು ಎನ್ನಲಾಗುತ್ತದೆ. ನಿಯಮಾವಳಿಯಲ್ಲಿ ಹೇಳಿರುವಂತೆ "ಮರಿಯಾಗಲು ಬಾಲಕನು 5 ವರ್ಷಗಳನ್ನು ಕಳೆದಿರಬೇಕು. ಹತ್ತನೆಯ ಹುಟ್ಟಿದ ಹಬ್ಬವನ್ನು ಆಚರಿಸಿರಬಾರದು". ಈ ವಯಸ್ಸಿನ ಬಾಲಕರ ವಿಶೇಷ ಗುಣಗಳು ಹಾಗೂ ಅವಶ್ಯಕತೆಗಳಿಗೆ ತಕ್ಕಂತೆ, ಮರಿಗಳ ಶಿಕ್ಷಣವನ್ನು ರೂಪಿಸಲಾಗಿದೆ. ಈ ವಿಶೇಷ ಅವಶ್ಯಕತೆಗಳನ್ನು ಉಪಯೋಗಿಸಿ ಕೊಂಡು, ಜಾಣ್ಮೆಯಿಂದ, ಅವುಗಳ ಪ್ರಭಾವವನ್ನು ಹೊರತೆಗೆಯಲಾಗಿದೆ. ಈ ರೀತಿಯ ಶಿಕ್ಷಣದ ರೂಪಣೆಯ ಉಪಯೋಗವೇ, ಕಬ್‌ಮಾಸ್ಟರ ಕರ್ತವ್ಯವಾಗಿದೆ. ಕಬ್‌ಮಾಸ್ಟರಿಗೆ ಸಾಮಾನ್ಯವಾಗಿ, ಎಲ್ಲಾ ಬಾಲಕರ ಬಗ್ಗೆಯೂ ತಿಳಿದಿರಬೇಕು. ಆದರೆ ತನ್ನ ಮರಿಗಳ ಬಗ್ಗೆ ವಿಶೇಷವಾಗಿ ತಿಳಿದಿರಬೇಕು. ಕಬ್‌ಮಾಸ್ಟರು ಹಿಂಡಿನ ಪ್ರತಿ ಬಾಲಕನನ್ನೂ ಎಷ್ಟು ಗಮನಿಸಬೇಕೆಂದರೆ, ಪ್ರತಿ ಬಾಲಕನ ಪ್ರತಿಯೊಂದು ಚರ್ಯೆ ಮತ್ತು ವಿಷಯದ

ಬಗ್ಗೆಯೂ ಕೂಲಂಕಷವಾಗಿ ತಿಳಿದಿರಬೇಕು. ಕಬ್ಬಿಂಗ್ ಆಟವನ್ನು ಮರಿಗಳೊಡನೆ ಆಡುವಾಗ, ಜಾಗರೂಕರಾಗಿರಬೇಕು ಮತ್ತು ಪ್ರತಿ ಮರಿಯನ್ನೂ ಸೂಕ್ಷ್ಮವಾಗಿ ಗಮನಿಸಿ, ಅವನನ್ನು ಒಳ್ಳೆಯ ಬಾಲಕನನ್ನಾಗಿ ಮಾಡಲು, ಹೇಗೆ ಸರಿ ತಿದ್ದಬೇಕು ಎಂಬ ಬಗ್ಗೆ ಯೋಚಿಸಬೇಕು. ಪ್ರತಿ ಮರಿಯ ವ್ಯಕ್ತಿತ್ವ ಬೆಳವಣಿಗೆ ಮತ್ತು ವಿಕಾಸವೇ ಮರಿಗಳ ಶಿಕ್ಷಣದ ಗುರಿಯಾಗಿದೆ. ಈ ದಿಕ್ಕಿನಲ್ಲಿ, ಕಬ್‌ಮಾಸ್ಟರನ ಜವಾಬ್ದಾರಿಯು ಗುರುತರವಾಗಿದೆ.

ಪುಟಾಣಿಗಳಿಗೆ ಮರಿಗಳ ಶಿಕ್ಷಣವು ಬಹಳ ಆಕರ್ಷಣೀಯವಾದುದಾಗಿದೆ. ಆಟಗಳು ಮತ್ತು ನಿಯತ, ಸಂಘಟಿತ ಕಾರ್ಯಕ್ರಮಗಳ ಮೂಲಕ ಅವರ ಅಪಾರ ಶಕ್ತಿಯನ್ನು ಉಪಯೋಗಿಸಿಕೊಳ್ಳಲು ಅವಕಾಶವೊದಗಿಸುತ್ತದೆ. ಅವರಿಗೆ ಇಷ್ಟವಾದ ವಿಷಯಗಳನ್ನು ತಿಳಿದುಕೊಳ್ಳಲು ಉತ್ತೇಜನ ನೀಡುತ್ತದೆ. ಸಾಕಷ್ಟು ವಿನೋದಯುತ ನಲಿದಾಟ ಮತ್ತು ಕುಣಿದಾಟಗಳನ್ನು ಒದಗಿಸುತ್ತದೆ.

ಕಬ್ಬಿಂಗ್‌ನಲ್ಲಿ ಸಚ್ಚಾರಿತ್ರ್ಯ (ನಡತೆ)ದ ಮೊದಲ ಅಸ್ತಿಭಾರ ಶಿಲೆಯನ್ನು ಹಾಕಲಾಗುತ್ತದೆ. ಹಿಂಡಿನ ಸದಸ್ಯನನ್ನಾಗಿ ಸೇರಿಸಿಕೊಂಡಾಗ, ಮರಿಯು ಈ ಕೆಳಕಂಡ ವಿಧಿವತ್ತಾದ ಪ್ರತಿಜ್ಞೆಯನ್ನು ಮಾಡುತ್ತಾನೆ.

ನಾನು ನನ್ನ ಕೈಲಾದ ಮಟ್ಟಿಗೆ,
ದೇವರಿಗೂ ಮತ್ತು ನನ್ನ ದೇಶಕ್ಕೂ ನನ್ನ ಕರ್ತವ್ಯವನ್ನು ಮಾಡುತ್ತೇನೆ
ಮರಿಗಳ ನಿಯಮವನ್ನು ಪಾಲಿಸುತ್ತೇನೆ,
ಪ್ರತಿದಿನವೂ ಒಂದು ಉಪಕಾರವನ್ನು ಮಾಡುತ್ತೇನೆ.

–ಎಂದು ಪ್ರತಿಜ್ಞೆ ಮಾಡುತ್ತೇನೆ.

ಟಿಪ್ಪಣಿ: ಅವಶ್ಯಕತೆಯಿದ್ದರೆ "ದೇವರು" ಪದಕ್ಕೆ ಬದಲು "ಧರ್ಮ" ಪದವನ್ನು ಉಪಯೋಗಿಸಬಹುದು.

ಈ ಪ್ರತಿಜ್ಞೆಯು ಅವನು ವಯಸ್ಸಿಗೆ ಬಂದ ಮೇಲೂ, ತನ್ನ ಕೆಲಸವನ್ನು ಸಾಧಿಸುವ, ಸ್ಫೂರ್ತಿಯ ಸಾಧನವಾಗುತ್ತದೆ. ಒಂದು ರೀತಿಯ ಧಾರ್ಮಿಕ ಭಾವನೆ, ಗೌರವ ಮತ್ತು ನಿಷ್ಠೆಯನ್ನು ಒದಗಿಸುತ್ತದೆ. ಈ ಪ್ರತಿಜ್ಞೆಯ ಪರಿಣಾಮದಿಂದ ಅವನು ತನ್ನ ಕೈಲಾಗದ ಕೆಲಸವನ್ನೆಂದೂ ಕೈಗೊಳ್ಳುವುದಿಲ್ಲ. ತನ್ನ "ಕೈಲಾದ ಮಟ್ಟಿಗೆ" ಎಂಬುದು ಅವನ ಪ್ರತಿಜ್ಞೆಯಾಗಿರುತ್ತದೆ. ಪ್ರತಿಯೊಬ್ಬರಿಗೂ ಅವರವರ ಕೈಲಾದ ಮಟ್ಟಿಗೆ ನಡೆದುಕೊಳ್ಳುವುದು ಸಾಧ್ಯ. ತಾನು ಮಾಡಿದ ಪ್ರತಿಜ್ಞೆಯನ್ನು ಸಾಧಿಸುವುದನ್ನು ಪರಮ

ಗುರಿಯನ್ನಾಗಿ ಇಟ್ಟುಕೊಳ್ಳುತ್ತಾನೆ. ಕಟ್ಟು ಪಾಡಿಗೆ ತಪ್ಪದಂತೆ ನಡೆಯಲು ಬದ್ಧನಾಗಿರುತ್ತಾನೆ.

ತಾನು ಪಾಲಿಸುವುದಾಗಿ ವಚನ ಕೊಡುವ ಮರಿಗಳ ನಿಯಮವು ಎರಡು ಭಾಗಗಳಲ್ಲಿದೆ.

1. ಮರಿಯು ಹಿರಿಯರಿಗೆ ವಿಧೇಯನು.
2. ಮರಿಯು ನಿರ್ಮಲನು ಮತ್ತು ವಿನಯಿ.

ಈ ಸರಳ ಹೇಳಿಕೆಗಳಲ್ಲಿ ನಾವು:

ಅ. ಮಕ್ಕಳಿಗೆ ಪ್ರಮುಖವೂ, ಮಹತ್ವಪೂರಿತವೂ ಆದ **ವಿಧೇಯತೆ.**

ಆ. ದೈವತ್ವಕ್ಕೆ ಸಮೀಪವೆನಿಸಿದ **ನೈರ್ಮಲ್ಯ** ಮತ್ತು

ಇ. ಜೀವನವನ್ನು ಎಲ್ಲ ರೀತಿಯಲ್ಲಿಯೂ ಹಸನುಗೊಳಿಸಿ, ಆನಂದ ದಾಯಕವನ್ನಾಗಿಸುವ **ವಿನಯ ಸಂಪನ್ನತೆ.**

ಈ ಉದಾತ್ತ ಭಾವನೆಗಳ ಅಂಕುರವನ್ನು ಕಾಣಬಹುದು.

ಕಬ್ಬಿಂಗ್‌ನಿಂದ ಬಾಲಕರಿಗೆ ಒಳ್ಳೆಯ ಸ್ನೇಹಿತರು ದೊರಕುತ್ತಾರೆ. ಹಿಂಡಿನಲ್ಲಿ 24 ಬಾಲಕರಿರುತ್ತಾರೆ. ಕೆಲವೊಮ್ಮೆ ಕಡಿಮೆಯಿರಬಹುದಾದರೂ 12 ಮಂದಿಗೆ ಕಡಿಮೆ ಇರುವಂತಿಲ್ಲ. ಅವರೆಲ್ಲರೂ ಹಿರಿಯರಾದ ಕಬ್‌ಮಾಸ್ಟರ ಸಹಾನುಭೂತಿಯುತ ಮತ್ತು ವಿವೇಚನಾಯುತ ಮಾರ್ಗದರ್ಶನದಲ್ಲಿ ಕಲೆತು ಆಟವಾಡುತ್ತಾರೆ. ಕೆಲಸ ಮಾಡುತ್ತಾರೆ ಮತ್ತು ಕಲಿತುಕೊಳ್ಳುತ್ತಾರೆ. ಹಿಂಡನ್ನು ಆರಾಳಿಗಳ ನಾಯಕತ್ವದಲ್ಲಿ ಷಟ್ಕಗಳನ್ನಾಗಿ ವಿಂಗಡಿಸಲಾಗಿದೆ. ಮರಿಗಳ ಕಾರ್ಯಕ್ರಮದಲ್ಲಿ ಆಟಗಳೂ, ಆಸಕ್ತಿಯುತ ಚಟುವಟಿಕೆ ಗಳೂ ಇವೆ. ಇವು ಮರಿಗಳು ಚುರುಕಾಗಿರಲು ಸಹಾಯ ಮಾಡುತ್ತವೆ. ಒಟ್ಟುಗೂಡಿ ಕೆಲಸ ಮಾಡುವುದರಿಂದ ಮತ್ತು ಆಡುವುದರಿಂದ ಇರುವ ಪ್ರಯೋಜನವು, ಅವುಗಳ ಪ್ರಾಮುಖ್ಯತೆ ಮತ್ತು ಮೌಲ್ಯಗಳನ್ನು ತಿಳಿಸುತ್ತದೆ.

ಮರಿಗಳ ಶಿಕ್ಷಣದಲ್ಲಿ ಕಾಲ್ಪನಿಕ ಮತ್ತು ಸಾಹಸೀ ಭಾವನೆಗಳು ತುಂಬಿವೆ. ಇವುಗಳನ್ನು ಉದಂತಗಳು, ಕಥೆಗಳು, ಅಭಿನಯಗಳ ಮೂಲಕ ನೀಡಲಾಗುತ್ತದೆ. ಇವುಗಳು ಮರಿಗಳ ಶಿಕ್ಷಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಕಬ್ಬಿಂಗ್ ಬಾಲಕನನ್ನು ಉಪಯುಕ್ತನನ್ನಾಗಿಯೂ, ಪ್ರಯೋಜಕನನ್ನಾಗಿಯೂ ತಯಾರು ಮಾಡುತ್ತದೆ. ಮನೆಯಲ್ಲಿ ಉಪಯೋಗಕ್ಕೆ ಬರುವ ಅನೇಕ ವಿಷಯಗಳನ್ನು

ಅವನು ಕಲಿಯುತ್ತಾನೆ. ಗಂಟುಗಳನ್ನು ಹಾಕಲು ಕಲಿಯುತ್ತಾನೆ. ವಾರ್ತೆಗಳನ್ನು ಒಯ್ಯಲು ಅಭ್ಯಾಸ ಮಾಡುತ್ತಾನೆ. ಈ ರೀತಿ ಅನೇಕ ಉಪಯುಕ್ತ ವಿಷಯಗಳನ್ನು ಕಲಿಯುತ್ತಾನೆ. "ದಿನಕ್ಕೊಂದು ಉಪಕಾರ" ಮಾಡಲು, ಅವನು ಪ್ರತಿಜ್ಞೆ ಮಾಡಿರುವುದರಿಂದ, ಮೊದಲು ಮನೆಯಲ್ಲಿಯೂ. ಬಳಿಕ ಇತರೆಡೆಗಳಲ್ಲಿಯೂ ಉಪಕಾರ ಮಾಡಲು ಉತ್ತೇಜನ ಕೊಡಲಾಗುತ್ತದೆ. ಕಾಲ ಕಳೆದಂತೆ, ವಿವಿಧ ವಿಷಯಗಳನ್ನು ಕಲಿತು, ಪದಕಗಳನ್ನು ಗಳಿಸಿ, ತನ್ನ ವಿಶೇಷ ಪ್ರತಿಭೆಯನ್ನು ತೋರಿಸಲು ಕಲಿಯುತ್ತಾನೆ. ಉದಾಹರಣೆ: ಚಿತ್ರ ಬರೆಯುವುದು, ಬೊಂಬೆ ಮಾಡುವುದು, ಏನಾದರೊಂದು ಕರಕುಶಲವಸ್ತು ತಯಾರಿಸುವುದು ಇತ್ಯಾದಿ.

ಕಬ್ಬಿಂಗ್ ಬಾಲಕನನ್ನು ಆರೋಗ್ಯವಂತನನ್ನಾಗಿ ಮಾಡುತ್ತದೆ. ಅವನು ಸ್ವಾವಲಂಬಿಯಾಗಲು ಕಲಿಯುತ್ತಾನೆ, ಅವನ ಆರೋಗ್ಯ ಅವನ ಜವಾಬ್ದಾರಿ ಯಾಗುತ್ತದೆ. ಅವನು ಬೆಳವಣಿಗೆ ಮತ್ತು ಬಲಶಾಲಿಯಾಗುವ ಬಗ್ಗೆ ಆಸ್ಥೆವಹಿಸಲು ಕಲಿಸುತ್ತದೆ. ಬಯಲು ಪ್ರದೇಶದಲ್ಲಿನ ಸ್ವಚ್ಛವಾದ ಗಾಳಿ, ನೈರ್ಮಲ್ಯ ಮತ್ತು ವ್ಯಾಯಾಮದ ಬಗ್ಗೆ ಅವನಿಗೆ ತಿಳಿಸಿಕೊಡುತ್ತದೆ. ಅವನು ಆಡುವ ಆಟಗಳು, ಹೆಚ್ಚಿಗೆ ಆಯಾಸವಾಗದಂತಿದ್ದು, ದೃಢಕಾಯನಾಗಲೂ, ಆರೋಗ್ಯವಂತನಾಗಲೂ ಸಹಾಯ ಮಾಡುತ್ತವೆ.

ಮರಿಗಳು ತಮ್ಮದೇ ಆದ ಧ್ಯೇಯ ವಾಕ್ಯ "ಸಾದ್ವೇವಾದಷ್ಟ್"ನಂತೆ ನಡೆದು ಕೊಳ್ಳುತ್ತಾರೆ -ಎಂದರೆ ಅವರು ಮಾಡುವ ಪ್ರತಿ ಕೆಲಸದಲ್ಲಿಯೂ, ಅವರ ಶಕ್ತ್ಯಾನುಸಾರವಾದರೂ, ಅಷ್ಟೇ ಚೆನ್ನಾಗಿ ಸಾಧಿಸಲು ಕಲಿಯುತ್ತಾರೆ.

1. ಐದರಿಂದ ಒಂಬತ್ತರ ವಯಸ್ಸಿನ ಬಾಲಕರು ತಮ್ಮದೇ ಆದ ಕಲ್ಪನಾ ಪ್ರಪಂಚದಲ್ಲಿ ವಿಹರಿಸುತ್ತಾರೆ. ಅದು ಅವರಿಗೆ ಸಹಜವಾದ ಕಲೆಯಾಗಿರುತ್ತದೆ. "ಕಾಲ್ಪನಿಕವಾದರೂ ಅಷ್ಟೇ ಅರ್ಥವತ್ತಾಗಿ ವಿವಿಧ ಪಾತ್ರಗಳನ್ನು ಅಭಿನಯಿಸುತ್ತಾರೆ. ಈ ಗುಣವನ್ನು ಚಿಕ್ಕಮಕ್ಕಳು ಜ್ಞಾನವನ್ನು ಪಡೆಯಲೂ, ಅನುಭವಗಳನ್ನು ವಿಸ್ತರಿಸಿ ಕೊಳ್ಳಲೂ ಪ್ರಕೃತಿದತ್ತವಾದ, ವಿವೇಚನಾಯುತ ಕೊಡುಗೆಯೆಂದು ಹೇಳಬಹುದು".

ಇತರ ಎಲ್ಲಾ ಗುಣಗಳಂತೆ, ಈ ಸಹಜ ಗುಣವನ್ನೂ ಸಹ ತಿದ್ದಬೇಕಾಗುತ್ತದೆ. ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ "ಅನುಕರಣೆ" ಮಾಡುವ ಶಕ್ತಿಯಿರುತ್ತದೆ. ಮರಿಯು ತನ್ನ ದಿನನಿತ್ಯದ ಜೀವನದಲ್ಲಿ, ಒಡನಾಡುವ ಅನೇಕ ಜನರನ್ನು ಅನುಕರಣೆ ಮಾಡಬಹುದು. ಇದು ಅಪಾಯಕಾರಿಯಲ್ಲದಿದ್ದರೂ, ಸಹಾಯಕಾರಿಯೆನ್ನಬಹುದು. ಬಾಲಕನ ಕಲ್ಪನಾ ಪ್ರತಿಭೆಗೆ ಪೂರ್ಣ ಉತ್ತೇಜನ ಕೊಡುವುದು ಕಬ್‌ಮಾಸ್ಟರನಿಗೆ ಸೇರಿದ್ದು. ಕಥೆ ಹೇಳುವ,

ಅಭಿನಯಿಸುವ ಗುಣಗಳಿಗೆ ಉತ್ತೇಜನ ಚಟುವಟಿಕೆಗಳಿಗೆ ಸಾಕಷ್ಟು ಕಾಲ್ಪನಿಕ ಹಿನ್ನೆಲೆಯನ್ನೂ ಜೊತೆಗೂಡಿಸಬೇಕು. ಈ ರೀತಿಯಲ್ಲಿ ಮರಿಯು ವಿವಿಧ ಕಾಲ್ಪನಿಕ ಸನ್ನಿವೇಶಗಳಲ್ಲಿ, ಅನುಭವಿಸಿ ಆನಂದಿಸಲೂ, ತನ್ನ ದೃಷ್ಟಿಪಥವನ್ನು ವಿಸ್ತರಿಸಿಕೊಳ್ಳಲೂ, ಉಪಯುಕ್ತ ಜ್ಞಾನವನ್ನು ಪಡೆಯಲೂ ಸಹಾಯಕವಾಗಬೇಕು. ಕಬ್‌ಮಾಸ್ಟರ ಹೆಗ್ಗಳಿಕೆಯ ಉದ್ದೇಶವಾದರೂ, ಬಾಲಕರ ಹಂಬಲ ಮತ್ತು ಪ್ರೇರಣೆಗಳು ಈ ರೀತಿಯಲ್ಲಿ ಸಫಲತೆಯನ್ನು ಪಡೆಯುವುದೇ ಆಗಿದೆ.

2. ಗಲಾಟೆ ಮಾಡುವುದು ಮತ್ತು ಅವ್ಯವಸ್ಥಿತ ರೀತಿಯಲ್ಲಿ ನಡೆದುಕೊಳ್ಳುವುದು ಈ ವಯಸ್ಸಿನ ಬಾಲಕರ ಮತ್ತೊಂದು ಗುಣವಿಶೇಷ. ಇದು ದೈಹಿಕವಾಗಿಯೂ, ಮಾನಸಿಕವಾಗಿಯೂ ಬೆಳವಣಿಗೆ ಹೊಂದುವ ಹಿನ್ನೆಲೆಯಲ್ಲಿನ, ಬಾಹ್ಯ ತೋರಿಕೆ ಗಳೆಂದರೆ ಸರಿಯಾದೀತು. ಕಬ್‌ಮಾಸ್ಟರನು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು, ಬಾಲಕರನ್ನು ಸಹಾನುಭೂತಿಯಿಂದ ನಡೆಸಿಕೊಳ್ಳಬೇಕಾಗುತ್ತದೆ. ಈ "ಬೆಳವಣಿಗೆ ತುರಿಕೆ"ಯನ್ನು ಆಧರಿಸಿ ವಿಚಾರ ಮಾಡಬೇಕಾಗುತ್ತದೆ. ಈ ವಯಸ್ಸಿನ ಬಾಲಕರಲ್ಲಿ ಚೈತನ್ಯವು ತುಂಬಿ ತುಳುಕುತ್ತದೆಯಾದ ಕಾರಣ ಹೆಚ್ಚು ಲವಲವಿಕೆಯಿಂದ ಕೂಡಿದ ಕೆಲಸಗಳನ್ನು ಮಾಡಲು ಹಾತೊರೆಯುತ್ತಾರೆ. ಹೊಮ್ಮುವ ಈ ಚೈತನ್ಯವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಅವರಿಗೆ ಸಾಕಷ್ಟು ಕಾರ್ಯ ಚಟುವಟಿಕೆಗಳನ್ನು ಒದಗಿಸುವುದು ಹಿರಿಯರಾದ ನಮ್ಮ ಕರ್ತವ್ಯ. ಬುದ್ಧಿವಂತ ಕಬ್‌ಮಾಸ್ಟರನು ಈ ನಿಹಿತ ಶಕ್ತಿಯನ್ನು ಮೊಟಕುಗೊಳಿಸದೆ, ಒಳ್ಳೆಯ ದಾರಿಯಲ್ಲಿ ತಿದ್ದುತ್ತಾನೆ. ಮರಿಗಳ ಘನವಂದನೆಯು ಈ ಗುಣ ವಿಶೇಷವನ್ನು ಉಪಯೋಗಿಸಿಕೊಳ್ಳುವುದಕ್ಕೆ ಒಂದು ನಿದರ್ಶನ. ಈ ಘನವಂದನೆಯನ್ನು ಮಾಡುವಾಗಿನ ಗದ್ದಲವೂ ಸಂದರ್ಭಕ್ಕೆ ತಕ್ಕಂತೆ ಇರುತ್ತದೆ. ಮತ್ತು ಸಮಯಕ್ಕೆ ತಕ್ಕ ಕೂಗಾಟವಾಗಿರುತ್ತದೆ. ಇದರಿಂದ ಮರಿಗಳಿಗೂ ತೃಪ್ತಿ ಸಿಗುತ್ತದೆ. ಇಲ್ಲಿ ಗದ್ದಲ ಮಾಡುವ ಹಂಬಲವನ್ನು ಸನ್ಮಾರ್ಗದಲ್ಲಿ ತಿದ್ದಲಾಗಿದೆ. ಇದರಿಂದ ಕಬ್‌ಮಾಸ್ಟರಿಗೆ ನಿಷ್ಠೆ, ಗೌರವ ಮತ್ತು ವಿಧೇಯತೆಗಳನ್ನು ಸೂಚಿಸಿದಂತಾ –ಗುತ್ತದೆ ಮತ್ತು ಮರಿಗಳಿಗೆ, ಕಬ್‌ಮಾಸ್ಟರನ ಮಾರ್ಗದರ್ಶನ ಮತ್ತು ಹೇಳಿಕೆಗಳನ್ನು ಒತ್ತಿ ತಿಳಿಸಿದಂತಾಗಿ, ಅದನ್ನು ಸಾಧಿಸಿ ತೀರಬೇಕೆಂಬ ಛಲವು ಹುಟ್ಟುತ್ತದೆ. ಘನವಂದನೆಯು ಬಹಳ ಪ್ರಮುಖ ವಿಧಿಯಾಗಿದ್ದು, ಇದನ್ನು ಬೇರೊಂದು ಅಧ್ಯಾಯದಲ್ಲಿ ವಿವರಿಸಲಾಗಿದೆ.

ಈ ಗದ್ದಲ ಪ್ರವೃತ್ತಿಯನ್ನು ಘನವಂದನೆಯ ಕಾಲಕ್ಕೆ ಮಾತ್ರ ಸೀಮಿತಗೊಳಿಸದೆ ಆಟಗಳು, ಸ್ಪರ್ಧೆಗಳು ಮುಂತಾದ ಅನೇಕ ಸಂದರ್ಭಗಳಲ್ಲಿ, ಕಬ್‌ಮಾಸ್ಟರನು ಅವರಿಗೆ ಅವಕಾಶ ಮಾಡಿಕೊಟ್ಟು, ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಬೇಕು. ಈ ರೀತಿ

ಗಲಾಟೆಯನ್ನು ಸಹಿಸಿಕೊಳ್ಳುವುದು ಮರಿಗಳಿಗೂ ಒಳ್ಳೆಯ ಶಿಕ್ಷಣವಾಯಿತು. ಬೇಕೆಂದಾಗ "ಪ್ಯಾಕ್" ಎನ್ನುವ "ಜಾದೂ" ಪದವನ್ನು ಬಳಸಿದರಾಯಿತು. ಮರಿಗಳು ನಿಶ್ಯಬ್ದರಾಗಿ, ಮುಂದೇನೆಂದು ಎದುರು ಕಾಯುತ್ತಾ 'ಸಾವಧಾನ್' ಸ್ಥಿತಿಗೆ ಬರುತ್ತಾರೆ. ಶಿಸ್ತಿನ ಬಗ್ಗೆ ಇದು ಉತ್ತಮ ಶಿಕ್ಷಣವಾಗುತ್ತದೆ.

3. **ವಸ್ತುಗಳನ್ನು ಕೆಡಿಸುವುದು ಅಥವಾ ಹಾಳು ಮಾಡುವುದು,** ಈ ವಯಸ್ಸಿನ ಬಾಲಕರ ಇನ್ನೊಂದು ವಿಶೇಷ ಪ್ರವೃತ್ತಿಯಾಗಿರುತ್ತದೆ. ಕೆಲವೊಮ್ಮೆ ಅವರು ವಸ್ತುಗಳನ್ನು ಹಾಳು ಮಾಡುತ್ತಾರಾದರೂ, ಹಾಳು ಮಾಡುವುದು ಅವರ ಉದ್ದೇಶವಲ್ಲ. ಅದು ಹೇಗೆ ಆಯಿತು? ಆ ರೀತಿಯೇ ಏಕಾಯಿತು? ಬೇರಾವ ರೀತಿ ಆಗಬಾರದೇಕೆ? ಇತ್ಯಾದಿ ಕುತೂಹಲಕರ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವುದೇ ಆಗಿದೆ. ಇದು ಹಾಳು ಮಾಡುವುದರ ಬದಲು ಸೃಜನಾತ್ಮಕ ಶಕ್ತಿಯ ಆಟವೆಂದರೆ ಸರಿಯಾದೀತು. ಒಂದು ವಸ್ತುವನ್ನು ಹಾಳುಮಾಡುವುದರಿಂದ, ಮತ್ತೊಂದು ವಸ್ತುವನ್ನು ತಯಾರು ಮಾಡಿಯಾರು. ಈ ಪ್ರವೃತ್ತಿಯನ್ನು ಮತ್ತೊಂದು ರೀತಿಯಲ್ಲಿ ಉಪಯೋಗಿಸಿ ಕೊಳ್ಳಬಹುದು. ಹರಿಯುವುದು, ಒಡೆಯುವುದು, ಅರೆಯುವುದು ಮುಂತಾದವುಗಳ ನ್ನೊಳಗೊಂಡ ಕೆಲಸಗಳನ್ನು ಕೊಟ್ಟು, ಅದರಿಂದ ಹೊಸ ಉಪಯುಕ್ತ ವಸ್ತುವಿನ ತಯಾರಿಕೆಗೆ ಪ್ರಚೋದನೆ ನೀಡಬಹುದು. ಇದರಿಂದ ಅವರ ಹಾಳು ಮಾಡುವ ಪ್ರವೃತ್ತಿಗೂ ಅವಕಾಶ ದೊರೆಯಿತು, ಸೃಜನಾತ್ಮಕ ಶಕ್ತಿಯನ್ನೂ ಉಪಯೋಗಿಸಿ ಕೊಂಡಂತಾಯಿತು ಮತ್ತು ಆಟದ ಮುಖಾಂತರ ಮಕ್ಕಳಿಗೆ ಜಾಣತನವನ್ನು ಕಲಿಸುವುದು.

4. **ಮರಿಯ ವಯಸ್ಸಿನ ಬಾಲಕರು, ತಮ್ಮದೇ ಆದ ಅಭಿರುಚಿಯುಳ್ಳವ ರಾಗಿರುತ್ತಾರೆ.** ತಮ್ಮ ಮಟ್ಟಿಗೆ ಮಾತ್ರ ಯೋಚಿಸುತ್ತಾರೆ. ಇತರರು ಹೇಗಿದ್ದಾರೆ? ಏನು ಮಾಡುತ್ತಾರೆ? ಎಂಬ ಬಗ್ಗೆ ಆಸಕ್ತಿ ತೋರುವುದಿಲ್ಲ. ಅವರ ಈ ಪ್ರವೃತ್ತಿಗೂ ಬೆಲೆ ಕೊಡಬೇಕಾಗುತ್ತದೆ. ಕಬ್‌ಮಾಸ್ಟರನು ಹಿಂಡಿನ ಎಲ್ಲಾ ಮರಿಗಳೊಂದಿಗೂ ಒಂದೇ ರೀತಿ ವ್ಯವಹರಿಸಬೇಕಾಗುತ್ತದೆ. ಒಬ್ಬಿಬ್ಬರು, ಇಲ್ಲವೆ ಹಲವು ಮರಿಗಳ ವಿಷಯಗಳಲ್ಲಿ ಹೆಚ್ಚು ಗಮನಕೊಟ್ಟು ಇತರರನ್ನು ಕಡೆಗಣಿಸಬಾರದು. ಕಬ್‌ಮಾಸ್ಟರನು ಮರಿಗಳ ವಿಷಯದಲ್ಲಿ ಮೈತ್ರಿ ಭಾವನೆ, ಸಹಾನುಭೂತಿ ಮತ್ತು ವಿವೇಚನೆಗಳಿಂದ ವರ್ತಿಸ ಬೇಕಾಗುತ್ತದೆ. ತಪ್ಪು ಹುಡುಕುವುದು, ಸುಲಭವಾಗಿ ಕೋಪಗೊಳ್ಳುವುದು, ಚುಚ್ಚುಮಾತನಾಡುವುದು ಮುಂತಾಗಿ ಮಾಡಿದಲ್ಲಿ ಹಿಂಡಿನ ವಾತಾವರಣವು ಹದಗೆಡುತ್ತದೆ. ಹಾಗಾದಾಗ, ಹಿಂಡಿನಲ್ಲಿ ಏನೇ ಮಾಡಿದರೂ "ಸುಖೀ ಸಂಸಾರ"ದ ವಾತಾವರಣವುಂಟಾಗುವುದಿಲ್ಲ. ಉಲ್ಲಾಸ, ಸೌಹಾರ್ದ ಮತ್ತು ಗೆಲುವಿನಿಂದ ಕೂಡಿದ, ಕಬ್‌ಮಾಸ್ಟರು ಮಾತ್ರ ಮರಿಗಳೊಂದಿಗೆ ಯಶಸ್ವಿಯಾದಾನು. ಅವನ ಹಿಂಡಿನ

ಮರಿಗಳು, ಪ್ರಾಮಾಣಿಕರಾದ, ಮುಚ್ಚುಮರೆಯಿಲ್ಲದ, ತಮ್ಮ ಕಬ್‌ಮಾಸ್ಟರನಲ್ಲಿ ನಂಬಿಕೆ, ನಿಷ್ಠೆಗಳನ್ನುಳ್ಳ ಒಳ್ಳೆಯ ಮರಿಗಳಾಗಿ ಬೆಳೆಯುತ್ತಾರೆ ಮತ್ತು ಅವನ ನಿರೀಕ್ಷೆಗೆ ತಕ್ಕಂತೆ ನಡೆದುಕೊಳ್ಳುತ್ತಾರೆ.

5. **ಜಂಭಕೊಚ್ಚುವುದೂ ಈ ವಯಸ್ಸಿನ ಇನ್ನೊಂದು ಸಹಜ ಗುಣವಾಗಿರುತ್ತದೆ.** ತಮ್ಮ ವಶದಲ್ಲಿರುವ ಎಲ್ಲ ವಸ್ತುಗಳೂ ವಿಶೇಷ ರೀತಿಯವೆಂದು ಮತ್ತು ಅಂತಹ ವಸ್ತುಗಳು ಬೇರೆಯವರಲ್ಲಿಲ್ಲವೆಂದೂ ನಂಬುತ್ತಾರೆ. ಈ ಬಗ್ಗೆ ಜಂಭಕೊಚ್ಚುವುದು ಅವರ ಸಹಜ ಗುಣವಾಗಿರುತ್ತದೆ. ಹಿಂಡಿನ ಉನ್ನತ ಆದರ್ಶಗಳೊಂದಿಗೆ, ಈ ಗುಣವನ್ನು ಮುಡಿಹಾಕುವುದು ಸರಿಯಾದ ಮಾರ್ಗವಾಗಿದೆ. ಕಾಡು ಕುಣಿತಗಳು ಅಥವಾ ಆಟಗಳು, ಸರಿಯಾಗಿ ವಿಶ್ಲೇಷಿಸಿದಲ್ಲಿ, ಮರಿಯು ತನ್ನ ನಿಯಮದ ಬಗ್ಗೆ ಹೆಮ್ಮೆಯಿಂದ ನಡೆದುಕೊಳ್ಳುವಂತೆ ಮಾಡುತ್ತವೆ. ತಾನು ತನ್ನ ಕಬ್‌ಮಾಸ್ಟರು, ತನ್ನ ತಾಯ್ತಂದೆಯರು ಮತ್ತು ಇತರ ಗುರುಹಿರಿಯರ ಬಗ್ಗೆ ವಿಧೇಯನಾಗಿರುವುದಾಗಿಯೂ, ಎಲ್ಲರ ವಿಷಯದಲ್ಲಿ ವಿನಯವಂತನಾಗಿರುವುದಾಗಿಯೂ ಜಂಭ ಕೊಚ್ಚಿಕೊಳ್ಳುತ್ತಾನೆ. ಇತರ ಮರಿಗಳ ಕಾರ್ಯಕ್ರಮಗಳೂ ಈ ದಿಕ್ಕಿನಲ್ಲಿ ಸಹಾಯಕವಾಗುತ್ತವೆ. ನಾಟ್ಯಾಭಿನಯಗಳು ಈ ಜಂಭದ ಪ್ರವೃತ್ತಿಯನ್ನು ಸರಿಯಾದ ರೀತಿಯಲ್ಲಿ ತಿದ್ದಲು ಸಾಕಷ್ಟು ಅವಕಾಶವನ್ನೊದಗಿಸುತ್ತವೆ. ಅದೇ ರೀತಿ ಸಜೀವ ಉದಂತಗಳೂ ಸಹ. ಇವೆಲ್ಲವೂ ಕೂಡ ಮರಿಗಳಿಗೆ ಬಹಳ ಇಷ್ಟವಾಗುತ್ತದೆ. ಈ ರೀತಿಯ ಉನ್ನತ ಮಟ್ಟದ ಜಂಭವು ಕೂಡಾ, ಅವರು ಆದರ್ಶ ಬಾಲಕರಾಗಿ ಬೆಳೆಯಲು ಸಹಾಯಕವಾಗುತ್ತದೆ.

6. **ಸ್ವಾರ್ಥಪರನಾಗಿರುವುದು, ತನ್ನ ಬಗ್ಗೆ ಮಾತ್ರ ಯೋಚಿಸುವುದು,** ಈ ವಯಸ್ಸಿನ ಬಾಲಕರ ವಿಶೇಷ ಗುಣಗಳಲ್ಲಿ ಮತ್ತೊಂದು. ಅವರು ಇತರರ ಅನುಕೂಲ ಮತ್ತು ಸೌಖ್ಯದ ಬಗ್ಗೆ ಯೋಚಿಸುವುದಿಲ್ಲ. ತಮ್ಮಷ್ಟಕ್ಕೆ ತಾವಿದ್ದರಾಯಿತು. ಇತರ ಬಾಲಕರೊಡನೆ ಹಂಚಿಕೊಳ್ಳಬೇಕೆಂಬ ಭಾವನೆಯೇ ಅವರಿಗೆ ಬರುವುದಿಲ್ಲ. ಅವರು ಮಾಡುವ ಕೆಲಸವೂ ಹಾಗೆಯೇ ಇರುತ್ತದೆ. ಇತರರಿಗೆ ತೊಂದರೆಯಾದೀತೆಂದು ತೋಚುವುದೇ ಇಲ್ಲ. ಗದ್ದಲ ಮಾಡಬಹುದು, ಈ ಕಡೆ ಆ ಕಡೆ ಓಡಬಹುದು, ಅಸ್ತವ್ಯಸ್ತವಾಗಿ ನಡೆದುಕೊಳ್ಳಬಹುದು, ಇವೇ ಮುಂತಾದ ರೀತಿಯಲ್ಲಿ ನಡೆದುಕೊಳ್ಳುವುದರಿಂದ, ಇತರರಿಗಾಗುವ ತೊಂದರೆ ಮತ್ತು ಅವರು ಜಿಗುಪ್ಸೆಪಟ್ಟುಕೊಳ್ಳುವ ಬಗ್ಗೆ, ಇವರಿಗೆ ಪರಿವೆಯೇ ಇರುವುದಿಲ್ಲ.

ಇತರರ ಬಗ್ಗೆ ಯೋಚಿಸುವುದನ್ನು ಪ್ರೇರೇಪಿಸಿ, ಈ ಸ್ವಾರ್ಥಪರತೆಯನ್ನು ಗುಣಪಡಿಸಬೇಕಾಗುತ್ತದೆ. ಈ ಸ್ವಾರ್ಥಪರರನ್ನು ಆಗಾಗ್ಗೆ ಇತರರ ಬಗ್ಗೆ ಯೋಚಿಸುವಂತೆ ಮಾಡುವುದರಿಂದಲೂ, ಇತರರ ಬಗ್ಗೆ ಅವರ ಕರ್ತವ್ಯವನ್ನು

ತಿಳಿಯುಪಡಿಸುವುದ ರಿಂದಲೂ. ಉದಾ: ಕಿಕ್ಕಿರಿದ ಬಸ್ಸುಗಳಲ್ಲಿ ಉಪಕಾರ ಮನೋಭಾವನೆಯಿಂದ ಹೆಂಗಸರು, ವೃದ್ಧರಿಗೆ ಜಾಗವನ್ನು ಬಿಟ್ಟುಕೊಡುವುದು, ಶಾಲೆಯಲ್ಲಿ ಓಡಾಡುವಾಗ, ಆಟ ಅಥವಾ ನಾಟಕ ಇತ್ಯಾದಿ ನೋಡುವಾಗ ಇತರರಿಗೆ ತೊಂದರೆಯಾಗದಂತೆ ವರ್ತಿಸುವುದು; ಅತಿಥಿ ಅಭ್ಯಾಗತರುಗಳ ಸಂತೋಷ ಮತ್ತು ಸೌಖ್ಯಗಳ ಬಗ್ಗೆ ಆಗಾಗ್ಗೆ ವಿಚಾರಿಸಿ, ನೋಡಿಕೊಳ್ಳುವುದು ಮುಂತಾದ ತಿಳುವಳಿಕೆ, ಅನುಭವಗಳಿಂದ ಅವರು ತಮ್ಮ ಸ್ವಾರ್ಥಪರತೆಯನ್ನು ತಿದ್ದಿಕೊಳ್ಳಲು ಸಹಾಯ ಮಾಡಬಹುದು. ಈ ರೀತಿ ಶಿಕ್ಷಣ ಪಡೆದ ಮರಿಯು, ಇತರರನ್ನು ಸಂತೋಷಪಡಿಸುವುದರ ಮೂಲಕ ತನ್ನ ಸಂತೋಷವನ್ನು ಕಂಡುಕೊಳ್ಳುತ್ತಾನೆ.

7. **ಮರಿಯ ವಯಸ್ಸಿನ ಬಾಲಕರು ಚುರುಕಾಗಿರುತ್ತಾರೆ,** ಜಾಗರೂಕರಾಗಿರುತ್ತಾರೆ ಮತ್ತು ಏನಾದರೂ ಮಾಡಲು ಚಡಪಡಿಸುತ್ತಾರೆ. ಅವರ ಅದಮ್ಯ ಚೇತನವನ್ನು ಉಪಯೋಗಿಸಿಕೊಳ್ಳಲು ಸಾಕಷ್ಟು ಅವಕಾಶ ಬೇಕು. ಇದು ಅವರಿಗೆ ಪ್ರಕೃತಿ ಸಹಜವಾದುದು. ಅವರ ಸ್ನಾಯುಗಳ ಹೊಂದಾಣಿಕೆ ಮತ್ತು ಬೆಳವಣಿಗೆಯಲ್ಲಿ ಈ ರೀತಿಯ ನಡವಳಿಕೆಯು ಸಹಜವಾದುದು. ಮರಿಯ ಕಣ್ಣು, ಕಿವಿ, ಕೈಕಾಲುಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡಲು, ಕಲಿಯಲು, ಬಾಲಕನಿಗೆ ಸಹಾಯಕವಾಗಬೇಕು. ಈ ರೀತಿ ಮಾನಸಿಕ ಮತ್ತು ಸ್ನಾಯುಗಳ ಹೊಂದಾಣಿಕೆಯಿಂದ ಕೂಡಿದ ಅನೇಕ ದೈಹಿಕ ಕ್ರಿಯೆಗಳನ್ನೊಳಗೊಂಡ ಅವಕಾಶಗಳನ್ನು ಕಬ್ಬಿಂಗ್ ಒದಗಿಸುತ್ತದೆ. ಮರಿಗಳ ಪರೀಕ್ಷಾಂಶಗಳು, ಈ ದಿಕ್ಕಿನಲ್ಲಿ ಮುಖ್ಯವೂ, ಅಮೂಲ್ಯವೂ ಆಗಿವೆ. ಪ್ರತಿಯೊಂದು ಅಂಶವೂ ಅರ್ಥವತ್ತಾದುದು, ಉದ್ದೇಶಪೂರಿತವಾದುದು. ಉದಾ: ಸ್ಕಿಪ್ಪಿಂಗ್, ಜಿಗಿಯುವುದು, ಪಲ್ಟಿಹೊಡೆಯುವುದು, ಕಪ್ಪೆಕುಪ್ಪಳ ಇತ್ಯಾದಿ. ಹಾಗೆಯೇ ಹೊರಾಂಗಣದಲ್ಲಿನ ಆಟಗಳು, ಕರಕುಶಲ ಕೆಲಸಗಳೂ ಕೂಡಾ.

8. **ಮರಿಯ ವಯಸ್ಸಿನ ಬಾಲಕರು, ಬಹಳವಾಗಿ ಪ್ರಶ್ನಿಸುವ ಸ್ವಭಾವವುಳ್ಳವ ರಾಗಿರುತ್ತಾರೆ.** ಏಕೆ? ಏನು? ಹೇಗೆ? ಮುಂದೇನಾಯಿತು? ಎಂಬ ಪ್ರಶ್ನೆಗಳು ಸದಾ ಅವರ ತಲೆಯುಲ್ಲಿರುತ್ತವೆ. ವಿಷಯಗಳನ್ನು ತಿಳಿಯಲೂ, ಕಲಿಯಲೂ ಆಸಕ್ತಿ ಯುಳ್ಳವರಾಗಿರುತ್ತಾರೆ. ಈ ರೀತಿ ಅವರ ಕುತೂಹಲಕಾರಕ ಪ್ರವೃತ್ತಿಯನ್ನು ಕಬ್ ಮಾಸ್ಟರನು ಗಮನದಲ್ಲಿಟ್ಟುಕೊಂಡು ಅದಕ್ಕೆ ತಕ್ಕ ಕೆಲಸವನ್ನು ಯೋಜಿಸಬೇಕು. ಈ ಕೋನದಲ್ಲಿ ನೋಡಿದ್ದಾದರೆ ಮರಿಗಳ ಪರೀಕ್ಷಾಂಶಗಳು ತಮ್ಮದೇ ಆದ ಉಪಯುಕ್ತತೆ ಯನ್ನು ಹೊಂದಿವೆ. ಪ್ರಕೃತಿ ವಿಜ್ಞಾನ, ಪ್ರಕೃತಿ ವೀಕ್ಷಣೆ, ನಿಸರ್ಗ ಸಂಚಾರ, ಪ್ರಾಕೃತಿಕ ಸಂಗ್ರಹಣೆ ಇತ್ಯಾದಿ, ಬೇರೇನಲ್ಲದಿದ್ದರೂ, ಈ ದಿಕ್ಕಿನಲ್ಲಿ ಸಹಾಯಕವಾಗುತ್ತದೆ. ವಿವಿಧ ವಿಷಯಗಳ ಬಗ್ಗೆ ಸೂಕ್ತ ಉದಂತಗಳೂ, ಸ್ವತಃ ಮಾಡಿ ಕಲಿಯುವುದೂ,

ಅನುಭವವೂ, ಅವರಿಗೆ ಆಸಕ್ತಿಯುತವೂ, ಪ್ರಯೋಜನಕಾರಿಯೂ ಆಗಿವೆ. ಬೇರೆ ಏನೇ, ಎಷ್ಟೇ ಗುಂಪು ಚಟುವಟಿಕೆಗಳಿದ್ದರೂ, ಮರಿಗಳ ಪ್ರಶ್ನೆಗಳಿಗೆ ಎಷ್ಟೇ ಕಷ್ಟವಾದರೂ ಉತ್ತರಿಸುವುದು ಅತ್ಯಗತ್ಯ. ಕಬ್‌ಮಾಸ್ಟರು ಈ ಕೆಲಸ ಮಾಡಬೇಕು. ಇಲ್ಲವೇ ಉತ್ತರಿಸುವವರ ಸಹಾಯವನ್ನು ಪಡೆಯಬೇಕು. ಏನೇ ಆದರೂ ಬಾಲಕರ ಜ್ಞಾನದಾಹವನ್ನು ತೀರಿಸಬೇಕು. ಸಾಕಷ್ಟು ತಾಳ್ಮೆ ಮತ್ತು ವಿನಯಯುತ ಸಹಾನುಭೂತಿ ಮತ್ತು ವಿವೇಚನೆಗಳು ಅತ್ಯವಶ್ಯಕವಾದುದು.

9. **ಹಿಂಡಿನ ಚೇತನ ಮತ್ತು ವಾತಾವರಣಗಳಿಗೆ ಸ್ಪಂದಿಸುವುದು** ಈ ವಯಸ್ಸಿನ ಬಾಲಕರ ಮತ್ತೊಂದು ಮುಖ್ಯ ಗುಣವಿಶೇಷವಾಗಿದೆ. ಹಿಂಡಿನಲ್ಲಿ ಎಲ್ಲಾ ರೀತಿಯಿಂದಲೂ ಒಂದೇ ಸುಖೀಕುಟುಂಬದವರು ಎಂಬ ಭಾವನೆಯುಂಟಾಗಬೇಕು. ಪ್ರತಿಯೊಂದು ಚಟುವಟಿಕೆಯಿಂದಲೂ ಸಂತೋಷ ಮತ್ತು ನೆಮ್ಮದಿ ದೊರಕಬೇಕು. ಸ್ನೇಹಭಾವನೆಯು ಸಲುವಳಿಯುಲ್ಲಿರಬೇಕು. ಪ್ರತಿಯೊಬ್ಬರೂ ಪರಸ್ಪರವಾಗಿ ಗುರುತರವಾದ ಶ್ರದ್ಧಾಸಕ್ತಿಯುಳ್ಳವರಾಗಿರಬೇಕು. ಯಾವುದೇ ಸಮಯದಲ್ಲಾಗಲೀ ಚುಚ್ಚಿ ಮಾತನಾಡುವುದು, ಮನನೋಯಿಸುವಂತೆ ನಡೆದುಕೊಳ್ಳುವುದು ಅಥವಾ ಕೋಪಗೊಳ್ಳುವುದು ಕೂಡದು. ಕಬ್‌ಮಾಸ್ಟರನು ಯಾರೊಬ್ಬರ ಅಥವಾ ಯಾವುದೊಂದು ವಿಷಯದ ಬಗ್ಗೆ ಪಕ್ಷಪಾತವನ್ನೆಂದಿಗೂ ತೋರಿಸಬಾರದು. ಬಾಲಕರು ನಂಬಿಕಾರ್ಹತೆ ಮತ್ತು ವಿಶ್ವಾಸಾರ್ಹತೆಗಳನ್ನು ಮೆಚ್ಚಿಕೊಳ್ಳುತ್ತಾರೆ. ಅವರು ಮಾತಿನಲ್ಲಿ ಹೇಳುವುದಿಲ್ಲವಾದರೂ, ಯಾರಲ್ಲಿ ಈ ಗುಣಗಳು ಕಂಡುಬರುವುದೋ ಅವರಲ್ಲಿ ನಂಬಿಕೆಯಿಟ್ಟು ಆ ಹಿರಿಯರನ್ನು ಪ್ರೀತಿಸುತ್ತಾರೆ. ಯಾರು ಸಣ್ಣತನದಿಂದ ನಡೆದುಕೊಳ್ಳುತ್ತಾರೆಯೋ, ಯಾರು ವಿಶ್ವಾಸಘಾತುಕರೋ, ಯಾರು ಕಪಟಿಗಳೋ, ಅವರಿಂದ ದೂರ ಸರಿಯುತ್ತಾರೆ. **ಯಾವ ಹಿಂಡಿನಲ್ಲಿ ಸದಾಕಾಲ ಸುಖೀಕುಟುಂಬದ ವಾತಾವರಣವೂ, ಪರಸ್ಪರ ನಂಬಿಕೆಯೂ ಮತ್ತು ಗೌರವವೂ ಇರುತ್ತದೆಯೋ ಅಂತಹ ಹಿಂಡು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ.** ಒಟ್ಟಿನಲ್ಲಿ ಹೇಳುವುದಾದರೆ ಕಬ್‌ಮಾಸ್ಟರನು ಮರಿಗಳಲ್ಲಿ ಇಡುವ ನಂಬಿಕೆ ಮತ್ತು ಮರಿಗಳು ಆತನ ವಿಷಯದಲ್ಲಿ ತೋರುವ ಗೌರವ, ವಿಶ್ವಾಸಗಳು ಬಹು ಮುಖ್ಯವಾದುದು.

◆

ಅಧ್ಯಾಯ-2

ಹಿಂಡು ಮತ್ತು ಷಟ್ಕಗಳು

ಮರಿಗಳ ಹಿಂಡಿನಲ್ಲಿ ಹನ್ನೆರಡಕ್ಕೆ ಕಡಿಮೆಯಿಲ್ಲದಂತೆ, ಇಪ್ಪತ್ತನಾಲ್ಕಕ್ಕೆ ಮೀರದಂತೆ ಮರಿಗಳಿರಬಹುದು. ಹಿಂಡನ್ನು ನಡೆಸುವ ಜವಾಬ್ದಾರಿಯುತ ವ್ಯಕ್ತಿಯೇ ಕಬ್‌ಮಾಸ್ಟರು. ಅವರಿಗೆ ಸಹಾಯಕರಾಗಿ ಇಬ್ಬರು ಅಥವಾ ಮೂವರು ಸಹಾಯಕ ಕಬ್‌ಮಾಸ್ಟರಿರಬಹುದು.

ಕಬ್‌ಮಾಸ್ಟರು ಮತ್ತು ಸಹಾಯಕ ಕಬ್‌ಮಾಸ್ಟರ ಅರ್ಹತೆಗಳನ್ನು ನಿಯಮಾವಳಿಯು ಈ ರೀತಿ ನಿಗದಿಪಡಿಸುತ್ತದೆ.

1. ಮರಿಯ ವಯಸ್ಸಿನ ಮಕ್ಕಳನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಂಡು ವ್ಯವಹರಿಸುವ ಸಾಮರ್ಥ್ಯವುಳ್ಳವರಾಗಿರಬೇಕು.
2. ಸ್ಕೌಟ್ ಚಳುವಳಿಯ ಬಗ್ಗೆ ಸಾಮಾನ್ಯವಾಗಿ ಅಧ್ಯಯನಮಾಡಿ ಅದರ ಗುರಿ ಮತ್ತು ಉದ್ದೇಶಗಳನ್ನು ತಿಳಿದವರಾಗಿರಬೇಕು ಮತ್ತು ಅದರ ನಿಯಮಗಳ ಪರಿಶ್ರಮವುಳ್ಳವರಾಗಿರಬೇಕು.
3. ನಿಗದಿಪಡಿಸಿದ ಶಿಕ್ಷಣವನ್ನು ಪಡೆದವರಾಗಿರಬೇಕು.
4. ನಿಗದಿತ ವಯೋಮಿತಿಗೊಳಪಟ್ಟಿರಬೇಕು. ಕಬ್‌ಮಾಸ್ಟರಾಗಲೀ, ಸಹಾಯಕ ಕಬ್‌ಮಾಸ್ಟರಾಗಲಿ ಹದಿನೆಂಟು ವರ್ಷ ವಯಸ್ಸು ಪೂರ್ತಿಯಾಗಿರಬೇಕು.
5. ಮಹಿಳೆಯರು ಸಹ ಕಬ್‌ಮಾಸ್ಟರು/ ಸಹಾಯಕ ಕಬ್‌ಮಾಸ್ಟರು ಆಗಬಹುದು.

ಸಂಖ್ಯೆಯನ್ನನುಸರಿಸಿ, ನಿರ್ವಹಣಾ ಸೌಕರ್ಯಕ್ಕಾಗಿ, ಹಿಂಡನ್ನು 2, 3 ಅಥವಾ 4 ಷಟ್ಕಗಳನ್ನಾಗಿ ವಿಂಗಡಿಸಲಾಗುತ್ತದೆ. ಪ್ರತಿ ಷಟ್ಕದಲ್ಲಿಯೂ ಆರಾಳಿ, ಮತ್ತು ಸಹಾಯಕರೂ ಸೇರಿ 5 ಅಥವಾ 6 ಮರಿಗಳಿರುತ್ತಾರೆ. ಆಟಗಳು ಮತ್ತು ಇತರ ಚಟುವಟಿಕೆಗಳ ವೇಳೆಯಲ್ಲಿ ಆರಾಳಿಯು ನಿರ್ವಾಹಕನಾಗುತ್ತಾನೆ. ಸಹಾಯಕನು ಆರಾಳಿಗೆ ನೆರವಾಗುತ್ತಾನೆ. ಕಬ್‌ಮಾಸ್ಟರು ಆರಾಳಿಯ ಸಲಹೆ ಪಡೆಯುತ್ತಾರೆ.

ಅವಶ್ಯಕತೆಗನುಸಾರವಾಗಿ ಕಬ್‌ಮಾಸ್ಟರು, ತನಗೆ ಅಥವಾ ಸಹಾಯಕ ಕಬ್‌ಮಾಸ್ಟರಿಗೆ ನೆರವಾಗಲು, ಆರಾಳಿಗಳ ಪೈಕಿ ಒಬ್ಬರನ್ನು ಹಿರಿಯ ಆರಾಳಿಯನ್ನಾಗಿ ನೇಮಿಸುತ್ತಾರೆ.

ಪ್ರತಿ ಷಟ್ಕಕ್ಕೂ ಅದರದೇ ಆದ ಬಣ್ಣವಿರುತ್ತದೆ. ಸಾಮಾನ್ಯವಾಗಿ ಕಂದು, ಕಪ್ಪು, ಬೂದು, ತಿಳಿಕಂದು, (ಕಂದು ಹಳದಿ), ನೀಲಿ, ಕೆಂಪು, ಬಿಳುಪು ಮತ್ತು ಹಸಿರು ಬಣ್ಣಗಳನ್ನು ಆರಿಸಿಕೊಳ್ಳಲಾಗುತ್ತದೆ.

ಮರಿಗಳ ಹಿಂಡು ತಾನಾಗಿ ಕೆಲಸ ಮಾಡಬಹುದು ಅಥವಾ ಮಂಡಲದ ಭಾಗವಾಗಿ ಕೆಲಸ ನಿರ್ವಹಿಸಬಹುದು. ಮರಿಗಳ ಹಿಂಡು, ಸ್ಕೌಟ್ ದಳ ಹಾಗೂ ರೋವರ್ ತಂಡ, ಈ ಮೂರೂ ಒಂದಾಗಿ ಕೆಲಸ ಮಾಡುವುದಾದರೆ ಅದು ಪೂರ್ಣ ಗುಂಪು ಎನಿಸಿಕೊಳ್ಳುತ್ತದೆ. ಹಿಂಡು ತಾನಾಗಿ ಕೆಲಸ ನಿರ್ವಹಿಸುವುದಾದರೆ ಅದು ಒಂದು ಘಟಕವೇ ಹೊರತು ಗ್ರೂಪ್ (ಗುಂಪು) ಎನಿಸಿಕೊಳ್ಳುವುದಿಲ್ಲ. ಗುಂಪು ಎನಿಸಿ ಕೊಳ್ಳಲು ಬೇಕಾದ 3 ವಿಭಾಗಗಳ ಪೈಕಿ, ಕನಿಷ್ಠ 2 ವಿಭಾಗಗಳ ಅವಶ್ಯಕತೆಯಿರುತ್ತದೆ.

ಹಿಂಡು ಯಾವ ಗುಂಪಿನ ಅಂಗವಾಗಿರುತ್ತದೆಯೋ, ಅದರ ಹೆಸರಿನಿಂದ ಕರೆಯಲಾಗುತ್ತದೆ. ಗುಂಪನ್ನು ಆಯಾ ಸ್ಥಳಗಳ/ ಪೋಷಕ ಸಂಸ್ಥೆಯ ಅಥವಾ ದೇಶದ ವೀರಾಗ್ರಣಿಗಳ ಹೆಸರಿನಿಂದ ಕರೆಯಲಾಗುತ್ತದೆ.

ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯ ಮಟ್ಟದಲ್ಲಿ ಪ್ರತಿ ಘಟಕ/ ಮಂಡಲಕ್ಕೂ ಅದರ ಕ್ರಮಾನುಗುಣ ವಿಶಿಷ್ಟ ಸಂಖ್ಯೆಯನ್ನು ಕೊಡಲಾಗುತ್ತದೆ.

ಪ್ರತಿ ವರ್ಷವೂ ಕಬ್ ಪ್ಯಾಕಿನ ನೊಂದಾವಣೆ ನಿಯಮಿತವಾಗಿ ಮಾಡಿಸಬೇಕು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆಯ ಕಚೇರಿಯಲ್ಲಿ ನೊಂದಾವಣೆ ಮಾಡಿಸಬೇಕು, ಜಿಲ್ಲೆಯಿಂದ ಕಬ್ಸ್ ಮಕ್ಕಳಿಗೆ ಮೇಲಿಂದ ಮೇಲೆ ಚಟುವಟಿಕೆ ನಡೆಸುತ್ತಿರಬೇಕು.

◆

ಅಧ್ಯಾಯ-3

ಮರಿಗಳ ಶಿಕ್ಷಣ

ಮರಿಗಳಿಗೆ ಶಿಕ್ಷಣ ನೀಡುವುದು ಕಬ್‌ಮಾಸ್ಟರ ಜವಾಬ್ದಾರಿಯಾಗಿರುತ್ತದೆ. ಶಿಕ್ಷಣವನ್ನು ಹೇಗೆ ನೀಡಬೇಕೆಂಬುದರ ಬಗ್ಗೆ ಅವರೇ ನಿರ್ಣಯ ತೆಗೆದುಕೊಳ್ಳ ಬೇಕಾಗುತ್ತದೆ. ಅವರ ಹಿಂಡಿನ ಎಲ್ಲಾ ಕಾರ್ಯಕ್ರಮಗಳನ್ನೂ ಯೋಜಿಸಿ, ಸಹಾಯಕ ಕಬ್‌ಮಾಸ್ಟರ ನೆರವಿನಿಂದ ಆಯೋಜಿತ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುತ್ತಾರೆ.

ಮರಿಗಳ ಶಿಕ್ಷಣವು, ಸ್ಕೌಟ್ ಶಿಕ್ಷಣಕ್ಕಿಂತ ವಿಭಿನ್ನ ರೀತಿಯದಾಗಿರುತ್ತದೆ. ಸ್ಕೌಟುಗಳಿಗೆ ಒಪ್ಪುವ ಶಿಕ್ಷಣವು, ಮರಿಗಳಿಗೆ ಸ್ವಲ್ಪವೂ ಸರಿಹೊಂದುವುದಿಲ್ಲ. ಹಿಂಡಿನ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು ಮರಿಗಳ ವಯಸ್ಸಿಗೆ ಸಹಜವಾದ ವಿಶಿಷ್ಟಗುಣಗಳು ಮತ್ತು ಪ್ರೇರಣೆಗಳ ಮೇಲೆ ಆಧಾರಿತವಾಗಿರಬೇಕು. ಮರಿಗಳಿಗೆ ನಿಗದಿಪಡಿಸುವ ನಿಯಮಗಳನ್ನು ಎಚ್ಚರಿಕೆಯಿಂದ ಪಾಲಿಸಬೇಕು. ಹಿಂಡಿನ ಎಲ್ಲಾ ಚಟುವಟಿಕೆಗಳನ್ನೂ ಅವರ ವಿಶಿಷ್ಠತೆಗಳಿಗನುಗುಣವಾಗಿ ರೂಪಿಸಬೇಕು. ಯಾವುದೇ ಕಾರಣದಿಂದಲೂ, ಸ್ಕೌಟುಗಳಿಗೆ ನಿಗದಿಪಡಿಸಿದ ನಿಯಮಗಳ ಮಟ್ಟಕ್ಕೆ ಹೋಗಬಾರದು.

ಮರಿಗಳ ಶಿಕ್ಷಣದಲ್ಲಿ ಆಟವು ಪ್ರಮುಖ ಪಾತ್ರ ವಹಿಸುತ್ತದೆ. ಆಟಗಳ ಮೂಲಕ, ಅವರು ಮುಂದೆ ಜೀವನದಲ್ಲಿ ನಿರ್ವಹಿಸಬಹುದಾದ ಅನೇಕ ದೊಡ್ಡ ಜವಾಬ್ದಾರಿಗಳ ಬಗ್ಗೆ ಬೇಕಾದ, ಹಲವಾರು ಸಣ್ಣಪುಟ್ಟ ವಿಷಯಗಳನ್ನು ಕಲಿಸಲು ಸಹಾಯಕವಾಗುತ್ತದೆ. ಮರಿಗಳ ವಯಸ್ಸಿನ ಮಕ್ಕಳು ಚೂಟಿಯಾಗಿರುತ್ತಾರೆ. ಚಟುವಟಿಕೆಯುಳ್ಳವರಾಗಿರುತ್ತಾರೆ ಮತ್ತು ಸದಾ ಏನಾದರೊಂದು ಬೇರೆ ಬೇರೆ ಕೆಲಸಗಳನ್ನು ಮಾಡಲು ಚಡಪಡಿಸುತ್ತಿರು ತ್ತಾರೆಂಬ ಅಂಶವನ್ನು, ಕಬ್‌ಮಾಸ್ಟರಾದವರು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಹಿಂಡಿನ ಕಾರ್ಯಕ್ರಮಗಳು ಈ ದಿಕ್ಕಿನಲ್ಲಿ ಸಾಕಷ್ಟು ಚಟುವಟಿಕೆಯನ್ನೊದಗಿಸಬೇಕು. ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಮತ್ತೊಂದು ಅಂಶವೆಂದರೆ, ಈ ವಯಸ್ಸಿನ ಮಕ್ಕಳು ಯಾವುದೇ ಒಂದು ಕೆಲಸದ ಬಗ್ಗೆ ಹೆಚ್ಚು ಕಾಲ ಕೇಂದ್ರೀಕರಿಸಲಾಗುವುದಿಲ್ಲವೆಂಬುದು. ಅವರು ಕೇಂದ್ರೀಕರಿಸಿ ಗಮನ ಹರಿಸುವ ಕಾಲವು ಸೀಮಿತವಾದುದು. ಆದ್ದರಿಂದ ಹಿಂಡಿನ ಕಾರ್ಯಕ್ರಮಗಳನ್ನು ರೂಪಿಸುವಾಗ, ಹೆಚ್ಚು ಚಟುವಟಿಕೆಯಿಂದ ಕೂಡಿದ ಕಾರ್ಯಕ್ರಮಗಳು, ಮಧ್ಯೆ ಮಧ್ಯೆ ವಿಶ್ರಾಂತಿ ದೊರಕುವ ಸಣ್ಣ ಪುಟ್ಟ ಕಾರ್ಯಕ್ರಮಗಳೂ ಸಮ್ಮಿಳಿತವಾಗಿರಬೇಕು.

ಎರಡನೆಯದಾಗಿ ಮರಿಗಳ ಮತ್ತು ಸ್ಕೌಟ್ ವಯಸ್ಸಿನ ಬಾಲಕರ ಮಧ್ಯೆ ಹಲವು ಮೂಲಭೂತ ವ್ಯತ್ಯಾಸಗಳಿರುತ್ತವೆ. ಮರಿಯು ಪ್ರತ್ಯೇಕ ಅಸ್ತಿತ್ವವುಳ್ಳವನಂತೆ ಭಾವಿಸಿಕೊಳ್ಳುತ್ತಾನೆ ಮತ್ತು ಆ ರೀತಿಯ ವ್ಯವಹಾರವನ್ನು ಬಯಸುತ್ತಾನೆ. ಸ್ಕೌಟ್ ವಯಸ್ಸಿನ ಬಾಲಕನು ಸಣ್ಣ ಗುಂಪುಗಳಲ್ಲಿ ವ್ಯವಹರಿಸಬಯಸುತ್ತಾನೆ ಹಾಗೂ ಗುಂಪಿನ ಚಟುವಟಿಕೆಗಳನ್ನು ಇಚ್ಛಿಸುತ್ತಾನೆ. ಸ್ಕೌಟ್ ವಯಸ್ಸಿನ ಬಾಲಕನಂತಲ್ಲದೆ ಮರಿಯ ವಯಸ್ಸಿನ ಬಾಲಕನು ಹೆಚ್ಚಾಗಿ ಊಹಾ ಲೋಕದಲ್ಲಿ ವಿಹರಿಸುತ್ತಾನೆ. ಗುಟ್ಟಾದ ಮತ್ತು ಅಸಾಮಾನ್ಯವಾದ ವಿಷಯಗಳಲ್ಲಿ ಆಸಕ್ತಿ ತೋರಿಸುತ್ತಾನೆ. ವಿಷಯವು ಹೀಗಿರುವಾಗ, ಹಿಂಡಿನ ಕಾರ್ಯಕ್ರಮಗಳಲ್ಲಿ ಮರಿಗಳ ಈ ರೀತಿಯ ಸಹಜ ಪ್ರವೃತ್ತಿಗೆ ಸಾಕಷ್ಟು ಅವಕಾಶವಿರಬೇಕು. ಮರಿಯ ವಯಸ್ಸಿನ ಬಾಲಕನು ಹಿರಿಯ ನಾಯಕನ ಹದ್ದುಬಸ್ತಿನಲ್ಲಿರಲು ಇಚ್ಛಿಸುತ್ತಾನೆ. ಸ್ಕೌಟ್ ವಯಸ್ಸಿನ ಬಾಲಕನಾದರೋ ಸ್ವತಂತ್ರನಾಗಿರಲು ಇಚ್ಛಿಸುತ್ತಾನೆ. ಸಂಯಮದಿಂದಿರಲು ಪ್ರಯತ್ನಿಸುತ್ತಾನೆ. ಕೆಲಸ ಕಾರ್ಯಗಳನ್ನು ತಾನೇ ಮಾಡಲು ಬಯಸುತ್ತಾನೆ. ಮರಿಯ ವಿಷಯದಲ್ಲಿ ಗೌರವ, ಮರ್ಯಾದೆಗಳು ಇನ್ನೂ ಶೈಶವಾವಸ್ಥೆಯಲ್ಲಿರುತ್ತವೆ. ಅದನ್ನು ವಿಕಾಸಗೊಳಿಸ ಬೇಕಾಗುತ್ತದೆ. ಸ್ಕೌಟಿನ ವಿಷಯದಲ್ಲಿ ಬೆಳವಣಿಗೆಯು ಆಗಲೇ ಪ್ರಾರಂಭವಾಗಿದ್ದು, ದೀಕ್ಷಾ ಸಮಾರಂಭ ಮೊದಲ್ಗೊಂಡು ಅದು ಅಭಿವೃದ್ಧಿ ಹೊಂದುತ್ತಾ ಹೋಗುತ್ತದೆ. ಇನ್ನೊಂದು ವ್ಯತ್ಯಾಸವೆಂದರೆ, ಮರಿಯ ವಯಸ್ಸಿನ ಬಾಲಕರು ಸಲಹೆ, ಸೂಚನೆಗಳಿಗೆ ಸ್ಪಂದಿಸುತ್ತಾರೆ. ಸ್ಕೌಟ್ ವಯಸ್ಸಿನ ಬಾಲಕರು ವ್ಯಕ್ತಿ ಆರಾಧಕರಾಗಿರುತ್ತಾರೆ. ಆದ್ದರಿಂದ ಸ್ಕೌಟ್ ಮಾಸ್ಟರು, ಅವರ ಭಾವನೆಗಳಿಗೆ ಅನುಗುಣವಾಗಿ, ಕಬ್‌ಮಾಸ್ಟರನಿಗಿಂತಲೂ ಹೆಚ್ಚು ಶ್ರದ್ಧಾಯುಕ್ತನಾಗಿರಬೇಕಾಗುತ್ತದೆ.

ಆದ ಕಾರಣ ಮರಿಗಳ ಕಾರ್ಯಕ್ರಮಗಳು, ಸ್ಕೌಟ್ ಟ್ರೂಪಿನ ಕಾರ್ಯಕ್ರಮ ಗಳಿಗಿಂತಲೂ ವಿಭಿನ್ನ ರೀತಿಯವಾಗಿರಬೇಕು. ಅಂತೆಯೇ ಹಿಂಡಿನ ಮತ್ತು ಸ್ಕೌಟ್ ದಳದ ನಾಯಕರುಗಳ ಮನಸ್ತತ್ತ್ವವೂ ವಿಭಿನ್ನವಾಗಿರಬೇಕು. ತದನುಗುಣವಾಗಿ, ಹಿಂಡೂ ಮತ್ತು ಸ್ಕೌಟು ದಳಗಳ ವಾತಾವರಣವೂ ಪರಸ್ಪರ ವಿಭಿನ್ನವಾಗಿರುತ್ತದೆ.

◆

ಅಧ್ಯಾಯ-4

ಪದಕಗಳಿಗೆ ತಯಾರಾಗುವುದು

ಹಿಂಡು ಉಲ್ಲಾಸಕರವಾದ ಮತ್ತು ಆರೋಗ್ಯಕರವಾದ ವಾತಾವರಣವನ್ನು ಒದಗಿಸುತ್ತದೆ. ಇತರ ಮರಿಗಳು ಮತ್ತು ಕಬ್‌ಮಾಸ್ಟರ ಸಹವಾಸದಲ್ಲಿ, ಮರಿಯು ಸುಖೀಕುಟುಂಬದ ಭಾವನೆ ಮತ್ತು ಅನುಭವಗಳನ್ನು ಪಡೆಯುತ್ತಾನೆ. ಅವನು ಕಷ್ಟಪಟ್ಟು ಮರಿಗಳ ಕೌಶಲ್ಯದಲ್ಲಿ, ಸ್ಥಿಮಿತ ರೀತಿಯಲ್ಲಿ ಮುಂದುವರೆಯುತ್ತಾನೆ.

ಅವನ ಶಿಕ್ಷಣವು ಪ್ರಗತಿಶೀಲವಾದುದು. ಉಮೇದುವಾರನಾಗಿ ಅವನು ಹಿಂಡಿಗೆ ಸೇರುತ್ತಾನೆ. ಕೆಲವು ಅವಶ್ಯಕ ವಿಷಯಗಳನ್ನು ತಿಳಿದುಕೊಂಡಿರುವುದಾಗಿ ಕಬ್‌ಮಾಸ್ಟರಿಗೆ ಮನವರಿಕೆ ಮಾಡಿಕೊಟ್ಟಲ್ಲಿ (ನಿಯಮ 8(iii) ಅಧ್ಯಾಯ 1 ಎ.ಪಿ.ಆರ್.ಓ.II) ಅವನು ಪ್ರವೇಶ್ ಮರಿಯಾಗಿ ದೀಕ್ಷೆ ಪಡೆಯುತ್ತಾನೆ. ಮುಂದೆ ಪ್ರಥಮ ಚರಣ್ ಮರಿಯಾಗಿ, ದ್ವಿತೀಯ ಚರಣ್ ಮರಿಯಾಗಿ, ತೃತೀಯ ಚರಣ್ ಮರಿಯಾಗಿ ಮತ್ತೂ ಮುಂದೆ ಚತುರ್ಥ ಚರಣ್ ಮರಿಯಾಗಿ ಉನ್ನತಿ ಹೊಂದುತ್ತಾನೆ. (ನಿಯಮ 11, 12, 13 ಮತ್ತು 14 ಅಧ್ಯಾಯ 1 ಎ.ಪಿ.ಆರ್.ಓ. II)

ಪ್ರಥಮ ಚರಣದ ಬಗ್ಗೆ ಹೇಳುವುದಾದರೆ, ಕಬ್‌ಮಾಸ್ಟರು, ಮರಿಯ ಪ್ರಗತಿ ಸಾಮರ್ಥ್ಯಗಳ ಬಗ್ಗೆ, ಸಂತೃಪ್ತನಾಗಬೇಕು. ನಿಯಮದ ಪ್ರಕಾರ ತಿಳಿದುಕೊಳ್ಳಬೇಕಾದ ವಿಷಯಗಳನ್ನು ಮರಿಯು ತಿಳಿದುಕೊಂಡಿದ್ದಾನೆಂದು ಖಚಿತಪಡಿಸಿಕೊಳ್ಳಬೇಕು. ಈ ತಿಳುವಳಿಕೆಗೆ ಅವಶ್ಯವಾದ ಶಿಕ್ಷಣವನ್ನು ಮರಿಯು ಹಿಂಡಿನ ಸಭೆಗಳಲ್ಲಿ ಮತ್ತು ಹೊರಾಂಗಣ ಕಾರ್ಯಕ್ರಮಗಳಲ್ಲಿ ಪಡೆಯುತ್ತಾನೆ. ಮರಿಯು ಎಲ್ಲಾ ಪರೀಕ್ಷಾಂಶಗಳಲ್ಲಿಯೂ ಉತ್ತೀರ್ಣನಾಗಿದ್ದಾನೆಂದು ಮನವರಿಕೆಯಾದ ಕೂಡಲೇ ಕಬ್‌ಮಾಸ್ಟರು ಪ್ರಥಮ ಚರಣ ಪದಕವನ್ನು ನೀಡಲು ಸೂಚಿಸುತ್ತಾನೆ. ಈ ಪದಕದ ಪ್ರಧಾನವಾದ ಕೂಡಲೇ ಮರಿಯು ಪ್ರಥಮ ಚರಣ ಮರಿಯಾಗುತ್ತಾನೆ. ಈ ಶ್ರೇಣಿಯ ಮರಿಯಾಗುವುದು ಹೆಮ್ಮೆಯ ವಿಷಯ. ಈ ಪದಕದ ಗಳಿಕೆಯು ಕ್ರಮಬದ್ಧ ಕಲಿಕೆಯ

ಹಾಗೂ ಶ್ರದ್ಧಾಯುತ ಮತ್ತು ನಿಯತ್ತಾದ ಅಭ್ಯಾಸದ ಗುರುತಾಗಿರುತ್ತದೆ. ಕಬ್‌ಮಾಸ್ಟರು ಸಹಾಯ ಮಾಡಲೂ, ಮಾರ್ಗದರ್ಶನ ನೀಡಲೂ, ತಯಾರಿದ್ದರೂ ಸಹ ಮರಿಯು ತಾನಾಗಿ ಈ ಎಲ್ಲಾ ಶಿಕ್ಷಣವನ್ನೂ ಪಡೆಯಬೇಕಾಗುತ್ತದೆ.

ದ್ವಿತೀಯ ಚರಣದಿಂದ ಮುಂದೆ, ಕಬ್‌ಮಾಸ್ಟರು ಶಿಕ್ಷಣ ಕೊಟ್ಟರೂ ಸಹ, ಜಿಲ್ಲಾ ಕಮೀಷನರು ಮತ್ತು ಸಂಸ್ಥೆಯಿಂದ ನೇಮಿತರಾದ, ಟ್ರೈನಿಂಗ್ ಕೌನ್ಸಿಲರರಿಂದ ಗೊತ್ತುಪಡಿಸಿದ, ಸ್ವತಂತ್ರ ಪರೀಕ್ಷಕರು, ಪರೀಕ್ಷೆ ನಡೆಸುತ್ತಾರೆ. ಕಬ್‌ಮಾಸ್ಟರು ಆದಷ್ಟೂ ಸಮರ್ಥ ರೀತಿಯಲ್ಲಿ ಶಿಕ್ಷಣ ಕೊಡುವುದಲ್ಲದೆ, ಮರಿಯನ್ನು ಪರೀಕ್ಷಕನ ಮುಂದೆ ಹಾಜರುಪಡಿಸುವುದಕ್ಕೆ ಮುಂಚೆ, ಮರಿಯು ಎಲ್ಲಾ ವಿಷಯಗಳನ್ನೂ ತಿಳಿದಿರುವನೆಂದು ಮನವರಿಕೆ ಮಾಡಿಕೊಳ್ಳಬೇಕು. ಪೂರ್ವಭಾವಿಯಾಗಿ ಆಟಗಳು ಮತ್ತು ಪುನರ್ವಿಮರ್ಶಕ ಅಭ್ಯಾಸಗಳನ್ನು ನಡೆಸಬೇಕು. ಈ ಕ್ರಮದಿಂದ ಮರಿಗೆ ಆತ್ಮವಿಶ್ವಾಸವು ಬಲಗೊಂಡು, ನಿಗದಿತ ಪರೀಕ್ಷಕನನ್ನು ಸುಲಭವಾಗಿ ಎದುರಿಸಬಲ್ಲವನಾಗುತ್ತಾನೆ.

ಪ್ರಥಮ ಚರಣ ಪರೀಕ್ಷೆಯಲ್ಲಿ ಉತ್ತೀರ್ಣನಾದ ಮೇಲೆ, ಮರಿಯು 2 ಪ್ರವೀಣತಾಪದಕಗಳನ್ನು ಅಭ್ಯಾಸಮಾಡಿ ಗಳಿಸಲು ಅರ್ಹನಾಗುತ್ತಾನೆ. ಸಾಮಾನ್ಯ ರೂಢಿಯಲ್ಲಿ, ಪ್ರಥಮ ಚರಣದಿಂದ ಚತುರ್ಥ ಚರಣದವರೆಗಿನ ಪದಕಗಳನ್ನು ಪ್ರಗತಿಶೀಲ ಪದಕಗಳೆಂದೂ, ಉಳಿದವುಗಳನ್ನು ಪ್ರವೀಣತಾ ಪದಕಗಳೆಂದೂ ವ್ಯವಹರಿಸಲಾಗುವುದು. ಒಟ್ಟಿನಲ್ಲಿ 19 ಪ್ರವೀಣತಾ ಪದಕಗಳಿವೆ.

ಪ್ರಥಮ ಚರಣ ಮರಿಯಾಗಿ	2 ಪ್ರವೀಣತಾ ಪದಕಗಳನ್ನೂ
ದ್ವಿತೀಯ ಚರಣ ಮರಿಯಾಗಿ	ಮೇಲೆರಡರ ಜೊತೆಗೆ 2 ಪ್ರವೀಣತಾ ಪದಕಗಳನ್ನೂ,
ತೃತೀಯ ಚರಣ ಮರಿಯಾಗಿ	ಬೇಕಾದ ಯಾವುದಾದರೂ ಇಲ್ಲವೇ ಉಳಿದ ಎಲ್ಲಾ ಪ್ರವೀಣತಾ ಪದಕಗಳನ್ನೂ ಪಡೆಯಬಹುದಾಗಿದೆ.

ಮರಿಗೆ ಇರಬಹುದಾದ ವಿಶೇಷ ಆಸಕ್ತಿ ಅಥವಾ ಅಭಿರುಚಿಗೆ ತಕ್ಕಂತೆ, ಪ್ರವೀಣತಾ ಪದಕಗಳನ್ನು ಆರಿಸಿಕೊಳ್ಳುವುದು, ಸೂಕ್ತವಾದ ಮಾರ್ಗವೆನಿಸುತ್ತದೆ. ಮುಂದೆ ಜೀವನದಲ್ಲಿ ಅವು ಕೆಲವು ಅವನ ಹವ್ಯಾಸವಾಗಬಹುದು.

ಪದಕಗಳಿಗಾಗಿ ಕೆಲಸ ಮಾಡುವುದು, ಮುಖ್ಯವೆನಿಸಿದರೂ, ಅದೇ ಕಬ್ಬಿಂಗ್‌ನ

ಮುಖ್ಯ ಉದ್ದೇಶವಲ್ಲ. "ಸುಖೀ ಕುಟುಂಬ"ದ ಭಾವನೆಯನ್ನು ರೂಢಿಸಿಕೊಳ್ಳುವ, ಹಾಗೂ ಹಿಂಡಿನಲ್ಲಿ ಎಲ್ಲಾ ಮರಿಗಳೊಂದಿಗೆ ಹೊಂದಿಕೊಂಡು, ಉಲ್ಲಾಸಕಾರಕ ರೀತಿಯಲ್ಲಿ ನಡೆದುಕೊಳ್ಳುವುದೇ ಪ್ರಮುಖವಾದುದು. ಹಿಂಡಿನ ಸಭೆಗಳು ಮತ್ತು ಕಾರ್ಯಕ್ರಮಗಳನ್ನು ಈ ಹಿನ್ನೆಲೆಯಲ್ಲಿ ರೂಪಿಸಿಕೊಂಡು, ಪದಕಗಳಿಗಾಗಿ ತಯಾರಿ ನಡೆಸುವುದರ ಮೂಲಕ ಮುಖ್ಯ ಉದ್ದೇಶವನ್ನು ಸಾಧಿಸಲೇಬೇಕಾಗುತ್ತದೆ. ಇದಕ್ಕಾಗಿ ಕಬ್‌ಮಾಸ್ಟರ್ ಪ್ರೇರಣೆ ಮಾಡಬೇಕು.

ಕಾರ್ಯಕ್ರಮ ನಿರೂಪಣೆ ಮತ್ತು ಯೋಜನೆಯು ಬಹಳ ಮುಖ್ಯವಾಗಿದ್ದು, ಕಬ್‌ಮಾಸ್ಟರು ಮತ್ತು ಸಹಾಯಕ ಕಬ್‌ಮಾಸ್ಟರುಗಳು ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕಾಗುತ್ತದೆ.

◆

ಅಧ್ಯಾಯ-5

ಪ್ರವೇಶ್ ಮರಿ

ಭಾರತ ದೇಶದ ನಾಗರೀಕನಾಗಿದ್ದು ಆರು ವರ್ಷಗಳು ಕಳೆದು, ಹತ್ತು ವರ್ಷ ವಯಸ್ಸು ಮೀರದ, ಯಾವುದೇ ಬಾಲಕನು, ಉಮೇದುವಾರನಾಗಿ ನೋಂದಣಿ ಪಡೆಯಬಹುದು. ಈ ರೀತಿ ಹಿಂಡಿನಲ್ಲಿ ನೋಂದಣಿ ಮಾಡಿಕೊಳ್ಳುವ ಮೊದಲು, ಅವನಿಗೆ

1. ಕಾಡಿನ ಕಥೆಗಳ ಮೊದಲ ಭಾಗವನ್ನು ಹೇಳಿರಬೇಕು.
2. ಮರಿಗಳ ನಿಯಮ, ಮರಿಗಳ ಧ್ಯೇಯ, ಮರಿಗಳ ಪ್ರತಿಜ್ಞೆ ಮತ್ತು ಮರಿಗಳ ಘನವಂದನೆ ಇವುಗಳನ್ನು ಬಲ್ಲವನಾಗಿ, ಅರ್ಥ ಮಾಡಿ ಕೊಂಡಿರಬೇಕು.
3. ಮರಿಗಳ ವಂದನೆ ಮತ್ತು ಎಡಗೈ ಕುಲುಕುವಿಕೆ ಇವುಗಳನ್ನು ಸರಿಯಾಗಿ ಮಾಡಿ ತೋರಿಸಬೇಕು.
4. ಪ್ರತಿದಿನವೂ ಮನೆಯಲ್ಲಿ ತಾಯಿ-ತಂದೆಯರು ತಿಳಿಸಿದಂತೆ ಪ್ರಾರ್ಥನೆ ಮಾಡಿಕೊಳ್ಳಬೇಕು.
5. ಮನೆಯಲ್ಲಿ ದಿನಕ್ಕೊಂದು ಉಪಕಾರವನ್ನು ಮಾಡಬೇಕು.
6. ಕಬ್ ಪ್ರಾರ್ಥನೆ ಹೇಳಲು ಸಮರ್ಥನಾಗಿರಬೇಕು.

ಆಗ ಅವನು ಕಬ್‌ಮಾಸ್ಟರಿಗೆ ಮರಿಗಳ ಪ್ರತಿಜ್ಞೆಮಾಡಿ ಮರಿಯಾಗಿ ದೀಕ್ಷೆ ಪಡೆಯುತ್ತಾನೆ. ದೀಕ್ಷೆ ಪಡೆದ ಮೇಲೆ ಮರಿಗಳ ಸಮವಸ್ತ್ರವನ್ನು ಧರಿಸಲೂ, ಈ ಸಂಸ್ಥೆಯ ಸದಸ್ಯತ್ವ ಪದಕವನ್ನು ಧರಿಸಲೂ ಅರ್ಹನಾಗುತ್ತಾನೆ. ಅವನು ಈಗ ಪ್ರವೇಶ್ ಮರಿ.

ಕಾಡಿನ ಕಥೆಗಳ ಮೊದಲ ಭಾಗ

ಪ್ರಸ್ತಾವನೆ : ಸ್ಕೌಟ್ ಸಂಸ್ಥೆಯ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪೊವೆಲ್ಲರು ಸರ್ ರಡ್ಯಾರ್ಡ್ ಕಿಪ್ಲಿಂಗ್‌ರವರು ಬರೆದ "ಕಾಡಿನ ಪುಸ್ತಕ"ದ ಕಥೆಗಳಲ್ಲಿನ ಮೂಲಾದರ್ಶ ಗಳಾದ ಉತ್ಸುಕತೆ, ವಿಧೇಯತೆ ಮತ್ತು ವ್ಯವಸ್ಥಿತ ಸಹಕಾರ ಮನೋಭಾವನೆಗಳು ಪುಟ್ಟ ಬಾಲಕರಿಗೆ ರುಚಿಸುವುದಲ್ಲದೆ, ಅವರ ಸಹಜ ಪ್ರವೃತ್ತಿಗಳಾದ ಹಗಲುಗನಸು ಕಾಣುವ

ಮನೋಭಾವನೆ ಮತ್ತು ಸಾಹಸತನಗಳಿಗೆ ಇಂಬುಗೊಟ್ಟು, ಅಭಿವೃದ್ಧಿಪಡಿಸುತ್ತವೆಂಬ ಅಂಶವನ್ನು ಆಧಾರ ಮಾಡಿಕೊಂಡು, ಮರಿಗಳ ಹಿಂಡಿನ ರಚನೆಯನ್ನು ರೂಪಿಸಿದರು.

ಕಾಡಿನ ಪುಸ್ತಕದಲ್ಲಿನ ತೋಳಗಳ ಕಥೆಯು, ನಮ್ಮ ಮರಿಗಳ ಶಿಕ್ಷಣದ ವಿಷಯ ವಸ್ತುವಾಗಿರುತ್ತದೆ.

ಕಾಡಿನ ಕಥೆ

ಅದೊಂದು ಬೇಸಗೆಯ ಸಂಜೆ ಏಳು ಗಂಟೆಯ ಸಮಯ. ತಂದೆ ತೋಳವು ಎಚ್ಚೆತ್ತು, ನಿದ್ದೆಯ ಮಂಪರು ಕಳೆಯಲು, ಮುಂಗಾಲುಗಳನ್ನು ಚಾಚಿ, ಮೈ ಮುರಿದು, ಬೇಟೆಗೆ ಹೊರಡಲು ಅಣಿಮಾಡಿಕೊಂಡಿತು. ತಾಯಿ ತೋಳವು ತನ್ನ ನಾಲ್ಕು ಮರಿಗಳೊಂದಿಗೆ ಗುಹೆಯೊಳಗೆ ಮಲಗಿತ್ತು. ಗುಹೆಯೊಳಗೆ ಬೆಳದಿಂಗಳು ಹರಡಿತ್ತು.

ತಂದೆ ತೋಳವು, ಇನ್ನೇನು, ಗುಹೆಯಿಂದ ಹೊರಗೆ ಕಾಲಿಡಬೇಕು ಎನ್ನುವಷ್ಟರಲ್ಲಿ ಗುಹೆಯೊಳಗೆ ನೆರಳು ಬಿದ್ದಿತು. "ನಮಸ್ಕಾರ, ತೋಳಗಳ ನಾಯಕನಿಗೆ ಬಹುಪರಾಕ್, ನಿಮಗೆ ಒಳ್ಳೆಯ ಬೇಟೆ ಸಿಗಲಿ. ನಿಮ್ಮ ಕೀರ್ತಿಯುತ ಮಕ್ಕಳಿಗೆ ಒಳ್ಳೆಯದಾಗಲಿ. ಪ್ರಪಂಚದಲ್ಲಿ ಹಸಿದವರನ್ನು ನೀವು ಎಂದೂ ಮರೆಯದಂತೆ ಇರಲಿ" ಎಂದು ಕುಯ್‌ಗುಡುವ ಧ್ವನಿಯಲ್ಲಿ ಪ್ರಾಣಿಯೊಂದು ಒರಲಿತು. ಅದೇ ಕೀಳು ಮನಸ್ಸಿನ, ಚಾಡಿಕೋರ, ಎಂಜಲುನರಿ–ತಬಾಕಿ. ಬಹುಸೋಮಾರಿ ಮತ್ತು ಪುಕ್ಕಲು ಪ್ರಾಣಿ. ಎಂಜಲಿಗಾಗಿ ಕಾಯುವ ಕೀಳುಪ್ರಾಣಿ.

"ಇಲ್ಲಿ ತಿಂಡಿ ಇಲ್ಲ. ಬೇಕಾದರೆ ಒಳಕ್ಕೆ ಬಾ" ಎಂದಿತು, ತಂದೆ ತೋಳ. "ಹಾಗೇನಿಲ್ಲ. ನನ್ನಂತಹ ಬಡಪ್ರಾಣಿಗೆ, ಒಂದು ಮೂಳೆ ಚೂರಾದರೂ ಸಾಕಾಗಿತ್ತು" ಎಂದಿತು, ತಬಾಕಿ.

ಹಾಗೆನ್ನುತ್ತಲೇ, ಗುಹೆಯ ಮೂಲೆಯಲ್ಲಿ ಬಿದ್ದಿದ್ದ ಮೂಳೆಯ ಚೂರನ್ನು ಕೊರಕಲು ಪ್ರಾರಂಭಿಸಿತು.

"ಷೇರ್‌ಖಾನ್ ಬರುವ ಹುಣ್ಣಿಮೆಯವರೆಗೂ, ತನ್ನ ಬೇಟೆ ಪ್ರದೇಶವನ್ನು, ಈ ಬೆಟ್ಟ ಪ್ರದೇಶಕ್ಕೆ ಬದಲಾಯಿಸಿಕೊಂಡಿದೆ" ಎಂದು ಹೇಳಿತು, ತಬಾಕಿ. ಯಾವಾಗಲೂ ಏನಾದರೊಂದು, ತರಲೆ, ತಗಾದೆ ಇದೆಯೆಂದೇ ತಬಾಕಿಯ ಮಾತಿನ ಅರ್ಥ. ಇಪ್ಪತ್ತು ಮೈಲಿಗಳ ದೂರದಾಚೆ, ವೇಣುಗಂಗಾತೀರದಲ್ಲಿ, ವಾಸಮಾಡುವ ಹುಲಿಯೇ ಷೇರ್‌ಖಾನ್.

"ಅವನಿಗೆ, ಎಚ್ಚರಿಕೆ ಕೊಡದೆ ಬೇಟೆ ಪ್ರದೇಶವನ್ನು ಬದಲಾಯಿಸುವ ಹಕ್ಕಿಲ್ಲ. ಮೈಲಿಗಟ್ಟಲೆ ಬೇಟೆ ತಪ್ಪಿ ಹೋಗುವಂತೆ ಮಾಡುತ್ತಾನೆ. ಎಂದರೆ ಈ ಅವಧಿಯಲ್ಲಿ ನಾನು ಎರಡು ಪಟ್ಟು ಬೇಟೆಯಾಡಬೇಕು" ಎಂದಿತು ತಂದೆ ತೋಳ.

"ಅದು ಸರಿ, ನಾನು ನಿನಗೆ ಹೇಳದೇ ಇದ್ದರೂ ಆಗಿತ್ತು. ಕೆಳಗೆ ಕಾಡಿನಲ್ಲಿ ಶಬ್ದ ಬರುತ್ತಾ ಇದೆ" ಎಂದಿತು, ತಬಾಕಿ.

ಹಾಗೆ ಇನ್ನೂ ಹೇಳುತ್ತಿದ್ದಂತೆಯೇ, ಬೇಟೆ ಸಿಗದೆ ಕಂಗಾಲಾದ, ಕಾಡಿಗೆಲ್ಲಾ ತಿಳಿದರೆ ನನಗೇನು? ಎಂಬ ಬೇಜವಾಬ್ದಾರಿಯ, ಗುರುಗುಟ್ಟುವ ಇಮರಿದ ಹುಲಿಯ ಆರ್ಭಟ ಕೇಳಿಸಿತು.

"ಇಷ್ಟೊಂದು ಗಲಾಟೆ ಮಾಡುತ್ತಾ, ಬೇಟೆ ಪ್ರಾರಂಭ! ಮೂರ್ಖಪ್ರಾಣಿ! ಎಂದಿತು, ತಂದೆ ತೋಳ. ಇನ್ನೂ ಕೇಳಿಸಿಕೊಳ್ಳುತ್ತಿದ್ದಂತೆಯೇ, ಕಾಡಿನ ಮೂಲೆ ಮೂಲೆಗಳಿಂದ ಪ್ರತಿಧ್ವನಿಸುವಂತೆ ಹುಲಿಯ ಗರ್ಜನೆ ಕೇಳಿಸಿತು. ಮನುಷ್ಯನನ್ನು ಬೇಟೆಯಾಡುವಾಗಿನ ಧ್ವನಿ, ಅದು".

"ಹ್ಹೂ! ಮನುಷ್ಯನ ಬೇಟೆ. ಹುಳ ಹುಪ್ಪಟೆ, ಕಪ್ಪೆಗಳು ಸಿಗಲಿಲ್ಲವೇನೋ? ಮನುಷ್ಯನ ಬೇಟೆಗೆ ಹೊರಟಿದ್ದಾನೆ. ಅದೂ ನಮ್ಮ ಪ್ರದೇಶದಲ್ಲಿ!" ಎಂದಂದುಕೊಂಡಿತು ತಂದೆ ತೋಳ.

ಕಾಡಿನಲ್ಲಿ ಒಂದು ನಿಯಮವಿದೆ. ಕಾಡುಪ್ರಾಣಿಗಳು ಮನುಷ್ಯರನ್ನು ಬೇಟೆಯಾಡಬಾರದು. ಹಾಗೆ ಬೇಟೆಯಾಡಿದಲ್ಲಿ, ಇಂದೋ, ನಾಳೆಯೋ, ಮನುಷ್ಯರು ಜಾಗಟೆ, ತುಪಾಕಿ ಮತ್ತು ಬೆಂಕಿಯೊಡನೆ ಬರುತ್ತಾರೆ. ಆಗ ಕಾಡಿನ ಎಲ್ಲಾ ಪ್ರಾಣಿಗಳೂ ತೊಂದರೆಗೀಡಾಗುತ್ತವೆ.

ಗರ್ಜನೆಯ ಧ್ವನಿ ಹೆಚ್ಚುತ್ತಾ ಬಂದು, ಇದ್ದಕ್ಕಿದ್ದಂತೆ ಬೇಟೆಯ ಮೇಲೆರಗಿದಂತೆ ಭಾಸವಾಯಿತು. ಕೂಡಲೇ ಅದು, ಗೋಳು ಕರೆಯಂತೆ ಕಿರುಚಿಕೊಂಡಂತಾಯಿತು. ಅದು ಷೇರ್‌ಖಾನನಿಂದ ಹೊರಟ ವೇದನೆಯ ಧ್ವನಿ.

"ಬೇಟೆ ತಪ್ಪಿತು. ಏನಾಯಿತು?" ಎಂದು, ಉದ್ಗರಿಸಿತು, ತಾಯಿ ತೋಳ.

ತಂದೆ ತೋಳವು, ನಾಲ್ಕು ಹೆಜ್ಜೆ ಓಡಿ ಹೋಗಿ, ಇಳಿಜಾರಿನ ಕೆಳಗೆ, ಸೌದೆ ಒಡೆಯುವವರ ಗುಡಿಸಲುಗಳ ಕಡೆ ಇಣುಕಿ ನೋಡಿ, "ಮೂರ್ಖ ಗುರಿತಪ್ಪಿ ಬೆಂಕಿಯ ಮೇಲೆ ಹಾರಿ, ಕಾಲುಸುಟ್ಟುಕೊಂಡಿದ್ದಾನೆ" ಎಂದಿತು ತಂದೆ ತೋಳ.

"ಮೇಲಕ್ಕೇನೋ ಬರುವಂತಿದೆ, ತಯಾರಾಗು" ಎಂದು ಎಚ್ಚರಿಸಿತು, ತಾಯಿ ತೋಳ. ತಂದೆ ತೋಳವು ಬಾಗಿ ನಿಂತು, ಮೇಲಕ್ಕೆ ಜಿಗಿಯಿತು. ಜಿಗಿಯುತ್ತಿದ್ದಂತೆಯೇ, ಮನುಷ್ಯನ ಪುಟ್ಟ, ನಿತಂಬ ಮಗುವನ್ನು ಕಂಡು, ಚಲನೆಯನ್ನು ಥಟ್ಟನೆ ಅರ್ಧದಲ್ಲೇ ನಿಲ್ಲಿಸಿತು.

"ಅದೇನು?" ಎಂದು ಕೇಳಿತು, ತಾಯಿ ತೋಳ.

"ಮನುಷ್ಯನ ಮರಿ" ಎಂದುತ್ತರಿಸಿತು, ತಂದೆ ತೋಳ.

"ಮನುಷ್ಯನ ಮರಿಯೇನು? ನಾನು ಇಲ್ಲಿಯವರೆಗೆ ನೋಡೇ ಇಲ್ಲ. ಇಲ್ಲಿಗೆ ಕರೆದು ತಾ" ಎಂದಿತು, ತಾಯಿ ತೋಳ.

ತಂದೆ ತೋಳವು ಎಚ್ಚರಿಕೆಯಿಂದ ಅಲ್ಲಿಗೆ ನಡೆದು, ಅದರ ಚರ್ಮಕ್ಕೂ ಸಹ ಅಪಾಯವಾಗದಂತೆ, ತನ್ನ ಬಾಯಿಯಲ್ಲಿ ಹುಷಾರಾಗಿ ಕಚ್ಚಿಕೊಂಡು, ಗುಹೆಯೊಳಕ್ಕೆ ಕರೆತಂದು, ತಾಯಿ ತೋಳದ ಹತ್ತಿರ ಬಿಟ್ಟಿತು.

"ಪುಟ್ಟದಾಗಿ ಮುದ್ದಾಗಿದೆ. ಸಬಲವಾಗಿ ಸುಂದರವಾಗಿದೆ. ಎಷ್ಟು ಧೈರ್ಯಶಾಲಿ" ಎಂದು ತಾಯಿ ತೋಳವು, ಮಗುವನ್ನು ಮೆಚ್ಚಿಕೊಂಡಿತು.

ಇದ್ದಕ್ಕಿದ್ದಂತೆ, ಗುಹೆಯ ಪ್ರವೇಶ ದ್ವಾರವು ಷೇರ್‌ಖಾನನ ದೊಡ್ಡ ತಲೆ ಮತ್ತು ಭುಜಗಳಿಂದ ಆವರಿಸಲ್ಪಟ್ಟು ಬೆಳದಿಂಗಳ ಬೆಳಕಿಗೆ ಅಡ್ಡ ಬಂದಿತು.

"ಷೇರ್‌ಖಾನನ ಆಗಮನದಿಂದ, ನಾವು ಪುನೀತರಾದೆವು. ಷೇರ್‌ಖಾನನಿಗೆ ಏನು ಬೇಕು?" ಎಂದಿತು, ತಂದೆ ತೋಳ.

"ಮನುಷ್ಯನ ಮರಿ ಈ ಕಡೆ ಬಂದಿತು. ಅದನ್ನು ನನಗೆ ಕೊಡು" ಎಂದು ಆಕ್ಷೇಪಣೆಯ ಧ್ವನಿಯಲ್ಲಿ ಉತ್ತರಿಸಿತು ಷೇರ್‌ಖಾನ್. ತೋಳಗಳು ಸ್ವತಂತ್ರ ಪ್ರಾಣಿಗಳು. ಇತರರಿಂದ ಹುಕುಂ ಪಡೆಯುವವರಲ್ಲ. ಹುಕುಂ ನೀಡುವ ಹಕ್ಕು ನಮ್ಮ ಹಿಂಡಿನ ನಾಯಕನಿಗೆ ಮಾತ್ರ ಮೀಸಲು. ಮನುಷ್ಯನ ಮರಿ ನಮ್ಮದು. ಬೇಕೆಂದರೆ ಅದನ್ನು ಕೊಲ್ಲುವ ಅಧಿಕಾರ ಕೂಡಾ ನಮ್ಮದೇ" ಎಂದು ತಂದೆ ತೋಳವು ಹೇಳಿತು.

"ಇದೇನು ಮಾತು? ಇಷ್ಟಾನಿಷ್ಟಗಳ ಮಾತು. ಮನುಷ್ಯನ ಮರಿ ನನ್ನದು. ನನಗೆ ಕೊಡು" ಎಂದು ಹುಲಿಯು, ಗವಿಯು ಗಡಚಿಕ್ಕುವಂತೆ ಗರ್ಜಿಸಿತು.

ಆಗ ತಾಯಿ ತೋಳವು ಜಿಗಿದು ನಿಂತು, ಕಣ್ಣುಗಳು ಚಂದ್ರನಂತೆ ಪ್ರಕಾಶಿಸುತ್ತಿರಲು, "ಮನುಷ್ಯನ ಮರಿ ನಮ್ಮದು. ಅದನ್ನು ಕೊಲ್ಲಕೂಡದು. ಅದು ಹಿಂಡಿನಲ್ಲಿ ಒಂದಾಗಿ ಬೆಳೆಯುತ್ತದೆ. ಜೊತೆಯಲ್ಲಿಯೇ ಬೇಟೆಯಾಡುತ್ತದೆ" ಎಂದು ಹೇಳಿ, "ಷೇರ್‌ಖಾನ್, ಹುಷಾರ್, ಅದು ನಿನ್ನನ್ನು ಬೇಟೆಯಾಡುವ ದಿನ ದೂರವಿಲ್ಲ" ಎಂದು ಎಚ್ಚರಿಸಿತು.

ಗುಹೆಯ ಪ್ರವೇಶ ದ್ವಾರದಲ್ಲಿ ಇರುಕಿಕೊಂಡು, ಈ ಎರಡು ತೋಳಗಳೊಡನೆ ಕಾದಾಡಲು ಆಗುವುದಿಲ್ಲವೆಂದು ತಿಳಿದ ಷೇರ್‌ಖಾನನು, "ಅದು ಹೇಗೆ, ಮನುಷ್ಯನ ಮರಿಯನ್ನು, ಹಿಂಡು ಬೆಳೆಸುವುದೋ ನೋಡಿಯೇ ಬಿಡುತ್ತೇನೆ. ಎಂದಿದ್ದರೂ ಅದು ನನ್ನ ಬಾಯಿಗೆ ಬರಲೇಬೇಕು" ಎಂದು ಹೇಳಿ, "ಕುಚ್ಚುಬಾಲದ ಕಳ್ಳರು" ಎಂದು ಮೂದಲಿಸುತ್ತಾ, ಗೊಣಗಿಕೊಳ್ಳುತ್ತಾ ಹೊರಟು ಹೋಯಿತು.

ಹುಲಿಯು ಹೊರಟು ಹೋದ ಬಳಿಕ "ಷೇರ್‌ಖಾನ್ ಹೇಳುವುದು ನಿಜ. ಮನುಷ್ಯನ ಮರಿ ಹಿಂಡಿನಲ್ಲಿರುವ ಬಗ್ಗೆ ಹಿಂಡು ಏನು ಹೇಳುತ್ತದೆ?" ಎಂದಿತು, ತಂದೆ ತೋಳ. ಆದರೆ ತಾಯಿ ತೋಳವು ಆ ಮರಿಯನ್ನು ತನ್ನಲ್ಲೇ ಇಟ್ಟುಕೊಳ್ಳಲು ನಿರ್ಧರಿಸಿತ್ತು. ಆದ ಕಾರಣ ಪುಟಾಣಿ ಕಪ್ಪೆಯಂತೆ ಕೂದಲಿಲ್ಲದ, ಚರ್ಮವನ್ನು ಹೊಂದಿದ್ದ ಆ ಮರಿಯನ್ನು "ಮೌಗ್ಲಿ" ಎಂದು ಕರೆಯಿತು.

ಮೌಗ್ಲಿಯು ಪುಟ್ಟ ಮರಿಗಳ ಜೊತೆ ಇದ್ದುಬಿಟ್ಟನು. ಮರಿಗಳು ಬೆಳೆದು, ಅಲ್ಪ ಸ್ವಲ್ಪ ಓಡಾಡುವಂತಾದ ಮೇಲೆ, ತಾಯಿ ಮತ್ತು ತಂದೆ ತೋಳಗಳು, ಅವುಗಳನ್ನು ಒಂದು ಹುಣ್ಣಿಮೆಯ ರಾತ್ರಿ, ಹಿಂಡಿನ ಸಭೆಗೆ, ಕಾಡಿನ ಮಧ್ಯದಲ್ಲಿದ್ದ ಸಭಾವೃತ್ತಕ್ಕೆ ಕರೆದೊಯ್ದುವು.

"ಸಭಾವೃತ್ತವು ಕಾಡಿನ ಮಧ್ಯೆ, ಗುಡ್ಡದ ತುದಿಯಲ್ಲಿ, ಬಂಡೆಗಳಿಂದ ಕೂಡಿದ, ಒಂದು ನೂರು ತೋಳಗಳು ಅವಿತುಕೊಳ್ಳಬಹುದಾದ ಪ್ರದೇಶ. ಆ ವೃತ್ತದ ಮಧ್ಯೆ ಸಭೆ ಸೇರಿ ತೋಳಗಳು ತಮ್ಮ ಪುಟಾಣಿ ಮರಿಗಳನ್ನು ಗುರುತಿಸಿಕೊಳ್ಳುತ್ತಿದ್ದವು. ಇದರಿಂದ ಅಡವಿಯಲ್ಲಿ ಅವುಗಳನ್ನು ಕಂಡಾಗ ಗುರುತಿಸಿ, ಕಾಪಾಡಲು ಅನುಕೂಲವಾಗುತ್ತಿದ್ದಿತು. ಪ್ರತಿ ಮರಿಯನ್ನು ವೃತ್ತದ ಮಧ್ಯಕ್ಕೆ ಕಳುಹಿಸಿದಾಗಲೂ, ಸಭಾವೇದಿಕೆಯ ಮೇಲೆ ಕುಳಿತುಕೊಳ್ಳುತ್ತಿದ್ದ ಅಕೇಲನು, ತಲೆಯೆತ್ತಿ ಹೀಗೆ ಹೇಳುತ್ತಿದ್ದನು".

"ನೋಡಿರಿ, ತೋಳಗಳೇ, ಸರಿಯಾಗಿ ನೋಡಿರಿ".

ಮೌಗ್ಲಿಯ ಸರದಿ ಬಂದಾಗ, ಅವಶ್ಯಕತೆ ಬಿದ್ದರೆ, ತಾನು ಆ ಮಗುವಿನ ಪರವಹಿಸಿ, ಕಾದಾಡಲು, ತಾಯಿ ತೋಳವು ನಿಶ್ಚಯಿಸಿತು. ಮೌಗ್ಲಿಯನ್ನು ವೃತ್ತದೊಳಕ್ಕೆ ಕಳುಹಿಸಲಾಯಿತು. ಬೆಳದಿಂಗಳ ಬೆಳಕಿನಲ್ಲಿ, ಅವನು, ಸಣ್ಣಪುಟ್ಟ ಕಲ್ಲುಗಳೊಡನೆ ಆಟವಾಡಲು ಪ್ರಾರಂಭಿಸಿದನು. ಅಕೇಲನಾದರೋ, ತನ್ನ ಕಿವಿಯನ್ನೂ ಸಹ ಅಲುಗಿಸದೆ, ಕೂಗಿ ಹೇಳಿತು.

"ನೋಡಿರಿ, ತೋಳಗಳೇ, ಸರಿಯಾಗಿ ನೋಡಿರಿ".

ವೃತ್ತದ ಹೊರಗೆ ಘರ್ಜನೆ ಕೇಳಿಸಿತು.

"ಆ ಮರಿ ನನ್ನದು. ನನಗೆ ಕೊಟ್ಟು ಬಿಡಿ. ಸ್ವತಂತ್ರವಾದ ತೋಳಗಳಿಗೆ ಮನುಷ್ಯನ ಮರಿಯಿಂದೇನಾಗಬೇಕು?" –ಇದು ಷೇರ್‌ಖಾನನ ಕೊರಗು.

"ಹೌದು. ಮನುಷ್ಯನ ಮರಿಗೂ, ಸ್ವತಂತ್ರರಾದ ನಮ್ಮ ಹಿಂಡಿಗೂ, ಏನು ಸಂಬಂಧ" ಎಂದು ಕೆಲವು ತೋಳಗಳು ವರಲಿದವು.

ಮರಿಯು ಹಿಂಡಿಗೆ ಸೇರುವ ಬಗ್ಗೆ ವಿವಾದವುಂಟಾದರೆ, ಹಿಂಡಿನಲ್ಲಿ ಒಂದು ನಿಯಮವಿದೆ. ಅಂತಹ ಮರಿಯ ಪರವಾಗಿ ಇಬ್ಬರು ಜಾಮೀನು ನಿಲ್ಲಬೇಕು. ಆದ್ದರಿಂದ ಅಕೇಲನು "ಈ ಮರಿಯ ಪರವಾಗಿ ಯಾರು ಮಾತನಾಡುತ್ತೀರಿ? ಎಂದು ಕೇಳಿತು".

ಮೊದಲಿಗೆ ಯಾರೂ ಮಾತನಾಡಲಿಲ್ಲ. ಸ್ವಲ್ಪಕಾಲದ ಬಳಿಕ, ಕಂದು ಬಣ್ಣದ, ಮುದಿ ಕರಡಿ "ಬಾಲು"ವು, ಎದ್ದು ಬಂದಿತು. ಅದು ಮರಿಗಳಿಗೆ ನಿಯಮಗಳನ್ನು ಹೇಳಿ ಕೊಡುತ್ತದೆ. "ಈ ಮನುಷ್ಯ ಮರಿಯ ಪರ ನಾನು ಮಾತನಾಡುತ್ತೇನೆ. ಆ ಮರಿಯಿಂದ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ. ಅದು ಹಿಂಡಿಗೆ ಸೇರಲಿ. ನಾನು ಖುದ್ದಾಗಿ ಹೇಳಿಕೊಡುತ್ತೇನೆ" ಎಂದಿತು.

"ಇನ್ನೊಬ್ಬರು ಬೇಕು. ಬಾಲುವಿನ ಜೊತೆ ಯಾರು?" ಎಂದಿತು, ಅಕೇಲ.

ಆಗ ಕಪ್ಪು ನೆರಳೊಂದು, ನಿಧಾನವಾಗಿ, ವೃತ್ತದೊಳಕ್ಕೆ ಬಂದಿತು. ಅದೇ ಕರಿಯ ಚಿರತೆ, 'ಬಘೀರ'. ಕಾಡಿನ ಬಲಿಷ್ಠ ಬೇಟೆಗಾರ. 'ನನಗೆ ತಿಳಿದಂತೆ, ಮರಿಯು ಹಿಂಡಿಗೆ ಸೇರುವ ಬಗ್ಗೆ ವಿವಾದವುಂಟಾದರೆ, ಅದರ ಜೀವವನ್ನು, ಖರೀದಿಸಿ ಕೊಳ್ಳಬಹುದು ಎಂಬ ನಿಯಮವೊಂದಿದೆ. ಅಲ್ಲವೆ?' ಎಂದು ತನ್ನ ಮೃದುಸ್ವರದಲ್ಲಿ ಹೇಳಿತು.

"ಹೌದು, ಅದು ನಿಯಮ" ಎಂದಿತು ಹಿಂಡು.

"ಹಾಗಾದರೆ, ಬಾಲುವಿನ ಜೊತೆ ನಾನು ನಿಲ್ಲುತ್ತೇನೆ. ಮನುಷ್ಯ ಮರಿಯನ್ನು ಹಿಂಡಿಗೆ ಸೇರಿಸಿಕೊಳ್ಳಲು ಒಪ್ಪುವುದಾದರೆ, ಈಗ ತಾನೇ, ಕಣಿವೆಯ ಕೆಳಗೆ, ನಾನು ಕೊಂದಿರುವ ಹೋರಿಯ ಶರೀರವಿದೆ" ಎಂದಿತು, ಬಘೀರ.

ಯಾವಾಗಲೂ ಹಸಿದಿರುವ ತೋಳಗಳು, "ಸೇರಿಕೊಳ್ಳಲಿ, ಮಳೆಗಾಲದಲ್ಲಿ ಆ ಮರಿ ಹೇಗಿದ್ದರೂ ಸಾಯುತ್ತಾನೆ. ಬೇಸಗೆಯ ಬಿಸಲಿನಲ್ಲಿ ಒಣಗುತ್ತಾನೆ. ಬೆತ್ತಲೆ ಕಪ್ಪೆಯು ನಮಗೇನು ತೊಂದರೆ ಮಾಡೀತು? ಸೇರಿಕೊಳ್ಳಲಿ" ಎಂದು ಅರಚಿದವು.

ಸಭಾವೇದಿಕೆಯ ಬಳಿ, ಅಕೇಲನೊಡನೆ ಬಾಲು, ಬಘೀರ, ತಾಯಿ ಮತ್ತು ತಂದೆ ತೋಳಗಳು, ಮತ್ತೆ ಮರಿಗಳೊಡನೆ ಮೌಗ್ಲಿಯನ್ನು ಬಿಟ್ಟು, ಉಳಿದೆಲ್ಲಾ ತೋಳಗಳೂ, ಹೋರಿಯ ಶರೀರವನ್ನು ಹುಡುಕುತ್ತಾ, ಕಣಿವೆಯ ಕಡೆ ಓಡಿದವು. "ಇವನನ್ನು ಕರೆದುಕೊಂಡು ಹೋಗಿ. ಸ್ವತಂತ್ರ ಜನರಿಗೆ ಯೋಗ್ಯವಾದ ರೀತಿಯಲ್ಲಿ ಶಿಕ್ಷಣ ಕೊಡಿ" ಎಂದು ಅಕೇಲ ಹೇಳಿತು.

– **ಗಿಲ್‌ಕ್ರಾಫ್ಟ್** ಪ್ರಕಟಣೆಯಿಂದ ಆಯ್ದುಕೊಂಡದ್ದು

ಮರಿಗಳ ನಿಯಮ

ಮರಿಗಳ ನಿಯಮದಲ್ಲಿ ಎರಡು ಭಾಗಗಳಿವೆ.

1. ಮರಿಯು ಹಿರಿಯರಿಗೆ ವಿಧೇಯನು.

2. ಮರಿಯು ಸ್ವಚ ಮತ್ತು ಸಭ್ಯನು.

ಮರಿಯಾಗಿ ಬಾಲಕನು ಮರಿಗಳ ನಿಯಮವನ್ನು ಪಾಲಿಸಬೇಕು. ಆದ್ದರಿಂದ ಅವನು ಅದರ ಅರ್ಥವನ್ನು ಅವಶ್ಯಕವಾಗಿ ತಿಳಿದುಕೊಳ್ಳಬೇಕು. ಸುಲಭವಾಗಿ ಗ್ರಹಿಸುವಂತೆ, ಕಬ್‌ಮಾಸ್ಟರು ಅವನಿಗೆ ತಿಳಿಯಹೇಳಬೇಕು. ಒಂದೇ ಬಾರಿಗೆ ಎಲ್ಲವನ್ನೂ ವಿವರಿಸದೆ, ನಿಧಾನವಾಗಿ, ಸ್ವಲ್ಪ ಸ್ವಲ್ಪವಾಗಿ ತಿಳಿಯ ಹೇಳಬೇಕು. ಹಾಗೆಂದ ಮಾತ್ರಕ್ಕೆ ವಿವರಣೆಯು ಔಪಚಾರಿಕವಾಗಬಾರದು. ಸಮಯಕ್ಕೆ ತಕ್ಕಂತೆ, ಅನಿರ್ಬಂಧಿತವಾಗಿ, ಆದಷ್ಟೂ ಒಮ್ಮೆ ಒಬ್ಬ ಮರಿಗೆ ಮಾತ್ರ ವಿವರಿಸಿ ಹೇಳಿದರೆ ಅದು ಹೆಚ್ಚು ಪ್ರಭಾವಶಾಲಿಯಾಗಿರುತ್ತದೆ.

ನಿಯಮದ ಮೊದಲ ಭಾಗವು ಹಿರಿಯರ ವಿಷಯದಲ್ಲಿ ವಿಧೇಯತೆಯ ಬಗ್ಗೆ ತಿಳಿಸುತ್ತದೆ. ಹಿರಿಯರೆಂದರೆ ಯಾರು? ತಾಯಿ ತಂದೆಯರು, ಮನೆಯೊಳಗಿನ ಎಲ್ಲಾ

ಹಿರಿಯರು, ಕಬ್‌ಮಾಸ್ಟರು, ಶಾಲೆಯಲ್ಲಿನ ಉಪಾಧ್ಯಾಯರುಗಳು ಇವರೆಲ್ಲರೂ ಈ "ಹಿರಿಯರು" ಪದದ ಅರ್ಥವಾಗುತ್ತದೆ. ವಿಧೇಯತೆಯು ತಕ್ಷಣದ್ದಾಗಿರಬೇಕು. ನಗು ನಗುತ್ತಾ ಪಾಲಿಸಬೇಕು. ಗೊಣಗಬಾರದು. ವಿಧೇಯತೆಯನ್ನು ತೋರಿಸಬೇಕಾದ ಎಲ್ಲಾ ಹಿರಿಯರು ಅವನ ಏಳಿಗೆಯನ್ನು ಬಯಸುವವರೆಂದೂ ತನ್ನ ವಿಧೇಯತೆಯಿಂದ ತನಗೇ ಒಳ್ಳೆಯದಾಗುವುದೆಂದೂ, ಅವನು ಮನದಟ್ಟು ಮಾಡಿಕೊಳ್ಳಬೇಕು. ಆ ಹಿರಿಯರೂ ಸಹ ಅವನಿಗೆ ಒಳಿತನ್ನು ಬಯಸುವ, ಅವನು ಮುಂದೆ ಬರುವುದನ್ನು ಕಾಣುವ ಕಾತುರವುಳ್ಳವರಾಗಿರಬೇಕು.

ನಿಯಮದ ಎರಡನೆಯ ಭಾಗವು ಎರಡು ಅಂಶಗಳನ್ನು ಹೇಳುತ್ತದೆ- **ನೈರ್ಮಲ್ಯ (Clean):** ಮರಿಯು ವೈಯಕ್ತಿಕವಾಗಿ ಎಂದರೆ ತನ್ನ ಬಟ್ಟೆ ಬರೆ ಇತ್ಯಾದಿ ಎಲ್ಲ ವಿಷಯಗಳಲ್ಲಿಯೂ ಚೊಕ್ಕಟವಾಗಿರುವುದು. ದೈವತ್ವವನ್ನು ಬಿಟ್ಟರೆ ನೈರ್ಮಲ್ಯ ಪ್ರಧಾನವಾದುದರಿಂದ, ಈ ಅಂಶವನ್ನು ಒಂದು ಹವ್ಯಾಸವನ್ನಾಗಿ ರೂಢಿಸಿಕೊಳ್ಳುವುದು, ಅತ್ಯವಶ್ಯಕವಾದುದು.

ಇನ್ನೊಂದು ಅಂಶವೆಂದರೆ, ಮರಿಯು, ಇತರರ ವಿಷಯದಲ್ಲಿ **'ವಿನಯತೆ' (Polite)**ಯನ್ನು ತೋರುವ ಕರ್ತವ್ಯವನ್ನು ತಿಳಿಸುತ್ತದೆ. ವಿನಯತೆಯೆಂದರೆ ಇತರರ ವಿಷಯ ದಲ್ಲಿ ಗೌರವ, ಮರ್ಯಾದೆಗಳಿಂದ ವರ್ತಿಸುವುದು. ಮತ್ತು ತನ್ನ ನಡೆ ನುಡಿಗಳಿಂದ ಇತರರಿಗೆ ಯಾವುದೇ ರೀತಿಯಿಂದಲೂ ನೋವಾಗದಂತೆ ನೋಡಿಕೊಳ್ಳುವುದು, ವಿನಯವಂತಿಕೆಯು ಸೌಜನ್ಯತೆಯ ಗುರುತು. ಈ ಗುಣವನ್ನು ಚಿಕ್ಕಂದಿನಿಂದಲೇ ಬೆಳೆಸಿಕೊಂಡು ಬರಬೇಕು.

ಮರಿಗಳ ನಿಯಮವನ್ನು ತಾನು ಪಾಲಿಸಬೇಕಾಗಿರುವುದರಿಂದ, ಮರಿಯು ಅದನ್ನು ಮನನ ಮಾಡಿಕೊಂಡು, ಸರಿಯಾದ ರೀತಿಯಲ್ಲಿ ಹೇಳಲು ಬರಬೇಕು. ತನ್ನ ದಿನನಿತ್ಯದ ಜೀವನದಲ್ಲಿ ಪಾಲಿಸುತ್ತಿದ್ದೇನೆಯೆ? ಇಲ್ಲವೆ? ಎಂದು ಆತ್ಮಪರೀಕ್ಷೆ ಮಾಡಿಕೊಳ್ಳಬೇಕು. ಮರಿಯಾಗಿ, ಇದು ಅವನಿಗೆ ಒಳ್ಳೆಯ ಶಿಕ್ಷಣವಷ್ಟೇ ಅಲ್ಲದೆ, ಮುಂದೆ ಜೀವನದಲ್ಲಿ ಬಹಳ ಉಪಯೋಗಕಾರಿಯಾಗುತ್ತದೆ. ಒಳ್ಳೆಯ ಮರಿಯಾಗಿ ಪ್ರಕಾಶಿಸಲು ಸಹಕಾರಿಯಾಗುತ್ತದೆ. ಕಬ್‌ಮಾಸ್ಟರು ಈ ವಿಷಯದಲ್ಲಿ ಗಮನಹರಿಸಿ ಮರಿಗೆ ಸಹಾಯ ಮಾಡಬೇಕು.

ಮರಿಗಳ ಧ್ಯೇಯ (Do our Best)

ಪ್ರಪಂಚದಲ್ಲಿ ಎಲ್ಲೇ ಹೋದರೂ, ಮರಿಗಳ ಧ್ಯೇಯ ಒಂದೇ: "ಆದಷ್ಟು ಸಾಧಿಸಿ". ಆದ್ದರಿಂದ ಮರಿಗಳು ಎಲ್ಲೇ ಇರಲಿ ಉತ್ತಮ ನಾಗರಿಕರಾಗಲೂ, ವಿಶ್ವ ಮೈತ್ರಿಯನ್ನು ಸಾಧಿಸಲೂ, ತಮ್ಮ ಕೈಲಾದಷ್ಟು ಪ್ರಯತ್ನಿಸುತ್ತಾರೆ. ಮರಿಗಳ ಪ್ರತಿಜ್ಞೆ ಮತ್ತು ಮರಿಗಳ ವಂದನೆಯಲ್ಲಿ ಸಹ ಈ ಧ್ಯೇಯದ ಉಲ್ಲೇಖವಿರುತ್ತದೆ.

ಮರಿಗಳ ಪ್ರತಿಜ್ಞೆ

ಮರಿಗಳ ಪ್ರತಿಜ್ಞೆಯು ಈ ರೀತಿ ಇದೆ:

"ನಾನು ನನ್ನ ಕೈಲಾದ ಮಟ್ಟಿಗೆ
ದೇವರು* ಮತ್ತು ನನ್ನ ದೇಶಕ್ಕೆ ನನ್ನ ಕರ್ತವ್ಯವನ್ನು ಮಾಡುತ್ತೇನೆ
ಮರಿಗಳ ನಿಯಮವನ್ನು ಪಾಲಿಸುತ್ತೇನೆ
ಪ್ರತಿದಿನವೂ ಒಂದು ಉಪಕಾರವನ್ನು ಮಾಡುತ್ತೇನೆ"
– ಎಂದು ಪ್ರತಿಜ್ಞೆ ಮಾಡುತ್ತೇನೆ.

* **"ದೇವರು" ಪದಕ್ಕೆ ಬದಲಾಗಿ "ಧರ್ಮ" ಪದವನ್ನು ಬೇಕಾದರೆ ಉಪಯೋಗಿಸಬಹುದು.**

ದೀಕ್ಷಾ ಸಮಾರಂಭದ ವೇಳೆಯಲ್ಲಿ ಮರಿಯು ಈ ಪ್ರತಿಜ್ಞೆಯನ್ನು ಮಾಡುತ್ತಾನೆ. ಪ್ರತಿಜ್ಞೆ ಮಾಡುವುದು ಮೊದಲ್ಗೊಂಡು ಅವನು ಮರಿಯಾಗುವುದು. ಪ್ರತಿಜ್ಞೆ ಮಾಡಿದ ಮೇಲೆ ಅವನು ಅದರಂತೆ ನಡೆದುಕೊಳ್ಳಬೇಕು. ಆದಕಾರಣ ಅದರ ಅರ್ಥವನ್ನು ಆದಷ್ಟೂ ಸ್ಪಷ್ಟವಾಗಿ ತಿಳಿದುಕೊಂಡಿರಬೇಕು. ಪ್ರತಿಜ್ಞೆ ಮಾಡುವುದರ ಆಂತರಿಕ ಭಾವನೆಯನ್ನು ಪುಟ್ಟ ಬಾಲಕನಿಗೆ ಅರ್ಥವಾಗುವ ರೀತಿಯಲ್ಲಿ ತಿಳಿಸಿಕೊಡುವುದು ಕಬ್‌ಮಾಸ್ಟರನ ಕರ್ತವ್ಯವಾಗಿದೆ. ನಿಯಮವನ್ನು ತಿಳಿಸಿಕೊಟ್ಟ ರೀತಿಯಲ್ಲಿಯೇ, ಆದಷ್ಟೂ ಅನೌಪಚಾರಿಕವಾಗಿ, ವೈಯಕ್ತಿಕವಾಗಿ ಅರ್ಥಮಾಡಿಸುವುದು ಕಬ್‌ಮಾಸ್ಟರ ಕರ್ತವ್ಯವಾಗಿದೆ. ದೀಕ್ಷೆ ವಹಿಸಿಕೊಟ್ಟ ಮೇಲೂ ಸಹ ಆಗೊಮ್ಮೆ ಈಗೊಮ್ಮೆ ಪ್ರಸ್ತಾಪ ಮಾಡಿ, ಮರಿಗಳಿಗೆ ಪ್ರತಿಜ್ಞೆಯ ಬಗ್ಗೆ ವಿವರಿಸುವುದು ಅವಶ್ಯಕವೆನಿಸುತ್ತದೆ.

ದೇವರಿಗೆ ಕರ್ತವ್ಯ

"ದೇವರಿಗೆ (ಧರ್ಮಕ್ಕೆ) ಕರ್ತವ್ಯ" –ಈ ವಿಷಯವನ್ನು ಪುಟ್ಟ ಮಕ್ಕಳು ಅರ್ಥಮಾಡಿಕೊಳ್ಳುವುದು ಸ್ವಲ್ಪ ಕಷ್ಟವೇ ಸರಿ.

ಈ ದಿಕ್ಕಿನಲ್ಲಿ ಕಬ್‌ಮಾಸ್ಟರನ ವೈಯಕ್ತಿಕ ಜೀವನವು ಮುಖ್ಯ ಪಾತ್ರ ವಹಿಸುತ್ತದೆ. ತಮ್ಮ ಅರಿವಿಲ್ಲದೇ ಮರಿಗಳು ಪ್ರಭಾವಿತರಾಗುತ್ತಾರೆ. ಕಬ್‌ಮಾಸ್ಟರು ದೈವಪ್ರೀತಿಯುಳ್ಳ ವ್ಯಕ್ತಿಯಾದರೆ, ತನ್ನ ಕರ್ತವ್ಯವನ್ನು ಹೃತ್ಪೂರ್ವಕವಾಗಿ ಆಚರಿಸುವುದಾದರೆ, ಅದರಿಂದ ಮರಿಗಳು ನಿಸ್ಸಂಶಯವಾಗಿ ಪ್ರಭಾವಿತರಾಗುತ್ತಾರೆ.

ದೇವರಿಗೆ ಕರ್ತವ್ಯವನ್ನು ಕಲಿಸಲು, ಮರಿಗಳಿಗೆ ಪ್ರತಿಜ್ಞೆ ಮತ್ತು ನಿಯಮಗಳನ್ನು ವಿವರಿಸಿ ಹೇಳುವುದು ಒಂದು ಒಳ್ಳೆಯ ಅವಕಾಶವಾಗುತ್ತದೆ. ಹಿಂಡಿನ ಸಭೆಗಳಲ್ಲಿ, ಇತರ ವೇಳೆಗಳಲ್ಲಿ ಪ್ರಾರ್ಥನೆ ಮಾಡುವುದು; ನಮಗೆ ಒಳ್ಳೆಯದಾದಾಗಲೆಲ್ಲಾ ಕೃತಜ್ಞತಾ ಭಾವದಿಂದ ದೇವರನ್ನು ಸ್ಮರಿಸುವುದು; ದೇವರಲ್ಲಿ ನಂಬಿಕೆ ಇಡುವ ಮನೋಭಾವ ಮತ್ತು ಸದಾಚಾರ ಸಂಪನ್ನರಾಗುವುದು ದೇವರಿಗೆ ನಮ್ಮ ಕರ್ತವ್ಯದ ಭಾಗಗಳಾಗುತ್ತವೆ.

ಧಾರ್ಮಿಕ ನೀತಿ

ಸಂಸ್ಥೆಯು ಯಾವುದೇ ಒಂದು ಧಾರ್ಮಿಕ ನೀತಿಗೆ ಒಳಪಟ್ಟಿರುವುದಿಲ್ಲ. ಆದರೆ ಎಲ್ಲಾ ಧರ್ಮಗಳ ಬಗ್ಗೆಯೂ ಸಮಾನ ಗೌರವ ಮತ್ತು ಮರ್ಯಾದೆಯನ್ನು ಹೊಂದಿರುತ್ತದೆ. ಪ್ರತಿ ಮರಿಯೂ ತನ್ನದೇ ಆದ ಧರ್ಮವನ್ನು ಪಾಲಿಸಲೂ, ಆಚರಿಸಲೂ ಪ್ರಚೋದಿಸುವುದು ಕಬ್‌ಮಾಸ್ಟರನ ಕರ್ತವ್ಯವಾಗಿರುತ್ತದೆ.

ದೇಶದ ಬಗ್ಗೆ ಕರ್ತವ್ಯ

ಮರಿಯು ದೇಶಪ್ರೇಮಿಯಾಗಿರುತ್ತಾನೆ. ಅವನು ರಾಷ್ಟ್ರಧ್ವಜ, ರಾಷ್ಟ್ರಲಾಂಛನ ಮತ್ತು ರಾಷ್ಟ್ರಗೀತೆಗಳ ಬಗ್ಗೆ ಗೌರವ ಮತ್ತು ಪೂಜ್ಯ ಭಾವನೆಗಳನ್ನು ಹೊಂದಿರಬೇಕು. ಮುಂದೆ ಬೆಳೆದು ದೊಡ್ಡವನಾದಾಗ, ಉಪಯುಕ್ತ ಹಾಗೂ ಉತ್ತಮ ನಾಗರಿಕನಾಗಿ ಬಾಳುವುದೂ, ಜವಾಬ್ದಾರಿಯುತ ಸ್ಥಾನಗಳಲ್ಲಿ ಸೇವೆ ಸಲ್ಲಿಸಲು ತಯಾರಾಗಿರುವುದೂ ದೇಶಕ್ಕೆ ನಮ್ಮ ಕರ್ತವ್ಯದಲ್ಲಿ ಬರುತ್ತದೆ.

ಉಪಕಾರ

ಉಪಕಾರವೆಂದರೇನು? ಯಾವ ರೀತಿಯ ಕೆಲಸಗಳು ಉಪಕಾರವೆನಿಸುತ್ತವೆ? ಎಂಬುದನ್ನು ಮರಿಯು ತಿಳಿದಿರಬೇಕು. ಉಪಕಾರಗಳು ಪ್ರೀತಿ ಪುರಸ್ಸರವಾದ ಕ್ರಿಯೆಗಳು. ಇತರರಿಗೆ ಸಹಾಯ ಮಾಡುವ ಮತ್ತು ಅವರನ್ನು ಸಂತೋಷಪಡಿಸುವ ಉದ್ದೇಶದಿಂದ ಮಾಡಿದ ಕ್ರಿಯೆಗಳು. ಅವೇನೂ ದೊಡ್ಡದಾಗಿರಬೇಕಾಗಿಲ್ಲ. ಅಥವಾ ಪ್ರದರ್ಶನಾತ್ಮಕವಾಗಿರಬೇಕಾಗಿಲ್ಲ. ಅವುಗಳಿಂದ ಯಾವುದೇ ಪ್ರತಿಫಲವನ್ನೂ ಅಪೇಕ್ಷಿಸಬಾರದು. ಹಾಗೆ ಇನಾಮು ಕೊಡಲು ಮುಂದೆ ಬಂದರೂ ಮರಿಯು ಅದನ್ನು ತಿರಸ್ಕರಿಸುತ್ತಾನೆ.

ಉಪಕಾರಗಳು ಮನೆಯಲ್ಲಿ ಪ್ರಾರಂಭವಾಗುತ್ತವೆ. ಮರಿಗಳಿಗೆ ಮನೆಯಲ್ಲಿಯೇ ಉಪಕಾರ ಮಾಡುವ ಅನೇಕ ಅವಕಾಶಗಳು ಕಾಣಬರುತ್ತವೆ. ಅವನು ತನ್ನ ತಾಯಿಗೆ ಬಹಳವಾದ ರೀತಿಯಲ್ಲಿ ಸಹಾಯ ಮಾಡಬಹುದು.

ತಾಯಿಯು ಅಡಿಗೆಯ ಗಲಾಟೆಯಲ್ಲಿರುವಾಗ ಮಗುವನ್ನು ನೋಡಿಕೊಳ್ಳ ಬಹುದು. ಅಂಗಡಿ/ಮಾರುಕಟ್ಟೆಯಿಂದ ಸಾಮಾನು ತರಬಹುದು; ಕೈತೋಟದಿಂದ ತರಕಾರಿ ಕಿತ್ತು ತರಬಹುದು; ದನಗಳನ್ನು ಹಿತ್ತಲಿಗೆ ಓಡಿಸಬಹುದು; ಕೋಣೆಯನ್ನು ಶುಭ್ರಗೊಳಿಸಿ, ಅದರಲ್ಲಿ ವಸ್ತುಗಳನ್ನು ನಿಗದಿತ ರೀತಿಯಲ್ಲಿ, ಸುಂದರವಾಗಿ, ಓರಣವಾಗಿ ಜೋಡಿಸಬಹುದು; ಸೌದೆ ಜೋಡಿಸಿ ತರಬಹುದು. ಇತ್ಯಾದಿಯಾಗಿ ಒಂದಲ್ಲ ಒಂದು ರೀತಿಯಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡುವುದಾದರೆ, ಅವನಿಗೆ ಉಪಕಾರವೇನೆಂದು ಕಂಡುಬರುತ್ತವೆ. ಈ ರೀತಿಯ ಉಪಕಾರಗಳಿಂದ ತಾಯ್ತಂದೆಯರಿಗೆ ಸಹಾಯಕವಾಗಿ ಕಬ್ಬಿಂಗ್ ಬಗ್ಗೆ ಅವರಿಗೆ ಸದ್ಭಾವನೆಯೂ ಮೂಡುತ್ತದೆ.

ಮರಿಗಳಿಗೆ ತಾವು ವಾಸಿಸುವ ನೆರೆಹೊರೆಯಲ್ಲಿಯೂ ಸಹ ಉಪಕಾರ ಮಾಡಲು ಅನೇಕ ಅವಕಾಶಗಳಿರುತ್ತವೆ. ಉಪಕಾರಗಳಿಂದ ಇತರರಿಗೆ ಸಂತೋಷ ವಾಗುತ್ತದೆ. ಗೆಳೆತನವೇರ್ಪಡುತ್ತದೆ. ತನ್ನ ಉಪಕಾರದಿಂದ ಇತರರು ಸಂತೋಷ ಪಡುವುದನ್ನು ಕಂಡು ಮರಿಯು ತಾನೂ ಸಂತೋಷಪಡುವಂತಾಗುತ್ತದೆ.

ಉಪಕಾರ ಮಾಡಬೇಕೆಂಬ ಆದರ್ಶವು ಸ್ಕೌಟ್ ಸಂಸ್ಥೆಯ ಒಂದು ವೈಶಿಷ್ಟ್ಯ. ಪ್ರತಿಜ್ಞೆ ನಿಯಮ ಮತ್ತು ಸಮವಸ್ತ್ರಗಳಂತೆ ಇದೂ ಒಂದು ಹೆಚ್ಚುಗಾರಿಕೆ. ಪ್ರಪಂಚದಲ್ಲಿ ಲಕ್ಷಾಂತರ ಸ್ಕೌಟ್‌ಗಳಿದ್ದಾರೆ. ಅವರುಗಳಿಂದ ಪ್ರತಿದಿನವೂ ಅದಕ್ಕೂ ಹೆಚ್ಚು ಪ್ರಮಾಣದ ಉಪಕಾರಗಳು ನಡೆಯುತ್ತಿವೆ. ಸ್ಕೌಟುಗಳಿಂದ (ಮರಿಗಳೂ ಸೇರಿ) ನಡೆಯುತ್ತಿರುವ ಲಕ್ಷಾಂತರ ಉಪಕಾರಗಳಿಂದ, ಬೇರೆ ರೀತಿಯಲ್ಲಿಯೇ ಇರಬೇಕಾಗಿದ್ದ ಪ್ರಪಂಚದ ಜೀವನವು, ಸ್ವಲ್ಪಮಟ್ಟಿಗಾದರೂ ಸಂತೋಷಮಯವಾಗಿ ಸಾಗುತ್ತಿದೆ. ಮರಿಗಳಿಗೆ ಇದೊಂದು ಹೆಮ್ಮೆಪಡುವ ಸಂತಸದ ಸುದ್ದಿಯಾಗಿದೆ.

ಮರಿಗಳ ಘನವಂದನೆ

ಹಿಂಡು ಒಂದಾಗಿ ತಮ್ಮ ಕಬ್‌ಮಾಸ್ಟರನ್ನು ಅಭಿವಂದಿಸಲು ಮರಿಗಳದೇ ಆದ ವಿಶೇಷ ರೀತಿಯ ವಂದನೆಯಿದೆ. ಇದೇ ಘನವಂದನೆ.

ಕಬ್‌ಮಾಸ್ಟರು ಸಭಾ ವೇದಿಕೆಯಲ್ಲಿ ನಿಲ್ಲುತ್ತಾರೆ (· Council rock) 'ಪ್ಯಾಕ್' ಎಂದು ಕೂಗಿ ಹೇಳಿ, ಮರಿಗಳ ಗಮನವನ್ನು ಸೆಳೆಯುತ್ತಾರೆ ಪುನಃ "ಪ್ಯಾಕ್-ಪ್ಯಾಕ್-ಪ್ಯಾಕ್" ಎಂದು ಕೂಗಿ, ಎಲ್ಲಾ ಮರಿಗಳೂ ಒಟ್ಟಿಗೆ ಸೇರುವಂತೆ ಕರೆಕೊಡುತ್ತಾನೆ. ಈ ಕರೆಗೆ ಉತ್ತರವಾಗಿ ಮರಿಗಳು ಒಕ್ಕೊರಲಿನಿಂದ ಖಚಿತವಾಗಿ, "ಪ್ಯಾಕ್" ಎಂದು ಹೇಳಿ, ತಮ್ಮ ತಮ್ಮ ಷಟ್ಕಗಳ ಪ್ರಕಾರ, ಕಬ್‌ಮಾಸ್ಟರ ಸುತ್ತಲೂ, ಕಬ್‌ಮಾಸ್ಟರ ಎದುರಿಗೆ ಹಿರಿಯ ಆರಾಳಿಯು ಬರುವಂತೆ, ಒತ್ತಾಗಿ ಸೇರುತ್ತಾರೆ (**xxxx** ಇದು ಸಭಾ ವೃತ್ತ)



ಈಗ ಎಲ್ಲರೂ ಅಕ್ಕಪಕ್ಕದವರ ಕೈಗಳನ್ನು ಹಿಡಿದು, ತೋಳುಗಳನ್ನು ಹೊರಚಾಚಿ, ಹಿಂದೆ ಸರಿದು, ಆದಷ್ಟು ದೊಡ್ಡ ವೃತ್ತವನ್ನು ಮಾಡುತ್ತಾರೆ .... ಮರಿಯ ಲೆಕ್ಕದಲ್ಲಿ ಹಿಡಲಾ.......... (**0-0-0-0-0** ಇದು ಪ್ರದರ್ಶನ ವೃತ್ತ). ಕಬ್‌ಮಾಸ್ಟರು ವೃತ್ತದ ಮಧ್ಯೆ ಇರುತ್ತಾರೆ. ಅವರು ತಮ್ಮ ಅಂಗೈ ಗಳನ್ನು ಕೆಳಗೆ ಮಾಡಿ, ತೋಳುಗಳನ್ನು ಹೊರಚಾಚಿದಾಗ ಮರಿಗಳು ಹುಷಾರಾಗುತ್ತಾರೆ. ಕಬ್‌ಮಾಸ್ಟರು ನಿಧಾನವಾಗಿ ಏಕ ಗತಿಯಲ್ಲಿ ಕೈಗಳನ್ನು ಕೆಳತರುತ್ತಾರೆ. ಅವರ ಕೈಗಳು ಕೆಳಬಂದು ತೊಡೆಗಳನ್ನು ಮುಟ್ಟುತ್ತಿದ್ದಂತೆಯೇ, ಮರಿಗಳು ತಮ್ಮ ಹಿಮ್ಮಡಿಗಳನ್ನು ಮೇಲೆತ್ತಿ, ಕಾಲ್ಬೆರಳುಗಳ ಮೇಲೆ, ಮೊಣಕಾಲುಗಳನ್ನು ದೂರ ಮಾಡಿ, ಕೈಗಳ ಮೊದಲೆರಡು ಬೆರಳುಗಳು ಕಾಲುಗಳ ಮಧ್ಯೆ ನೆಲಮುಟ್ಟುವಂತೆ ಕುಳಿತುಕೊಳ್ಳುತ್ತಾರೆ. ಮರಿಗಳು ಈ ರೀತಿ ಕೂಡುವ ಚಲನೆಯು ನೇರವಾಗಿರಬೇಕು; ಕ್ರಮಬದ್ಧವಾಗಿರಬೇಕು. ಯಾವುದೇ ರೀತಿಯ ತೋಳು. ಕೈಕಾಲುಗಳ ಅತಿಶಯ ಚಲನೆಯಿರಬಾರದು.

ಹಿಂದು ಈ ಸ್ಥಿತಿಗೆ ಕುಳಿತ ಕೂಡಲೇ, ಬೇರೆ ಯಾವ ರೀತಿಯ ಸಂಕೇತವೂ ಇಲ್ಲದೆ, ಘನವಂದನೆ ಈ ರೀತಿ ಪ್ರಾರಂಭವಾಗುತ್ತದೆ.

1. ಮರಿಗಳು ಆ – ಖೇ – ಲ್ಹಾ
   ಸಾ – ಧ್ಹೇ – ವಾ – ದಷ್ಟ್

ಈ ಕೊನೆಯ 'ದಷ್ಟ್' ಹೇಳುತ್ತಿದ್ದಂತೆಯೇ, ಎಲ್ಲರೂ ಚಕ್ಕನೆ ಮೇಲೆದ್ದು ನಿಲ್ಲುತ್ತಾರೆ. ಕೈಗಳು ತಲೆಯ ಎರಡೂ ಕಡೆ ಇರುತ್ತದೆ, ಕೈಗಳ ಮೊದಲೆರಡು ಬೆರಳುಗಳೂ ಒಟ್ಟಾಗಿ, ಮೇಲೆ ಚಾಚಿರುತ್ತದೆ.

2. ಹಿರಿಯ ಆರಾಳಿಯು ಈಗ

ನೀವ್ – ಸಾ – ಧೀ – ಸಿ



ಎಂದು ಹೇಳುತ್ತಾನೆ. ಕೊನೆಯ "ಸಿ" ಹೇಳುತ್ತಿದ್ದಂತೆಯೇ, ಎಲ್ಲಾ ಮರಿಗಳೂ, ತಮ್ಮ ಎಡಗೈಯನ್ನು, ಚುರುಕಾಗಿ ಕೆಳಗೆ ತಂದು, ಬಲಗೈನಿಂದ ವಂದಿಸುವ ಸ್ಥಿತಿಗೆ ಬರುತ್ತಾರೆ. ಈಗ ಎಲ್ಲರೂ ಒಟ್ಟಿಗೆ ನಾವ್ – ಸಾ – ಧೀ – ಪೇ – ವ್ಹ ಎಂದು ಹೇಳುತ್ತಾರೆ. ಮರಿಗಳು ವಂದಿಸುವ ಸ್ಥಿತಿಗೆ ಬಂದಾಗ ಕಬ್‌ಮಾಸ್ಟರು ಮೂರು ಬೆರಳುಗಳಿಂದ ವಂದಿಸುತ್ತಾರೆ.

3. ಕೊನೆಯ "ವ್ಹ" ಹೇಳುತ್ತಿದ್ದಂತೆಯೇ ಪ್ರತಿ ಮರಿಯೂ ತನ್ನ ಕೈಯನ್ನು ಕೆಳಗೆ ತಂದು, "ಸಾವಧಾನ್" ಸ್ಥಿತಿಯಲ್ಲಿ, ಕಬ್‌ಮಾಸ್ಟರ ಆಜ್ಞೆಗಾಗಿ ಕಾಯುತ್ತಾ ನಿಲ್ಲುತ್ತಾನೆ.



4. ಕಬ್‌ಮಾಸ್ಟರು ವಂದನೆಯನ್ನು ಸೂಕ್ತ ರೀತಿಯಲ್ಲಿ ಸ್ವೀಕರಿಸಿ, 'ಥ್ಯಾಂಕ್ಯು' ಧನ್ಯವಾದಗಳು, ಒಳ್ಳೆಯದಾಯಿತು, ಗುಡ್ ಹಂಟಿಂಗ್ ಇತ್ಯಾದಿ ಅಭಿನಂದನೆ ಮಾತುಗಳನ್ನು ಹೇಳುತ್ತಾರೆ.

ಮರಿಗಳ ಘನವಂದನೆಯ ಸಂದರ್ಭದಲ್ಲಿ, ಸಹಾಯಕ ಕಬ್‌ಮಾಸ್ಟರು ವೃತ್ತದ ಹೊರಗೆ, ಕಬ್‌ಮಾಸ್ಟರಿಗೆ ನೇರವಾಗಿ ಹಿಂದೆ, "ಸಾವಧಾನ್"ನಲ್ಲಿ ನಿಂತಿರುತ್ತಾರೆ. ಆದರೆ ಅವರು ವಂದನೆ ಮಾಡುವುದಿಲ್ಲ.

ಮರಿಗಳ ಘನವಂದನೆಯು ಮನಃಪೂರ್ವಕವಾಗಿ, ಶಿಸ್ತಿನಿಂದಿರಲು ಒಪ್ಪಿಕೊಂಡಿರುವುದನ್ನೂ (ಇದರಿಂದಲೇ ಸುಖ ಮತ್ತು ಗೆಲುವುಂಟಾಗುವುದು) ಹಿಂಡು ಮತ್ತು ಅದರ ನಾಯಕತ್ವದ ಬಗ್ಗೆ ನಿಷ್ಠೆಯನ್ನೂ ಒತ್ತಿ ಹೇಳುತ್ತದೆ.

ಮರಿಗಳ ಘನವಂದನೆಯನ್ನು 'ದೀಕೆ'ಯನ್ನು ಪಡೆದ ಮರಿಗಳು ಮಾತ್ರ ಮಾಡುತ್ತಾರೆ.

ಮರಿಗಳ ವಂದನೆ

ವಂದನೆಯು ಒಂದು ರೀತಿಯ ಘನವಂದನೆಯೆಂದೇ ಹೇಳಬಹುದು. ವಂದನೆಯನ್ನು ಈ ರೀತಿ ಮಾಡಬೇಕು: ಬಲತೋಳನ್ನು ಭುಜದ ಮಟ್ಟಕ್ಕೆ ಚಾಚಿ

ಮೇಲೆತ್ತಬೇಕು. ಅಂಗೈ ಮುಂದಕ್ಕಿರಬೇಕು. ಹೆಬ್ಬೆರಳಿನಿಂದ ಕೊನೆಯ ಎರಡು ಬೆರಳುಗಳನ್ನು ಅದುಮಿ ಹಿಡಿಯಬೇಕು. ಮೊದಲೆರಡು ಬೆರಳುಗಳನ್ನು ಅಗಲಿಸಿರಬೇಕು. ತೋರ್ಬೆರಳು ಹಣೆಯ ಮೇಲೆ ಹುಬ್ಬನ್ನು ಮುಟ್ಟಿರಬೇಕು. ವಂದನೆ ಮಾಡುವಾಗ ಸಾವಧಾನ್ ಸ್ಥಿತಿಯಲ್ಲಿರಬೇಕು.

ವಂದನೆಯು ಮುಗಿದ ಕೂಡಲೇ ಕೈಯನ್ನು ಚುರುಕಾಗಿ ಕೆಳಗೆ ತರಬೇಕು, ವಂದನೆಯು ಪರಸ್ಪರ ಅರಿತುಕೊಂಡದ್ದಕ್ಕೆ ಗುರುತು. ಪರಸ್ಪರ ತೋರುವ ಗೌರವ, ಮರ್ಯಾದೆ, ಪ್ರೀತಿ ವಿಶ್ವಾಸಗಳ ಗುರುತೂ ಸಹ. ಸಮವಸ್ತ್ರದಲ್ಲಿರಲಿ ಇಲ್ಲದಿರಲಿ, ಮರಿಗಳು ಕಬ್‌ಮಾಸ್ಟರು ಪರಸ್ಪರವಾಗಿ ಇದೇ ರೀತಿ ವಂದಿಸುತ್ತಾರೆ. ಇತರ ಎಲ್ಲ ಸ್ಕೌಟುಗಳು, ಗೈಡುಗಳು, ಅಧಿಕಾರಿವರ್ಗ ಇತ್ಯಾದಿ ಸಂಸ್ಥೆಯ ಸಮಸ್ತ ಸದಸ್ಯರುಗಳಿಗೆ ಮರಿಗಳು ಹೀಗೆ ವಂದಿಸುತ್ತಾರೆ. ಆದರೆ ಕಬ್‌ಮಾಸ್ಟರು ಅವರುಗಳಿಗೆ ಪ್ರತಿವಂದಿಸುವಾಗ ಸ್ಕೌಟ್ ಸೆಲ್ಯೂಟ್ (ಮೂರು ಬೆರಳುಗಳು) ಮಾಡುತ್ತಾರೆ, ಏಕೆಂದರೆ ಅವರು ಸ್ಕೌಟರ್ ಆಗಿ, ಸ್ಕೌಟ್ ಪ್ರತಿಜ್ಞೆ ಮಾಡಿರುತ್ತಾರೆ.

ಎಡಗೈನಿಂದ ಕೈ ಕುಲುಕುವುದು

ಇತರರನ್ನು ಅಭಿವಂದಿಸುವಾಗ ಹಾರ್ದಿಕವಾಗಿ ವಂದಿಸಿ, ಕೈಕುಲುಕುವುದು ಲೋಕರೂಢಿ. ನಮ್ಮ ವಿಶ್ವ ಸೋದರತೆಯ ಸಂಸ್ಥೆಯಲ್ಲಿ ಎಡಗೈನಿಂದ ಕೈಕುಲುಕುವುದು (ಹಸ್ತಲಾಘವ ಮಾಡುವುದು) ಒಂದು ವಿಶಿಷ್ಟತೆ. ಈ ರೀತಿಯ ಹಸ್ತಲಾಘವವನ್ನು ಸಂಸ್ಥಾಪಕರು ಪ್ರಾರಂಭಿಸಿದರು.

ಕದನಾನಂತರದಲ್ಲಿ, ಆಫ್ರಿಕಾದ ರಾಜನೊಬ್ಬನು, ಅವರನ್ನು, ಈ ರೀತಿಯಲ್ಲಿ ಅಭಿವಂದಿಸಿದ್ದನು. ಗುರಾಣಿಯನ್ನು ಬಿಸುಟು, ಕೈಗಳನ್ನು ಖಾಲಿ ಇಟ್ಟುಕೊಂಡು, ಈ ರೀತಿ ಹಸ್ತಲಾಘವವನ್ನಿತ್ತಿದ್ದನು. ಯಾವುದೇ ರೀತಿಯಲ್ಲಿಯೂ ಶಸ್ತ್ರಾಸ್ತ್ರವನ್ನು ಹೊಂದಿಲ್ಲವೆಂದೂ, ಯಾವುದೇ ರೀತಿಯ ಕೆಟ್ಟ ಭಾವನೆಗಳೂ ಇಲ್ಲದೆ ಪರಸ್ಪರ ಹಾರ್ದಿಕತೆ ಮತ್ತು ವಿಶ್ವಾಸ ಮಾತ್ರ ಉಳಿದಿದೆಯೆಂದೂ ಇದರ ಅಂತರಾರ್ಥ.

ಸ್ಕೌಟ್/ಗೈಡುಗಳು ಪರಸ್ಪರ ವಂದಿಸುವ ಅಂತರಾರ್ಥವೂ ಒಟ್ಟಿನಲ್ಲಿ ಇದೇ ಆದರೂ, ಹಾರ್ದಿಕತೆ ಮತ್ತು ನಿಷ್ಕಪಟ ಭಾವನೆಗಳು ವಿಶೇಷವಾದುದು.

(i) ಎದೆಗೂಡಿನಲ್ಲಿ, ಹೃದಯವು ಸ್ವಲ್ಪ ಎಡಭಾಗದಲ್ಲಿದೆಯಾದುದರಿಂದ ಎಡಗೈನ ಹಸ್ತಲಾಘವವು, ಹಾರ್ದಿಕತೆಯನ್ನು ತೋರಿಸುತ್ತದೆ.

(ii) ಆಫ್ರಿಕಾದ ರಾಜನೊಬ್ಬನು ಕದನದಲ್ಲಿ ಬಿ.ಪಿ.ಯವರಿಂದ ಸೋತು, ಎಡಗೈನಿಂದ ಕೈ ಕುಲುಕುವಾಗ "ಅತಿ ಪರಾಕ್ರಮಶಾಲಿಗಳಿಗೆ ಮಾತ್ರ" ಈ ರೀತಿ ಹಸ್ತಲಾಘವ ಮಾಡಲಾಗುವುದೆಂದು ತಿಳಿಸಿದನು.

(iii) ಆಫ್ರಿಕಾದಲ್ಲಿ ಬುಡಕಟ್ಟು ಜನಾಂಗಗಳು, ಆಗಾಗ್ಗೆ ತಮ್ಮ ತಮ್ಮಲ್ಲಿ ಕಾದಾಡುತ್ತಿದ್ದರು. ಒಮ್ಮೆ ಕದನವಿರಾಮದ ಬಳಿಕ, ರಾಜರುಗಳೆಲ್ಲರೂ ಒಂದುಗೂಡಿ, ಇನ್ನು ಮುಂದೆ ಕಾದಾಡಬಾರದೆಂದು ನಿರ್ಧರಿಸಿ, ರಕ್ಷಣೆಗಾಗಿ ಎಡಗೈನಲ್ಲಿ ಹಿಡಿಯುವ ಗುರಾಣಿಯನ್ನು ಬಿಸುಟು, ಅದೇ ಕೈನಿಂದ, ಶತ್ರುಗಳೆನಿಸಿದವರೊಡನೆ ಹಾರ್ದಿಕವಾಗಿ ಕೈ ಕುಲುಕುತ್ತಿದ್ದರು.

ತಾಯಿ ತಂದೆಗಳು ತಿಳಿಸಿದಂತೆ ದೈನಂದಿನ ಪ್ರಾರ್ಥನೆ.

ತಾಯಿ ತಂದೆಯರು ಮಕ್ಕಳ ಆಧ್ಯಾತ್ಮಿಕ ಬೆಳವಣಿಗೆಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಪ್ರಾರ್ಥನೆಯ ವಿಷಯದಲ್ಲಿ ಸಲಹೆಯ ಜೊತೆಗೆ ನಿಯಂತ್ರಣವೂ ಇರಬೇಕು. ಬಾಲಕನು ಅವರ ಜೊತೆಯಲ್ಲಿ ಹೆಚ್ಚು ಕಾಲವನ್ನು ಕಳೆಯುವುದರಿಂದ ಅವರು ಅವನ ಮೇಲೆ ಹೆಚ್ಚು ಪ್ರಭಾವಬೀರಬಲ್ಲವರಾಗಿರುತ್ತಾರೆ. ಪ್ರಾರ್ಥನೆಯ ಮೂಲಕ ದೇವರೊಡನೆ ಸಂಪರ್ಕ ಪಡೆಯಬಹುದು. ದೇವರನ್ನು ನಮಗೆ ಬೇಕಾದ ವಿಷಯಗಳ ಬಗ್ಗೆ ಕೇಳುವುದಷ್ಟೇ ಅಲ್ಲದೆ, ನಾವು ಮಾಡುವ ಕೆಲಸದ ಬಗ್ಗೆ ಕೃತಜ್ಞತೆ ಸಲ್ಲಿಸಬಹುದು. ದೈಹಿಕ ರೋಗಗಳು, ಮಾನಸಿಕ ಕ್ಷೋಭೆ ಹಾಗೂ ಆಧ್ಯಾತ್ಮಿಕ ಮೂಢತ್ವ, ಈ ಮೂರೂ ನರಳಾಟಗಳಿಂದ ಬಿಡುಗಡೆ ಹೊಂದುವುದಕ್ಕೂ, ಸರಳ ಜೀವನ ನಡೆಸುವುದಕ್ಕೂ, ಉದಾತ್ತ ಭಾವನೆಗಳನ್ನು ಬೆಳೆಸಿಕೊಳ್ಳುವುದಕ್ಕೂ, ವಿಶ್ವ ಸೋದರತೆ ಯನ್ನು ಬೆಳೆಸಿಕೊಳ್ಳುವುದಕ್ಕೂ ಪ್ರಾರ್ಥನೆಯ ಅವಶ್ಯಕತೆ ಇದೆ. ಮನಸ್ಸು ದೇಹಕ್ಕಿಂತಲೂ ಹೆಚ್ಚೆಂದೂ, ಮನಸ್ಸಿಗಿಂತಲೂ ಆತ್ಮವು ಶಾಶ್ವತವಾದುದೆಂದೂ ತಿಳಿದುಕೊಳ್ಳುವುದಕ್ಕಾಗಿ; ಕೆಟ್ಟದ್ದನ್ನು ಅಳಿಸಿ ಒಳ್ಳೆಯದನ್ನು ಸಾಧಿಸುವುದಕ್ಕಾಗಿ; ದುಃಖವನ್ನು ಮರೆತು ಸೌಖ್ಯವನ್ನು ಪಡೆಯುವುದಕ್ಕಾಗಿ; ಕ್ರೌರ್ಯವನ್ನು ದಮನ ಮಾಡಿ ಕರುಣೆಯ ಬೀಜವನ್ನು ಬಿತ್ತುವುದಕ್ಕಾಗಿ; ಮೂಢತ್ವವನ್ನು ಬಿಟ್ಟು ಜ್ಞಾನವನ್ನು ಪಡೆಯುವುದಕ್ಕಾಗಿ, ಪ್ರಾರ್ಥನೆಯು ಅತ್ಯವಶ್ಯಕವಾದುದು.

ಮನೆಯಲ್ಲಿ ದಿನಕ್ಕೊಂದುಪಕಾರ

ಮನೆಯಲ್ಲಿನ ಕೆಲಸಗಳನ್ನು ಮಾಡುವುದು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು, ಮನಃಪೂರ್ವಕವಾಗಿರಬೇಕು ಮತ್ತು ಉತ್ಸಾಹಪೂರಿತವಾಗಿರಬೇಕು. ಅವಿಶ್ರಾಂತವಾಗಿ ದುಡಿಯುವ ತಾಯಿ-ತಂದೆಯರಿಗೆ, ಮರಿಗಳು ಬಹಳ ರೀತಿಗಳಲ್ಲಿ ಸಹಾಯಕರಾಗಬಹುದು. ಉದಾ: ತರಕಾರಿ ದಿನಸು ಇತ್ಯಾದಿ ತರಬಹುದು; ಮಗುವನ್ನು ಮಲಗಿಸಬಹುದು; ಮನೆಯಲ್ಲಿ ಇತರ ಮಕ್ಕಳನ್ನು ನೋಡಿಕೊಳ್ಳಬಹುದು; ಸಾಮಾನುಗಳನ್ನು ಜೋಡಿಸಬಹುದು; ಮನೆಯನ್ನು ಒಪ್ಪ ಮಾಡಬಹುದು; ಇತ್ಯಾದಿ.

ಮರಿಗಳ ಪ್ರಾರ್ಥನೆ (ತಿಳಿದಿರಬೇಕು) ಹಾಡಲು ಸಮರ್ಥನಾಗಿರಬೇಕು

ಹಂ ಹೈ ಛೋಟೆ ಛೋಟೆ ಬಾಲ್
ಹಮಾರಿ ಲೇನಾ ತೂ ಸಂಭಾಲ್

ಕದಂ ಕದಂ ಪರ್ ಕರೇ ಗಲ್ತಿಯಾ;
ಸದ್ಬುದ್ಧಿ ದೇನಾ ಭುಲಾ ಗಲ್ತಿಯಾ;
ತುಮ ಬಿನ್ ಕೋನ್ ಲೇಗಾ ಸಂಭಾಲ್?
ತುಮ ಬಿನ್ ಕೋನ್ ಲೇಗಾ ಸಂಭಾಲ್?

ಹಂ ಹೈ ಛೋಟೆ ಛೋಟೆ ಬಾಲ್
ಹಮಾರಿ ಲೇನಾ ತೂ ಸಂಭಾಲ್

ಪ್ರಾರ್ಥನಾಗೀತೆಯ ಕನ್ನಡ ಅರ್ಥ (Meaning)

ಪುಟ್ಟ ಪುಟಾಣಿ ಮಕ್ಕಳು ನಾವು
ನಮ್ಮನು ನೀನೇ ರಕ್ಷಿಪುದು ॥

ಹೆಜ್ಜೆ ಹೆಜ್ಜೆಗೂ ತಪ್ಪಾಗೈದರೂ
ಸದ್ಬುದ್ಧಿ ನೀಡು ಅವುಗಳ ಮರೆತು

ನಿನ್ನನು ಬಿಟ್ಟರೆ ರಕ್ಷಿಪರಾರು?
ನಿನ್ನನು ಬಿಟ್ಟರೆ ರಕ್ಷಿಪರಾರು?

ಪುಟ್ಟ ಪುಟಾಣಿ ಮಕ್ಕಳು ನಾವು
ನಮ್ಮನು ನೀನೇ ರಕ್ಷಿಪುದು ॥

ಅಧ್ಯಾಯ-6

ಮರಿಗಳ ದೀಕ್ಷಾ ಸಮಾರಂಭ

ಮರಿಯಾಗಲು ಬಯಸುವ ಬಾಲಕನು, ಮರಿಯಾಗಿ ಪ್ರತಿಜ್ಞೆಮಾಡಿ 'ಪ್ರವೇಶ್ ಮರಿ' ಎನಿಸಿಕೊಳ್ಳುವುದಕ್ಕೆ ಮೊದಲು, ದೀಕ್ಷೆ ವಹಿಸುವ ಒಂದು ಸಾಂಪ್ರದಾಯಿಕ ಸಮಾರಂಭವಿರುತ್ತದೆ.

ದೀಕ್ಷಾ ಸಮಾರಂಭ

ಇದು ಸರಳವಾದುದು. ಅತಿ ಸ್ವಲ್ಪ ಕಾಲದ್ದು ಹಾಗೂ ಪವಿತ್ರವಾದುದು. ಇದು ಹಿಂಡಿಗೆ ಮಾತ್ರ ಸೀಮಿತವಾದ ಖಾಸಗಿ ಸಮಾರಂಭವಾಗಿರುತ್ತದೆ. ಸಮಾರಂಭವನ್ನು ನೋಡಲು ಬಯಸಿದರೆ, ತಾಯ್ತಂದೆಯರನ್ನು ಮಾತ್ರ ಆಹ್ವಾನಿಸಬಹುದು. ಇತರರಿಗೆ ಅವಕಾಶವಿರುವುದಿಲ್ಲ.

ಪ್ರವೇಶ್ ಪರೀಕ್ಷಾಂಶಗಳನ್ನು ಮುಗಿಸಿ, ಹಿಂಡನ್ನು ಸೇರಬಯಸುವ ಬಾಲಕನು, ಈ ಸಮಾರಂಭದಲ್ಲಿ ತನ್ನ ಕಬ್‌ಮಾಸ್ಟರಿಗೆ ಮಾತ್ರ ವಚನ ಕೊಡುತ್ತಾನೆ. ಇತರರಿಗೆ ಅದು ಅನ್ವಯಿಸುವುದಿಲ್ಲ. ಈ ಸಮಾರಂಭವನ್ನು ನಡೆಸುವ ಬಾಧ್ಯತೆಯು ಕಬ್‌ಮಾಸ್ಟರಿಗೆ ಮಾತ್ರ ಸೀಮಿತವಾದುದು. ಇತರರು ಎಷ್ಟೇ ಉನ್ನತ ಸ್ಥಾಯಿಯವರಾದರೂ, ಈ ವಿಶೇಷ ಅಧಿಕಾರವನ್ನು ವಹಿಸಿಕೊಳ್ಳುವ ಹಾಗಿಲ್ಲ. ಈ ಸಮಾರಂಭವನ್ನು ಹಿಂಡಿನ ಸಭೆಯ ಅಂತ್ಯಭಾಗದಲ್ಲಿ ನಡೆಸಬಹುದು. ವಿಶೇಷ ಸಭೆಯನ್ನು ಇದಕ್ಕಾಗಿಯೇ ಏರ್ಪಡಿಸುವುದು ಉತ್ತಮ. ಒಂದು ಸಮಾರಂಭದಲ್ಲಿ ಒಬ್ಬ ಮರಿಗೆ ಮಾತ್ರ ದೀಕ್ಷೆ ಕೊಡುವುದು ಪರಿಣಾಮಕಾರಿಯೆನಿಸುತ್ತದೆ. ಹೆಚ್ಚು ಬಾಲಕರಿಗೆ ಒಮ್ಮೆಲೇ ದೀಕ್ಷೆ ವಹಿಸಬಾರದು. ಗ್ರೂಪ್ ಲೀಡರ್‌ರವರು, ಗುಂಪಿನ ಯಜಮಾನರಾಗಿ ಸಮಾರಂಭದಲ್ಲಿ ಭಾಗವಹಿಸಬಹುದು.

ಸಿದ್ಧತೆ

ಎಲ್ಲಾ ಸದಸ್ಯರೂ ಸಮವಸ್ತ್ರವನ್ನು ಧರಿಸಿರುತ್ತಾರೆ. ಹಿಂಡು ಪ್ರದರ್ಶನ ವೃತ್ತದಲ್ಲಿ ವಿಶ್ರಾಮ್‌ನಲ್ಲಿ ನಿಂತಿರುತ್ತದೆ. ಗುಂಪಿನ ಧ್ವಜವು ಪೂರ್ಣ ಮಟ್ಟದಲ್ಲಿ ಹಾರಾಡುತ್ತಿರುತ್ತದೆ. ಉಮೇದುವಾರನು ಮರಿಗಳ ಷರ್ಟು, ನಿಕ್ಕರು, ಬೆಲ್ಟ್, ಸ್ಟಾಕಿಂಗ್ಸ್

ಮತ್ತು ಷೂಗಳನ್ನು ಧರಿಸಿ. ವೃತ್ತದ ಹೊರಗೆ ತನ್ನ ಆರಾಳಿಯ ಹಿಂದೆ ನಿಂತಿರುತ್ತಾನೆ. ಕಬ್‌ಮಾಸ್ಟರು ವೃತ್ತದ ಮಧ್ಯದಲ್ಲಿರುತ್ತಾರೆ. ಇತರ ಸ್ಕೌಟರುಗಳು ವೃತ್ತದ ಹೊರಗೆ ಕಬ್‌ಮಾಸ್ಟರನ ಹಿಂದೆ ಸಾಲಾಗಿ ನಿಂತಿರುತ್ತಾರೆ. ಟೋಪಿ, ಸದಸ್ಯತ್ವದ ಪದಕ, ಲೋಹದ ಪದಕ (ಸಾಮಾನ್ಯ ಉಡುಪಿನಲ್ಲಿ ಧರಿಸುವುದು) ಸ್ಕಾರ್ಫ್ ಮತ್ತು ವೋಗಲ್‌ಗಳನ್ನು ಸಿದ್ಧವಾಗಿಡ ಲಾಗಿರುತ್ತದೆ. ಮರಿಯ ದೀಕ್ಷಾ ಪತ್ರವು ಸಹಾಯಕ ಕಬ್‌ಮಾಸ್ಟರನ ಬಳಿ ಇರುತ್ತದೆ. ಷಟ್ಕದ ಭುಜಪಟ್ಟಿಕೆಯು ಆರಾಳಿಯ ಬಳಿ ಇರುತ್ತದೆ. ಮಾನದಂಡವು (ಟೋಟಂಪೋಲ್) (ಹಿಂಡಿನಲ್ಲಿ ಅದು ಇರುವುದಾದರೆ) ಸಹಾಯಕ ಕಬ್‌ಮಾಸ್ಟರನ ಬಳಿ ಇರುತ್ತದೆ.

ವಿಧಾನ

ಕಬ್‌ಮಾಸ್ಟರು ಸಂಕ್ಷಿಪ್ತವಾಗಿ ಕೆಲವು ಹಿತನುಡಿಗಳನ್ನು ಹೇಳಿ ಸಮಾರಂಭವನ್ನು ಪ್ರಾರಂಭಿಸಲು ಸೂಕ್ತ ವಾತಾವರಣವನ್ನು ಕಲ್ಪಿಸುತ್ತಾರೆ. ಕರೆತರಲು ಹೇಳಿದಾಗ ಆರಾಳಿಯು ಉಮೇದುವಾರನನ್ನು ಕರೆತಂದು, ಕಬ್‌ಮಾಸ್ಟರೆದುರಿಗೆ, ಸಾವಧಾನ್‌ನಲ್ಲಿ ನಿಲ್ಲಿಸಿ, ತನ್ನ ಷಟ್ಕಕ್ಕೆ ಹಿಂದಿರುಗುತ್ತಾನೆ.

ಕಬ್‌ಮಾಸ್ಟರು	:	ನೀನು ಮರಿಯಾಗಲು ಬಯಸುತ್ತೀಯಾ?
ಉಮೇದುವಾರ	:	ಹೌದು. ಬಯಸುತ್ತೇನೆ.
ಕಬ್ ಮಾಸ್ಟರು	:	ನಿನಗೆ ಹಿಂಡಿನ ನಿಯಮ ಮತ್ತು ಪ್ರತಿಜ್ಞೆ ಮರಿಗಳ ಘನವಂದನೆ, ಧ್ಯೇಯ, ವಂದನೆ ಮತ್ತು ಹಸ್ತಲಾಘವ ಇವುಗಳ ಬಗ್ಗೆ ತಿಳಿದಿದೆಯೇ?
ಉತ್ತರ	:	ಹೌದು, ತಿಳಿದಿದೆ.
ಕಬ್‌ಮಾಸ್ಟರು	:	ನಿಯಮವೇನು?
ಉತ್ತರ	:	ಮರಿಯು ಹಿರಿಯರಿಗೆ ವಿಧೇಯನು. ಮರಿಯು ವಿನಯಿ ಮತ್ತು ನಿರ್ಮಲನು.
ಕಬ್‌ಮಾಸ್ಟರು	:	ನೀನು ಹಿಂಡಿನ ಪವಿತ್ರವಾದ ಪ್ರತಿಜ್ಞೆಯನ್ನು ಮಾಡಲು ತಯಾರಿರುವೆಯಾ?
ಉತ್ತರ	:	ಹೌದು, ತಯಾರಿದ್ದೇನೆ.
ಕಬ್‌ಮಾಸ್ಟರು	:	**ಪ್ಯಾಕ್, ಸಾವಧಾನ್** (ಹಿಂಡು ಸಾವಧಾನ್‌ಗೆ ಬರುತ್ತದೆ) **ಪ್ಯಾಕ್, ಸೆಲ್ಯೂಟ್** (ಹಿಂಡು ವಂದನೆಯ ಸ್ಥಿತಿಯಲ್ಲಿ ನಿಲ್ಲುತ್ತದೆ).

ಕಬ್‌ಮಾಸ್ಟರನು ಉಮೇದುವಾರನನ್ನು ಕುರಿತು ನಾನು ಹೇಳುವುದನ್ನು ನೀನೂ ಹೇಳು ಎಂದು ತಿಳಿಸಿ ಮರಿಗಳ ಪ್ರತಿಜ್ಞೆಯನ್ನು, ಸ್ವಲ್ಪ ಸ್ವಲ್ಪವಾಗಿ ಹೇಳುತ್ತಾರೆ. ಮರಿಯು ಅದನ್ನು ಅನುಕರಿಸಿ ಹೇಳುತ್ತಾನೆ.

"ನಾನು ನನ್ನ ಕೈಲಾದ ಮಟ್ಟಿಗೆ,
ದೇವರಿಗೂ ಮತ್ತು ನನ್ನ ದೇಶಕ್ಕೂ ನನ್ನ ಕರ್ತವ್ಯವನ್ನು ಮಾಡುತ್ತೇನೆ.
ಹಿಂಡಿನ ನಿಯಮವನ್ನು ಪಾಲಿಸುತ್ತೇನೆ.
ಪ್ರತಿ ದಿನವೂ ಒಂದು ಉಪಕಾರವನ್ನು ಮಾಡುತ್ತೇನೆ"
–ಎಂದು ಪ್ರತಿಜ್ಞೆ ಮಾಡುತ್ತೇನೆ.

ಪ್ರತಿಜ್ಞೆಯು ಮುಗಿದ ಮೇಲೆ, ಕಬ್‌ಮಾಸ್ಟರ ಜೊತೆಗೆ, ಎಲ್ಲರೂ ಕೈಗಳನ್ನು ಕೆಳಗೆ ತರುತ್ತಾರೆ. ಹೊಸ ಮರಿಯ ಎಡಗೈ ಕುಲುಕುತ್ತಾ, ಕಬ್‌ಮಾಸ್ಟರು, "ನೀನು ಈಗ ಮಾಡಿರುವ ಪ್ರತಿಜ್ಞೆಯಂತೆ ನಡೆದುಕೊಳ್ಳಲು, ನಿನ್ನ ಕೈಲಾದಷ್ಟು ಪ್ರಯತ್ನಿಸುವಿಯೆಂದು ನಂಬುತ್ತೇನೆ. ನೀನೀಗ ಒಬ್ಬ ಮರಿ ಮತ್ತು ವಿಶ್ವ ಮಹಾ ಸ್ಕೌಟ್ ಭ್ರಾತೃ ಮಂಡಲಿಯ ಸದಸ್ಯನಾಗಿದ್ದೀಯೆ" ಎಂದು ಹೇಳುತ್ತಾರೆ.

ಕಬ್‌ಮಾಸ್ಟರ್: ಪ್ಯಾಕ್, ವಿಶ್ರಾಮ್ (ಎಲ್ಲರೂ ವಿಶ್ರಾಮ್‌ಗೆ ಬರುತ್ತಾರೆ).

ಕಬ್‌ಮಾಸ್ಟರು ಈಗ ಮರಿಗೆ ಟೋಪಿಯನ್ನು, ಲೋಹದ ಪದಕವನ್ನು ಕೊಡುತ್ತಾರೆ. ಮತ್ತು ಸೂಕ್ತ ಹಿತನುಡಿಗಳೊಂದಿಗೆ ಸದಸ್ಯತ್ವದ ಪದಕವನ್ನೂ ಸಹ ಕೊಡುತ್ತಾರೆ. ಹೊಸ ಮರಿಯು ಟೋಪಿಯನ್ನು ತಾನೇ ಹಾಕಿಕೊಂಡು, ಸದಸ್ಯತ್ವ ಮತ್ತು ಲೋಹದ ಪದಕಗಳನ್ನು ಜೇಬಿಗೆ ಇಳಿಯಬಿಡುತ್ತಾನೆ.

ಕಬ್‌ಮಾಸ್ಟರು, ಗ್ರೂಪ್ ಲೀಡರ್ ಅಥವಾ ಸಹಾಯಕ ಕಬ್ ಮಾಸ್ಟರಿಗೆ, ಸ್ಕಾರ್ಫ್ ಮತ್ತು ವೋಗಲ್‌ಗಳನ್ನು ಹಾಕಲು ತಿಳಿಸುತ್ತಾರೆ. ಆ ಕೆಲಸವನ್ನು ಅವರು ಮಾಡಿ, ಹೊಸ ಮರಿಯನ್ನು ಸ್ವಾಗತಿಸಿ, ಕೆಲವು ಹಿತವಚನಗಳನ್ನು ನುಡಿಯುತ್ತಾರೆ.

ಸಹಾಯಕ ಕಬ್‌ಮಾಸ್ಟರು ದೀಕ್ಷಾಪತ್ರವನ್ನು ಕೊಟ್ಟು, ಸ್ವಾಗತಿಸಿ, ಅವನ ಪ್ರಗತಿಯನ್ನು ಪ್ರಶಂಸಿಸಿ, ಕೆಲವು ಹಿತನುಡಿಗಳನ್ನು ಹೇಳುತ್ತಾರೆ.

ಕಬ್‌ಮಾಸ್ಟರ್: (ಹೊಸ ಮರಿಯ ಹೆಸರು ಹೇಳಿ) ಹಿಂಡಿಗೆ ವಂದಿಸಲು ಹೇಳುತ್ತಾರೆ. ಅವನ ವಂದನೆಗೆ ಪ್ರತಿಯಾಗಿ, **"ಪ್ಯಾಕ್, ಸೆಲ್ಯೂಟ್"** ಸಹ ಹೇಳುತ್ತಾರೆ. ಹಿಂಡು ಪ್ರತಿ ವಂದಿಸುತ್ತದೆ.

ಹೊಸ ಮರಿಯು ಷಟ್ಕಕ್ಕೆ ಹಿಂದಿರುಗುತ್ತಾನೆ. ಆರಾಳಿಯು ಭುಜಪಟ್ಟಿಕೆಯನ್ನು ಕೊಡುತ್ತಾನೆ.

ಮರಿಗಳ ಘನವಂದನೆಯ ಬಳಿಕ ಸಮಾರಂಭವು ಮುಕ್ತಾಯವಾಗುತ್ತದೆ. ಹೊಸ ಮರಿಯು ಮೊದಲ ಬಾರಿಗೆ ಮರಿಗಳ ಘನವಂದನೆಯಲ್ಲಿ ಭಾಗವಹಿಸುತ್ತಾನೆ. ಸಮಾರಂಭವು ಮುಗಿದ ಬಳಿಕ, ಸಾಧ್ಯವಾದರೆ, ಹಿಂಡಿನಲ್ಲಿ 'ಟೀ' ಕಾರ್ಯಕ್ರಮವನ್ನು ಇಟ್ಟುಕೊಳ್ಳಬಹುದು.

ಮಾನದಂಡ (ಇದು ಐಚ್ಛಿಕವಾದುದು)

ಬಿ.ಪಿ.ರವರು ತಮ್ಮ 'ವುಲ್ಫ್ ಕಬ್ಸ್ ಹ್ಯಾಂಡ್ ಬುಕ್'ನಲ್ಲಿ ಪ್ರತಿ ಹಿಂಡಿನಲ್ಲಿಯೂ ಒಂದು 'ಮಾನದಂಡ'ವು (ಟೋಟಂಪೋಲ್) ಇರಬೇಕೆಂದು ಅಭಿಪ್ರಾಯಪಡುತ್ತಾರೆ. "ಟೋಟಂ" ಎಂಬ ಪದವು 'ರೆಡ್ ಇಂಡಿಯನ್' ಜನಾಂಗದ ಭಾಷೆಯಲ್ಲಿ "ವಂಶ ಲಾಂಛನ" ಎಂಬ ಅರ್ಥವನ್ನು ಕೊಡುತ್ತದೆ. ಈ ಮಾನದಂಡಗಳು, ಸಾಮಾನ್ಯವಾಗಿ ಉದ್ದನೆಯ ಎತ್ತರವಾದ, ಚಿತ್ರಕಲೆಯಿಂದ ಕೂಡಿದ, ಕೋಲುಗಳಾಗಿರುತ್ತಿದ್ದುವು. ಈ ಕೋಲಿನ ತುದಿಯ ಭಾಗದಲ್ಲಿ ಸಾಮಾನ್ಯವಾಗಿ, ಒಂದು ಕಾಡುಪ್ರಾಣಿಯ, ಹಕ್ಕಿಯ ಇಲ್ಲವೇ ಮೀನಿನ ಕೆತ್ತನೆಯಿದ್ದು, ಅದು ಎಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿಯೂ, ವಂಶಮರ್ಯಾದೆಯನ್ನು ಕಾಪಾಡುವುದೆಂಬ ನಂಬಿಕೆಯಿದ್ದಿತು. ಬಿ.ಪಿ.ರವರು ಹೇಳಿರುವಂತೆ ಮರಿಗಳು ಅನೇಕ ದೇಶಗಳಿಗೆ ಸೇರಿದ್ದರೂ, ಒಂದೇ ವಂಶದವರಾಗಿದ್ದು, ಸೋದರರಂತಿರುತ್ತಾರೆ. ತೋಳನ ತಲೆಯು ಮರಿಗಳ ವಂಶದ ಲಾಂಛನವಾಗಿರುತ್ತದೆ.

ಸದಸ್ಯತ್ವ ಪದಕ: ಸದಸ್ಯತ್ವದ ಪದಕವು, ನೀಲಿಯ ಒಡಲಿನ ಬಟ್ಟೆಯ ಪದಕ. ಇದರ ಮಧ್ಯೆಯಲ್ಲಿ ಹಳದಿಯ ತ್ರಿದಳ ಕಮಲವಿರುತ್ತದೆ. ಗೈಡುಗಳ ಲಾಂಛನವಾದ ತ್ರಿದಳಪತ್ರ (ಟ್ರೆಫಾಯಿಲ್)ವನ್ನು ಇದರೊಳಗೆ ಅಳವಡಿಸಲಾಗಿದೆ. ಅಶೋಕ ಚಕ್ರವು ಕೇಂದ್ರ ಸ್ಥಾನದಲ್ಲಿರುತ್ತದೆ. ಈ ಪದಕವನ್ನು ಷರ್ಟ್‌ನ ಎಡ ಜೇಬಿನ ಮೇಲೆ ಅಥವಾ ಜರ್ಸಿಯ ಮೇಲೆ ಅದೇ ಸ್ಥಳದಲ್ಲಿ ಧರಿಸಬೇಕು.

ಮರಿಗೆ ಸಾವಧಾನ್‌ನಲ್ಲಿ ಹೇಗೆ ನಿಲ್ಲಬೇಕೆಂದು ಗೊತ್ತು

◆

ಅಧ್ಯಾಯ-7

ಸಮವಸ್ತ್ರ, ಪದಕಗಳು ಮತ್ತು ಲಾಂಛನ

ಮರಿಗಳು ವಿಶ್ವವ್ಯಾಪಿ ಸ್ಕೌಟ್ ಸಂಸ್ಥೆಯ ಒಂದು ಭಾಗವಾಗಿದ್ದಾರೆ. ಅವರಿಗೆ ಅವರದೇ ಆದ, ವಿಶೇಷ ರೀತಿಯ, ಅವರು ವಿಶ್ವಸೋದರತೆಯ ಸದಸ್ಯರೆಂದು ಸಾರುವ ಸಮವಸ್ತ್ರವಿರುತ್ತದೆ.

ಮರಿಗಳ ಸಮವಸ್ತ್ರದ ಬಗ್ಗೆ ಎ.ಪಿ.ಆರ್.ಓ.2, ಅಧ್ಯಾಯ–1, ನಿಯಮ 9ರಲ್ಲಿ ವಿವರಿಸಲಾಗಿದೆ.

(i) **ಷರ್ಟ್**: ಉಕ್ಕು ಬೂದುಬಣ್ಣ, ಎರಡು ಮುಚ್ಚಳವಿರುವ ಜೇಬುಗಳ, ಭುಜಪಟ್ಟಿಗಳು, ಅರ್ಧತೋಳು ಅಥವಾ ಮೇಲಕ್ಕೆ ಮಡಿಸಿರುವ ಉದ್ದ ತೋಳು ಇರಬೇಕು. ಚಳಿಯ ವೇಳೆ ತೋಳನ್ನು ಪೂರ್ತಿ ಕೆಳಕ್ಕೆ ಇಳಿಸಬಹುದು.

(ii) **ನಿಕ್ಕರು**: ಗಾಢ ನೀಲಿ ಬಣ್ಣ.

(iii) **ತಲೆಗೆ**: ರಾಷ್ಟ್ರೀಯ ಸಂಸ್ಥೆಯಿಂದ ಒದಗಿಸಿರುವ ಹಳದಿ (ಪೈಪಿಂಗ್) ಅಂಚು ಇರುವ ನೀಲಿ ಟೋಪಿ. ಸಿಖ್ ಧರ್ಮದವರು ಗಾಢ ನೀಲಿ ಪೇಟವನ್ನು ಧರಿಸಬೇಕು. ಟೋಪಿ/ಪೇಟದ ಮೇಲೆ ರಾಷ್ಟ್ರೀಯ ಸಂಸ್ಥೆ ಒದಗಿಸುವ ತೋಳದ ಚಿಹ್ನೆ ಇರಬೇಕು.

(iv) **ಕಂಠವಸ್ತ್ರ (ಸ್ಕಾರ್ಫ್)**: ಗ್ರೂಪ್ ಬಣ್ಣದ ಮತ್ತು ಮಾದರಿಯ ತ್ರಿಕೋಣಾಕಾರದ ಕಂಠವಸ್ತ್ರವನ್ನು, ಕತ್ತಿನ ಸುತ್ತಲೂ, ಭುಜಪಟ್ಟಿಗಳ ಮೇಲೆ ಬರುವಂತೆ ಧರಿಸಬೇಕು. ಕಂಠವಸ್ತ್ರವು ಹಸಿರು, ನೇರಳೆ ಮತ್ತು ಹಳದಿ ಬಣ್ಣಗಳಲ್ಲಿ ಇರಬಾರದು. ಸ್ಥಳೀಯ ಜಿಲ್ಲಾ ಸಂಸ್ಥೆಯವರಿಂದ ಅನುಮೋದಿತ ಆಗಿರಬೇಕು. ಗಿಲ್‌ವೆಲ್ ಕಂಠವಸ್ತ್ರದ ಉಂಗುರ (ವಾಗಲ್) ವಿನಃ ಬೇರೆ ಕಂಠವಸ್ತ್ರದ ಉಂಗುರ ಧರಿಸಬಹುದು. ಕಂಠವಸ್ತ್ರದ ಎರಡು ಪಕ್ಕಗಳ ಉದ್ದ ಒಂದೊಂದೂ ಕನಿಷ್ಠ 70 ಸೆಂ.ಮೀ. ಪರಮಾವಧಿ 80 ಸೆಂ.ಮೀ. ಇರತಕ್ಕದ್ದು.

(v) **ನಡುಪಟ್ಟಿ (ಬೆಲ್ಟ್)**: ರಾಷ್ಟ್ರೀಯ ಸಂಸ್ಥೆ ಒದಗಿಸಿರುವ, "ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್" ಬಕಲ್ ಉಳ್ಳ ಬೂದು ಬಣ್ಣದ ನವಾರು ಪಟ್ಟಿಯ ಬೆಲ್ಟ್.

(vi) ಭುಜಪಟ್ಟಿಕೆ (ಷೋಲ್ಡರ್ ಪ್ಯಾಚ್): ಷಟ್ಕದ ಬಣ್ಣದ, ತಳ 4 ಸೆಂ.ಮೀ. ಇರುವ, ಸಮಭುಜ ತ್ರಿಕೋಣಾಕಾರದ ವಸ್ತ್ರದ ಚೂರು. ಎಡತೋಳಿನ ಮೇಲೆ, ಭುಜದ ಹೊಲಿಗೆಯ ಕೆಳಗೆ, ತುದಿಯು ಮೇಲಿರುವಂತೆ, ಇದನ್ನು ಹೊಲಿದಿರಬೇಕು.

(vii) **ಭುಜ ಪದಕ (ಷೋಲ್ಡರ್ ಬ್ಯಾಡ್ಜ್)**: ಆರರಿಂದ ಎಂಟು ಸೆಂ.ಮೀ. ಉದ್ದ, ಒಂದೂವರೆ ಸೆಂ.ಮೀ. ಅಗಲವಿರುವ ಬಿಳಿಯೊಡಲಿನ ಮೇಲೆ ಕೆಂಪು ಅಕ್ಷರಗಳಲ್ಲಿ ಗ್ರೂಪ್ ಹೆಸರಿರುವ, ಭುಜ ಪದಕವನ್ನು ಎರಡೂ ಭುಜಗಳ ಮೇಲೆ, ಭುಜಗಳ ಹೊಲಿಗೆಯ ಕೆಳಗೆ ಧರಿಸತಕ್ಕದ್ದು.

(viii) **ಸದಸ್ಯತ್ವದ ಪದಕ (ಮೆಂಬರ್‌ಷಿಪ್ ಬ್ಯಾಡ್ಜ್)**: ನೀಲಿ ಒಡಲಿನ ಮೇಲೆ ಹಳದಿಯ ತ್ರಿದಳ ಕಮಲದೊಳಗೆ, ಗೈಡ್ ತ್ರಿದಳಪತ್ರ ಮತ್ತು ಮಧ್ಯೆ ಅಶೋಕ ಚಕ್ರವಿರುವ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನವಿರುವ ಬಟ್ಟೆಯ ಪದಕವನ್ನು ಎಡ ಜೇಬಿನ ಮಧ್ಯೆ ಅಥವಾ ಜರ್ಸಿಯ ಎಡಭಾಗದಲ್ಲಿ ಧರಿಸತಕ್ಕದ್ದು.

(ix) **ವಿಶ್ವಸ್ಕೌಟ್ ಪದಕ**: ಸಮವಸ್ತ್ರದ ಷರ್ಟಿನ ಬಲ ಜೇಬಿನ ಮೇಲೆ ಧರಿಸಬಹುದು.

(x) **ಉದ್ದನೆಯ ಕಾಲುಚೀಲಗಳು**: ಕರಿಯ ಬಣ್ಣದ್ದು. ಮೊಳಕಾಲ ಕೆಳಗೆ ಮಡಿಸಿದ್ದು, ಕಟ್ಟಿರುವ ದಾರಗಳ (ಗಾರ್ಟರ್ ಟ್ಯಾಬ್ಸ್) ನೀಲಿಯ ಚುಂಗು, ಒಂದೂವರೆ ಸೆಂ.ಮೀ. ಕಾಣುತ್ತಿರಬೇಕು.

(xi) **ಪಾದರಕ್ಷೆ**: ಕಪ್ಪು ಬಣ್ಣದ ಲೇಸ್ ಇರುವ ಷೂಗಳನ್ನು ಧರಿಸಬಹುದು.

(xii) **ಮೇಲಂಗಿ, ಮ್ಯಾಕಿಂಟೋಷ್ ಬ್ಲೇಸರ್ ಅಥವಾ ಜಾಕೆಟ್**: ಕಡುನೀಲಿ ಬಣ್ಣದ್ದನ್ನು ಧರಿಸಬಹುದು.

(xiii) **ಲೋಹದ ಪದಕ**: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಲೋಹದ ಪದಕವನ್ನು, ಸಾದಾ ಉಡುಪಿನ ಮೇಲೆ ಧರಿಸಬಹುದು.

(xiv) **ನಾಮಪಟ್ಟಿ** : ರಾಷ್ಟ್ರೀಯ ಸಂಸ್ಥೆಯವರು ಸರಬರಾಜು ಮಾಡಿದ 'The Bharat Scouts & Guides' ಎಂಬ ನಾಮಪಟ್ಟಿಯನ್ನು ಷರ್ಟಿನ ಬಲ ಜೇಬಿನ ಮೇಲ್ಭಾಗದಲ್ಲಿ ಧರಿಸತಕ್ಕದ್ದು.

(xv) **ಐಚ್ಛಿಕ ತೊಡಿಗೆ**: ಆಟಪಾಠಗಳ ವೇಳೆಯಲ್ಲಿ, ಕಡುನೀಲಿ ಬಣ್ಣದ ಜೀನ್ಸ್/ಟ್ರೌಜರ್ಸ್/ನಿಕ್ಕರ್; ಕಡುನೀಲಿ ಬಣ್ಣದ ಕಾಲರ್ ಇರುವ ಟೀಷರ್ಟ್ (ಟೀ ಷರ್ಟ್ ಜೇಬಿನ ಮೇಲೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನ ಇರಬೇಕು.) ಕಡು ನೀಲಿ ಬಣ್ಣದ 'ಪಿ' ಕ್ಯಾಪ್ (ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನ ಇರಬೇಕು.) ಜೊತೆಗೆ ಕರಿಯ ಸ್ಪೋರ್ಟ್ಸ್ ಷೂಸ್ ಧರಿಸಬಹುದು.

ಸೂಚನೆ : ಸಮವಸ್ತ್ರದಲ್ಲಿ 'ಪಿ' ಕ್ಯಾಪ್ ಧರಿಸುವಂತಿಲ್ಲ.

ಪದಕಗಳು

(ನಿಯಮ 9, 11, 12, 13, 14 ಮತ್ತು 15 ಅಧ್ಯಾಯ 1, ಎ.ಪಿ.ಆರ್.ಓ॥)

(ಅ) **ಸದಸ್ಯತ್ವದ ಪದಕ**: ಈಗಾಗಲೇ ವಿವರಿಸಲಾಗಿದೆ.

(ಆ) **ಪ್ರಗತಿ ಪದಕಗಳು**: ಬಲಜೇಬಿನ ಮೇಲುಗಡೆ, ತೆರೆಪಟ್ಟಿಯ (ಫ್ಲಾಪ್) ಹೊಲಿಗೆಯ ಅಂಚನ್ನು ಮುಟ್ಟುವಂತೆ ಧರಿಸಬೇಕು. ಜರ್ಸಿಯ ಮೇಲೆ ಅದೇ ಸ್ಥಳದಲ್ಲಿರಬೇಕು.

(ಇ) **ಪ್ರವೀಣತಾ ಪದಕಗಳು**: ಬಲತೋಳಿನ ಮೇಲೆ, ಸಮಾನಾಂತರ ಸಾಲುಗಳಲ್ಲಿ ಧರಿಸತಕ್ಕದ್ದು.

ತೋಳು ಪಟ್ಟಿಗಳು

(1) ಸಹಾಯಕನು ಧರಿಸುವ ತೋಳು ಪಟ್ಟಿಯಲ್ಲಿ 1 ಸೆಂ.ಮೀ. ಅಗಲದ ನೀಲಿಯ ಉಲ್ಲನ್ ಅಥವಾ ಹತ್ತಿಯ ಬಟ್ಟೆಯ ತೋಳುಬಂದಿ ಇರುತ್ತದೆ.

(2) ಆರಾಳಿಯು ಧರಿಸುವ ತೋಳುಬಂದಿ 2 ಸೆಂ.ಮೀ. ದೂರದಲ್ಲಿ, ಮೇಲಿನಂತೆ 2 ಪಟ್ಟಿಗಳಿರುತ್ತವೆ.

(3) ಹಿರಿಯ ಆರಾಳಿಯು ಧರಿಸುವ ತೋಳುಬಂದಿಯಲ್ಲಿ, ಮೇಲಿನಂತೆ 3 ಪಟ್ಟಿಗಳಿರುತ್ತವೆ.

ತೋಳುಬಂದಿಯು ಷರ್ಟಿನ ಬಣ್ಣದ್ದಾಗಿರಬೇಕು. ಎಡತೋಳಿನ ಮೇಲೆ ಭುಜಕ್ಕೂ, ಮೊಳಕೈಗೂ ಮಧ್ಯೆ ಇದನ್ನು ಧರಿಸಲಾಗುವುದು.

ಮೇಲೆ ಹೇಳಿರುವ ಎಲ್ಲಾ ಪದಕಗಳು, ಲಾಂಛನಗಳನ್ನೂ, ಸಮವಸ್ತ್ರದ ಮೇಲೆ ಧರಿಸಬೇಕು. ಸಾಮಾನ್ಯ ಉಡುಪಿನಲ್ಲಿದ್ದಾಗ, ಮರಿಗಳು ಯಾವುದೇ ದರ್ಜೆಯವ

ರಾಗಲಿ, ಲೋಹದ ಪದಕವನ್ನು ಮಾತ್ರ ಧರಿಸಬೇಕು; ಬೇರೆ ಯಾವ ಪದಕಗಳನ್ನೂ ಧರಿಸುವಂತಿಲ್ಲ.

ಮರಿಗಳೂ ಸಹಾ ಸೇವಾ ನಕ್ಷತ್ರಗಳನ್ನು ಧರಿಸಬಹುದು. ಅವುಗಳ ಬಗ್ಗೆ ಹೇಳುವಾಗ ವಿವರಗಳನ್ನು ನೀಡಲಾಗಿದೆ.

ಮರಿಗಳು ಸರಿಯಾದ, ಸಂಪೂರ್ಣವಾದ ಸಮವಸ್ತ್ರವನ್ನೂ, ಅದರದರ ಜಾಗಗಳಲ್ಲಿ ಪದಕಗಳನ್ನೂ, ಉಚಿತ ರೀತಿಯಲ್ಲಿ ಧರಿಸಲು, ಮೊದಲಿನಿಂದಲೂ ಶಿಕ್ಷಣ ಕೊಡಬೇಕು. ಸಮವಸ್ತ್ರದ ಬಗ್ಗೆ ಸೂಕ್ತ ಎಚ್ಚರಿಕೆ ಮತ್ತು ಶ್ರದ್ಧೆ ವಹಿಸಲು ಕಲಿಸಬೇಕು.

ಸಮವಸ್ತ್ರ ಧರಿಸಿ, ಹಿಂಡಿನ ಸಭೆಗಳನ್ನು ನಡೆಸಿದಾಗ, ಕಬ್‌ಮಾಸ್ಟರು ಸಮವಸ್ತ್ರದ ತನಿಖೆ ನಡೆಸುವುದು, ಅಂತಹ ಸಭೆಗಳ ಕಾರ್ಯಕ್ರಮದ ಅಂಗವಾಗಿರಬೇಕು.

ಕಬ್‌ಮಾಸ್ಟರು, ಸಹಾಯಕ ಕಬ್‌ಮಾಸ್ಟರುಗಳು, ಎಲ್ಲಾ ವೇಳೆಗಳಲ್ಲಿಯೂ ಸರಿಯಾದ ರೀತಿಯಲ್ಲಿ ಸಮವಸ್ತ್ರ ಧರಿಸಬೇಕಾದ ಔಚಿತ್ಯವನ್ನು ಮತ್ತೆ ಇಲ್ಲಿ ಒತ್ತಿ ಹೇಳಬೇಕಾಗಿಲ್ಲ. ಅವರು ಮಾದರಿಯಾಗಿದ್ದು, ತೋರಿಸುವ ರೀತಿ, ನೀಡುವ ಪ್ರೋತ್ಸಾಹ, ಮತ್ತು ಸಮವಸ್ತ್ರದ ಬಗ್ಗೆ ಹೊಂದಿರುವ ಹೆಮ್ಮೆಯ ಭಾವನೆ, ಇವುಗಳಿಂದ ಮರಿಗಳು ಸಾಕಷ್ಟು ಪ್ರಭಾವಿತರಾಗುತ್ತಾರೆ.

ಕಬ್‌ಮಾಸ್ಟರು ಮತ್ತು ಸಹಾಯಕ ಕಬ್‌ಮಾಸ್ಟರು, ಎ.ಪಿ.ಆರ್.ಓ.II, ಅಧ್ಯಾಯ-1 ನಿಯಮ 5ರಲ್ಲಿ ಹೇಳಿರುವಂತೆ ಸಮವಸ್ತ್ರವನ್ನು ಧರಿಸಬೇಕು. ಹಸಿರು ಬಣ್ಣದ ಸದಸ್ಯತ್ವ ಪದಕವು ಅದರಲ್ಲಿ ಬರುತ್ತದೆ. ಗುಂಪು/ಹಿಂಡಿನೊಡನಿದ್ದಾಗ, ಅದರ ಬಣ್ಣ, ನಮೂನೆಯ ಸ್ಕಾರ್ಫನ್ನು ಧರಿಸಬೇಕು. ಇತರೇ ಸಂದರ್ಭಗಳಲ್ಲಿ ಪಡೆದಿದ್ದರೆ, ಹಿಮಾಲಯ ವುಡ್‌ಬ್ಯಾಡ್ಜ್ ಸ್ಕಾರ್ಫನ್ನು ಧರಿಸಬಹುದು. ಹಿಮಾಲಯ ವುಡ್‌ಬ್ಯಾಡ್ಜನ್ನು (ಮಣಿಗಳು) ಎಲ್ಲಾ ವೇಳೆಗಳಲ್ಲಿಯೂ (ಸಮವಸ್ತ್ರದಲ್ಲಿದ್ದಾಗ) ಧರಿಸಬಹುದು.

ದರ್ಜೆಯ ಪದಕಗಳನ್ನು ಸಮವಸ್ತ್ರದ ಮೇಲೆ ಧರಿಸಬೇಕು. ಕಬ್‌ಮಾಸ್ಟರು ನೀಲಿ ಒಡಲಿನ, ನೀಲಿ ಅಂಚಿನ ಪದಕವನ್ನೂ, ಸಹಾಯಕ ಕಬ್‌ಮಾಸ್ಟರು ನೀಲಿ ಒಡಲಿನ ಕೆಂಪು ಅಂಚಿನ ಪದಕವನ್ನೂ ಧರಿಸಬೇಕು.

ಪುರುಷರು ಎಡ ಜೇಬಿನ ಮೇಲೆ, 4 ಸೆಂ.ಮೀ. ದೂರದಲ್ಲಿ ದರ್ಜೆಯ ಪದಕವನ್ನು ಧರಿಸಬೇಕು. ಸೇವಾ ನಕ್ಷತ್ರಗಳನ್ನು ಧರಿಸುವುದಾದರೆ, ಅದರ ಮೇಲ್ಭಾಗದಲ್ಲಿ ಇರಬೇಕು.

ಮಹಿಳೆಯರು ಓವರಾಲ್, ಸಲ್ವಾರ್ ಕಮೀಜ್ ಅಥವಾ ಸ್ಕರ್ಟ್ ಮತ್ತು ಬ್ಲೌಸ್ ಆದರೆ ಬಲ ಜೇಬು ಅಥವಾ ಸೀರೆಯಿಂದ ಮುಚ್ಚಲ್ಪಡದ ಭಾಗದಲ್ಲಿ ಧರಿಸಬೇಕು.

◆

ಅಧ್ಯಾಯ-8

ಹಿಂಡಿನ ವಾತಾವರಣ

ಹಿಂಡಿನಲ್ಲಿ ಸುಖೀ ಕುಟುಂಬದ ವಾತಾವರಣವನ್ನು ಸೃಷ್ಟಿಸುವುದಾದಲ್ಲಿ ಅದು ಸೂಕ್ತವೂ, ಆದರ್ಶಕರವೂ ಆಗಿರುತ್ತದೆ. ಅದನ್ನು ಸಾಧಿಸುವುದು ಗುರಿ ಆಗಬೇಕು. ಕಬ್‌ಮಾಸ್ಟರು ಮತ್ತು ಸಹಾಯಕ ಕಬ್‌ಮಾಸ್ಟರು ಅದರ ಹಿರಿಯ ಸದಸ್ಯರು. ಅವರ ವಯಸ್ಸು ಮತ್ತು ಅನುಭವಗಳಿಂದ ಹಿಂಡನ್ನು ಗುರಿ ಸಾಧನೆಯತ್ತ ಕರೆದೊಯ್ಯಲು ಸಾಮರ್ಥ್ಯವುಳ್ಳವರಾಗಿರುತ್ತಾರೆ. ಮರಿಗಳ ವಿಷಯದಲ್ಲಿ ಹೇಳುವುದಾದರೆ, ಅವರಲ್ಲಿ ಕೆಲವರು ಹಿಂಡಿನಲ್ಲಿ ಹೆಚ್ಚು ಕಾಲ ಸೇವೆ ಸಲ್ಲಿಸಿರುತ್ತಾರೆ. ಆದ್ದರಿಂದ ಅವರಿಗೆ ಹಿಂಡಿನ ಸಂಪ್ರದಾಯ ಮತ್ತು ಹಿನ್ನೆಲೆಗಳ ಬಗ್ಗೆ ಹೆಚ್ಚು ತಿಳುವಳಿಕೆಯಿರುತ್ತದೆ. ಒಟ್ಟಿನಲ್ಲಿ ಎಲ್ಲರೂ ಹಿಂಡಿನ ಹೆಸರನ್ನು ಕಾಪಾಡಲು ಕೆಲಸ ಮಾಡುವವರಾಗಿರುತ್ತಾರೆ. ಹಿಂಡು ಸಮರ್ಥ ಹಾಗೂ ಅದ್ವಿತೀಯವಾಗಬೇಕೆಂಬ ಹಂಬಲ ಉಳ್ಳವರಾಗಿರುತ್ತಾರೆ. ಪ್ರತಿ ಮರಿಯೂ ಹೊಸಬನಾಗಲೀ, ಹಳಬನಾಗಲೀ, ಪ್ರತಿಜ್ಞೆ ಮತ್ತು ನಿಯಮಗಳಂತೆ ನಡೆದುಕೊಳ್ಳಲು ಸತತ ಪ್ರಯತ್ನ ನಡೆಸಿರುತ್ತಾರೆ. ಕಬ್‌ಮಾಸ್ಟರು ಮತ್ತು ಸಹಾಯಕ ಕಬ್‌ಮಾಸ್ಟರುಗಳು ನೀಡುವ ಸ್ನೇಹಯುತ ಮಾರ್ಗದರ್ಶನದಲ್ಲಿ ಹಂತಹಂತವಾಗಿ ಮೇಲೇರಲೂ ದಿನದಿನಕ್ಕೆ ಉತ್ತಮ ವ್ಯಕ್ತಿಯಾಗಿ, ಹೆಚ್ಚು ಹೆಚ್ಚು ಸಮರ್ಥರಾಗಲೂ, ಮರಿಗಳು ಪ್ರಯತ್ನಿಸುತ್ತಿರುತ್ತಾರೆ. ಹಿಂಡಿನ ಜೀವನದಲ್ಲಿ ಪರಸ್ಪರ ಸಹಾನುಭೂತಿ ಮತ್ತು ಪ್ರೀತಿ, ವಾತ್ಸಲ್ಯಗಳು ಹಾಸು ಹೊಕ್ಕಾಗಿರುತ್ತವೆ. "ಇತರರಿಗಾಗಿ ತಾನು, ಮತ್ತು ತನಗಾಗಿ ಇತರರು" ಎಂಬುದು ವ್ಯಾವಹಾರಿಕ ತತ್ತ್ವವಾಗಿರುತ್ತದೆ.

ಹಿಂಡಿನ ಕಾರ್ಯಕ್ರಮಗಳು ಉಲ್ಲಾಸಭರಿತವಾಗಿರುತ್ತವೆ. ಹಿಂಡಿನ ಸಭೆಗಳ ಹುರಿದುಂಬಿಸುವ ಹೊಸ ತರದ ಕಾರ್ಯಕ್ರಮಗಳು, ಹಿಂಡಿನ ಜೀವನದಲ್ಲಿ ಗೆಲುವನ್ನು ತರುತ್ತವೆ. ಮರಿಗಳು ಪ್ರತಿ ವಾರವೂ, ಉತ್ಸಾಹದಿಂದ ಆ ಕಾರ್ಯಕ್ರಮಗಳಿಗಾಗಿ ಎದುರು ಕಾಯುತ್ತಾರೆ. ತಮ್ಮ ಕೈಲಿಲ್ಲದಿದ್ದರೆ ಬಿಟ್ಟು, ತಪ್ಪಿಸಿಕೊಳ್ಳಲಿಚ್ಛಿಸುವುದಿಲ್ಲ. ಅಕೇಲರೊಡನೆ (ಕಬ್‌ಮಾಸ್ಟರನ್ನು ಅವರು ಪ್ರೀತಿಯಿಂದ ಕರೆಯುವ ಹೆಸರು) ವಾರಕ್ಕೊಮ್ಮೆ ಇಲ್ಲವೇ ಎರಡು ಬಾರಿ ಸ್ವಲ್ಪ ಕಾಲ ಕಳೆಯುತ್ತಾರೆ. ಆ ಒಂದು, ಒಂದೂವರೆ ಗಂಟೆ ಸಮಯ ಅವರ ಜೀವನದಲ್ಲಿ ಸುಖಾನುಭವದಿಂದ ಕೂಡಿರುತ್ತದೆ.

ಕಬ್‌ಮಾಸ್ಟರು ಮರಿಗಳ ಬಗ್ಗೆ ನಿಷ್ಕಪಟವಾದ ಪ್ರೇಮ ಮತ್ತು ವಾತ್ಸಲ್ಯಪೂರಿತ ಮಾರ್ಗದರ್ಶನವನ್ನು, ಶ್ರದ್ಧೆ ಮತ್ತು ಜಾಣ್ಮೆಗಳಿಂದ ನೀಡುವುದರ ಮೂಲಕ ಮರಿಗಳು ಅವರ ಬಗ್ಗೆ ಗೌರವ ಮತ್ತು ವಿಶ್ವಾಸವನ್ನುಳ್ಳವರಾಗಿರುತ್ತಾರೆ.

ಅದೇ ರೀತಿ ಕಬ್‌ಮಾಸ್ಟರಿಗೆ ಎಲ್ಲ ರೀತಿಯಲ್ಲಿಯೂ ಸಹಾಯಕರಾಗಿ ಹಿಂಡಿನ ಜೀವನದ ಒಳಿತಿಗಾಗಿ ಶ್ರಮಿಸುವ ಸಹಾಯಕ ಕಬ್‌ಮಾಸ್ಟರ ಬಗ್ಗೆಯೂ, ಪ್ರೀತಿ ವಿಶ್ವಾಸಗಳನ್ನಿಟ್ಟಿರುತ್ತಾರೆ. ಕಬ್‌ಮಾಸ್ಟರ ದೃಷ್ಟಿಯಲ್ಲಿ, ಮರಿಗಳು, ತನ್ನ ಮತ್ತು ಸಹಾಯಕ ಕಬ್‌ಮಾಸ್ಟರುಗಳ ಸಹಾಯ ಮತ್ತು ಜಾಣ್ಮೆಯ ಮಾರ್ಗದರ್ಶನದಲ್ಲಿ, ಹೆಚ್ಚು ಸಮರ್ಥ ಮರಿಗಳಾಗಲು ಪ್ರಯತ್ನಿಸುತ್ತಿರುವ, ಸುಖೀ ಕುಟುಂಬದಂತಿರುವ, ಹಿಂಡಿನ ಸದಸ್ಯರಾಗಿರುತ್ತಾರೆ. **ಸಂಸ್ಥೆಯ ಸಂಸ್ಥಾಪಕರಾದ ಬಿ.ಪಿ.ರವರು, ಪ್ರತಿ ಹಿಂಡಿನಲ್ಲಿಯೂ ಸುಖೀ ಕುಟುಂಬದ ವಾತಾವರಣವಿರುವುದು ಆದರ್ಶವಾಗಿರಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ.** ಪ್ರತಿ ಕಬ್‌ಮಾಸ್ಟರೂ ಈ ಆದರ್ಶವನ್ನೂ ಸಹ ಗಮನದಲ್ಲಿಟ್ಟುಕೊಂಡು, ಹಿಂಡಿನ ಕಾರ್ಯಕ್ರಮಗಳನ್ನು ನಿರ್ವಹಿಸಬೇಕಾಗುತ್ತದೆ.

ಇಲ್ಲಿಯವರೆಗೆ ಹೇಳಿದ ಸುಖೀಕುಟುಂಬದ ವಾತಾವರಣದ ಜೊತೆಗೆ, ಸರ್ ರಡ್ಯಾರ್ಡ್ ಕಿಪ್ಲಿಂಗ್‌ರವರ ಜಂಗಲ್‌ಬುಕ್‌ನಲ್ಲಿ ನಿರೂಪಿಸಿರುವ ಮೌಗ್ಲಿ ಕಥೆಗಳ ಹಿನ್ನೆಲೆಯಾಗಿರುವ ಕಾಡಿನ ವಾತಾವರಣವನ್ನು ಸಾಧ್ಯವಾದಷ್ಟು ಮಟ್ಟಿಗೆ ಹಿಂಡಿನ ಚಟುವಟಿಕೆಗಳಲ್ಲಿ ಉಂಟುಮಾಡುವುದಾದರೆ ಬಹಳ ಒಳ್ಳೆಯದು. ಸಂಸ್ಥಾಪಕರು ಕಬ್ ಶಿಕ್ಷಣವನ್ನು ಯೋಜಿಸಿದಾಗ ಕಾಡಿನ ಕಥೆಗಳು, ಮರಿಗಳ ಶಿಕ್ಷಣಕ್ಕೆ ಸಹಾಯಕ ಹಿನ್ನೆಲೆಯಾಗುವುದೆಂದು, ಅಭಿಪ್ರಾಯಪಟ್ಟರಲ್ಲದೆ, ಅದರಲ್ಲಿ ಬರುವ ಕಾಡಿನ ವಾತಾವರಣವು, ಮರಿಗಳ ಹಿಂಡಿನಲ್ಲಿಯೂ ಇರುವ ಸಾಧ್ಯತೆಯನ್ನು ಕಲ್ಪಿಸಿಕೊಂಡರು.

ಈ ಕಥೆಯನ್ನು ಕಾಲ್ಪನಿಕವಾಗಿಯೂ, ಸೂಕ್ಷ್ಮವಾಗಿಯೂ ಕಬ್‌ಮಾಸ್ಟರು ಉಪಯೋಗಿಸಿಕೊಳ್ಳಬಹುದಾದರೆ, ಬಹಳಷ್ಟು ರೀತಿಯಲ್ಲಿ ಅದರ ಉಪಯುಕ್ತತೆಯು ತಿಳಿದು ಬರುತ್ತದೆ. ಮರಿಗಳು ಹಿಂಡಿನಲ್ಲಿ ಪಡೆಯಬಹುದಾದ ಅನುಭವಗಳಿಗೆ ಬಹಳ ಸಹಾಯಕವಾಗುತ್ತದೆ. ಅವರ ಸಹಜ ಪ್ರವೃತ್ತಿಗಳಾದ, ಕಲ್ಪನಾಶಕ್ತಿ ಮತ್ತು ಸಾಹಸಗಳಿಗೆ ಸಾಕಷ್ಟು ಇಂಬುಗೊಡುವುದಷ್ಟೇ ಅಲ್ಲದೆ, ಮರಿಗಳ ಕುತೂಹಲವನ್ನು ಕೆರಳಿಸುತ್ತದೆ. ಅವರನ್ನು ಆಸಕ್ತಿಯುತರನ್ನಾಗಿ ಮಾಡುತ್ತದೆ. ಅವರ ಅರಿವಿಲ್ಲದೆ ಅವರ ವಿವೇಚನಾ ಶಕ್ತಿಯನ್ನು ವೃದ್ಧಿಪಡಿಸುತ್ತದೆ. ಈ ರೀತಿಯಲ್ಲಿ ಅವರಿಗೆ ಸ್ಫೂರ್ತಿದಾಯಕವಾಗಿರುತ್ತದೆ.

ಮರಿಯು ಕಾಡಿನ ಕಥೆಯಲ್ಲಿ ಮಗ್ನನಾದಂತೆ, ತನ್ನನ್ನು ತಾನು ಮೌಗ್ಲಿಯ ಸ್ಥಾನದಲ್ಲಿ ಕಲ್ಪಿಸಿಕೊಂಡು, ತಾನು ಕೆಟ್ಟ ಚಾಳಿಗಳ ವಿರುದ್ಧವಾಗಿ ಹೋರಾಡುತ್ತಿರುವಂತೆ

ಭಾವಿಸಿಕೊಳ್ಳುತ್ತಾನೆ. ಹೊಸ ವಿಷಯಗಳನ್ನು ತಿಳಿದುಕೊಂಡು ಅವುಗಳಲ್ಲಿ ನಿಪುಣನಾಗಿ, ಹಿಂಡಿನಲ್ಲಿಯೂ ತದನಂತರ ಕಾಡಿನಲ್ಲಿಯೂ (ಸಮಾಜಕ್ಕೆ ಇನ್ನೊಂದು ಹೆಸರು) ಉತ್ತಮ ಜೀವನವನ್ನು ನಡೆಸಲು ತಯಾರಿ ಪಡೆಯುತ್ತಾನೆ.

ಕಾಡಿನ ಕಥೆಗಳು ಸಹಜವಾಗಿ ಕಾಡಿನ ಕುಣಿತಗಳಿಗೆ (ಈಗ ಇವನ್ನು ಕಾಡಿನ ಆಟಗಳೆಂದು ಕರೆಯುತ್ತಾರೆ.) ದಾರಿ ಮಾಡಿಕೊಡುತ್ತವೆ. ಈ ಕಾಡು ಆಟಗಳು, ಅವುಗಳಿಂದ ಕಲಿಯಬಹುದಾದ ಮೌಲ್ಯಗಳಾದ ನಿಷ್ಠೆ ಮತ್ತು ಹಿಂಡಿನ ಮನೋಭಾವನೆಗಳನ್ನು ಒತ್ತಿ ಹೇಳುತ್ತದೆ.

ಕಬ್‌ಮಾಸ್ಟರಿಗೆ 'ಅಕೇಲ', ಸಹಾಯಕ ಕಬ್‌ಮಾಸ್ಟರುಗಳಿಗೆ 'ಬಾಲು', 'ಬಘೀರ' ಮುಂತಾದ ಪದಗಳ ಬಳಕೆಯು, ಕಾಡಿನ ವಾತಾವರಣವನ್ನು ಮೂಡಿಸಿ ತನ್ನದೇ ಆದ ಮೌಲ್ಯಗಳನ್ನು ವೃದ್ಧಿಪಡಿಸುತ್ತದೆ. ಮರಿಗಳು, ಸ್ಕೌಟರುಗಳ ಮಧ್ಯೆ ಎಂದಿಗಿಂತ ಹೆಚ್ಚಿನ ಬಾಂಧವ್ಯ ಬೆಳೆಯುತ್ತದೆ. ಹಿಂಡಿಗೂ, ಹಿಂಡಿನಲ್ಲಿರುವ ಮರಿಗಳಿಗೂ, ಉದಾತ್ತ ಭಾವನೆಗಳೂ, ಚೈತನ್ಯವೂ ಮೂಡಿ ಬರುತ್ತದೆ.

ಮರಿಗಳ ಶಿಕ್ಷಣದಲ್ಲಿ ಕಾಡಿನ ವಾತಾವರಣವು, ಅತಿ ಪ್ರಭಾವಶಾಲಿಯಾದ ಮಾಧ್ಯಮವಾಗಿರುತ್ತದೆ. ಲಾರ್ಡ್ ಬೇಡನ್ ಪೊವೆಲ್ಲರ 'ವುಲ್ಫ್ ಕಬ್ಸ್ ಹ್ಯಾಂಡ್ ಬುಕ್' ಪುಸ್ತಕವು ಈ ಅಂಶವನ್ನು ವಿಶದವಾಗಿಯೂ ಮನವೊಪ್ಪುವ ರೀತಿಯಲ್ಲಿಯೂ ವರ್ಣಿಸುತ್ತದೆ.

◆

ಅಧ್ಯಾಯ-9

ಹಿಂಡಿನ ಜೀವನದಲ್ಲಿ ಉದಂತಗಳು ಮತ್ತು ಕಥೆಗಳು

ಹಿಂಡಿನ ಜೀವನದಲ್ಲಿ ಉದಂತಗಳು (Yarns) ಮತ್ತು ಕಥೆಗಳು ಸಹಜವಾಗಿ ಪ್ರಮುಖ ಭಾಗವಾಗಿರುತ್ತವೆ. ಇವುಗಳಿಲ್ಲದಿದ್ದರೆ ಹಿಂಡಿನ ಜೀವನವು ನಿಸ್ಸಾರವಾಗುತ್ತದೆ ಮತ್ತು ಅದರ ಮೌಲ್ಯಗಳು ಕುಂಠಿತಗೊಳ್ಳುತ್ತದೆ. ಪುಟ್ಟ ಬಾಲಕರಿಗೆ ಕಥೆಗಳು ಮತ್ತು ಉದಂತಗಳು ಬಹಳ ರಂಜಿಸುತ್ತವೆ. ಇದರ ಮೂಲಕ ಅವರ ಸಾಹಸ ಪ್ರವೃತ್ತಿಗೆ ಇಂಬು ದೊರಕುತ್ತದೆ. ಜ್ಞಾನದಾಹ ಹೆಚ್ಚುತ್ತದೆ. ಮಕ್ಕಳ ಅನುಭವ ಸಾಗರವು ತುಂಬುತ್ತದೆ. ಕಥೆಗಳಿಂದ ಅವರ ಮಹದಾಕಾಂಕ್ಷೆಗಳು ಪ್ರಚೋದಿತವಾಗಿ, ಉದಾತ್ತ ರೀತಿಯ ಮನೋಭಾವನೆಗಳಿಗೆ ಅವಕಾಶ ಮಾಡಿ ಕೊಡುತ್ತದೆ. ವೈಯಕ್ತಿಕವಾಗಿಯೂ, ಸಾಮಾಜಿಕವಾಗಿಯೂ, ಸೌಖ್ಯವಾಗಿರಲು ಅವಶ್ಯಕವಾದ ತಪ್ಪೊಪ್ಪುಗಳ ವಿಶ್ಲೇಷಣೆಯು ಬೇಕೇಬೇಕಾದ ಪಾರಮಾರ್ಥಿಕ ದೃಷ್ಟಿಯ ಬೆಳವಣಿಗೆಗೆ ಸಹಾಯಕವಾಗುತ್ತದೆ.

ಮರಿಗಳಿಗೆ ಕಥೆಗಳು ಮತ್ತು ಉದಂತಗಳನ್ನು ಹೇಳುವುದು ಕಬ್‌ಮಾಸ್ಟರ ಆದ್ಯ ಕರ್ತವ್ಯ. ಪ್ರತಿ ಹಿಂಡಿನ ಸಭೆಯಲ್ಲಿಯೂ, ಕಬ್‌ಮಾಸ್ಟರು ಕಥೆ ಇಲ್ಲವೆ ಉದಂತಗಳನ್ನು ಹೇಳಲೇಬೇಕು. ಆದಷ್ಟೂ ಕಥೆಗಳಿರಬೇಕು. ಯಾವಾಗಲಾದರೊಮ್ಮೆ ಉದಂತಗಳು ನಡೆದೀತು. ಎರಡರಲ್ಲೊಂದು ಇರಲೇಬೇಕು. ಇದೊಂದು ಪ್ರಮುಖ ಸೂತ್ರವೆಂದೇ ಹೇಳಬಹುದು. ಇದು ದಿನದ ಕಾರ್ಯಕ್ರಮದ ಅಂತ್ಯಭಾಗದಲ್ಲಿ ಬರುತ್ತದೆ. ವಿವೇಚನೆಯುಳ್ಳ ಕಬ್‌ಮಾಸ್ಟರು ಪ್ರತಿ ಹಿಂಡಿನ ಕಾರ್ಯಕ್ರಮದ ದಿನಗಳಲ್ಲಿ ಸೂಕ್ತ ಅವಕಾಶವನ್ನು ಕಲ್ಪಿಸುತ್ತಾರೆ. ಮರಿಗಳ ಕುತೂಹಲವನ್ನು ಕೆರಳಿಸಿ, ಅವರ ಮನಸ್ಸಿನಲ್ಲಿ ಮುಂದೇನೆಂಬ ಕಾತುರತೆಯನ್ನು ಉಂಟುಮಾಡುತ್ತಾರೆ. ಸಹಜವಾಗಿ ದಿನದ ಕಾರ್ಯಕಲಾಪಗಳು, ಆಟಗಳು ಮುಗಿದ ಬಳಿಕ, ಮರಿಗಳು ವಿಶ್ರಾಂತಿಗಾಗಿ ಕುಳಿತಾಗ, ದೇಹಕ್ಕೆ ವಿಶ್ರಾಂತಿಯು ದೊರೆತು, ಮನಸ್ಸು ಜಾಗೃತಗೊಳ್ಳುತ್ತದೆ. ಈ ಜಾಗೃತ ಮನಸ್ಸು ಕಥಾವಸ್ತುವನ್ನು ಹೀರಿಕೊಂಡು, ಶಾಶ್ವತ ಮೌಲ್ಯಗಳನ್ನು ಕಾದಿರಿಸಿಕೊಳ್ಳುತ್ತದೆ.

ಕಥೆಗಳೆಂದರೆ ಮಕ್ಕಳಿಗೆ ಬಹಳ ಆಸಕ್ತಿ. ಸಾಹಸಕ್ಕೆ ಸಂಬಂಧಿಸಿದ, ಸ್ವಾರಸ್ಯಕರವಾದ, ಸಂತೋಷವನ್ನುಂಟುಮಾಡುವ, ದೈವಚಿಂತನೆಗೆ ಅವಕಾಶ ಮಾಡಿಕೊಡುವ, ಜೀವನದಲ್ಲಿನ ನೈಜ ಉದಂತಗಳು, ಅವುಗಳಿಗೇ ಆದ ಕುತೂಹಲ, ವಿಸ್ಮಯಗಳನ್ನು, ಮೌಲ್ಯಗಳನ್ನು ಹೊಂದಿದ್ದು, ಮಕ್ಕಳ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ. ಆದಕಾರಣ

ಪ್ರತಿ ಕಬ್‌ಮಾಸ್ಟರೂ ಕಥೆಯನ್ನು ಹೇಳುವುದರಲ್ಲಿ ನಿಪುಣನಾಗಬೇಕು. ಸಹಾಯಕ ಕಬ್‌ಮಾಸ್ಟರುಗಳೂ ಈ ಕಲೆಯನ್ನು ಬೆಳೆಸಿಕೊಳ್ಳುವ ಉದ್ದೇಶದಿಂದ ಆಗಾಗ್ಗೆ ತಮ್ಮ ಕೌಶಲ ಪ್ರದರ್ಶನ ಮಾಡಬೇಕು.

ಕಥೆ ಹೇಳುವುದೊಂದು ಕಲೆ. ಹುಟ್ಟಿನಿಂದಲ್ಲದಿದ್ದರೂ, ಸತತವಾದ ಪ್ರಯತ್ನದಿಂದ ಇದು ಸಾಧ್ಯ. ಒಳ್ಳೆಯ ಕಥೆಯನ್ನು ಆರಿಸಿಕೊಳ್ಳುವುದು ಮೊದಲ ಹೆಜ್ಜೆ. ಆ ಬಳಿಕ ಅದನ್ನು ಮತ್ತೆ ಮತ್ತೆ ಓದಿ, ಮನನ ಮಾಡಿಕೊಂಡು, ಅದರಲ್ಲಿ ಬರುವ ಸನ್ನಿವೇಶಗಳು, ವ್ಯಕ್ತಿಗಳು ಮುಂತಾದ ಎಲ್ಲಾ ವಿಷಯಗಳನ್ನೂ ಕ್ರಮಬದ್ಧವಾಗಿ ತಿಳಿದುಕೊಳ್ಳಬೇಕು. ಮೂರನೆಯ ಹೆಜ್ಜೆ ಸ್ವಶಿಕ್ಷಣ. ಯಾರೂ ಇಲ್ಲದ ಕಡೆ ಎದುರಿಗೆ ಮಕ್ಕಳನ್ನು ಕಲ್ಪಿಸಿಕೊಂಡು, ತನಗೆ ತಾನೇ ಕಥೆಯನ್ನು ಎಲ್ಲರಿಗೂ (ಕಲ್ಪಿತ) ಕೇಳುವಂತೆ ಜೋರಾಗಿ ಹೇಳಬೇಕು. ಹಾಗೆ ಮಾಡಿದರೆ, ಅಲ್ಲಲ್ಲಿ ಮರೆತಿರಬಹುದಾದ ಸನ್ನಿವೇಶಗಳು, ಪಾತ್ರಗಳು ಇತ್ಯಾದಿ ಗಮನಕ್ಕೆ ಬಂದು, ಸರಿಪಡಿಸಿಕೊಳ್ಳಲು ಅವಕಾಶವಾಗುತ್ತದೆ. ಹೀಗೆ ಹೇಳಿಕೊಳ್ಳುವಾಗ ಒಂದು ಸಣ್ಣ ಚೀಟಿಯಲ್ಲಿ ವಿವರಗಳನ್ನು ಸಂಕ್ಷಿಪ್ತವಾಗಿ ಗುರುತು ಹಾಕಿಕೊಂಡಿರಬೇಕು. ಅವಶ್ಯಕತೆ ಬಿದ್ದರೆ ಉಪಯೋಗಿಸಿ ಕೊಳ್ಳಬಹುದು. ಹೀಗೆ ಒಂದೆರಡು ಬಾರಿ ಮಾಡಿದರೆ ಆತ್ಮವಿಶ್ವಾಸವು ಬೆಳೆಯುತ್ತದೆ. ಕಥಾವಸ್ತು ಸನ್ನಿವೇಶಗಳು. ಪಾತ್ರಗಳು ಎಲ್ಲವೂ ಕ್ರಮಬದ್ಧವಾಗಿ ನಿರೂಪಿಸಲ್ಪಟ್ಟು ಹೆಚ್ಚು ಪರಿಣಾಮಕಾರಿ ಯಾಗುತ್ತದೆ. ನಿರೂಪಣೆಗೆ ಉಪಯೋಗಿಸುವ ಭಾಷಾ ಶೈಲಿಯೂ, ವಿವರಣೆ ನೀಡುವ ರೀತಿಯೂ ಉತ್ತಮಗೊಳ್ಳುತ್ತದೆ. ಮರಿಗಳಿಗೆ ಕಥೆ ಹೇಳುವಾಗ ಸನ್ನಿವೇಶಕ್ಕೆ ತಕ್ಕಂತೆ, ಸೂಕ್ತ ಹಾವಭಾವಗಳು, ಮುಖಚರ್ಯೆ, ಧ್ವನಿಯ ಏರುಪೇರು, ಇವುಗಳು ಕಥೆಯ ಸ್ವಾರಸ್ಯವನ್ನು ಹೆಚ್ಚಿಸುತ್ತವೆ. ಈ ಭಾಗವನ್ನು ಕನ್ನಡಿಯ ಮುಂದೆ ನಿಂತು ಅಭ್ಯಾಸ ಮಾಡಿಕೊಳ್ಳಬಹುದು. ಕಥೆಯ ನಿರೂಪಣೆಯು ಮತ್ತಷ್ಟು ಪರಿಣಾಮಕಾರಿಯಾಗುವ ರೀತಿ ಮತ್ತು ಹೇಳುವ ವಿಧಾನವನ್ನು ಆರಿಸಿಕೊಳ್ಳಲು, ಈ ರೀತಿಯ ಅಭ್ಯಾಸವು ಸಹಾಯಕವಾಗುತ್ತದೆ. ಕಥೆಯ ನಿರೂಪಣೆಯು ಮೊದಲಿಗೆ ನಿಧಾನವಾಗಿದ್ದು, ಮುಂದುವರೆದಂತೆಲ್ಲಾ ತ್ವರಿತ ಗತಿಯಲ್ಲಿ ಚಲಿಸಿ, ಅದು ಪರಾಕಾಷ್ಠತೆಯನ್ನು ತಲುಪಿದಾಗ, ಇದ್ದಕ್ಕಿದ್ದಂತೆ ನಿಲ್ಲಬೇಕು.

ಇಷ್ಟು ವಿಸ್ತಾರವಾದ ಸಿದ್ಧತೆಯು, ಕತೆ ಹೇಳಲು ಪ್ರಾರಂಭಿಸಿದ, ಮೊದಲ ಕೆಲವು ಕಥೆಗಳ ವಿಷಯದಲ್ಲಿ ಮಾತ್ರ, ಬೇಕಾಗುತ್ತದೆ. ಕಥೆಗಳನ್ನು ಹೇಳುತ್ತಾ, ಅನುಭವವನ್ನು ಪಡೆಯುತ್ತಾ ಹೋದಂತೆಲ್ಲಾ, ಕಥೆ ಹೇಳುವುದು ಸುಲಭವಾಗಿ ಬಿಡುತ್ತದೆ.

ಕಥೆಗಳನ್ನು ಮಗಿಗಳ ದೃಷ್ಟಿಯಿಂದ ಮಾತ್ರ ಆರಿಸಿಕೊಳ್ಳಬೇಕು. ಅದು ಅವರ ಸಹಜವಾದ, ಆಸೆ ಆಕಾಂಕ್ಷೆಗಳನ್ನು ಪೂರೈಸಬೇಕು. ಅವರ ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳ ಬೆಳವಣಿಗೆಗೆ ಪೂರಕವಾಗಿರಬೇಕು. ತಪ್ಪೊಪ್ಪುಗಳ ಬಗ್ಗೆ ವಿವೇಚನೆ ಮತ್ತು ಯಾವ ದಾರಿ ಹಿಡಿದರೆ ಜೀವನದಲ್ಲಿ ಒಳ್ಳೆಯದಾಗುತ್ತದೆಯೆಂಬ ಬಗ್ಗೆ ಕಲ್ಪನೆಯು ಬರುವಂತಿರಬೇಕು. ನಮ್ಮ ದೇಶದ ಮಹಾ ಕಾವ್ಯಗಳು, ಈ ದಿಶೆಯಲ್ಲಿ ಸಾಕಷ್ಟು ಕಥೆಗಳನ್ನು ಒದಗಿಸುತ್ತವೆ. ಅದೇ ರೀತಿ ಪಂಚತಂತ್ರ ಮತ್ತು ಹಿತೋಪದೇಶ ಕಥೆಗಳೂ ಸಹ ಸಾವಿರಾರು ಜನಪದ ಕಥೆಗಳನ್ನು ಒದಗಿಸುತ್ತವೆ. ಇವು ನಮ್ಮ ದೇಶದ ಪ್ರತಿ ರಾಜ್ಯದಲ್ಲಿಯೂ ಪ್ರಚಲಿತವಾಗಿವೆ. ಜಾಣ್ಮೆಯುಳ್ಳ ಕಬ್‌ಮಾಸ್ತರು ಇವುಗಳನ್ನು ಲಾಭದಾಯಕವಾಗಿ, ಅಳವಡಿಸಿಕೊಳ್ಳುತ್ತಾರೆ.

ಯಾವುದೇ ಕಥೆಯನ್ನು ಆರಿಸಿಕೊಂಡರೂ, ಅದನ್ನು ನಿರೂಪಿಸುವ ರೀತಿಯಲ್ಲಿ ಅದರ ಸ್ವಾರಸ್ಯವು ಅಡಗಿರುತ್ತದೆ. ಮರಿಗಳಿಗೆ ಕಥೆ ಹೇಳುವಾಗ, ಕಬ್‌ಮಾಸ್ತರು ಸಾಕಷ್ಟು ಬಣ್ಣ ಹಚ್ಚಿ ಹೇಳಬೇಕು. ಕಣ್ಣಿಗೆ ಕಟ್ಟಿದಂತೆ ಹೇಳಬೇಕು. ಚಿತ್ರಗಳು, ಬೆಳಕು-ಕತ್ತಲೆ, ಅಳತೆ-ಆಕಾರ, ಪದಗಳು, ಧ್ವನಿಯ ಏರುಪೇರು ಇವೆಲ್ಲವೂ ಸೂಕ್ತ ರೀತಿಯಲ್ಲಿ, ಸೂಕ್ತ ಕಲ್ಪನೆ ಬರುವಂತಾಗಿ, ಕಥೆ ಹೇಳುವುದರಿಂದ ಕೇಳುವರಿಗೆ ಅದು ಮನೋರಂಜಕವೂ ಉಪಯುಕ್ತವೂ ಆದ ಅನುಭವವೆನಿಸುತ್ತದೆ. ಉದಾ: ಸಮುದ್ರಯಾನ ಮಾಡುವಾಗ, ಬಿರುಗಾಳಿಯೆಂದಿಟ್ಟುಕೊಳ್ಳೋಣ. ಆಗ ಕಥಾಕಾರನು ಬಿರುಗಾಳಿಗೆ ಓಲಾಡುತ್ತಾ, ಕೆದರಿದ ತಲೆಗೂದಲನ್ನು ಸರಿಪಡಿಸಿಕೊಳ್ಳುತ್ತಾ, ಎರಚಿದ ಸಮುದ್ರದ ಉಪ್ಪುನೀರನ್ನು, ತುಟಿಯ ಮೇಲೆ ಒರಸಿಕೊಳ್ಳುತ್ತಾ, ಕಥೆ ಹೇಳುವುದನ್ನು ಮುಂದುವರಿಸಿದರೆ, ಅದರ ಪರಿಣಾಮವೇ ಬೇರೆ! ಇನ್ನೊಂದು ಕಥೆಯಲ್ಲಿ ಅವನು ಕಾಡಿನ ಮಧ್ಯೆ ಇರುವನೆಂದುಕೊಳ್ಳೋಣ. ಆಗಿನ್ನೂ ಬೆಳಕು ಹರಿಯುತ್ತಿದೆ. ಆಗಿನ ಮಸುಕುಮಸುಕಾದ ಬೆಳಕು; ಅಖಂಡ ನೀರವತೆ; ಏಕಾಂಗಿತನ ಇವುಗಳನ್ನು, ಮರಿಗಳಿಗೆ ಕಣ್ಣು ಕಟ್ಟಿದಂತೆ ವರ್ಣಿಸಬಲ್ಲನಾದರೆ, ಅದೆಷ್ಟು ಪ್ರಭಾವ ಬೀರುತ್ತದೆ! ಕಥೆಯಲ್ಲಿನ ಪಾತ್ರಗಳನ್ನು ಅವುಗಳ ವ್ಯಕ್ತಿತ್ವವನ್ನೂ ಚಿತ್ರಿಸಬಲ್ಲನಾದರೆ, ವರ್ಣಿಸಬಲ್ಲನಾದರೆ, ಕೇಳುವವರ ಅನುಭವವೇ ಬೇರೆ. ಮನಃಪಟಲದ ಮೇಲೆ, ಚಿತ್ರಿಸಿಕೊಂಡು, ತನ್ನ ಅನುಭವಗಳನ್ನು ಪದ ಜಾಲದ ಮೂಲಕವೂ, ಅಂಗವಿನ್ಯಾಸದ ಮೂಲಕವೂ, ತೋರ್ಪಡಿಸಬೇಕು. ಆಗ ಅದು ಕೇಳುವವರ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ.

ಈ ರೀತಿಯಲ್ಲಿ ಕಥಾಕಾರನು ಕಥೆಯಲ್ಲಿನ ಸನ್ನಿವೇಶಗಳು ಮತ್ತು ಪಾತ್ರಗಳನ್ನು ಸಜೀವವಾಗಿ ಮುಂದಿಟ್ಟಾಗ, ಅದನ್ನು ಕೇಳುತ್ತಿರುವ ಮಕ್ಕಳು, ಅದೆಲ್ಲವನ್ನೂ ತಮ್ಮ ಸ್ಮರಣ ಪುಟಗಳಲ್ಲಿ ಶೇಖರಿಸಿಕೊಂಡು, ಅವಶ್ಯಕತೆ ಬಿದ್ದಾಗ, ತಮ್ಮ ನೆನಪು ಮತ್ತು

ಕಲ್ಪನೆಗಳಿಂದ ಅವುಗಳನ್ನು ಈಚೆಗೆ ತೆಗೆದು. ತಮ್ಮದೇ ಆದ ರೀತಿಯಲ್ಲಿ ಪುನರಾವರ್ತಿಸಿ. ಮತ್ತೆ ಮತ್ತೆ ಅನುಭವಿಸಿ. ತಾವೂ ಸಂತೋಷಪಟ್ಟು, ಇತರರಿಗೂ ಆ ಅನುಭವಗಳ ಸಂತೋಷವನ್ನು ಹಂಚಬಲ್ಲರು.

◆

ಅಧ್ಯಾಯ-10

ಮರಿಗಳಿಗೆ ನಾಟಕ ಕಲೆ

ನಾಟಕ ಕಲೆಯು ಮತ್ತೊಂದು ಪ್ರಮುಖವಾದ ಹಿಂಡಿನ ಕಾರ್ಯಕ್ರಮವಾಗಿದೆ. ಕಥೆ ಹೇಳುವುದರಷ್ಟೇ ಪರಿಣಾಮಕಾರಿಯಾದ ರೀತಿಯಲ್ಲಿ ಅದು ಮರಿಗಳ ಮನಸ್ಸನ್ನು ರಂಜಿಸುತ್ತದೆ. ನಾಟಕದ ಅಭಿನಯವೆಂದರೆ ಕಥೆ ಹೇಳುವುದೆಂದೇ ಹೇಳಬಹುದು. ಕಥೆಯ ಪದಜಾಲದ ಬದಲು ಪ್ರತಿ ಪಾತ್ರವನ್ನೂ ಅಭಿನಯಿಸಲಾಗುತ್ತದೆ. ಇದರಿಂದ ಮರಿಗಳು ಹೆಚ್ಚು ಸಂತೋಷಪಡುತ್ತಾರೆ. ಅಭಿನಯವು ಅವರ ಕಲ್ಪನಾ ಶಕ್ತಿಯನ್ನು ಪ್ರಚೋದಿಸುತ್ತದೆ. ಮನರಂಜನೆಯನ್ನೂ ನೀಡುತ್ತದೆ.

ಸಾಹಸಯುತ, ರಹಸ್ಯಯುತ, ಅಸಾಮಾನ್ಯ ವಿಷಯಗಳನ್ನು ತಿಳಿದುಕೊಳ್ಳಲೂ, ಅವುಗಳನ್ನು ಭೇದಿಸಲೂ, ಮರಿಗಳಲ್ಲಿ ಸುಪ್ತವಾದ ಬಯಕೆ ಇರುತ್ತದೆ. ನಾಟಕ ಕಲೆಯಲ್ಲಿ ಅವರಿಗೆ ಹೊಸ ಸಾಹಸಯುತ ಮತ್ತು ಮನಸೆಳೆಯುವ ಸಂಭ್ರಮಭರಿತ ಚಟುವಟಿಕೆಯು ದೊರಕುತ್ತದೆ. ತಮ್ಮ ಪಾತ್ರಗಳನ್ನು ನಿರ್ವಹಿಸುವಾಗ ಅವರು ಬಹಳ ನೈಜವಾಗಿ ಅಭಿನಯಿಸಲು ಪ್ರಯತ್ನಿಸುತ್ತಾರೆ. ಸುಮ್ಮನೆ ಕೇಳುವುದಕ್ಕಿಂತ, ಆ ಪಾತ್ರವನ್ನು ತಾವೇ ಅಭಿನಯಿಸಿ, ಅನುಭವಿಸುವುದರಲ್ಲಿ, ಅವರಿಗೆ ಹೆಚ್ಚು ಮನರಂಜನೆ ದೊರಕುತ್ತದೆ. ತಮ್ಮ ಪಾತ್ರಗಳನ್ನು ನಿರ್ವಹಿಸುವಾಗ ಅಭಿನಯಕ್ಕಿಂತಲೂ ಆ ಪಾತ್ರಕ್ಕೆ ತಕ್ಕ ತೊಡಿಗೆಗಳನ್ನು, ಅದೆಷ್ಟೇ ಸಾಮಾನ್ಯವಾದದ್ದಾಗಿರಲಿ, ಸಮಯಕ್ಕೆ ಅನುಗೊಳಿಸಿದ್ದಾದಲ್ಲಿ, ಅದರಲ್ಲಿ ಸಿಗುವ ಭಾವಪರವಶತೆ ಮತ್ತು ರೋಮಾಂಚಕಾರೀ ಅನುಭವಗಳು ಅಮೂಲ್ಯವಾದವುಗಳಾಗುತ್ತವೆ.

ನಾಟಕಾಭಿನಯವು ಮರಿಗಳಿಗೆ ಒಂದು ಸಾಹಸೀ ಚಟುವಟಿಕೆಯಾಗಿದೆ. ಇದರಲ್ಲಿ ಭಾಗವಹಿಸಲು ಅವರು ಬಹಳ ಇಷ್ಟಪಡುತ್ತಾರೆ. ಕಬ್‌ಮಾಸ್ಟರ ದೃಷ್ಟಿಯಲ್ಲಿ, ಇದರಿಂದ ಮಕ್ಕಳಿಗೆ ದೊರಕುವ ಉದ್ದೇಶ ಸಾಧನೆ ಮತ್ತು ಮೌಲ್ಯಗಳು ಮುಖ್ಯವಾದುದು. ಮರಿಗಳು ಅಭಿನಯಿಸುವಾಗ ಆ ಪಾತ್ರದಲ್ಲಿ ತಲ್ಲೀನರಾಗುತ್ತಾರೆ. ಇದರಿಂದ ಒಟ್ಟುಗೂಡಿ ಕೆಲಸ ಮಾಡುವ ಸಹಕಾರ ಮನೋಭಾವನೆ, ಶಿಸ್ತು, ಇವುಗಳಿಗೆ ಉತ್ತೇಜನ ಸಿಗುತ್ತದೆ. ಆರೋಗ್ಯಕರ ಕಲಾವಂತಿಕೆಯನ್ನು ಪ್ರಚೋದಿಸುತ್ತದೆ. ನಡೆ ನುಡಿಗಳು ಸರಿಯಾದ ರೀತಿಯಲ್ಲಿರುವಂತೆ ಸಹಾಯ ಮಾಡುತ್ತದೆ. ವಿನಯಶೀಲತೆ, ವ್ಯಕ್ತಿ ಪೂಜನೆ ಮುಂತಾದ ಸದ್ಗುಣಗಳ ಬೆಳವಣಿಗೆಗೆ ಉತ್ತೇಜನ ದೊರಕುತ್ತದೆ.

ನಾಟಕಾಭಿನಯವನ್ನು ಲಾಭದಾಯಕವಾಗಿ ಕರಕುಶಲತೆಗೆ ಜೋಡಿಸಿಕೊಳ್ಳ ಬಹುದು. ಸುಲಭ ರೀತಿಯಲ್ಲಿ ನಾಟಕದ ರಂಗಸ್ಥಳವನ್ನು ಸಜ್ಜುಗೊಳಿಸುವುದು; ವಿವಿಧ ಪಾತ್ರಗಳಿಗೆ ಬೇಕಾದ ಪೋಷಾಕುಗಳನ್ನು ತಯಾರಿಸುವುದು, ಮಗಿಗಳಿಗೆ, ಉತ್ಸಾಹ ಪೂರಿತ ಚಟುವಟಿಕೆಯಾಗಬಲ್ಲುದು. ಈ ಚಟುವಟಿಕೆಯಲ್ಲಿ ತೊಡಗಿದಾಗ ಅವರು ಪೂರ್ಣ ಉತ್ಸಾಹ, ಶ್ರದ್ಧೆ ಆಸಕ್ತಿಗಳಿಂದ ಭಾಗವಹಿಸುತ್ತಾರೆ.

ಜ್ಞಾಪಕದಲ್ಲಿಡಬೇಕಾದ ಇನ್ನೊಂದು ಮುಖ್ಯಾಂಶವೆಂದರೆ, ಅದರ ಸಿದ್ಧತೆ ಮತ್ತು ಪ್ರದರ್ಶನಗಳ ವೇಳೆಗಳಲ್ಲಿ, ಹಿಂಡಿನ ಎಲ್ಲಾ ಮಗಿಗಳೂ, ಅವರವರ ಶಕ್ತ್ಯಾನುಸಾರ, ಭಾಗವಹಿಸಲು ಸಮಾನಾವಕಾಶ ನೀಡಬೇಕು.

ಅಭಿನಯವು ಮಗಿಗಳಿಗೆ ಸಹಜವಾಗಿ ಬರುತ್ತದೆ. ಅವರು ಬೆಳವಣಿಗೆಯ ರೀತ್ಯಾ, ಅಭಿನಯದ ಘಟ್ಟದಲ್ಲಿರುವುದರಿಂದ, ಅವಕಾಶ ದೊರೆತಾಗ ತಮ್ಮ ಪಾತ್ರವನ್ನು ಹೆಮ್ಮೆಯಿಂದ, ಶಕ್ತಿಮೀರಿ ಅಭಿನಯಿಸುತ್ತಾರೆ. ಕೆಲವು ಮಗಿಗಳು ಈ ಚಟುವಟಿಕೆಯಲ್ಲಿ ಹೆಚ್ಚು ಶ್ರದ್ಧಾಸಕ್ತಿಗಳನ್ನು ತೋರುತ್ತಾರೆ. ಸಾಕಷ್ಟು ಉತ್ತೇಜನ ಕೊಟ್ಟಲ್ಲಿ ಒಳ್ಳೆಯ ಪ್ರದರ್ಶನವನ್ನೂ ನೀಡುತ್ತಾರೆ. ನಾಚಿಕೆಯಿಂದ ಹಿಂದುಳಿಯುವ ಮಕ್ಕಳಿಗೆ ಪ್ರೋತ್ಸಾಹ ಕೊಟ್ಟು ಮುಂದೆ ತರಬೇಕು.

ಈ ಶಿಕ್ಷಣದಲ್ಲಿ, ಮೊದಲ ಹೆಜ್ಜೆಯೆಂದರೆ ಪದ ಸಮಸ್ಯೆ ಅಥವಾ ಒಗಟು ಗಳನ್ನು ಅಭಿನಯಿಸುವುದು. ನೀರು, ಕೊಳಾಯಿ, ಪೆನ್ನು ಮುಂತಾದ ಪದಗಳನ್ನೂ, ಗಂಗಾಧರ, ಪ್ರೇಮಚಂದ್ರ, ಗೋಪಾಲಕೃಷ್ಣ ಮುಂತಾದ ಹೆಸರುಗಳನ್ನೂ ಅಭಿನಯಿಸಿ ತೋರಿಸಬಹುದು. ಅಭಿನಯದ ಮೂಲಕ, ಒಗಟುಗಳನ್ನು ಬಿಡಿಸುವುದು ಒಳ್ಳೆಯ ಷಟ್ಕದ ಕಾರ್ಯಕ್ರಮವಾಗಬಲ್ಲುದು. ಒಂದು ಷಟ್ಕವು ಒಗಟನ್ನು ನಟಿಸಿ ತಿಳಿಸಿದರೆ ಇನ್ನೊಂದು ಷಟ್ಕವು ಅದನ್ನು ಬಿಡಿಸಿ ಉತ್ತರ ಹೇಳಬಹುದು.

ಮುಂದಿನ ಹೆಜ್ಜೆಯೆಂದರೆ ಸಣ್ಣಕತೆಗಳ ಅಭಿನಯ. ಇದರಲ್ಲಿ ಕಾಡಿನ ಪ್ರಾಣಿಗಳೂ ಭಾಗವಹಿಸುತ್ತವೆ. ಉದಾ: ಈಸೋಪನ ಕಥೆಗಳು, ಪಂಚತಂತ್ರ ಕಥೆಗಳು, ಮೌಗ್ಲಿಕಥೆಗಳು ಈ ಗುಂಪಿಗೆ ಬರುತ್ತವೆ. ಇವುಗಳು ಸುಲಭವಾದ ನಟನೆಯಿಂದ ಕೂಡಿದ್ದು, ಮಗಿಗಳು ತಮ್ಮ ಪಾತ್ರಗಳನ್ನು ಅಭಿನಯಿಸಲು ಸುಲಭವಾಗಿರುತ್ತದೆ. ಬಣ್ಣದ ಕಾಗದ, ಬಣ್ಣಗಳು, ಮನೆಯಲ್ಲೇ ಇರುವ ಬೆಡ್‌ಷೀಟ್ ಇತ್ಯಾದಿ ವಸ್ತುಗಳಿಂದ ಇವುಗಳಿಗೆ ಬೇಕಾದ ಪೋಷಾಕುಗಳನ್ನು ತಯಾರಿಸಬಹುದು. ಮಕ್ಕಳು ಹುಲಿ, ಸಿಂಹ, ಚಿರತೆ, ಎಮ್ಮೆ, ಹಸು, ಕಾಗೆ, ಮೊಸಳೆ ಮುಂತಾದ ಪ್ರಾಣಿಗಳನ್ನು ಅನುಕರಿಸಿ, ನಟಿಸಲು ಬಹಳ ಇಷ್ಟಪಡುತ್ತಾರೆ. ಸಂತೋಷಪಡುತ್ತಾರೆ.

ಮೂರನೆಯ ಹಂತದಲ್ಲಿ ಮನುಷ್ಯ ಪಾತ್ರಗಳನ್ನು ಅಭಿನಯಿಸಲು ಪ್ರಯತ್ನಿಸಬಹುದು. ಅವು ಸುಲಭ ರೀತಿಯವಾಗಿರಬೇಕು. ಹೆಚ್ಚು ನಟನೆಗೆ ಅವಕಾಶವಿರಬೇಕು. ಪೋಷಾಕುಗಳು ಮತ್ತು ರಂಗಸ್ಥಳವನ್ನು ಸಜ್ಜುಗೊಳಿಸಲು ಬೇಕಾದ ವಸ್ತುಗಳನ್ನು ಸುಲಭವಾಗಿ ಅನುಗೊಳಿಸುವಂತಿರಬೇಕು.

ಈ ರೀತಿಯಲ್ಲಿ ಹಂತ ಹಂತವಾಗಿ, ಮರಿಗಳು ತಮ್ಮ ನಾಚಿಕೆಯ ಸ್ವಭಾವವನ್ನು ಬಿಟ್ಟು, ಈ ಚಟುವಟಿಕೆಯಲ್ಲಿ ಉತ್ಸಾಹದಿಂದಲೂ, ಸಡಗರದಿಂದಲೂ, ಭಾಗವಹಿಸಲು, ಕಬ್‌ಮಾಸ್ಟರು ಉತ್ತೇಜನ ನೀಡಬೇಕು.

ಕಾಡಿನ ಕಥೆಗಳಲ್ಲಿ ಬರುವ ಮೌಗ್ಲಿಯ ಜೀವನಕ್ಕೆ ಸಂಬಂಧಿಸಿದ ಅನೇಕ ಘಟನೆಗಳು ಮರಿಗಳ ಶಿಕ್ಷಣದಲ್ಲಿ ಪ್ರಭಾವಪೂರಿತವಾಗಿರುತ್ತವೆ. ಸರಿಯಾದ ರೀತಿಯಲ್ಲಿ ಅಭಿನಯಿಸಿದಾಗ, ಆ ಪಾತ್ರಗಳಿಗೆ ಸಂಬಂಧಿಸಿದ ಶಾಶ್ವತ ಮೌಲ್ಯಗಳನ್ನು ಬೆಳೆಯುತ್ತಿರುವ ಬಾಲಕರಿಗೆ ಒತ್ತಿ ಹೇಳಲು ಸಹಾಯಕವಾಗುತ್ತದೆ. ಅಭಿನಯಿಸುವಾಗ ಬಾಲಕರಿಗೆ ಸಾಕಷ್ಟು ಉದ್ರೇಕಕಾರಿಯೂ ಆಗುತ್ತದೆ. ಮೌಗ್ಲಿ ಕಥೆಗಳ ಹಲವು ಭಾಗಗಳನ್ನು, ಮರಿಗಳು ಆನಂದದಿಂದಲೂ, ಲಾಭದಾಯಕವಾಗಿಯೂ ಅಭಿನಯಿಸಬಹುದು. ಉದಾ: ಬಾಲು, ಬಘೀರ, ಕಾ ಇತ್ಯಾದಿ.



"ಕಾ" ಆಟ

ಆಗಾಗ್ಗೆ ಮರಿಗಳು ತಮ್ಮ ನಟನಾ ಕೌಶಲವನ್ನು ಪ್ರದರ್ಶಿಸಲು ಕಬ್‌ಮಾಸ್ಟರು ಅವಕಾಶವೊದಗಿಸಬೇಕು. ಸರಳತೆ ಮತ್ತು ಸಹಜತೆಗಳು ಮುಖ್ಯಾಂಶಗಳಾಗಿರಬೇಕು. ಪೂರ್ವಾಭ್ಯಾಸ ಮತ್ತು ಪೂರ್ವ ಪ್ರದರ್ಶನಗಳ ವೇಳೆಯಲ್ಲಿ ಮರಿಗಳು ಹೆಚ್ಚು ಕಾಲ

ಕಳೆಯಲು ನಿರೀಕ್ಷಿಸಬಾರದು. ಆದುದರಿಂದ, ಸಣ್ಣಕಥೆಗಳನ್ನು ಆರಿಸಿಕೊಳ್ಳಬೇಕು. ಮಕ್ಕಳಿಗೆ ಕಷ್ಟವಾಗದಂತೆ ಈ ಕೆಲಸವನ್ನು ಮುಗಿಸಬೇಕು.

ಮುಂದಿನ ಹಂತದಲ್ಲಿ ಈ ರೀತಿ ಮಾಡಬಹುದು. ಕಬ್‌ಮಾಸ್ಟರು ಪ್ರತಿ ಷಟ್ಕಕ್ಕೂ ಬೇರೆಬೇರೆಯಾಗಿ ಅಥವಾ ಒಟ್ಟಾಗಿ ಒಂದಕ್ಕೊಂದು ಸಂಬಂಧವಿಲ್ಲದಂತೆ ತೋರುವ, ಹಲವಾರು ಅಸ್ಪಷ್ಟ ಭಾವನಾಂಶಗಳನ್ನು ಕೊಟ್ಟು, ಅವುಗಳೆಲ್ಲವನ್ನೂ ಸೇರಿಸಿ ಆಯಾ ಷಟ್ಕಗಳಿಗೆ ತೋರಿದಂತೆ, ಕತೆಯಾಗಿ ಹೆಣೆದು ಅವರದೇ ಆದ ರೀತಿಯಲ್ಲಿ ಅಭಿನಯಿಸಲು ಹೇಳಬಹುದು. ಉದಾ: ಮಹಾರಾಜ; ನೀರಿನಲ್ಲಿ ಮುಳುಗುತ್ತಿರುವ ಹುಡುಗ; ಏರೋಪ್ಲೇನ್ ನಿಲ್ದಾಣದಲ್ಲಿ ಇಳಿಯುವುದು! ಕುದುರೆ ಸವಾರನು ಅತಿ ವೇಗವಾಗಿ ಸವಾರಿ ಮಾಡುತ್ತಿರುವುದು; ಸಮಾರಾಧನೆ, ಭೋಜನಕೂಟ ಇತ್ಯಾದಿ. ಷಟ್ಕಗಳು ಅವರವರಿಗೆ ತೋರಿದಂತೆ ಕಥೆಯನ್ನು ಸೃಷ್ಟಿಸಿ, ಸೂಕ್ತ ಪೋಷಾಕುಗಳೊಂದಿಗೆ ಅಭಿನಯಿಸುತ್ತಾರೆ.

ಕಥೆಗಳು ಮತ್ತು ಉದಂತಗಳು ಪ್ರತಿ ಹಿಂಡಿನ ಸಭೆಯಲ್ಲಿಯೂ ಇರಲೇಬೇಕಾದ ಚಟುವಟಿಕೆಯಾದರೆ, ನಾಟಕಾಭಿನಯವು ತಿಂಗಳು ಎರಡು ತಿಂಗಳಿಗೊಮ್ಮೆ ನಡೆಸಬಹುದಾದ ಚಟುವಟಿಕೆಯಾಗಿರುತ್ತದೆ. ಹಾಗಾದರೂ ಸಹ ಅದಕ್ಕೆ ಒಂದಲ್ಲ ಒಂದು ರೀತಿಯಲ್ಲಿ ತಯಾರಿ ನಡೆದೇ ಇರುತ್ತದೆ. ಉದಾ: ಪೋಷಾಕುಗಳ ತಯಾರಿ; ರಂಗಸಜ್ಜಿಗೆಯ ತಯಾರಿ; ಪ್ರದರ್ಶನಕ್ಕೆ ತಯಾರಿ ಇತ್ಯಾದಿ. ಇದನ್ನು ಬಿಟ್ಟು, ಹಿಂಡಿನ ಸಭೆಗಳಲ್ಲಿ ಸಹ, ಈ ನಟನಾ ಕೌಶಲದ ಶಿಕ್ಷಣವನ್ನು ವಿವಿಧ ರೀತಿಗಳಲ್ಲಿ ಅಳವಡಿಸಿಕೊಳ್ಳಬಹುದು. ಉದಾ: ಕಾಡಿನ ಕಥೆಗಳಲ್ಲಿರುವ ಘಟನೆಗಳು, ಪ್ರಾಣಿಗಳಿಗೆ ಸಂಬಂಧಿಸಿದ ಕಥೆಗಳು, ಒಗಟುಗಳು ಇತ್ಯಾದಿ. ಹಿಂಡಿನ ಆಟಗಳ ವೇಳೆಯಲ್ಲಿ, "ನಟನಾ ಕೌಶಲ್ಯ"ದ ಚೀಟಿಗಳನ್ನು ಹಾಕಬಹುದು. ಅದು ಒಬ್ಬನು ಅಥವಾ ಷಟ್ಕದವರೆಲ್ಲಾ ಸೇರಿ ಭಾಗವಹಿಸುವಂತಿರಬೇಕು. ನಟಿಸಬೇಕಾದ ಅಂಶವು ಚೀಟಿಯಲ್ಲಿರುತ್ತದೆ. ಉದಾ: ರೈಲ್ವೇ ಟ್ರೈನ್, ಹಾರುತ್ತಿರುವ ಏರೋಪ್ಲೇನ್, ಈಜುವುದು, ಮುಳುಗುತ್ತಿರುವ ವ್ಯಕ್ತಿಯನ್ನು ರಕ್ಷಿಸುವುದು, ತರಕಾರಿ ಮಾರುವುದು, ಇತ್ಯಾದಿ. ಚೀಟಿ ಎತ್ತಿದ ಕೂಡಲೇ, ಪ್ರತಿ ವ್ಯಕ್ತಿಗೂ, ಷಟ್ಕಕ್ಕೂ, ಸ್ವಲ್ಪವೇ ಕಾಲಾವಧಿ ಕೊಟ್ಟು, ಅಭಿನಯಿಸಲು ತಿಳಿಸುವುದು. ಇದರಿಂದ ನವೀನತೆಯೂ, ಉದ್ರಿಕ್ತತೆಯೂ ಉಂಟಾಗಿ, ಕೂಡಲೇ ನಟನೆ ಮಾಡಲು ಬರುತ್ತದೆ. ಅದರಿಂದ ಉಂಟಾಗುವ ತೊಡಕುಗಳಿಂದ, ಮರಿಗಳಿಗೆ ಹೆಚ್ಚು ಆನಂದವೂ, ವಿನೋದವೂ ದೊರಕುತ್ತದೆ.

ಈ ರೀತಿಯ ಸಜ್ಜಿಕೆಗೆ ಅಗತ್ಯವಾದ ವಸ್ತುಗಳ ಸಂಗ್ರಹಣೆಗಾಗಿ ಬೇರೆಯೇ ಒಂದು ಪೆಟ್ಟಿಗೆಯನ್ನು ಕಾದಿರಿಸುವುದು ಒಳ್ಳೆಯದು. ನಾಟಕದ ದಿನ ಹತ್ತಿರ

ಬಂದಂತೆಲ್ಲಾ, ಈ ಸಂಗ್ರಹಣ ಪೆಟ್ಟಿಗೆಯ ಉಪಯೋಗವೂ ಜಾಸ್ತಿಯಾಗುತ್ತದೆ. ಯಾವಾಗಲಾದರೊಮ್ಮೆ ನಾಟಕವನ್ನು ನೋಡಲು ಹೆಚ್ಚು ಜನರನ್ನು ಆಹ್ವಾನಿಸಿದಾಗ, ರಂಗಸ್ಥಳ ಸಜ್ಜಿಕೆಗೆ ವೇದಿಕೆ, ಪರದೆಗಳು ಇತ್ಯಾದಿ ಸೇರಿದರೆ ನಾಟಕಕ್ಕೆ ಕಳೆ ಕಟ್ಟುತ್ತದೆ. ಇವುಗಳನ್ನು ಸಮಯಕ್ಕೆ ತಕ್ಕ ಹಾಗೆ ಅನುವು ಮಾಡಿಕೊಳ್ಳಬಹುದು. ಕಬ್‌ಮಾಸ್ಟರು, ಸ್ಕೌಟುಗಳು, ರೋವರ್‌ಗಳು ಇದರಲ್ಲಿ ಸಹಾಯಕರಾಗಬಹುದು. ಅಂತಹ ವಿಶೇಷ ಸಂದರ್ಭಗಳಲ್ಲಿ, ರಂಗಸ್ಥಳದ ಮೇಲುಸ್ತುವಾರಿಯನ್ನು ಹಿರಿಯರು ವಹಿಸಿಕೊಳ್ಳಬಹುದು.

ನಾಟಕಾಭಿನಯ ಅಥವಾ ನಟನಾ ಕೌಶಲವು, ಅತಿ ಮುಖ್ಯ ಶೈಕ್ಷಣಿಕ ಅಂಶವೆಂಬುದನ್ನು, ಕಬ್‌ಮಾಸ್ಟರು ಗಮನದಲ್ಲಿಟ್ಟುಕೊಂಡು, ಈ ಅಮೂಲ್ಯ ಚಟುವಟಿಕೆಗೆ ಸಂಪೂರ್ಣವಾದ ಪ್ರೋತ್ಸಾಹ ನೀಡಬೇಕು.

◆

ಅಧ್ಯಾಯ-11

ಕರಕುಶಲ ಕಲೆಗಳು

ಕರಕುಶಲ ಕಲೆಗಳು ಮರಿಗಳ ಶಿಕ್ಷಣದ ಪ್ರಮುಖ ಭಾಗವಾಗಿದೆ. ಹಿಂಡಿನಲ್ಲಿ ಪ್ರತಿಮರಿಯೂ ತನ್ನ ಕೈಗಳಿಂದ ವಸ್ತುಗಳನ್ನು ತಯಾರಿಸಲೂ, ತನ್ನ ಕೈಗಳನ್ನೂ, ಬೆರಗಳುಗಳನ್ನೂ ಉಪಯೋಗಿಸಲೂ ವಿಫುಲವಾದ ಅವಕಾಶಗಳಿರಬೇಕು. ಇದರಿಂದ ನಿಗದಿತ ಕುಶಲಕಲೆಯಲ್ಲಿ ಶಿಕ್ಷಣ ಕೊಡುವುದಕ್ಕಿಂತಲೂ, ಬಾಲಕನು ತನ್ನ ಸಹಜ ಅಭಿರುಚಿಗೆ ತಕ್ಕಂತೆ ನಡೆದುಕೊಂಡು, ಹೊಸ ವಸ್ತುಗಳನ್ನು ಸೃಷ್ಟಿಸುವುದರ ಸಂತೋಷಾನುಭವಗಳನ್ನು ಪಡೆಯಲು ಸಹಾಯವಾಗುತ್ತದೆ.

ಮರಿಯು ತನ್ನ ಬೆರಳುಗಳನ್ನು ಉಪಯೋಗಿಸಿ, ನಿಪುಣತೆಯಿಂದ ವಸ್ತುಗಳನ್ನು ಸೃಷ್ಟಿಸುವ, ಈ ಸೃಜನಶೀಲ ಸ್ವಭಾವವನ್ನು ವೃದ್ಧಿಪಡಿಸಿಕೊಳ್ಳಲು ಬೇಕಾದ ಅವಕಾಶ ಗಳನ್ನು ಒದಗಿಸುವುದು ಕಬ್‌ಮಾಸ್ಟರನ ಕರ್ತವ್ಯವಾಗಿದೆ. ವಿವಿಧ ಕಚ್ಚಾ ವಸ್ತುಗಳಾದ ಜೇಡಿಮಣ್ಣು, ಪೇಪರ್ ಮ್ಯಾಷ್, ಪ್ಲಾಸ್ಟಿಸೀನ್, ರಟ್ಟು, ಉಣ್ಣೆ, ಹತ್ತಿ ಮುಂತಾದವು ಗಳನ್ನು ಉಪಯೋಗಿಸಬಹುದು. ಪ್ರಾರಂಭ ದೆಶೆಯಲ್ಲಿ ಮರಿಗಳು ತಯಾರಿಸಿದ ವಸ್ತುಗಳು ಉನ್ನತ ಮಟ್ಟದ್ದಲ್ಲದಿರಬಹುದು. ಆದರೆ ಆ ತಯಾರಿಕೆಯಲ್ಲಿ ಮರಿಯು ತೋರಿದ ಉತ್ಸಾಹ ಮತ್ತು ಅದರಿಂದ ಪಡೆದ ತೃಪ್ತಿ, ಸಂತೋಷಗಳ ಮೌಲ್ಯವು, ಹೆಚ್ಚಿನದು. ಕಬ್‌ಮಾಸ್ಟರು ಉಳಿದ ಎಲ್ಲಾ ಚಟುವಟಿಕೆಗಳಂತೆ, ಈ ದಿಶೆಯಲ್ಲಿಯೂ, ತಾನು ಮಾದರಿಯಾಗಿದ್ದುಕೊಂಡು, ಹಿಂಡಿನ ಎಲ್ಲಾ ಮರಿಗಳೂ ಉತ್ಸಾಹದಿಂದ ಈ ಕುಶಲ ಕಲೆಯಲ್ಲಿ ಭಾಗವಹಿಸುವಂತೆ ಮಾಡುವ ಸಾಧ್ಯತೆಯಿದೆ.

ಜೇಡಿಮಣ್ಣಿನಿಂದ ಮಾದರಿ ತಯಾರಿಸುವುದನ್ನು ಮರಿಗಳು ಬಹಳವಾಗಿ ಇಷ್ಟಪಡುತ್ತಾರೆ. ಇದಕ್ಕಾಗಿ ಹಿಂಡಿನ ನಿವೇಶನದ ಒಳಭಾಗದಲ್ಲಿಯೇ ಮೆತುವಾದ ಮಣ್ಣನ್ನು ಅಗೆದು, ನೀರು ಹಾಕಿ ಕಲೆಸಿದರಾಯಿತು. ಕೆಲಸ ನಡೆಯುತ್ತದೆ. ಮರಿಗಳು ಅವರವರ ಇಚ್ಛೆಗನುಸಾರವಾಗಿ ಮಾದರಿ ತಯಾರಿಸಲು ಬಿಡಬೇಕು. ಉದಾ: ಪಕ್ಷಿಗಳು, ಪ್ರಾಣಿಗಳು, ತರಕಾರಿಗಳು, ಹೂಗಳು, ಹಣ್ಣುಗಳು, ಮನೆಗಳು, ದೇವಾಲಯಗಳು ಇತ್ಯಾದಿ.

ಮಗುಗಳು ಮಣ್ಣಿನೊಡನೆ ಕೆಲಸ ಮಾಡುವಾಗ, ಸಾಕಷ್ಟು ಹೊಲಸು ಮಾಡಿಕೊಳ್ಳುವ ಅವಕಾಶವಿದೆ. ಆದ್ದರಿಂದ ಕಬ್‌ಮಾಸ್ಟರು, ಮುಂದಾಗಿ, ಅವರು ತಮ್ಮ ಬಟ್ಟೆ ಬರೆಗಳನ್ನು ಕೊಳಕು ಮಾಡಿಕೊಳ್ಳದಂತೆ, ಸ್ಥಳವು ಚೊಕ್ಕಟವಾಗಿರುವಂತೆ, ಆದಷ್ಟೂ ಜಾಗರೂಕತೆಯಿಂದ ಕೆಲಸ ಮಾಡುವಂತೆ ಬುದ್ಧಿ ಹೇಳಬೇಕು. ಪ್ರಾರಂಭದಲ್ಲಿ ಅವರು ಸುಲಭವಾದ ವಸ್ತುಗಳನ್ನು ತಯಾರಿಸಿ, ಅನುಭವ ಪಡೆದಂತೆ ಹೆಚ್ಚು ಹೆಚ್ಚು ಕಷ್ಟಕರವಾದ ವಸ್ತುಗಳನ್ನು ಪ್ರಯತ್ನಿಸಬಹುದು. ಮಣ್ಣಿನಿಂದ ಸಾಕಷ್ಟು ಅನುಭವ ಪಡೆದ ಬಳಿಕ ಅವರು ಪೇಪರ್ ಮ್ಯಾಷ್ ಅನ್ನು ಅಥವಾ ಪ್ಲಾಸ್ಟಿಸೀನನ್ನು ಉಪಯೋಗಿಸ ಬಹುದು.

ಪೇಪರ್ ಮ್ಯಾಷ್ ತಯಾರಿಸಲು ಮೂರು ವಸ್ತುಗಳು ಬೇಕು. (i) ಹಳೆಯ ವಾರ್ತಾಪತ್ರಿಕೆಗಳು (ii) ಮೆಂತ್ಯ ಅಥವಾ ಮೈದಾಹಿಟ್ಟು ಮತ್ತು (iii) ನೀರು. ಹಳೆಯ ವಾರ್ತಾಪತ್ರಿಕೆಗಳನ್ನು ಸಣ್ಣ ಸಣ್ಣ ಚೂರು ಮಾಡಿ, ರಾತ್ರಿ ಪೂರಾ ನೀರಿನಲ್ಲಿ ನೆನೆಸಿಡಬೇಕು. ಅದೇ ರೀತಿ ಮೆಂತ್ಯವನ್ನೂ ನೆನೆಸಿಡಬೇಕು. ಬೆಳಗ್ಗೆ ನೀರು ಬಸಿದು ಬೇರೆ ಬೇರೆಯಾಗಿ ರುಬ್ಬಿಕೊಳ್ಳಬೇಕು. ಆ ಬಳಿಕ ಎರಡನ್ನೂ ಬೆರೆಸಿ, ಮುದ್ದೆ ಮಾಡಿಕೊಳ್ಳಬೇಕು. ಈ ಮುದ್ದೆಗೆ ಪೇಪರ್ ಮ್ಯಾಷ್ ಎನ್ನುತ್ತಾರೆ. ಇದರಿಂದ, ಜೇಡಿಮಣ್ಣಿನಿಂದ ಮಾಡಿದಂತೆ ಮಾದರಿಗಳನ್ನು ಮಾಡಿಕೊಳ್ಳಬಹುದು. ಮಾದರಿಯು ಒಣಗಿದ ಬಳಿಕ ಬಿರುಸಾಗುತ್ತದೆ. ಅದನ್ನು ಬಹಳ ಕಾಲ ಇಟ್ಟುಕೊಳ್ಳಬಹುದು. ಪೇಪರ್ ಮ್ಯಾಷ್ ಮಾದರಿಗಳಿಗೆ ಬಣ್ಣ ಹಾಕಿ ಅಲಂಕಾರ ವಸ್ತುಗಳನ್ನಾಗಿ ಉಪಯೋಗಿಸಿ ಕೊಳ್ಳಬಹುದು.

ಪೇಪರ್ ಮ್ಯಾಷ್ ಮುದ್ದೆಯನ್ನು, ಒದ್ದೆ ಬಟ್ಟೆಯಲ್ಲಿ ಸುತ್ತಿ, 'ಫ್ರಿಜ್' ಇದ್ದರೆ ಅದರೊಳಗಿಟ್ಟು ಕೆಲವು ಕಾಲ ಶೇಖರಿಸಿಟ್ಟುಕೊಳ್ಳಬಹುದು. ಮುದ್ದೆಯು ಒಣಗದೆ ಮೆತುವಾಗಿ ಇರುವವರೆಗೆ ಉಪಯೋಗಿಸಲು ಬರುತ್ತದೆ. ವಾರ್ತಾಪತ್ರಿಕೆಯನ್ನು ನೆನೆಸಿಟ್ಟು ರುಬ್ಬಿಕೊಳ್ಳುವ ಬದಲು ಬಿಸಿನೀರಿನಲ್ಲಿ ಮರಳಿಸಿ ರುಬ್ಬಿಕೊಳ್ಳಬಹುದು. ಮೆಂತ್ಯವನ್ನು ನೆನೆಸಿಟ್ಟು ರುಬ್ಬುವ ಬದಲು ಮೈದಾಹಿಟ್ಟನ್ನು ಉಪಯೋಗಿಸಬಹುದು.

ಪ್ಲಾಸ್ಟಿಸೀನ್ ಮಾರುಕಟ್ಟೆಯಲ್ಲಿ ದೊರಕುತ್ತದೆ. ಬೆಲೆ ಜಾಸ್ತಿ ಎನ್ನುವುದನ್ನು ಬಿಟ್ಟರೆ, ಮಾದರಿ ಕೆಲಸಕ್ಕೆ ಒಳ್ಳೆಯ ವಸ್ತು. ಅದರಿಂದ ತಯಾರಿಸಿದ ಮಾದರಿಯನ್ನು ಸುಮಾರು ಕಾಲ ಹಾಗೆಯೇ ಇಡಬಹುದು. ಅದನ್ನು ಮತ್ತೆ ಕೆಡಿಸಿ ಉಪಯೋಗಿಸ ಬಹುದು. ಬೆರಳುಗಳಿಗೆ ಬಹಳ ನಯವಾಗಿರುತ್ತದೆ. ಬೇಕೆಂದರೆ ಅಚ್ಚುಗಳಲ್ಲಿಯೂ ಉಪಯೋಗಿಸಬಹುದು. ಕೈಗಳು ಮತ್ತು ಉಪಯೋಗಿಸುವ ಅಚ್ಚುಗಳು, ಪರಿಶುಭ್ರವಾಗಿರಬೇಕು. ಇಲ್ಲದಿದ್ದರೆ ಅದು ಹೊಲಸಾಗಿ, ನೋಡಲಾಗುವುದಿಲ್ಲ.

ಪ್ಲಾಸ್ಟಿಸೀನ್ ಬೇರೆ ಬೇರೆ ಬಣ್ಣಗಳಲ್ಲಿಯೂ ದೊರಕುವುದರಿಂದ, ಬಣ್ಣಬಣ್ಣದ ಮಾದರಿಗಳನ್ನು ಮಾಡಲು, ಇದು ಬಹಳ ಉಪಯುಕ್ತವಾದುದು.

ಡಬ್ಬಗಳು ಮತ್ತು ಶೀಸೆಗಳನ್ನು ಬಣ್ಣದ ಕಾಗದಗಳಿಂದ ಅಲಂಕರಿಸಿ ಅಥವಾ ವಾರ್ನಿಷ್ ಪೈಂಟ್ ಮಾಡಿ ಉಪಯೋಗಿಸಬಹುದು. ರಟ್ಟಿನಿಂದ ಟ್ರೇಗಳು, ಬರವಣಿಗೆ ಪ್ಯಾಡ್‌ಗಳು (ಮೂಲೆಗಳಿಗೆ ರೆಕ್ಸಿನ್/ಚರ್ಮ/ದಪ್ಪ ಬಟ್ಟೆಯೂ ಸೇರಿ); ಬೀಜಗಳು ಅಥವಾ ಪ್ರಕೃತಿ ಸಹಜ ವಸ್ತುಗಳಿಂದ, ಮಾದರಿಗಳನ್ನು ಮಾಡಬಹುದು ಇತ್ಯಾದಿ, ಎಲ್ಲವೂ ಕರಕುಶಲ ಕಲೆಗಳಲ್ಲಿ ಬರುತ್ತವೆ. ಇವೆಲ್ಲವೂ ಮರಿಗಳಿಗೆ ಚೇತೋಹಾರಿ ಗಳಾಗಿದ್ದು, ಶೈಕ್ಷಣಿಕ ಮೌಲ್ಯಗಳನ್ನು ಹೊಂದಿವೆ. ಈ ದಿಶೆಯಲ್ಲಿಯೂ ಸಹ, ಕಬ್‌ಮಾಸ್ಟರು, ಮರಿಗಳಿಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಬೇಕು.

ಯಾವುದಾದರೂ ವಸ್ತುವನ್ನು ತಯಾರಿಸುವುದು; ಯೋಜನೆಗೆ ತಕ್ಕಂತೆ, ತಮ್ಮ ಕೈಗಳಿಂದ, ಅದಕ್ಕೆ ರೂಪು ಕೊಡುವುದು, ಒಂದು ವಿಶೇಷ ರೀತಿಯ ಆಹ್ಲಾದಕರ ಅನುಭವ. ಅದರಿಂದ, ತೃಪ್ತಿಯು ಸಿಗುತ್ತದೆಯಾದಕಾರಣ, ಅದು ಮರಿಗಳಿಗೆ ಲಭ್ಯವಾಗುವಂತೆ ಮಾಡಬಹುದು. ಆದ್ದರಿಂದ ನಮ್ಮ ಗುರಿಯನ್ನು ಈ ರೀತಿಯಾಗಿ ಹೇಳಬಹುದು.

(1) ಮರಿಗಳಿಗೆ ಸೃಜನಶೀಲತೆಯಿಂದ ಸಿಗುವ ಅನುಭವಗಳನ್ನೂ, ತೃಪ್ತಿಯನ್ನೂ ವಿವರಿಸುವುದು. (2) ಮರಿಗಳು ತಮ್ಮ ಬೆರಳುಗಳನ್ನುಪಯೋಗಿಸುವ ಅವಕಾಶಗಳನ್ನು ಕಲ್ಪಿಸಿ, ಅದು ಉಪಯುಕ್ತ ರೀತಿಯಲ್ಲಿರುವಂತೆ ನೋಡಿಕೊಳ್ಳುವುದು. (3) ಈ ರೀತಿ ಮಾಡುವ ಮೂಲಕ ಮೆದುಳು ಮತ್ತು ಕೈಗಳಿಗೆ ಅನ್ಯೋನ್ಯ ಸಂಬಂಧ ಕಲ್ಪಿಸುವುದು.

ಮರಿಯು ಹಿಂಡಿಗೆ ಸೇರುತ್ತಿದ್ದಂತೆಯೇ ತನ್ನ ಬೆರಳುಗಳಿಗೆ ಶಿಕ್ಷಣ ಕೊಡಲು ಪ್ರಾರಂಭಿಸುತ್ತಾನೆ. ಹಗ್ಗದಿಂದ ಗಂಟುಗಳನ್ನು ಹಾಕುವುದು ಈ ದಿಶೆಯಲ್ಲಿ ಮೊದಲ ಹೆಜ್ಜೆ. ಅವನು ಹಂತ ಹಂತವಾಗಿ ಪರೀಕ್ಷಾಂಶಗಳನ್ನು ಕಲಿಯುತ್ತಾ ಹೋದಂತೆ ಹೆಚ್ಚು ಹೆಚ್ಚಾಗಿ ಕರಕುಶಲತೆಯ ಶಿಕ್ಷಣವೂ ಮುಂದೆ ಸಾಗುತ್ತಿರುತ್ತದೆ. ಪರೀಕ್ಷಾಂಶಗಳಿಗೆ ಈ ದಿಕ್ಕಿನಲ್ಲಿ ಶಿಕ್ಷಣ ನೀಡುವ ಅನೇಕ ಅಂಶಗಳಿವೆ, ಚೆಂಡನ್ನೆಸೆಯುವುದು ಹಿಡಿಯುವುದು, ಸ್ಕಿಪಿಂಗ್, ಸಂಕೇತ ಕ್ರಮ –ಇವು ಕೆಲವು ಅಂಶಗಳು. ದ್ವಿತೀಯ ಚರಣ ಪರೀಕ್ಷಾಂಶಗಳಲ್ಲಿ ಕರಕುಶಲ ವಸ್ತುವನ್ನು ತಯಾರಿಸುವುದು ಒಂದು ವಿಶೇಷವಾಗಿದೆ. ಮರಿಯು ಆ ವಸ್ತುವನ್ನು ಮರ, ಲೋಹ, ರಟ್ಟು, ಪ್ಲಾಸ್ಟಿಕ್ ಮತ್ತು ಮಣ್ಣು ಇವುಗಳಲ್ಲಿ ಯಾವುದರಿಂದಲಾದರೂ ಮಾಡಬಹುದಾಗಿದೆ; ಹೆಣಿಗೆ ಅಥವಾ ಕೆತ್ತನೆಯ ಮೂಲಕ ಒಂದು ವಸ್ತುವನ್ನು ತಯಾರಿಸಬಹುದು; ಪ್ರಾಣಿಗಳು ಅಥವಾ ಹೂಗಳು, ತರಕಾರಿ ಇಲ್ಲವೆ ವಿವಿಧ ರಾಷ್ಟ್ರಧ್ವಜಗಳ ಬಣ್ಣದ ಚಿತ್ರಗಳನ್ನು ಸಹ ಬಿಡಿಸಬಹುದಾಗಿದೆ.

ಮರಿಗಳಿಗೆ ಪ್ರವೀಣತಾ ಪದಕಗಳ ಯೋಜನೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಕರಕುಶಲತೆಗೆ ಪ್ರಾಧಾನ್ಯತೆ ಕೊಡಲಾಗಿದೆ. ಉದಾ: ಚಿತ್ರಕಾರ, ಗೃಹಕಲೆ ಮತ್ತು ಆಟಿಕೆ ಮಾಡುವವ ಮುಂತಾದ ಗುಂಪು 3ರ ಪದಕಗಳು. ಈ ಪದಕಗಳಿಗಾಗಿ ಶ್ರಮವಹಿಸಿ ಸಂಪಾದಿಸಲು, ಹಿಂಡಿನಲ್ಲಿ ಮರಿಗಳಿಗೆ ಎಲ್ಲ ರೀತಿಯ ಉತ್ತೇಜನ ನೀಡಬೇಕು.

ವಸ್ತುಗಳನ್ನು ಮಾಡುವುದು ಉಲ್ಲಾಸಕರವಾಗಿರುತ್ತದೆ. ಗಿಡಗಳಿಗಾಗಿ ಅಲಂಕಾರಿಕ ಕುಂಡಗಳು; ದೀಪಾವಳಿ, ಯುಗಾದಿ, ಕ್ರಿಸ್‌ಮಸ್ ಹೊಸವರ್ಷ ಕಾರ್ಡುಗಳು; ಚಿಕ್ಕ ಮಕ್ಕಳಿಗೆ ಕೊಡಲು ಗೊಂಬೆಗಳು; ಮಾರಾಟ ಮಾಡಬಹುದಾದಂತಹ ಪೇಪರ್ ಬ್ಯಾಗ್‌ಗಳು, ಬೊಂಬೆಗಳು ಮುಂತಾದ ಸುಲಭ ರೀತಿಯ ವಸ್ತುಗಳು ಇತ್ಯಾದಿ, ತಯಾರಿಸಬಹುದು.

ಕಚ್ಚಾವಸ್ತುಗಳ ಶೇಖರಣೆಗಾಗಿ ಒಂದು ಪೆಟ್ಟಿಗೆಯನ್ನಿಟ್ಟು, ಮರಿಗಳಿಗೆ ಇಷ್ಟ ಬಂದ ವಸ್ತುಗಳನ್ನು ಅದರಲ್ಲಿ ಜಮಾ ಮಾಡಲು ಪ್ರೋತ್ಸಾಹಿಸಬೇಕು. ಪೆಟ್ಟಿಗೆಯಲ್ಲಿನ ವಸ್ತುಗಳನ್ನು ಆಗಾಗ್ಗೆ ತೆಗೆದು ಉಪಯೋಗ ಮಾಡಬೇಕು. ಮುರಿದ ಬೊಂಬೆಗಳನ್ನು ಸಂಗ್ರಹಿಸಿ, ರಿಪೇರಿ ಮಾಡಿ, ಅವುಗಳನ್ನು ಕೊಳ್ಳಲಾಗದ ಬಡಮಕ್ಕಳಿಗೆ ಹಂಚುವುದು, ಹಿಂಡಿಗೆ ಒಂದು ಉಪಕಾರೋದ್ದೇಶಿತ ಹವ್ಯಾಸವೆನ್ನಬಹುದು. (ತೃತೀಯ ಚರಣ್‌ನ ಮೊದಲ ಅಂಶವನ್ನು ನೋಡಿ.)



ಕುರ್ಚಿ ಮತ್ತು ಸಂದೂಕಗಳ ಮಾದರಿ

ಆ ರೀತಿಯ ರಿಪೇರಿ ಕೆಲಸಕ್ಕೆ ಬೇಕಾದ ಉಪಕರಣಗಳನ್ನೊದಗಿಸಿ ಮರಿಗಳು ಅವುಗಳನ್ನು ಉಪಯೋಗಿಸಲು ಪ್ರೋತ್ಸಾಹಿಸಬೇಕು. ಪ್ರತಿ ಮರಿಯೂ ಗುಂಪು 3ರ ಒಂದಾದರೂ ಪದಕವನ್ನು ಸಂಪಾದಿಸಲು ಪ್ರೋತ್ಸಾಹಿಸಬಹುದು. ವಿಶೇಷ ಹಿಂಡಿನ ಸಭೆಗಳನ್ನು ನಡೆಸಿ, ಯಾವುದಾದರೊಂದು ಕರಕುಶಲ ಕಲೆಯಲ್ಲಿ, ವಿಶೇಷ ಶಿಕ್ಷಕರಿಂದ, ಶಿಕ್ಷಣ ವ್ಯವಸ್ಥೆ ಮಾಡಬಹುದು. ಷಟ್ಕವು ಒಟ್ಟಾರೆ ಸೇರಿ, ಏನಾದರೊಂದು ವಸ್ತುವನ್ನು ತಯಾರಿಸುವ ಕಾರ್ಯಕ್ರಮವನ್ನು, ಆಗೊಮ್ಮೆ ಈಗೊಮ್ಮೆ ಏರ್ಪಾಟು ಮಾಡುವುದರಿಂದ ಮರಿಗಳಿಗೆ ಸಹಕಾರ ಮನೋಭಾವದ ಬಗ್ಗೆ ಶಿಕ್ಷಣವೂ ದೊರಕುತ್ತದೆ.

◆

ಅಧ್ಯಾಯ-12

ಪ್ರಕೃತಿ ವೀಕ್ಷಣೆ

ಪ್ರಕೃತಿಯ ರೀತಿ ನೀತಿಗಳನ್ನು ನೋಡುತ್ತಾ, ಆ ಬಗ್ಗೆ ಯೋಚಿಸಿ, ವಿಸ್ಮಯ ಪಡಬಹುದಾದರೆ, ನಿಸರ್ಗದಲ್ಲಿ ಅನೇಕ ಅದ್ಭುತ ಪರಮಾಶ್ಚರ್ಯಗಳು ಕಂಡುಬರುತ್ತವೆ. ಗಿಡಮರಗಳು, ಹೂ-ಹಣ್ಣುಗಳು, ಮೃಗ-ಪಕ್ಷಿಗಳು, ಒಂದೊಂದನ್ನೂ, ಅವಲೋಕಿಸಿ, ವಿಚಾರ ಮಾಡಬೇಕಾದ ಸೃಷ್ಟಿ ವೈಚಿತ್ರ್ಯಗಳು, ಅದ್ಭುತಗಳು ಅನೇಕವಿವೆ. ಮರಿಯ ವಯಸ್ಸಿನ ಬಾಲಕನಲ್ಲಿ ಪ್ರಕೃತಿಯ ರಹಸ್ಯಗಳನ್ನು ಒಳಹೊಕ್ಕು ನೋಡಲು, ವಿಚಾರ ಮಾಡಲು ಅಭಿಲಾಷೆ ಇರುವುದನ್ನು ಕಾಣಬಹುದು. ತಿಳಿದುಕೊಳ್ಳುವ ಕುತೂಹಲವೇನೋ ಬಾಲಕನಲ್ಲಿರುತ್ತದೆ. ಆದರೆ ಆ ಆಕಾಂಕ್ಷೆಯನ್ನು ಪ್ರೋತ್ಸಾಹಿಸಬೇಕು. ಕಬ್‌ಮಾಸ್ಟರು ಈ ದಿಶೆಯಲ್ಲಿ ಸಾಧ್ಯವಾದಷ್ಟು ಹೊರ ಸಂಚಾರಗಳು, ಸಹಜ ರೀತಿಯ ಸಾಹಸಮಯ ಕಾರ್ಯಕ್ರಮಗಳನ್ನು ಏರ್ಪಾಟು ಮಾಡಿ ಆ ಮೂಲಕ ಮರಿಗಳಿಗೆ ಅವಕಾಶಗಳ ನ್ನೊದಗಿಸಬೇಕು. ಮರಿಗಳು ತಾವಾಗಿ ವಿಚಾರ ಮಾಡಿ (ಎಕ್ಸ್‌ಪ್ಲೋರ್) ತಿಳಿದುಕೊಳ್ಳಲು ಪ್ರೋತ್ಸಾಹಿಸಬೇಕು. ಹಾಗೆ ಅವರು ವಿಚಾರ ಮಾಡಿ ಕಂಡುಕೊಂಡ ವಿಷಯಗಳನ್ನು ಕಬ್‌ಮಾಸ್ಟರು ವಿಮರ್ಶೆ ಮಾಡಿ ಹೇಳಬೇಕು. ಈ ಉದ್ದೇಶಕ್ಕಾಗಿಯೇ ಹೊರ ಸಂಚಾರಗಳನ್ನು ಮತ್ತೆ ಮತ್ತೆ ಏರ್ಪಡಿಸಬೇಕು. ಆ ರೀತಿ ಹೊರ ಸಂಚಾರ ಹೋಗುವಾಗ, ಚಿತ್ರಗಳು ಮತ್ತು ವಿಮರ್ಶೆಗಳಿಂದ ಕೂಡಿದ ಒಳ್ಳೆಯ ಪುಸ್ತಕಗಳನ್ನು ತೆಗೆದುಕೊಂಡು ಹೋಗಬೇಕು. ಅವುಗಳು ಸ್ಥಳದಲ್ಲಿ ಕಂಡ ಹಕ್ಕಿ-ಪಕ್ಷಿಗಳು, ಗಿಡ-ಮರಗಳು, ಕೀಟಾದಿಗಳ ವಿಷಯದಲ್ಲಿ ತಾನು ಖಚಿತಪಡಿಸಿಕೊಂಡು ಮರಿಗಳೊಡನೆ ವಿಮರ್ಶೆ ಮಾಡಲು ಸಹಾಯಕವಾಗುತ್ತದೆ.

ಈ ಹೊರ ಸಂಚಾರ ಅಥವಾ ಪರ್ಯಟನೆಗಳ ವೇಳೆಯಲ್ಲಿ, ದೇವರು ನಮ್ಮ ಸೌಕರ್ಯಕ್ಕಾಗಿ ಮಾಡಿರುವ ಅದ್ಭುತ ಸೃಷ್ಟಿಯ ಬಗ್ಗೆ ಮರಿಗಳಲ್ಲಿ ಕುತೂಹಲವನ್ನು ಕೆರಳಿಸಿ, ವಿಮರ್ಶೆ ಮಾಡುವ ಬಯಕೆಯನ್ನುಂಟು ಮಾಡುವುದು ಮುಖ್ಯ ಉದ್ದೇಶವಾಗಿದೆ. ಕಬ್‌ಮಾಸ್ಟರಿಗೆ ಇದೊಂದು ಮುಖ್ಯ ವಿಧಿ (ಟಾಸ್ಕ್)ಯಾಗಿದೆ. ಈ ರೀತಿಯ, ನಿಸರ್ಗದ ಅನಂತ ಸೃಷ್ಟಿಯ ಅವಲೋಕನೆ ಮತ್ತು ಮೆಚ್ಚಿಕೆಯ ಮೂಲಕ ಸೃಷ್ಟಿಕರ್ತನ ಬಗ್ಗೆ ಅರಿವನ್ನುಂಟು ಮಾಡಲು ಸಹಾಯ ಮಾಡಬೇಕು. ಈ ವಿಧಿ

ನಿರ್ವಹಣೆಯು ನಿರ್ವಂಚನೆ ಮತ್ತು ಶ್ರದ್ಧೆಗಳಿಂದ ಕೂಡಿರಬೇಕು. ಹಾಗಿದ್ದಲ್ಲಿ, ಮರಿಗಳ ಜೀವನದಲ್ಲಿ ಸರಳತೆ ಮತ್ತು ಪ್ರಾಮಾಣಿಕತೆಗಳ ಬೀಜವನ್ನು ಕಬ್‌ಮಾಸ್ಟರು ಬಿತ್ತಿದಂತೆ. ಮರಿಯು ದೊಡ್ಡವನಾದಂತೆಲ್ಲಾ ಈ ಬೀಜವು ಮೊಳಕೆಯೊಡೆದು ಬೆಳೆಯುತ್ತಾ ಹೋಗುತ್ತದೆ.

ಅವಲೋಕನೆ ಮತ್ತು ವಿಚಾರಶೀಲತೆಗಳನ್ನು ಅಭಿವೃದ್ಧಿಪಡಿಸುವುದು ಹೊರ ಸಂಚಾರಗಳ ಮುಖ್ಯ ಉದ್ದೇಶವಾಗಿದೆ. ಮರಿಯು ತನಗೆ ತಾನೇ ವಿಷಯಗಳನ್ನು ಕಂಡುಕೊಳ್ಳಬೇಕು. ಕಬ್‌ಮಾಸ್ಟರು ಅವಶ್ಯಕತೆ ಬಿದ್ದಾಗ ಮಾತ್ರ ಮಾತನಾಡಿ, ಮರಿಯು ಕಂಡುಕೊಂಡದ್ದನ್ನು ವಿಚಾರವಮಾಡಲು ಸಹಾಯಕವಾಗಬೇಕು. ತನ್ನ ಯೋಚನಾಸರಣಿಯನ್ನೆಂದೂ ಕಬ್‌ಮಾಸ್ಟರು ಮರಿಗಳ ಮೇಲೆ ಹೇರಬಾರದು.

ಈ ರೀತಿ ಮರಿಗಳಲ್ಲಿ ವಿಮರ್ಶಾತ್ಮಕ ಮನೋಭಾವನೆಗಳು ಬೆಳೆಯಲು ಉತ್ತೇಜನ ನೀಡಿ, ಅವರು ಮನೆಗಳಲ್ಲಿ ಸಣ್ಣ ಕೈತೋಟಗಳನ್ನು ಬೆಳೆಸಲೂ, ಪ್ರಕೃತಿ ವಸ್ತು ಸಂಗ್ರಹಣೆಗೂ, ಇತರರು ಮಾಡಿದ ಸಂಗ್ರಹಗಳ ಅಧ್ಯಯನ ಮಾಡಲೂ ಸಹಾಯಕರಾಗಬೇಕು. ಸಾರ್ವಜನಿಕ ತೋಟಗಳು, ಉದ್ಯಾನವನಗಳಿಗೆ ಭೇಟಿ ನೀಡುವುದು, ಜಲಚರ ಜೀವರಾಶಿಗಳನ್ನು ಅಧ್ಯಯನ ಮಾಡುವುದು ಇವೇ ಮುಂತಾದ ಹವ್ಯಾಸಗಳಲ್ಲಿ ತೊಡಗಲು ಪ್ರೋತ್ಸಾಹಿಸಬೇಕು.

ಎಲೆಗಳ ಮತ್ತು ಪಕ್ಷಿ ಪ್ರಾಣಿಗಳ ಹೆಜ್ಜೆ ಗುರುತುಗಳ ಪ್ಲಾಸ್ಟರ್ ಕ್ಯಾಸ್ಟ್ ಮಾಡುವುದು, ಹೂವುಗಳನ್ನು ಸಂಗ್ರಹಿಸಿ, ಒತ್ತಡದಲ್ಲಿ ಒಣಗಿಸಿ, ಕಾರ್ಡುಗಳ ಮೇಲೆ ಅವುಗಳನ್ನು ವಿವರಗಳೊಂದಿಗೆ ಪ್ರದರ್ಶಿಸುವುದು (ದ್ವಿತೀಯ ಚರಣ್‌ನ 4ನೆಯ ಪರೀಕ್ಷಾಂಶ); ಫೋಟೋಗಳು, ಮಾದರಿಗಳು, ವರ್ಣಚಿತ್ರಗಳು ಇವೇ ಮುಂತಾದವುಗಳನ್ನು ಸಂಗ್ರಹಿಸುವುದು ಮತ್ತು ಹಿಂಡಿನ ಕುಟೀರದಲ್ಲಿ ಪ್ರದರ್ಶಿಸುವುದು; ಸಾಧ್ಯವಾಗುವೆಡೆ ಹಿಂಡಿನಲ್ಲೊಂದು ಕೈತೋಟವನ್ನು ಮಾಡುವುದು; ವಾಸ್ತವಿಕ ಅಂಶಗಳನ್ನು ಆಧಾರವಾಗಿಟ್ಟುಕೊಂಡು ನಿಸರ್ಗ ಸಂಬಂಧ ಆಟಗಳನ್ನಾಡುವುದು, ಇವೆಲ್ಲವೂ ಮರಿಗಳಿಗೆ ಲಾಭದಾಯಕವಾಗಿ ಪರಿಣಮಿಸುತ್ತವೆ. ಪ್ರಕೃತಿಯ ಬಗ್ಗೆ ಕುತೂಹಲವೂ, ನಿಸರ್ಗ ಜ್ಞಾನವೂ ಬೆಳೆಯುತ್ತದೆ ಮತ್ತು ನಿಸರ್ಗದ ವಾಸ್ತವಿಕತೆಯ ಬಗ್ಗೆ ಸರಿಯಾದ ಆಸಕ್ತಿಯು ಕೆರಳುತ್ತದೆ.

◆

ಅಧ್ಯಾಯ-13

ಮರಿಗಳ ಆಟಗಳು

ಆಟಗಳೆಂದರೆ ಮರಿಗಳಿಗೆ ಪಂಚಪ್ರಾಣ. ಆಟಗಳು ಸಾಧಾರಣ ಹಿಂಡಿನ ಸಭೆಗಳಲ್ಲಿ ಪ್ರಮುಖ ಕಾರ್ಯಕ್ರಮವಾಗಿರಬೇಕು. ಮರಿಗಳ ನೈತಿಕ ಮತ್ತು ಮಾನಸಿಕ ಶಿಕ್ಷಣದಲ್ಲಿ ಆಟಗಳ ಪಾತ್ರ ಮಹತ್ವವಾದುದು. ಆಟಗಳ ಮೂಲಕ ನಡತೆ, "ಉದಾರ ಸ್ಪರ್ಧಾ" ಮನೋಭಾವನೆ, ಶಿಸ್ತು, ನಿಸ್ವಾರ್ಥತೆ, ಗುರಿಸಾಧನೆಗಾಗಿ ಸತತ ಪ್ರಯತ್ನ ಮಾಡುವಿಕೆ. "ಸಂಘಬುದ್ಧಿ" ಎಂದರೆ ತನ್ನ ಸಮಾಜ ಮತ್ತು ಸದಸ್ಯತ್ವ ಹೊಂದಿದ ಸಂಸ್ಥೆಯ ಘನತೆ ಮತ್ತು ಹಿತಗಳ ಬಗ್ಗೆ ಇರಬೇಕಾದ ಅಭಿಮಾನ ಮತ್ತು ದೃಷ್ಟಿಕೋನಗಳು ಪ್ರಚೋದಿತವಾಗುತ್ತವೆ. ಮರಿಗಳಿಗೆ ಪರೀಕ್ಷಾಂಶಗಳ ಬಗ್ಗೆ ಶಿಕ್ಷಣ ಕೊಡಲು ಆಟಗಳಿಗಿಂತಲೂ ಉತ್ತಮವಾದ ಮಾಧ್ಯಮ ಬೇರೊಂದಿಲ್ಲ.

ಆಟಗಳು ವಿಧವಿಧ. ಸಾಮಾನ್ಯವಾದ 'ಸರ್ಕಲ್ ಆಟಗಳು' ಕೆಲವಾದರೆ, 'ಟೀಂ ಆಟಗಳು' ಕೆಲವು; 'ರಿಲೇ ಆಟಗಳು' ಕೆಲವಾದರೆ, 'ಪರೀಕ್ಷಾ ಆಟಗಳು' ಮತ್ತೆ ಕೆಲವು. "ಇಂದ್ರಿಯ ಶಿಕ್ಷಣ ಆಟಗಳು" ಹಲವಾದರೆ 'ಹೊರಾಂಗಣ ಆಟಗಳು' ಕೆಲವು. ಮತ್ತೆ 'ಬಯಲಿನಲ್ಲಿ ಆಟಗಳು' ಕೆಲವು. ಹೀಗೆ.

ಹಿಂಡಿನ ಸಭೆಗಳ ವೇಳೆಯಲ್ಲಿ ಒಂದಲ್ಲದಿದ್ದರೆ ಮತ್ತೊಂದು ಆಟವನ್ನು ಕೆಲಸ ಮತ್ತು ವಿರಾಮ ವೇಳೆಗಳ ಮಧ್ಯೆ ಮಧ್ಯೆ ಆಡಿಸಬೇಕಾಗುತ್ತದೆ.

ಬುದ್ಧಿವಂತ ಕಬ್‌ಮಾಸ್ಟರು ತನ್ನದೇ ಆದ ಆಟದ ಪುಸ್ತಕವನ್ನು ಇಟ್ಟು ಕೊಂಡಿರುತ್ತಾನೆ. ಆಟಗಳನ್ನು ಸೂಕ್ತ ರೀತಿಯಲ್ಲಿ ವಿಭಾಗಿಸಿಕೊಂಡಿರುತ್ತಾನೆ. ಪ್ರತಿ ಆಟಕ್ಕೂ ಅದರ ಹೆಸರನ್ನು ಕೊಟ್ಟು, ಆ ಆಟವು ದೊರಕಿದ ಪುಸ್ತಕ, ಅದರ ಪುಟಸಂಖ್ಯೆ ಇತ್ಯಾದಿ ಉಲ್ಲೇಖಿಸಿ, ಗುರುತು ಹಾಕಿಕೊಂಡಿರುತ್ತಾನೆ. ಆದಷ್ಟೂ ಕಡೆ ಚಿತ್ರಗಳ ಮೂಲಕ ಉಲ್ಲೇಖವಿರಬಹುದು. ಆ ಆಟಗಳನ್ನು ಹಿಂಡಿನಲ್ಲಿ ಆಡಿಸಿದ ತಾರೀಖು ಮತ್ತು ಅದಕ್ಕೆ ಆಟಗಾರರ ಪ್ರತಿಕ್ರಿಯೆ ಇವುಗಳನ್ನೂ ಗುರುತು ಹಾಕಿಕೊಂಡಿರುತ್ತಾನೆ.

ಸರ್ಕಲ್ ಆಟಗಳು: ಹಿಂಡಿನ ಸಭೆಯ ಪೂರ್ವಾರ್ಧದಲ್ಲಿ ಆಡಿಸಲು ತಕ್ಕುವಾಗಿವೆ. ಓಡಾಡುವ, ದೇಹಶ್ರಮ ಕೊಡುವ ಆಟಗಳನ್ನು ಕುಳಿತಲ್ಲೇ ನಿಂತಲ್ಲೇ

ಆಡುವ ಆಟಗಳ ಬಳಿಕ ಆಡಬೇಕು. ದೈಹಿಕ ಚಟುವಟಿಕೆಯಿಂದ ಕೂಡಿದ ಆಟಗಳು ಶಿಸ್ತನ್ನು ಕಲಿಸಲು ಒಳ್ಳೆಯ ಸಾಧನಗಳು. ಪ್ರತಿ ಮರಿಯೂ, ಉಮೇದುವಾರನೂ ಸೇರಿ, ಆಟಗಳನ್ನಾಡಲು ಅವಕಾಶವಿರಬೇಕು. ಸೋಲುವ ಆಟಗಾರರನ್ನು ಕೂಡಲೇ ಹೊರಹಾಕುವ ಆಟಗಳು ಮರಿಗಳಿಗೆ ಒಳ್ಳೆಯದಲ್ಲ. ನಾವು ಆಟಗಳನ್ನಾಡಿಸುವಾಗ ಕೆಲವೇ ಬಾಲಕರು ಏಕಪ್ರಕಾರವಾಗಿ ಗೆಲುವು ಹೊಂದದಂತೆ ನೋಡಿಕೊಳ್ಳಬೇಕು. ಇತರರೂ ಮಧ್ಯೆ ಮಧ್ಯೆ ಗೆಲ್ಲುವಂತಿರಬೇಕು. ಆಟಗಳನ್ನೂ ಕೆಲವೊಮ್ಮೆ ನಿಯಮಗಳನ್ನೂ, ಚಾಣಾಕ್ಷತನದಿಂದ ಬದಲಾಯಿಸಿಕೊಳ್ಳುವುದು ಈ ದಿಶೆಯಲ್ಲಿ ಸಹಾಯಕವಾಗುತ್ತದೆ.

ಟೀಂ ಆಟಗಳು: ಆದಷ್ಟೂ ಹೆಚ್ಚು ಹೆಚ್ಚಾಗಿ ಆಡಬೇಕು. ಅವುಗಳು ಲವಲವಿಕೆ (ಅಜಿಲಿಟಿ) ಮತ್ತು ಮಾನಸಿಕ ಚುರುಕುಗಳನ್ನು (ಅಲರ್ಟ್‌ನೆಸ್) ಹೊಂದಿರುತ್ತವೆ. ಆಗಾಗ್ಗೆ ಷಟ್ಕಗಳನ್ನು ಸಂಯೋಜಿಸಲು ಬರುತ್ತದೆ. ಉದಾ: ರೌಂಡರ್ಸ್, ಸ್ಟೂಲ್‌ಬಾಲ್, ಫೆದರ್ ಫುಟ್‌ಬಾಲ್ ಮುಂತಾದವು. ಹಿಂಡಿನ ಪರ್ಯಟನೆಗಳು ಮತ್ತು ಹೊಸ ಸಂಚಾರಗಳ ವೇಳೆಯಲ್ಲಿ ಆಡಿಸಲು 'ಟೀಂ' ಆಟಗಳು ಬಹಳ ಉಪಯುಕ್ತವೂ, ಆನಂದದಾಯಕವೂ ಆಗಿರುತ್ತವೆ. ಪ್ರತಿ ಹಿಂಡಿನ ಸಭೆಯಲ್ಲಿಯೂ ಒಂದು 'ಟೀಂ' ಆಟ ಇರುವುದಾದರೆ ಬಹಳ ಒಳ್ಳೆಯದು.

ಅಂತರ ಷಟ್ಕ ಆಟಗಳು: ಒಳ್ಳೆಯುವೇನೋ ಸರಿ, ಆದರೆ ಹಿಂಡಿನಲ್ಲಿ ಅವುಗಳನ್ನು ಹೆಚ್ಚಿಗೆ ಆಡಿಸಬಾರದು. ಹಾಗೆ ಮಾಡಿದರೆ ಮರಿಗಳಿಗೆ ಷಟ್ಕಗಳ ಬಗ್ಗೆ ತಪ್ಪು ಅಭಿಪ್ರಾಯ ಬರುತ್ತದೆ. ಕಬ್ಬಿಂಗ್, ಷಟ್ಕಗಳ ಮಧ್ಯದ ಸ್ಪರ್ಧೆಗಳ ಚಟುವಟಿಕೆ ಯಾಗಬಾರದು.

ರಿಲೇ ಆಟಗಳು: ಉದಾ: ಪರೀಕ್ಷಾಂಶಗಳಿಗೆ ಸಂಬಂಧಿಸಿದುವು ಬಹಳ ಉಪಯುಕ್ತವೆನಿಸಿವೆ.

ಇಂದ್ರಿಯ ಶಿಕ್ಷಣ ಆಟಗಳು: ಮರಿಗಳ ಶಿಕ್ಷಣದಲ್ಲಿ ಮುಖ್ಯವಾದ ಸ್ಥಾನವಿದೆ. ಆಟಗಳಂತೂ ವಿಧ ವಿಧ. ನಮ್ಮ ಆವಶ್ಯಕತೆಯ ದೃಷ್ಟಿಯಿಂದ ಆಟಗಳು ಸರಳವಾಗಿರಬೇಕು. ಮರಿಗಳ ವಯಸ್ಸಿನ ಮಕ್ಕಳಿಗೆ ಹೊಂದುವಂತಿರಬೇಕು, ಬಹು ಬಳಕೆಯಲ್ಲಿರುವ ಸಾಮಾನ್ಯ ವಸ್ತುಗಳು, ಶಬ್ದಗಳು, ವಾಸನೆಗಳು ಮುಂತಾದವುಗಳನ್ನು, ಗುರುತಿಸಲು ಅನುಕೂಲವಾಗುವಂತೆ, ಮರಿಗಳ ವಯಸ್ಸಿಗೆ ತಕ್ಕಂತೆ, ಇಂದ್ರಿಯ ಶಿಕ್ಷಣ ಆಟಗಳಿಗೆ ಸಂಬಂಧಿಸಿದಂತೆ, ಕ್ಷೇತ್ರಗಳನ್ನು ರೂಪಿಸಿಕೊಂಡು, ಈ ಆಟಗಳನ್ನು ಆಗಾಗ್ಗೆ ಆಡಿಸುತ್ತಲೇ ಇರಬೇಕು.

ಪರೀಕ್ಷಾಂಶ ಆಟಗಳು: ಅವುಗಳದೇ ಆದ ರೀತಿಯಲ್ಲಿ ಸ್ವಾರಸ್ಯವಾಗಿರುತ್ತವೆ. ಅವು "ಆಟದ ಮೂಲಕ ಶಿಕ್ಷಣ" ತತ್ತ್ವವನ್ನು ಪ್ರತಿಪಾದಿಸುತ್ತವೆ. ಎಲ್ಲಾ ಪರೀಕ್ಷಾಂಶಗಳಿಗೆ ಸಂಬಂಧಿಸಿದ ವಿಷಯಗಳನ್ನು ಹೇಳಿಕೊಡುವುದನ್ನೂ, ಪರೀಕ್ಷೆ ಮಾಡುವುದನ್ನೂ, ಈ ಆಟಗಳ ಮೂಲಕ ಮಾಡಬಹುದು. ಈ ಹಿಂದಿನ ಆಟಗಳಲ್ಲಿ ರಿಲೇ ಆಟಗಳು, ಟೀಂ ಆಟಗಳು ಮುಂತಾದುವನ್ನು ಗಮನದಲ್ಲಿಟ್ಟುಕೊಂಡು, ಆಯಾಯಾ ಪರೀಕ್ಷಾಂಶಗಳನ್ನು ಹೇಳಿಕೊಡಲೂ, ಪರೀಕ್ಷೆ ಮಾಡಲೂ, ಸರಿ ಹೊಂದುವಂತೆ ರೂಪಿಸಿಕೊಂಡು, ಹೊಸ ಹೊಸ ಆಟಗಳನ್ನು ಆಡಿಸಲು ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು.

ಸುಲಭ ರೀತಿಯ ಹೊರಾಂಗಣ ಆಟಗಳು: ಈ ಆಟಗಳನ್ನು ಆಡಲು ಮರಿಗಳಿಗೆ ಅವಕಾಶವಿರಬೇಕು. ಸ್ಥಳವನ್ನು ಎಚ್ಚರಿಕೆ ವಹಿಸಿ ಆರಿಸಿಕೊಳ್ಳಬೇಕು. ಅದು ಕಾಡಿನಂತಿರಬೇಕು. ಆದರೆ ಅಲ್ಲಿ ಕಷ್ಟಕಾರ್ಪಣ್ಯಗಳೂ, ಅಪಾಯಗಳೂ ಇರಬಾರದು. ಮುಳ್ಳುಕೊಂಪೆಗಳೂ, ಅಪಾಯಕಾರಿ ಹಳ್ಳಕೊಳ್ಳಗಳೂ, ಹಾಳು ಬಾವಿಗಳೂ ಇರುವ ಪ್ರದೇಶವನ್ನು ಆರಿಸಿಕೊಳ್ಳಬಾರದು. ಮರಗಳು ಹೇರಳವಾಗಿರುವ, ಊರಿಗೆ ಸಮೀಪವಾಗಿರುವ, ಏಕಾಂತ ವನಪ್ರದೇಶದಲ್ಲಿ, ಆಟವನ್ನಾಡಲು ನಿಶ್ಚಯಿಸಿದ್ದಾದರೆ ಅದು ಒಳ್ಳೆಯ ಆಯ್ಕೆಯೆನಿಸಿತು.

ಆಟಗಳು ಸರಳವಾಗಿರಬೇಕು. ಸುಲಭವಾಗಿ ಅರ್ಥಮಾಡಿಕೊಂಡು ಪಾಲಿಸಬಹುದಾದ ನಿಯಮಗಳಿರಬೇಕು. ಮರಿಗಳಿಗೆ ಆದಷ್ಟೂ ಹೊರಾಂಗಣ ಪ್ರದೇಶಗಳಲ್ಲಿ ದಿನನಿತ್ಯದ ಆಟಗಳೂ, ಆಗಾಗ್ಗೆ ಬಯಲು ಪ್ರದೇಶದಲ್ಲಿನ ಆಟಗಳೂ ಇರಬೇಕು.

ಹಿಂಡಿನ ಸಭೆಗಳಲ್ಲಿ ಸಾಮಾನ್ಯವಾಗಿ, ಕಬ್‌ಮಾಸ್ಟರು ಆಟಗಳ ನಾಯಕರಾಗಿರುತ್ತಾರೆ. ಪ್ರತಿ ಸಭೆಯಲ್ಲಿಯೂ ಆಡಿಸುವ ಆಟಗಳ ಬಗ್ಗೆ ಮುಂದಾಗಿ ಪರ್ಯಾಲೋಚನೆ ಮಾಡುತ್ತಾರೆ. ರೂಪುರೇಷೆಗಳನ್ನು ನಿಯೋಜಿಸಿಕೊಳ್ಳುತ್ತಾರೆ. ಹಾಗೆಂದ ಮಾತ್ರಕ್ಕೆ ಆಟಗಳನ್ನೂ ಅವರೇ ಆಡಿಸಬೇಕೆಂದೇನೂ ಇಲ್ಲ. ತಮ್ಮ ಸಹಾಯಕ ಕಬ್‌ಮಾಸ್ಟರುಗಳಿಗೆ ಎಲ್ಲಾ ಜವಾಬ್ದಾರಿ ಕೊಡುತ್ತಾರೆ. ಅವರವರ ಭಾಗಕ್ಕೆ ಬಂದ ಸಭೆಯ ಕಾರ್ಯಕ್ರಮದ ಭಾಗಗಳನ್ನು ಅವರವರು ನಿರ್ವಹಿಸುತ್ತಾರೆ. ಜೊತೆಗೆ ಸದಾ ಸಿದ್ಧರಾಗಿದ್ದು, ಅವಶ್ಯಕತೆ ಬಿದ್ದಾಗಲೆಲ್ಲಾ ಹೊಸ ಆಟಗಳು, ಅಥವಾ ಹಳೆಯ ಆಟಗಳು ಅಥವಾ ಸೂಕ್ತವಾಗಿ ಮಾರ್ಪಾಡು ಮಾಡಿದ ಆಟಗಳನ್ನು ಆಡಿಸುತ್ತಾರೆ.

ಆಟಗಳನ್ನಾಡಿಸುವಾಗ, ಈ ಕೆಳಕಂಡ ಸೂತ್ರಗಳನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು.

1) ಆಟದ ಉದ್ದೇಶವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿರಬೇಕು.

2) ಆಟದ ನಿಯಮಗಳು ಸ್ಪಷ್ಟವಾಗಿರಬೇಕು. ಅವುಗಳನ್ನು ಮರಿಗಳಿಗೆ ಸ್ಪಷ್ಟವಾಗಿ ಅರ್ಥವಾಗುವಂತೆ ವಿವರಿಸಬೇಕು.

3) ಆಟಗಳನ್ನು ಶ್ರುತಗೊಳಿಸುವ ಮುನ್ನ ಅವುಗಳಿಗೆ ಬೇಕಾದ ಎಲ್ಲ ಸಾಧನ ಸಾಮಗ್ರಿಗಳನ್ನೂ ತಯಾರಾಗಿಟ್ಟುಕೊಳ್ಳಬೇಕು.

4) ಎಲ್ಲರ ಗಮನವನ್ನೂ ಸೆಳೆದು ಅವರು ಜಾಗರೂಕರಾಗಿರುವಾಗ ಪೈಪೋಟಿಯನ್ನು ಪ್ರಾರಂಭಿಸಬೇಕು. ಅದೇ ರೀತಿ ಕೊನೆಗೊಳ್ಳಬೇಕು, ಯಾವುದೇ ರೀತಿಯ ಅಲಸಿಕೆಗೂ ಅವಕಾಶವಿರಬಾರದು.

5) ಆಟದ ನಾಯಕನು ವಿವರಣೆ ನೀಡುವಾಗ ಮರಿಗಳು ನಿಶ್ಯಬ್ದದಿಂದಿದ್ದು, ಹೇಳುವುದನ್ನು ಜಾಗರೂಕತೆಯಿಂದ ಕೇಳಿಸಿಕೊಳ್ಳಬೇಕು.

6) ನಿಯಮಗಳ ಉಲ್ಲಂಘನೆಯ ಬಗ್ಗೆ ಸಹೃದಯತೆಯಿಂದ ಆದರೆ ದೃಢತೆಯಿಂದ ವರ್ತಿಸಬೇಕು. ಇದರಿಂದ ಮರಿಗಳು ತಮ್ಮ ಉಲ್ಲಂಘನಾ ಮನೋಭಾವದ ನಿಷ್ಪ್ರಯೋಜಕತೆಯನ್ನು ಅರಿತುಕೊಳ್ಳುತ್ತಾರೆ.

7) ನೋಡುವವರು, ಯಾವುದೇ ಅಭಿಪ್ರಾಯವನ್ನೂ ವ್ಯಕ್ತಪಡಿಸಬಾರದು. ಕಬ್‌ಮಾಸ್ಟರ ನಿರ್ಣಯಗಳಲ್ಲಿ ತಲೆ ಹಾಕಬಾರದು. ಕಬ್‌ಮಾಸ್ಟರ ನಿರ್ಣಯವೇ ಅಂತಿಮವಾದುದು.

ಆಟವನ್ನು ಪ್ರಕಟಪಡಿಸುವ ಮುನ್ನ ಅವಶ್ಯಕವಾದ ಸಾಧನ ಸಾಮಗ್ರಿಗಳು ತಯಾರಾಗಿರುವ ಬಗ್ಗೆ ಹೇಳಲಾಯಿತು. ಇದರ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಂಡು, ಆಟಕ್ಕೆ ಬೇಕಾದ ಸಾಧನ ಸಾಮಗ್ರಿಗಳ ಪಟ್ಟಿಯನ್ನು ಹಾಕಿಕೊಳ್ಳಬೇಕು. ಹಿಂಡಿನಲ್ಲಿ ಆಡಿಸಬಹುದಾದ ಆಟಗಳಿಗೆ ಬೇಕಾಗಿರುವ ಎಲ್ಲಾ ಸಾಮಗ್ರಿಗಳನ್ನೂ, ಒಂದು ಬೇರೆಯದೇ ಆದ ಪೆಟ್ಟಿಗೆ, ಎಂದರೆ "ಆಟಗಳಿಗೆ ಬೇಕಾದ ಸಾಮಾನುಗಳ ಪೆಟ್ಟಿಗೆ"ಯಲ್ಲಿ ಶೇಖರಿಸಬೇಕು. ಹಿಂಡಿನ ಸಭೆಯು ಮುಗಿದ ಬಳಿಕ ಸಹಾಯಕ ಕಬ್‌ಮಾಸ್ಟರುಗಳು, ಆಟಗಳಿಗೆ ತೆಗೆದುಕೊಂಡ ಎಲ್ಲಾ ಸಾಮಗ್ರಿಗಳನ್ನೂ, ಸರಿಯಾಗಿ ತಾಳೆ ನೋಡಿ, ಆಟಗಳಿಗೆ ಬೇಕಾದ ಸಾಮಾನುಗಳ ಪೆಟ್ಟಿಗೆಯಲ್ಲಿ ಭದ್ರಪಡಿಸಬೇಕು. ತಿಂಗಳಿಗೊಮ್ಮೆ ಎಲ್ಲಾ ಸಾವಮಾನುಗಳನ್ನೂ ಈಚೆಗೆ ತೆಗೆದು ತಾಳೆ ನೋಡಿ ಆವಶ್ಯಕತೆಯಿದ್ದರೆ ರಿಪೇರಿ ಮಾಡಿಸಿ, ವಾಪಸ್ಸು ಜೋಡಿಸಿಡಬೇಕು. ಎಲ್ಲಾ ಸರಂಜಾಮುಗಳೂ, ಎಲ್ಲಾ ವೇಳೆಗಳಲ್ಲಿಯೂ, ಚೊಕ್ಕಟವಾಗಿಯೂ, ಕ್ರಮಬದ್ಧವಾಗಿಯೂ ಇರಬೇಕು.

ಸ್ಪರ್ಧಾತ್ಮಕ ಆಟಗಳನ್ನಾಡುವ ಸಮಯದಲ್ಲಿ, ಮರಿಗಳು, ಸಮ ದೇಹದಾರ್ಢ್ಯವುಳ್ಳವರಾಗಿರುವಂತೆ ಕಬ್‌ಮಾಸ್ಟರು ನೋಡಿಕೊಳ್ಳಬೇಕು. ಇದರಿಂದ ಯಾರೊಬ್ಬರೂ ಹೆಚ್ಚು ಬಳಲಿಕೆ ಆಗದ ರೀತಿಯಲ್ಲಿರುತ್ತದೆ. ಬಹಳ ಚುರುಕಾದ ಆಟಗಳನ್ನಾಡುವಾಗ, ಸಮವಸ್ತ್ರ-ಷರ್ಟು ಅಥವಾ ಜರ್ಸಿಗಳನ್ನು, ಹವೆಯು ಬಿಡುವು ಕೊಡುವುದಾದರೆ, ಬಿಚ್ಚಿಡುವುದು ಒಳ್ಳೆಯದು, ಆಟಕ್ಕಾಗಿಯೇ ಬೇರೆ ಪಾದರಕ್ಷೆ ಇರುವುದು ಅಥವಾ ಪಾದರಕ್ಷೆಯು ಇಲ್ಲದೆಯೇ ಇರುವುದು ಒಳ್ಳೆಯದು.

ಹಿಂಡಿನ ಸಭೆಗಳ ವೇಳೆಯಲ್ಲಿ ಮರಿಗಳು ಸಹಜವಾಗಿ ಹೊಲಸು ಮಾಡಿಕೊಳ್ಳುತ್ತಾರೆ. ಅವರುಗಳು ಮನೆಗೆ ಹಿಂದಿರುಗುವ ಮುನ್ನ ಅಚ್ಚುಕಟ್ಟಾಗಿಯೂ ಅಂದವಾಗಿಯೂ ಇರುವಂತೆ ನೋಡಿಕೊಳ್ಳಬೇಕು. **ಹಿಂಡಿಗೆ "ವಿಸರ್ಜನ್" ಹೇಳುವುದಕ್ಕೆ ಮೊದಲು ವಿಧಿವಿಹಿತವಾಗಿ ಮರಿಗಳ ಅಚ್ಚುಕಟ್ಟಿನ ಬಗ್ಗೆ ತನಿಖೆ ಮಾಡುವುದೊಳ್ಳೆಯದು.**

ಆಟಗಳು ಒಂದು ಶಿಕ್ಷಣ ಮಾಧ್ಯಮವಾಗಿದೆ. ಅವುಗಳನ್ನು ಆಡುವ ರೀತಿಯಲ್ಲಿ, ಅವುಗಳ ಮೌಲ್ಯವು ಆಧಾರಿತವಾಗಿರುತ್ತದೆ.

ಮರಿಗಳು ಆಟಗಳನ್ನು ಉತ್ಸಾಹದಿಂದಲೂ, ಹುಮ್ಮಸ್ಸಿನಿಂದಲೂ ಸರಿಯಾಗಿ ಆಡಿದರೆ, ನಡತೆ ಮತ್ತು ಒಳ್ಳೆಯ ಅಭ್ಯಾಸಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯಕವಾಗುತ್ತದೆ.

ಕಬ್‌ಮಾಸ್ಟರು ಆಟಗಳ ಮೌಲ್ಯಗಳನ್ನು ತಿಳಿದವರಾಗಿದ್ದು, ಅವುಗಳನ್ನು ಮರಿಗಳ ಆರೋಗ್ಯಕರ ಬೆಳವಣಿಗೆಗೆ ಮೂಲ ವಸ್ತುಗಳನ್ನಾಗಿಯೂ, ಶಿಕ್ಷಣ ಸಾಧನಗಳನ್ನಾಗಿಯೂ ಉಪಯೋಗಿಸಿಕೊಳ್ಳುತ್ತಾರೆ. ಮರಿಗಳ ನಡತೆ ಮತ್ತು ಅಭ್ಯಾಸಗಳು, ಅವರುಗಳೇ ಲವಲವಿಕೆಯುಳ್ಳವರಾಗಿಯೂ (ಅಜೈಲ್) ಹಸನ್ಮುಖಿಗಳಾಗಿಯೂ ಇರಲು, ಸಹಾಯಕವಾಗುತ್ತವೆಂಬ ಅಂಶವನ್ನು ಕಬ್‌ಮಾಸ್ಟರು ಅರಿತವರಾಗಿರುತ್ತಾರೆ.

◆

ಸಾರಪತ್ರಕ-1

ಅಧ್ಯಾಯ-14

ಮರಿಯ ಪ್ರಗತಿಯ ಮಾರ್ಗ



ಸಾರಪತ್ರಕ-2

ಗೌರವ ಶ್ರೇಣಿ	ಮುಂದಿನ ಪದಕವನ್ನು ಪಡೆಯಲು ಅರ್ಹತೆ ಅದಕ್ಕೆ ಬೇಕಾಗಿರುವ ಕನಿಷ್ಠ ಕಾಲಾವಧಿ	ಶಿಕ್ಷಣ ಕೊಡುವವರು	ಪರೀಕ್ಷೆಗೆ ಸಿದ್ಧತೆ ಮಾಡುವವರು	ಪರೀಕ್ಷಕರು	ಪದಕವನ್ನು ಕೊಡಲು ಶಿಫಾರಸ್ಸು ಮಾಡುವವರು	ಮತ್ತಷ್ಟು ಪ್ರವೀಣತಾ ಪದಕಗಳನ್ನು ಪಡೆಯಲು ಅರ್ಹತೆ	ಶಿಕ್ಷಣ ಕೊಡುವವರು	ಪರೀಕ್ಷೆಗೆ ಅನುವು ಮಾಡುವವರು	ಪರೀಕ್ಷಕರು	ಪ್ರವೀಣತಾ ಪದಕವನ್ನು ಕೊಡಲು ಶಿಫಾರಸು ಮಾಡುವವರು
'ಉಮೇದುವಾರ' ನಿಂದ	'ಪ್ರವೇಶ್' ಪದಕ 1 ತಿಂಗಳು	ಕಬ್ ಮಾಸ್ಟರು	ಕಬ್ ಮಾಸ್ಟರು	ಕಬ್ ಮಾಸ್ಟರು	ಕಬ್ ಮಾಸ್ಟರು	—	—	—	—	—
ಪ್ರವೇಶ್ ನಿಂದ	ಪ್ರಥಮ ಚರಣ್ ಪದಕ 1 ತಿಂಗಳು	ಕಬ್ ಮಾಸ್ಟರು ಸಾ॥ ಕಬ್ ಮಾಸ್ಟರು	ಕಬ್ ಮಾಸ್ಟರು ಸಾ॥ ಕಬ್ ಮಾಸ್ಟರು	ಕಬ್ ಮಾಸ್ಟರು	ಕಬ್ ಮಾಸ್ಟರು	ಎರಡು ಮಾತ್ರ	ಕಬ್ ಮಾಸ್ಟರು ಸಾ॥ ಕಬ್‌ಮಾಸ್ಟರು ಕಬ್ ಬೋಧಕ ಇತರರು	ಟ್ರೈನಿಂಗ್ ಕೌನ್ಸಲರ್	ಸ್ವತಂತ್ರ ಪರೀಕ್ಷಕರು*	ಸ್ವತಂತ್ರ ಪರೀಕ್ಷಕರು
ಪ್ರಥಮ ಚರಣ್ ಇಂದ	ದ್ವಿತೀಯ ಚರಣ್ ಪದಕ 3 ತಿಂಗಳು	ಕಬ್ ಮಾಸ್ಟರು ಸಾ॥ ಕಬ್ ಮಾಸ್ಟರು	ಟ್ರೈನಿಂಗ್ ಕೌನ್ಸಲರ್	ಸ್ವತಂತ್ರ ಪರೀಕ್ಷಕರು*	ಕಬ್ ಮಾಸ್ಟರು	ಮತ್ತೆ ಎರಡು	ಕಬ್ ಮಾಸ್ಟರು ಸಾ॥ ಕಬ್‌ಮಾಸ್ಟರು ಕಬ್ ಬೋಧಕ ಇತರರು	ಟ್ರೈನಿಂಗ್ ಕೌನ್ಸಲರ್	ಸ್ವತಂತ್ರ ಪರೀಕ್ಷಕರು*	ಸ್ವತಂತ್ರ ಪರೀಕ್ಷಕರು
ದ್ವಿತೀಯ ಚರಣ್ ಇಂದ	ತೃತೀಯ ಚರಣ್ ಪದಕ 9 ತಿಂಗಳು 7 ವರ್ಷ ಪೂರೈಸಿ-ರಬೇಕು	ಕಬ್ ಮಾಸ್ಟರು ಸಾ॥ ಕಬ್ ಮಾಸ್ಟರು	ಟ್ರೈನಿಂಗ್ ಕೌನ್ಸಲರ್	ಸ್ವತಂತ್ರ ಪರೀಕ್ಷಕರು*	ಟ್ರೈನಿಂಗ್ ಕೌನ್ಸಲರ್	ಎಲ್ಲಾ	ಕಬ್ ಮಾಸ್ಟರು ಸಾ॥ ಕಬ್‌ಮಾಸ್ಟರು ಕಬ್ ಬೋಧಕ ಇತರರು	ಟ್ರೈನಿಂಗ್ ಕೌನ್ಸಲರ್	ಸ್ವತಂತ್ರ ಪರೀಕ್ಷಕರು*	ಸ್ವತಂತ್ರ ಪರೀಕ್ಷಕರು
ತೃತೀಯ ಚರಣ್ ಇಂದ	ಚತುರ್ಥ ಚರಣ್ ಪದಕ 9 ತಿಂಗಳು	ಕಬ್ ಮಾಸ್ಟರು ಸಾ॥ ಕಬ್ ಮಾಸ್ಟರು	ಟ್ರೈನಿಂಗ್ ಕೌನ್ಸಲರ್	ಸ್ವತಂತ್ರ ಪರೀಕ್ಷಕರು*	ಟ್ರೈನಿಂಗ್ ಕೌನ್ಸಲರ್	ಎಲ್ಲಾ	ಕಬ್ ಮಾಸ್ಟರು ಸಾ॥ ಕಬ್‌ಮಾಸ್ಟರು ಕಬ್ ಬೋಧಕ ಇತರರು	ಟ್ರೈನಿಂಗ್ ಕೌನ್ಸಲರ್	ಸ್ವತಂತ್ರ ಪರೀಕ್ಷಕರು*	ಸ್ವತಂತ್ರ ಪರೀಕ್ಷಕರು

ಜಿಲ್ಲಾ/ಸ್ಥಳೀಯ ಸಂಸ್ಥೆಯ ಅಧಿಕೃತ ಪರೀಕ್ಷಕರ ಪಟ್ಟಿಯಲ್ಲಿರುವ, ಪರೀಕ್ಷಕರ ಪೈಕಿ ಯಾರನ್ನಾದರೂ, ಸ್ವತಂತ್ರ ಪರೀಕ್ಷಕರನ್ನಾಗಿ ಟ್ರೈನಿಂಗ್ ಕೌನ್ಸಲರು ಸೂಚಿಸುತ್ತಾರೆ.

ಅಧ್ಯಾಯ-15

ಪ್ರಥಮ ಚರಣ್ ಪದಕದ ಪರೀಕ್ಷಾಂಶಗಳು

(ನಿಯಮ 10 ಎ.ಪಿ.ಆರ್.ಓ. II ಅಧ್ಯಾಯ-1)

1. ತನ್ನ ಸ್ವಂತ ಬಟ್ಟೆ, ಪಾದರಕ್ಷೆ ಮುಂತಾದ ವಸ್ತುಗಳನ್ನು ಒಪ್ಪವಾಗಿಯೂ ಓರಣವಾಗಿಯೂ ಇಟ್ಟುಕೊಂಡಿರಲು ತಿಳಿದಿರಬೇಕು. ವಸ್ತ್ರಗಳ ಮೇಲೆ ಗುಂಡಿ ಹೊಲಿಯಲು ಬಂದಿರಬೇಕು.

1. (ಅ) ಬಟ್ಟೆಗಳ ಬಗ್ಗೆ ಎಚ್ಚರಿಕೆ

ತನ್ನ ಬಟ್ಟೆಗಳನ್ನು ಸರಿಯಾಗಿ ಮಡಚುವುದೂ ಸಹ ಈ ಅಂಶದಲ್ಲಿ ಸೇರಿದೆ. ಧೋಬಿಯು ಹೇಗೆ ಮಡಚುತ್ತಾನೆಂಬುದನ್ನು ಗಮನಿಸಿ, ಅದೇ ಕ್ರಮವನ್ನನುಸರಿಸುವುದು ಉತ್ತಮ ಮಾಗ. ಮಡಚುವ ಬಟ್ಟೆಯನ್ನು ಹಾಸಿಗೆ ಅಥವಾ ಮೇಜಿನ ಮೇಲೆ ಮಟ್ಟವಾಗಿ, ಮಡಿಕೆಗಳಿಲ್ಲದಂತೆ ಹರಡುವುದು.



ಷರ್ಟನ್ನು ಮಡಿಸುವುದು

ಮೇಲಿನ ಚಿತ್ರದಲ್ಲಿ ಮಡಚುವ ರೀತಿಯನ್ನು ವಿವರವಾಗಿ ತೋರಿಸಲಾಗಿದೆ.

ಈ ಪರೀಕ್ಷಾಂಷದ ಭಾಗವಾಗಿ ಮರಿಯು ಮಾಡಬೇಕಾದ ಇನ್ನೊಂದು ಕರ್ತವ್ಯವೆಂದರೆ ಮರಿಗಳ ಹಿಂಡಿನ ಕೋಣೆ/ಗುಹೆಗಳನ್ನು ಒಪ್ಪವಾಗಿಯೂ, ಓರಣ ವಾಗಿಯೂ ಇಟ್ಟುಕೊಂಡಿರುವುದು. ಈ ದಿಶೆಯಲ್ಲಿ ಅವನು ಸತತವಾಗಿ ಗಮನ ಹರಿಸಬೇಕೆಂಬುದನ್ನು ಅವನಿಂದ ಆಶಿಸಲಾಗುತ್ತದೆ. ಇದರ ಹಿನ್ನೆಲೆಯಾದರೂ ಇಷ್ಟೆ. ಮರಿಗಳು ತಾವು ಕೆಲಸ ಮಾಡುವಾಗ್ಗೆ ಬಿದ್ದಿರಬಹುದಾದ ಕಸ, ಕಡ್ಡಿ, ಸೆತ್ತೆ, ಮೊದಲಾದವುಗಳನ್ನು ನಗುನಗುತ್ತಾ ತೆಗೆದುಹಾಕಿ, ಸ್ಥಳವು ಒಪ್ಪವಾಗಿಯೂ ಓರಣವಾಗಿಯೂ ಇರುವಂತೆ ಜಾಗ್ರತೆ ವಹಿಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. (1) ಎಲ್ಲೆಂದರಲ್ಲಿ ಕಸ ಕಡ್ಡಿ ಹಾಕದಂತೆ ಇರುವುದನ್ನು ಕಲಿಯಬೇಕು. (2) ಆ ರೀತಿ ಹಾಕಿರುವುದನ್ನು ಕಂಡಕೂಡಲೇ ತೆಗೆಯಬೇಕು. ಪ್ರಾರಂಭ ದೆಶೆಯಲ್ಲಿ ಅಭ್ಯಾಸ ಮಾಡಲು ಹಿಂಡಿನ ಕೋಣೆಯಾಯಿತು. ಅದು ಅಲ್ಲಿಗೇ ನಿಲ್ಲದೆ, ಕ್ರಮೇಣ ಅವರ ಮನೆ, ಶಾಲೆಯ ಆವರಣ, ಬೀದಿ, ನೆರೆಹೊರೆ, ಪರಿಸರ ಹೀಗೆ ವಿಸ್ತರಿಸಿ, ಅವರು ಹೆಮ್ಮೆಯಿಂದ ಆ ಕೆಲಸ ಮಾಡುವಂತಾಗಬೇಕು. ಕಬ್‌ಮಾಸ್ಟರು ಆಗಾಗ್ಗೆ ಹಿಂಡಿನ ವತಿಯಿಂದ ನಿರ್ಮಲೀಕರಣ ಕಾರ್ಯಕ್ರಮಗಳನ್ನು ಏರ್ಪಡಿಸಿ, ಮರಿಗಳ ಈ ಶಿಕ್ಷಣಾಂಶದಲ್ಲಿ ನೆರವಾಗಬೇಕು. ಈ ರೀತಿಯ ಕಾರ್ಯಕ್ರಮಗಳು ಶಾಲೆಗಳು, ಉದ್ಯಾನವನಗಳು, ಶಿಬಿರ ಕ್ಷೇತ್ರಗಳು ಹೀಗೆ ಪಸರಿಸಿ, ಶಿಕ್ಷಣಾಂಶ ಮಾತ್ರವಾಗಿ ಉಳಿಯದೆ, ಉನ್ನತ ಮಟ್ಟದ ಸೇವೆಯೂ ಆಗಿದ್ದು, ಅದು ಆ ರೀತಿ ಪರಿಗಣಿಸಲ್ಪಡು ತ್ತದೆ ಮತ್ತು ಶ್ಲಾಘಿಸಲ್ಪಡುತ್ತದೆ.

1. (ಅ) ಪಾದರಕ್ಷೆಗಳನ್ನು ಚೊಕ್ಕಟಗೊಳಿಸುವುದು ಮತ್ತು ಮೆರುಗುಗೊಳಿಸುವುದು:

ಮರಿಯು ಬೂಟ್ಸ್/ಷೂಸ್/ಚಪ್ಪಲಿಗಳ ಜೊತೆಯನ್ನು ಚೊಕ್ಕಟಗೊಳಿಸಲು ಬರಬೇಕು.

ತಾವು ಧರಿಸುವ ಬೂಟ್ಸ್/ಷೂಸ್/ಚಪ್ಪಲಿಗಳನ್ನು ಚೊಕ್ಕಟ ಮಾಡಿ ಮೆರುಗು ಕೊಡುವುದನ್ನು ಕಲಿಯಬೇಕೆನ್ನುವುದು ಈ ಪರೀಕ್ಷಾಂಶದ ಗುರಿ.

ಪಾಲಿಷ್ ಮಾಡುವುದು

ಷೂಗಳಿಗೆ ಮೆರುಗು ಕೊಡುವುದನ್ನು ಎಚ್ಚರಿಕೆ ವಹಿಸಿ ಮಾಡಬೇಕು. ಮೊದಲು ಹಳೆಯ ಬಟ್ಟೆಯಿಂದ ಪೂರಾ ಚೊಕ್ಕಟ ಮಾಡಬೇಕು.

ಮೆತ್ತಿಕೊಂಡಿರಬಹುದಾದ ಮಣ್ಣು ಇತ್ಯಾದಿಯನ್ನು ಚರ್ಮಕ್ಕೆ ಹಾನಿಯಾಗದಂತೆ, ಹುಷಾರಾಗಿ ಕೆರೆದು ತೆಗೆಯಬೇಕು. ಬಳಿಕ ಒದ್ದೆಬಟ್ಟೆಯಿಂದ ಒರೆಸಬೇಕಾಗಬಹುದು. ಹಾಗೆ ಒದ್ದೆ ಬಟ್ಟೆಯಿಂದ ಒರೆಸಿದರೆ, ಪಾಲಿಷ್ ಹಾಕುವುದಕ್ಕೆ ಮುಂಚೆ ಚರ್ಮವು ಒಣಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಷೂಸ್‌ಗಳು ಕಂದು ಅಥವಾ ಕಪ್ಪು ಬಣ್ಣದ್ದಾಗಿರಬಹುದು. ಬಣ್ಣಕ್ಕೆ ತಕ್ಕ ಹಾಗೆ ಪಾಲಿಷ್ ಸಿಗುತ್ತದೆ. ಅದನ್ನು ಬಟ್ಟೆಯಿಂದ ಅಥವಾ ಬ್ರಷ್‌ನಿಂದ ತೆಳ್ಳಗೆ ಲೇಪಿಸಬೇಕು. ಒಂದೆರಡು ನಿಮಿಷಗಳ ಬಳಿಕ ಮೃದುವಾದ ಬಟ್ಟೆಯ ಉಂಡೆ ಅಥವಾ ಬ್ರಷ್‌ನಿಂದ ಮೆರುಗು ಕೊಡಬೇಕು. ಮೇಲೆ ಮೇಲೆ, ಬೇಗ ಬೇಗ ಉಜ್ಜಿದರೆ ಒಂದು ರೀತಿಯ ಶಾಖವುಂಟಾಗಿ ಷೂಗಳಿಗೆ ಒಳ್ಳೆಯ ಹೊಳಪು ಬರುತ್ತದೆ. ಬಿಳಿಯ ಕ್ಯಾನ್‌ವಾಸ್ ಷೂಗಳಿಗೆ ಬಿಳಿಯ ಲಿಕ್ವಿಡ್ ಪಾಲಿಷ್ ಅಥವಾ ಕೇಕ್ ದೊರಕುತ್ತದೆ. ಕೇಕ್ ಆದರೆ ಅದರಲ್ಲಿ ಹಳ್ಳವಿರುತ್ತದೆ. ಅದರೊಳಗೆ ಸ್ವಲ್ಪ ನೀರು ಹಾಕಿ ಸ್ಪಾಂಜಿನಿಂದ ಕದಡಿದರೆ ಹಾಲಿನ ರೀತಿಯ ದ್ರವವು ಬರುತ್ತದೆ. ಸ್ಪಂಜು ಇಲ್ಲದಿದ್ದರೆ ಹಳೆಯ ಬಟ್ಟೆಯನ್ನು ಉಂಡೆಯಾಗಿ ಸುತ್ತಿ ಈ ಕೆಲಸಕ್ಕೆ ಉಪಯೋಗಿಸಬಹುದು. ಷೂಸನ್ನು ಒರಟು ಬಟ್ಟೆ ಅಥವಾ ಬ್ರಷ್‌ನಿಂದ ತಿಕ್ಕಿ ಚೊಕ್ಕಟಮಾಡಿ ಬಳಿಕ ಈ ಬಿಳಿಯ ದ್ರವವನ್ನು ಸಮನಾಗಿ ಕ್ಯಾನ್‌ವಾಸ್‌ನಮೇಲೆ ಲೇಪಿಸಬೇಕು. ಅನಂತರ ಒಣಗಲು ಬಿಡಬೇಕು. ಕಂದುಬಣ್ಣದ ಕ್ಯಾನ್‌ವಾಸ್‌ಗೂ ಸಹ ಅದೇ ಬಣ್ಣದ ಲಿಕ್ವಿಡ್ ಪಾಲಿಷ್ ಅಥವಾ ಬಿಲ್ಲೆಯಿಂದ ಅದೇ ರೀತಿ ಮಾಡಬೇಕು.

1. (ಇ) ವಸ್ತ್ರಗಳ ಮೇಲೆ ಗುಂಡಿ ಹೊಲಿಯುವುದು

ಸಮವಸ್ತ್ರ ಅಥವಾ ಷರ್ಟ್, ನಿಕ್ಕರ್, ಪ್ಯಾಂಟ್ ಇವುಗಳಲ್ಲಿ ಗುಂಡಿಗಳು ಬಿದ್ದುಹೋದರೆ, ನೋಡಲು ಚೆನ್ನಾಗಿ ಕಾಣುವುದಿಲ್ಲ. ಅಂತಹ ವೇಳೆ ಅಥವಾ ಆ ಸ್ಥಳಗಳಲ್ಲಿ ಗುಂಡಿಗಳನ್ನು ಹೊಲಿಯುವುದು ಒಂದು ಕಲೆ. ಒಮ್ಮೆ ಕಲಿತರಾಯಿತು, ಮರಿಯು ಎಂದೂ ಮರೆಯುವುದಿಲ್ಲ ಮತ್ತು ಇತರರ ಸಹಾಯಕ್ಕಾಗಿ ಕಾಯುವುದೂ ಇಲ್ಲ. ಎಲ್ಲಾ ವೇಳೆಗಳಲ್ಲಿಯೂ ಸಮವಸ್ತ್ರದಲ್ಲಿ ಗುಂಡಿಗಳಿರುವಂತೆ ನೋಡಿಕೊಂಡು ಗೆಲುವಿನಿಂದ ಚೂಟಿಯಾಗಿ ಕಾಣುತ್ತಾನೆ.

ಗುಂಡಿ ಹೊಲಿಯುವ ಕೌಶಲವನ್ನು ಇತರರ ಮಾರ್ಗದರ್ಶನದಲ್ಲಿ ಕಲಿಯುವುದೇನೋ ಸರಿಯೆ. ಈ ಕೆಳಗೆ ನೀಡಿರುವ ಅಂಶಗಳನ್ನನುಸರಿಸಿ ತನಗೆ ತಾನೇ ಕಲಿಯುವುದರಲ್ಲಿ ಹೆಚ್ಚು ಸ್ವಾರಸ್ಯವಿರುತ್ತದೆ. ಇದಕ್ಕಾಗಿ ಒಂದು ಪುಟ್ಟಚೀಲ; ಅದರೊಳಗೆ ಬಣ್ಣಬಣ್ಣದ ಗುಂಡಿಗಳು, ದಾರಗಳು (ಕನಿಷ್ಠ 2×3 ಮೀ. ಉದ್ದವಿದ್ದು, ರಟ್ಟಿನ

ತುಂಡುಗಳಿಗೆ ಸುತ್ತಿರಬೇಕು) ಮತ್ತು ಒಂದೆರಡು ಮೊನಚಾದ ಸೂಜಿಗಳು ಹಾಗೂ ಒಂದು ಸಣ್ಣ ಕತ್ತರಿ (ಮಡಚುವಂತಹುದಾದರೆ ಒಳ್ಳೆಯದು) ಇದ್ದರಾಯಿತು.

ಹೊಲಿಯುವ ವಿಧಾನ: ಸೂಜಿಗೆ ದಾರ ಪೋಣಿಸಿಕೊಂಡು, ದಾರದ ಒಂದು ಕೊನೆಯಲ್ಲಿ ಮಾತ್ರ ಗಂಟುಹಾಕಬೇಕು. ಗುಂಡಿ ಹೊಲಿಯಬೇಕಾದ ಜಾಗದಲ್ಲಿ ಬಟ್ಟೆಯ ಒಳಭಾಗದಿಂದ ಸೂಜಿಯನ್ನು ಚುಚ್ಚಬೇಕು. ಗುಂಡಿಯ ಕಣ್ಣಿನೊಳಗೆ ತೂರಿಸಿ ದಾರದ ಸಮೇತ ಎಳೆದುಕೊಳ್ಳಬೇಕು. ಇನ್ನೊಂದು ಕಣ್ಣಿನೊಳಗೆ ಸೂಜಿಯನ್ನು ತೂರಿಸಿ, ಬಟ್ಟೆಯ ಭಾಗಕ್ಕೆ ದಾರದ ಸಮೇತ ಎಳೆದುಕೊಳ್ಳಬೇಕು. ಈಗ ಗುಂಡಿಯು ಅದರ ಜಾಗದಲ್ಲಿದೆ. ಹೀಗೆ ಗುಂಡಿಯ ಬೇರೆ ಕಣ್ಣುಗಳೊಳಗೂ ಬರುವಂತೆ, ಸೂಜಿಯನ್ನು 2–3 ಬಾರಿ ಒಳಗೂ, ಹೊರಗೂ ಮಾಡಬೇಕು. ಬಳಿಕ ಬಟ್ಟೆಗೂ ಗುಂಡಿಗೂ ಮಧ್ಯೆ 2–3 ಸುತ್ತು ಹಾಕಿ ಗುಂಡಿಯನ್ನು ಭದ್ರಪಡಿಸಿ, ಒಂದೆರಡು ಗಂಟುಗಳನ್ನು ಹಾಕಬೇಕು. ಕೊನೆಯಲ್ಲಿ ದಾರವನ್ನು ಕತ್ತರಿಯಿಂದ ಕತ್ತರಿಸಿಕೊಳ್ಳಬೇಕು. ಇಲ್ಲಿಗೆ ಕೆಲಸ ಮುಗಿಯಿತು. ಅಭ್ಯಾಸ ಬಲದಿಂದ ಮರಿಯು ಈ ಕೆಲಸವನ್ನು ಅಂದವಾಗಿ ಮಾಡಬಲ್ಲನು.

ಗುಂಡಿಯನ್ನು ಸರಿಯಾಗಿಯೂ (ಮೇಲ್ಮುಖ ಮತ್ತು ಹೊಲಿಯುವ ಜಾಗ) ಭದ್ರವಾಗಿಯೂ ಹೊಲಿಯಬೇಕು. ಗುಂಡಿಯು ಕಾಜಾದೊಳಗೆ ತೂರಿ, ಬಟ್ಟೆಯ ಎಳೆತಗಳಿಗೆ ಜಗ್ಗದಂತೆ ಗಟ್ಟಿಯಾಗಿರಬೇಕು. ಕೆಲಸವು ಆದಷ್ಟೂ ಅಂದವಾಗಿರಬೇಕು. ಕೆಲಸವು ಎಷ್ಟು ಅಂದವಾಗಿದ್ದರೆ, ಧರಿಸುವ ಬಟ್ಟೆಯು ಅಷ್ಟು ಅಂದವಾಗಿ ಕಾಣುತ್ತದೆ.

2. ಊಟದ ಮೊದಲು ಪ್ರಾರ್ಥನೆ ಮಾಡುವುದನ್ನು ಕಲಿತಿರಬೇಕು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸದಸ್ಯರು ಏನು ಮಾಡುತ್ತಾರೆ? ಎಂದು ಯಾರಾದರೂ ಪ್ರಶ್ನಿಸಿದಲ್ಲಿ, ಯಾವುದೇ ವಯಸ್ಸಿನವರಾಗಲೀ, ಕೊಡುವ ಉತ್ತರ ಸಾಮಾನ್ಯವಾಗಿ ಒಂದೇ ಇರುತ್ತದೆ- "ಪ್ರಾರ್ಥನೆ ಮಾಡುತ್ತಾರೆ" ಅವರ ಪಕ್ಕದಲ್ಲಿರುವವರು "ಯಾವಾಗಲೂ ಅದು ಅಷ್ಟು ಸುಲಭವಲ್ಲ" ಎಂದು ಸೇರಿಸಿ ಹೇಳಿಯಾರು!

ನಾವೇಕೆ ಪ್ರಾರ್ಥಿಸಬೇಕು?

ನಮ್ಮ ಅಳಿವು ಉಳಿವುಗಳಿಗೆ ಆಹಾರವು ಹೇಗೋ ಹಾಗೆ, ಸಹಜವಾದ ಮಾನವ ಜೀವನದ ಉಳಿವಿಗೆ ಪ್ರಾರ್ಥನೆಯು ಅತ್ಯವಶ್ಯಕವಾದುದು. ಅದು ನಾವು ತೆಗೆದುಕೊಳ್ಳುವ ಆಹಾರವು ಜೀರ್ಣವಾಗಲು ಬೇಕಾದ ಶಕ್ತಿಯ ಮೂಲವೆಂತಲೂ ಹೇಳಬಹುದು. ಅಲ್ಲದೆ ನಾವು ಒಂದೇ ಉರುಳೆಯ ಮೇಲೆ ಜೀವನ ನಡೆಸಲಾಗು

ವುದಿಲ್ಲ ಪ್ರಾರ್ಥನೆಯೂ ಬೇಕು. ಪ್ರಾರ್ಥನೆಯು ದೈವದೊಡನೆ ನಾವು ಸಂಪರ್ಕವಿಟ್ಟು ಕೊಳ್ಳುವ ಸಾಧನವೆನ್ನಬಹುದು. ಹಾರ್ದಿಕವಾಗಿಯೂ, ಮಾನಸಿಕವಾಗಿಯೂ ಫಲತೊಟ್ಟು, ನಮ್ಮ ಇಡೀ ವ್ಯಕ್ತಿತ್ವವನ್ನು ಮೇಲೆತ್ತಿ, ದೈವದೆಡೆಗೆ ಒಯ್ಯುವ ಸಾಧನವೆಂದೂ, ಹೇಳಬಹುದು. ಅದು ಒಂದು ಕೊಟ್ಟು ತೆಗೆದುಕೊಳ್ಳುವ, ಮಾತನಾಡಬಲ್ಲ, ಕೇಳಿಸಿಕೊಳ್ಳಬಲ್ಲ, ಬಾಂಧವ್ಯವೆಂದೂ ಹೇಳಬಹುದು. ನಮ್ಮ ಐಹಿಕ ವಾಂಛೆಗಳನ್ನು ದೇವರಲ್ಲಿ ಬೇಡುವುದಕ್ಕಿಂತ, ದೈವವು ನಮಗೆ ಕೃಪೆ ತೋರುವ, ಅಪಾರ ಪ್ರೀತಿವಾತ್ಸಲ್ಯ ಗಳನ್ನು ಕಂಡುಕೊಳ್ಳುವ ಮಾರ್ಗವೆಂದು ಹೇಳಬಹುದು.

ನಾವು ಹೇಗೆ ಪ್ರಾರ್ಥಿಸಬೇಕು?

ಒಂದು ರೀತಿಯಲ್ಲಿ ಹೇಳುವುದಾದರೆ (ಬಿ.ಪಿ. ಅವರ ಅಭಿಪ್ರಾಯದಂತೆ) ಮುಚ್ಚು ಮರೆಯಿಲ್ಲದೆ, ನಾವು ದೇವರೊಡನೆ ನಡೆಸುವ ಮಾತುಕತೆಗಳಿಗೆ ಪ್ರಾರ್ಥನೆಯೆಂದು ಹೇಳಬಹುದು. ನಾವು ನಮ್ಮದೇ ಮಾತುಗಳಲ್ಲಿ ಪ್ರಾರ್ಥಿಸಬಹುದು, ಇತರರು ಉಪಯೋಗಿಸಿರುವ, ಸುಂದರವಾದ ಪದ ಸಂಯೋಜನೆಯನ್ನೂ ಬಳಸಬಹುದು. ನಾವು ಮಾಡುವ ಪ್ರಾರ್ಥನೆಯು ಸಹಜವಾಗಿರಬೇಕು. ಪ್ರಕೃತವಾಗಿರಬೇಕು. ನಂಬಿಕೆಯಿಂದ ಕೂಡಿರಬೇಕು. ಸಂಭಾಷ್ಯವಾಗಿರಬೇಕು. "ಕೇಳಿ, ನಾನು ಕೊಡುತ್ತೇನೆ..... ನನ್ನ ಕೃಪೆ ಸದಾಕಾಲವೂ ನಿಮ್ಮ ಮೇಲಿದೆ" ಎಂದು ದೈವವು ಹೇಳುವಂತಿರಬೇಕು.

ಯಾವಾಗ ಪ್ರಾರ್ಥಿಸಬೇಕು?

ನಾವು ಪ್ರಾರ್ಥಿಸುವುದು ಊಟಕ್ಕೆ ಮುಂಚೆ ಮಾತ್ರ ಸೀಮಿತವಾಗಬೇಕಾಗಿಲ್ಲ. ನಾವು ಯಾವ ವೇಳೆಯಲ್ಲಾದರೂ ಪ್ರಾರ್ಥಿಸಿಕೊಳ್ಳಬಹುದು. ಆದರೆ ಇತರರೊಡನೆಯೂ ನಿಗದಿತ ವೇಳೆಗಳಲ್ಲಿ ಪ್ರಾರ್ಥಿಸುತ್ತೇವೆ. ಈ ರೀತಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವ ವೇಳೆಗಳಲ್ಲಿ ಒಂದು ರೀತಿಯ ಶಿಸ್ತಿನ ಆವಶ್ಯಕತೆಯಿದೆ.

3. ಮನೆಯಲ್ಲಿ ಮತ್ತು ಶಾಲೆಯಲ್ಲಿ ದಿನಕ್ಕೊಂದುಪಕಾರ

ಮರಿಯು ವಯಸ್ಸಾದಂತೆ ಹಿರಿಯ ವ್ಯಕ್ತಿಯ ಪಾತ್ರವಹಿಸಲು ಶಕ್ತನಾಗಬೇಕು. ಏಳೆಂಟು ವರ್ಷಗಳ ವಯಸ್ಸಿನ ಬಾಲಕನು, ಅವನು ಚಿಕ್ಕವನಾಗಿದ್ದಾಗಿಗಿಂತಲೂ ಹೆಚ್ಚು ಜವಾಬ್ದಾರಿಯುತ ಕೆಲಸಗಳನ್ನು ಮನೆಯಲ್ಲಿ ಮಾಡಬೇಕು. ಹಾಗಾಗದಿದ್ದಲ್ಲಿ ಅವನೇಕೆ ಕ್ರಮೇಣ ಬೆಳವಣಿಗೆ ಹೊಂದಿಲ್ಲ? ಎಂಬುದಾಗಿ ಪ್ರಶ್ನಿಸಿ ಕೊಳ್ಳಬೇಕಾಗುತ್ತದೆ. ಅವನು ಪ್ರವರ್ಧಮಾನನಾದಂತೆಲ್ಲಾ ಅವನು ನಿರ್ವಹಿಸುವ ಕಾರ್ಯವ್ಯಾಪ್ತಿಯೂ, ಬೆಳೆಯುತ್ತಾ

ಹೋಗಬೇಕು. ಅವನು ಪ್ರತಿಬಾರಿಯೂ, ನೂರಾರು ಸಣ್ಣಪುಟ್ಟ ಕೆಲಸಗಳನ್ನು ನಿರ್ವಹಿಸಲು ಶಕ್ತನಾಗಬೇಕು.

ಮಾನವನ ಪ್ರತಿನಿತ್ಯದ ವ್ಯವಹಾರವೇನು? ದಿನಸಿ ಮಾರಾಟಗಾರನಾಗಿರಬಹುದು; ಪಾದರಕ್ಷೆ, ಬಟ್ಟೆ ಮುಂತಾದವುಗಳ ವರ್ತಕನಾಗಿರಬಹುದು; ಡಾಕ್ಟರ್; ಧರ್ಮಗುರು; ಉಪಾಧ್ಯಾಯ, ಸೈನಿಕ, ಪೋಲೀಸ್ ಆಗಿರಬಹುದು. ನ್ಯಾಯವಾದಿ ಅಥವಾ ಎಂಜಿನಿಯರ್ ಆಗಿರಬಹುದು. ಈ ಎಲ್ಲಾ ಹೆಸರುಗಳ ಅರ್ಥವೇನು? ಈ ಹೆಸರುಗಳನ್ನು, ನಾವು ಇತರರಿಗೆ ಮಾಡುವ "ಸಹಾಯ"ದ ಗುರುತುಗಳು, ಎಂದು ಹೇಳಬಹುದು. ಪ್ರತಿ ಪ್ರಾಮಾಣಿಕ ವ್ಯವಹಾರವೂ, ಮಾನವ ಜೀವನದ ಅವಶ್ಯಕತೆಗಳನ್ನು, ಒಂದಲ್ಲ ಒಂದು ರೀತಿಯಲ್ಲಿ ಪೂರೈಸುತ್ತದೆ.

ತನ್ನ ವ್ಯವಹಾರವನ್ನು, ಎಷ್ಟು ಸಮರ್ಪಕವಾಗಿ ನಿರ್ವಹಿಸಿದರೆ, ಅಷ್ಟು ಸಮರ್ಪಕ ರೀತಿಯಲ್ಲಿ, ಅವನಿಗೆ ಆರ್ಥಿಕ ಲಾಭವು ದೊರೆಯುತ್ತದೆ. ಮತ್ತು ಸಮಾಜಕ್ಕೆ ತಾನು ಉಪಯುಕ್ತನಾಗಿರುವೆನೆಂಬ ಕೆಲಸ ನಿರ್ವಹಣೆಯ ಸಂತೃಪ್ತಿಯೂ ಸಿಗುತ್ತದೆ.

ಹೀಗೆ ಮರಿಯು ಇತರರ ಒಳ್ಳೆಯದಕ್ಕಾಗಿ ತನ್ನ ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತಾನೆ. ಮನೆಯ ಕೆಲಸಗಳು ಮತ್ತು ಜವಾಬ್ದಾರಿಯು, ಮರಿಯು ತನ್ನ ಅವಿಶ್ರಾಂತ ತಾಯ್ತಂದೆಯರಿಗೆ ಮಾಡುವ ಕರ್ತವ್ಯವೆಂದೂ, ಅವುಗಳದೇ ಆದ ರೀತಿಯಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಲು ಸಿಕ್ಕಿದ ಅವಕಾಶಗಳೆಂದು ತಿಳಿಯಬೇಕು. ಆಟಕ್ಕೆ ಹೋಗುವ ಮೊದಲು, ಯಾವ ಮರಿಯು ತನ್ನನ್ನು ತಾನು ನಿಯಂತ್ರಿಸಿಕೊಂಡು, ಇತರರಿಗೆ ತನ್ನ ಕರ್ತವ್ಯವನ್ನು ಪಾಲಿಸುತ್ತಾನೆಯೋ, ಅವನು ಮುಂದೆ ದೊಡ್ಡವನಾದಾಗ, ತನ್ನ ವ್ಯವಹಾರದಲ್ಲಿ ಜಯಗಳಿಸುತ್ತಾನೆ; ಏಕೆಂದರೆ ತನ್ನ ಕರ್ತವ್ಯವನ್ನು ಮರೆಯದೆ ನಿರ್ವಹಿಸಿ, ಸಕಾಲದಲ್ಲಿ ಮುಗಿಸುತ್ತಾನೆ.

ತನ್ನ ಖರ್ಚಿನ ಬಗ್ಗೆ ಗಮನಹರಿಸಿ, ಅನವಶ್ಯಕ ಖರ್ಚುಗಳನ್ನು ಕಡಿಮೆ ಮಾಡಿ ಉಳಿತಾಯ ಮಾಡುವುದು, ಮರಿಯು ಮಾಡುವ ಇನ್ನೊಂದು ಮುಖ್ಯ ಕೆಲಸವಾಗಿದೆ. ಈ ರೀತಿಯಲ್ಲಿ ಅವನು ದುಂದು ವೆಚ್ಚವನ್ನು ಮಾಡದಿರುವುದನ್ನು ಕಲಿತು, ಉಳಿತಾಯ ಮಾಡಿ, ತನ್ನದೇ ಆದ ದುಡ್ಡನ್ನು ಉಳಿಸಿಟ್ಟುಕೊಳ್ಳಲು ತಯಾರಾಗುತ್ತಾನೆ.

ಶಾಲೆಯಲ್ಲಿ: ಮರಿಯು ಶಾಲೆಯಲ್ಲಿ ತನ್ನ ಅನುಭವಗಳ ಸಾರವನ್ನು ಸ್ಪಷ್ಟವಾಗಿ ಕಂಡುಕೊಳ್ಳುತ್ತಾನೆ. ಇದು ಮಾನವ ಕುಲದ, ಬಹಳ ವರ್ಷಗಳ ಸಂಚಿತ ಅನುಭವ

ವೆಂದೂ ಅರಿತುಕೊಳ್ಳುತ್ತಾನೆ. ಆ ಸಂಚಿತ ಅನುಭವಗಳನ್ನು ತೋರಿಸಿಕೊಡುವುದಕ್ಕಾಗಿಯೇ ಶಾಲೆಯಿರುವುದೆಂಬುದನ್ನು ಅರ್ಥಮಾಡಿಕೊಳ್ಳುತ್ತಾನೆ.

ನಮ್ಮ ದೇಶವು ಸರ್ವತಂತ್ರ, ಸ್ವತಂತ್ರ, ಜಾತ್ಯಾತೀತ, ಸಮತಾವಾದಿ, ಗಣತಂತ್ರ, ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ಎಲ್ಲರಿಗೂ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ದೊರಕಿಸಿಕೊಡುತ್ತದೆ. ನಮ್ಮ ಬಾಲಕರು ಯಾವಕಾಲಕ್ಕೂ ಕಾರಣಕ್ಕೂ ಖಿನ್ನರಾಗಬೇಕಾಗಿಲ್ಲ. ತಮ್ಮ ತಮ್ಮ ಆಕಾಂಕ್ಷೆ, ಗೌರವಗಳಿದ್ದಷ್ಟೂ, ಅವರು ಮೇಲೇರಬಹುದು. ನಮ್ಮ ರಾಷ್ಟ್ರದಲ್ಲಿ ವ್ಯಾಪಾರ, ವಾಣಿಜ್ಯ, ವಿಜ್ಞಾನ, ವಿದ್ಯೆ, ರಾಜಕೀಯ, ಧರ್ಮ ಮುಂತಾದ ಯಾವುದೇ ಕ್ಷೇತ್ರದಲ್ಲಾಗಲೀ, ಉಚ್ಚತಮ ಮಟ್ಟಕ್ಕೇರುವ ಅವಕಾಶ ಪ್ರತಿ ಬಾಲಕನಿಗೂ ಉಂಟು. ಸ್ವಾಮಿ ವಿವೇಕಾನಂದ, ಶ್ರೀ ಲಾಲ್‌ಬಹದ್ದೂರ್‌ಶಾಸ್ತ್ರಿ, ಡಾ. ಅಬ್ದುಲ್ ಕಲಾಂ, ಡಾ. ಅಂಬೇಡ್ಕರ್, ಮೊದಲಾದವರೆಲ್ಲರೂ, ಬಡಕುಟುಂಬಗಳಿಂದ ಬಂದವರಾದರೂ ಉಚ್ಚತಮ ಮಟ್ಟಕ್ಕೇರಿದವರು.

ಮರಿಯು ತನ್ನ ವ್ಯಾಸಂಗ ಮತ್ತು ಗುರಿಗಳ ಬಗ್ಗೆ ಯೋಚಿಸಿ, ತನ್ನ ಆಸೆ, ಆಕಾಂಕ್ಷೆಗಳ ಬಗ್ಗೆ ತನ್ನ ತಾಯ್ತಂದೆಯರು ಮತ್ತು ಹಿರಿಯ ಮಿತ್ರವರ್ಗದೊಡನೆ, ಅದನ್ನು ಚರ್ಚಿಸುವುದು ಬಹಳ ಒಳ್ಳೆಯದು. ಪ್ರಾಥಮಿಕ ಮುಗಿಯುತ್ತಿದ್ದಂತೆಯೇ ಪ್ರೌಢ ವ್ಯಾಸಂಗ, ಪ್ರೌಢಶಾಲೆ ಆಗುತ್ತಿದ್ದಂತೆ ಇನ್ನೂ ಮುಂದೆ, ಹೀಗೆ ತನ್ನ ಗುರಿಯತ್ತ ಸಾಗಲು, ಸಾಕಷ್ಟು ಪ್ರಭಾವಿತನಾಗಿ ಮುಂದುವರಿಯಲು ಶಾಲೆಯು ಸಹಾಯ ಮಾಡುತ್ತದೆ. ಅವನು ಮಾಡುವ ಪ್ರತಿದಿನದ ಉಪಕಾರವು, ಅದೆಷ್ಟೇ ಸಣ್ಣದಾಗಿರಲಿ –ಗುರುಹಿರಿಯರನ್ನು ಮರ್ಯಾದೆ, ಗೌರವಗಳಿಂದ ವಂದಿಸುವುದು, ನೈರ್ಮಲ್ಯ ಮತ್ತು ಒಪ್ಪ ಓರಣಗಳ ಬಗ್ಗೆ ಗಮನ ಹರಿಸುವುದು, ಗಿಡಗಳಿಗೆ ನೀರು ಹಾಕುವುದು, ಕಸದ ತೊಟ್ಟಿಗಳನ್ನು ಉಪಯೋಗಿಸುವುದು, ಪಾಕೀಜು ಮತ್ತು ಆರೋಗ್ಯಗಳ ಬಗ್ಗೆ ಗಮನ ಕೊಡುವುದು; ಗೋಡೆಗಳಿಗೆ ಸುಣ್ಣ ಹಚ್ಚುವುದು, ಇವೇ ಮುಂತಾಗಿ ಎಲ್ಲವುಗಳೂ ಅವನ ಜೀವನದಲ್ಲಿ ಪ್ರಭಾವಕಾರಿಯಾಗಿರುತ್ತವೆ.

4. ಮೊಣಕಾಲು ಬಾಗಿಸುವ ಮತ್ತು ಕಾಲುಬೆರಳುಗಳನ್ನು ಮುಟ್ಟುವ ವ್ಯಾಯಾಮಗಳನ್ನು ತಪ್ಪದೆ ಮಾಡಬೇಕು. ಒಳ್ಳೆಯ ಆರೋಗ್ಯದ ಅಭ್ಯಾಸಗಳನ್ನು ತಿಳಿದು ಆಚರಿಸಬೇಕು.

ಮರಿಯು ಮೊಣಕಾಲು ಬಾಗಿಸುವ ಮತ್ತು ಕಾಲುಬೆರಳುಗಳನ್ನು ಮುಟ್ಟುವ ವ್ಯಾಯಾಮಗಳನ್ನು ತಿಳಿದಿರುವುದಷ್ಟೇ ಅಲ್ಲದೆ, ಅವುಗಳನ್ನು ಸಕ್ರಮವಾಗಿ, ಪ್ರತಿದಿನವೂ ಮಾಡಬೇಕು ಮತ್ತು ಒಳ್ಳೆಯ ಅಭ್ಯಾಸಗಳನ್ನಿಟ್ಟುಕೊಳ್ಳಬೇಕು. (ಹೆಚ್ಚು ವಿವರಗಳಿಗೆ "ಬಾಲಕರಿಗಾಗಿ ಸ್ಕೌಟಿಂಗ್" ನೋಡಿ.)

ಅ) ಮೊಣಕಾಲು ಬಾಗಿಸುವ ವ್ಯಾಯಾಮ

ಈ ಚಿತ್ರದಲ್ಲಿ ತೋರಿಸಿರುವಂತೆ, ಈ ವ್ಯಾಯಾಮವನ್ನು ಮಾಡಬೇಕು ಉಸಿರೆಳೆದುಕೊಳ್ಳಿ, ಕೆಳಗೆ ಬರುವಾಗ ಉಸಿರು ಬಿಡಿ.

ಆ) ಕಾಲ್ಬೆರಳು ಮುಟ್ಟುವುದು

ಹಿಂದಕ್ಕೆ ಬಾಗಿ ಉಸಿರನ್ನು ಎಳೆದುಕೊಳ್ಳಿ, ಮೊಣಕಾಲುಗಳನ್ನು ನೇರವಾಗಿಟ್ಟುಕೊಂಡು ಮುಂದಕ್ಕೆ ಬಾಗುವಾಗ ಉಸಿರನ್ನು ಬಿಡಿ.



ಕಾಲು ಬೆರಳುಗಳನ್ನು ಮುಟ್ಟುವುದು

ಇ) ಒಳ್ಳೆಯ ಆರೋಗ್ಯ ಅಭ್ಯಾಸಗಳು

ಸುಲಭವಾದ ಎಂಟು ಆರೋಗ್ಯ ನಿಯಮಗಳಿವೆ. ಅವುಗಳನ್ನು ಅಭ್ಯಾಸ ಮಾಡಿಕೊಳ್ಳಿ.

i) ವಾರದಲ್ಲಿ ಆದಷ್ಟುಬಾರಿ, ಬಿಸಿನೀರು ಸ್ನಾನ ಮಾಡುವುದು.

ii) ದಿನಕ್ಕೊಮ್ಮೆಯಾದರೂ ಹಲ್ಲುಜ್ಜುವುದು.

iii) ದಿನದಲ್ಲಿ ಕನಿಷ್ಠ ನಾಲ್ಕು ಲೋಟ ನೀರು ಕುಡಿಯುವುದು.

iv) ಪ್ರತಿ ಬೆಳಗ್ಗೆ ಮಲವಿಸರ್ಜನೆ ಮಾಡುವುದು.

v) ಆದಷ್ಟೂ ಹಾಲು ಕುಡಿಯುವುದು. ತಾಯಿ ತಂದೆಯರಂತೆ ದೊಡ್ಡವರಾಗುವವರೆಗೂ, ಕಾಫಿ, ಟೀ ಸೇವನೆ ಮಾಡದಿರುವುದು.

vi) ಪ್ರತಿದಿನ ಹೊರಾಂಗಣದಲ್ಲಿ (ಬಯಲು) ಆಡುವುದು.

vii) ನಿದ್ದೆ ಮಾಡುವಾಗ ಕಿಟಕಿಗಳನ್ನು ತೆರೆದಿರುವುದು. ಸಾಕಷ್ಟು ನಿದ್ದೆ ಮಾಡುವುದು.

5. ಈ ಮುಂದಿನ ಶಾರೀರಕ ಚಟುವಟಿಕೆಗಳಲ್ಲಿ ಯಾವ ಎರಡನ್ನಾದರೂ ಮಾಡಬೇಕು.

ಅ) ಪಲ್ಟಿ ಹೊಡೆಯುವುದು.

ಆ) ಕಪ್ಪೆ ಜಿಗಿತ

ಇ) ಕುಪ್ಪಳಿಸುವುದು (ಹಾಪ್ಪಿಂಗ್)

ಈ) ಹಗ್ಗದ ಜಿಗಿತ (ಸ್ಕಿಪ್ಪಿಂಗ್)

ಅ) ಪಲ್ಟಿ ಹೊಡೆಯುವುದು

ಪಲ್ಟಿ ಹೊಡೆಯುವ ರೀತಿಯನ್ನು ಚಿತ್ರದಲ್ಲಿ ಕಾಣಿಸಲಾಗಿದೆ.

ಪಲ್ಟಿಹೊಡೆಯುವ ಸರಿಯಾದ ರೀತಿ ಹೀಗೆ

ಕಾಲುಗಳನ್ನು ಅಗಲಿಸಿ ನಿಲ್ಲುವುದು. ಕೈಗಳನ್ನು ನೆಲಕ್ಕೆ ಊರುವುದು. ತಲೆಯನ್ನು ಆದಷ್ಟೂ ಒಳಕ್ಕೆ ತಗ್ಗಿಸಿ, ಮೊಣಕೈ, ಮೊಣಕಾಲುಗಳ ಮಧ್ಯೆ ತೂರಿಸುವುದು. ಹೀಗೆ ಬಾಗುತ್ತಾ ಹೋದಂತೆ, ದೇಹದ ಭಾರ ಕೈಮೇಲೆ ಬಿದ್ದು, ಕಾಲುಗಳು ಮೇಲೆದ್ದು ಆಯ ತಪ್ಪುತ್ತದೆ. ಆಗ ಸ್ಪ್ರಿಂಗ್ ಒತ್ತಿದಂತೆ, ಕುತ್ತಿಗೆ ಹಿಂಭಾಗವು ನೆಲಕ್ಕೆ ತಾಗುವಂತೆ

ಉರುಳಬೇಕು. ಉರುಳುತ್ತಿದ್ದಂತೆ, ಕೈಗಳನ್ನು ಮತ್ತೆ ನೆಲಕ್ಕೆ ಮುಟ್ಟಿಸದಂತೆ, ಥಂಗನೆ ಮೇಲೆ ಹಾರಿ, ಸಾವಧಾನ್ ಸ್ಥಿತಿಗೆ ಬರಬೇಕು. ಈ ರೀತಿ ಕೊನೆಗೊಳಿಸುವುದೇ ಪಲ್ಟಿ ಹೊಡೆಯುವುದರ ಮುಖ್ಯಾಂಶ.

ಆ) ಕಪ್ಪೆಜಿಗಿತ (ಲೀಪ್ ಫ್ರಾಗ್)

ಕಪ್ಪೆಜಿಗಿತ

ಯಾವ ಮರಿಯ ಮೇಲೆ ಇನ್ನೊಬ್ಬನು ಜಿಗಿಯಬೇಕೋ, ಅವನು, ತನ್ನ ಮೊಣಕಾಲುಗಳು ಬಾಗದಂತೆ ನೇರವಾಗಿ ನಿಲ್ಲಬೇಕು. ಮುಂದಕ್ಕೆ ಬಾಗಿ ತಲೆಯನ್ನು ಒಳಗಿಟ್ಟುಕೊಳ್ಳಬೇಕು. ಕೈಗಳು, ಕಾಲುಗಳನ್ನು ಹಿಮ್ಮಡಿಯ ಬಳಿ ಹಿಡಿದಿರಬೇಕು. ಜಿಗಿಯುವ ಬಾಲಕನು ಹಿಂದಿನಿಂದ ಬಂದು, ಕೈಗಳನ್ನು ಬೆನ್ನು ಪ್ರದೇಶದ ಮೇಲೆ ಊರಿದಂತೆ ಮಾಡಿ ಜಿಗಿಯಬೇಕು. ಜಿಗಿಯುವಾಗ, ಕಾಲುಗಳನ್ನು ಆದಷ್ಟೂ ಅಗಲಿಸಿ ಪಕ್ಕಗಳಿಗೆ ದೂರಮಾಡಿ ಜಿಗಿಯ ಬೇಕು. ಬೆನ್ನು ಮೇಲೆ ಊರಿದ ಕೈಗಳ ಮೇಲೆ, ಆದಷ್ಟೂ ಭಾರಬೀಳದಂತೆ ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರೆ, ನಿಂತಿರುವ ಬಾಲಕನು ಮುಗ್ಗರಿಸಿ ಬೀಳುತ್ತಾನೆ. ಜಿಗಿದ ಕೂಡಲೇ ನಿಂತಿರುವ ಮರಿಯ ಮುಂದೆ ನೆಲ ಮುಟ್ಟುವ ಮುನ್ನ ಪುನಃ ಕಾಲುಗಳನ್ನು ಒಟ್ಟು ಸೇರಿಸಿ ಸಾವಧಾನ್ ಸ್ಥಿತಿಯಲ್ಲಿ ನೆಲಮುಟ್ಟಿ ನಿಲ್ಲಬೇಕು. ಕೈಗಳನ್ನು ಭುಜದ ಮಟ್ಟ ಮೇಲೆತ್ತಿ ಕೆಳಗೆ ಬಿಡಬೇಕು.

ಇ) ಕುಪ್ಪಳಿಸುವುದು (ಹಾಪ್ಪಿಂಗ್)

ಕುಪ್ಪಳಿಸುವುದು

ಇದನ್ನು ಒಂದು ಕಾಲಿನಲ್ಲಿ ಮಾಡಬೇಕು. ಪೂರಾ ದೂರವನ್ನು ಒಂದೇ ಕಾಲಿನಲ್ಲಿ ಮಾಡದೆ, ಬೇಕಾದರೆ ಮಧ್ಯೆ ಕಾಲು ಬದಲಾಯಿಸಿಕೊಳ್ಳಲು ಅವಕಾಶವಿದೆ. ಅಕೇಲನು ಮರಿಯ ವಯಸ್ಸು ಮತ್ತು ಸಾಮರ್ಥ್ಯಗಳಿಗನುಗುಣವಾಗಿ, ಪರೀಕ್ಷಿಸುವ ವೇಳೆಯಲ್ಲಿ, ಮರಿಯು ಒಮ್ಮೆ ಕಾಲು ಬದಲಾಯಿಸಹುದೇ? ಅಥವಾ ಇನ್ನೂ ಹೆಚ್ಚು ಬಾರಿ ಬದಲಾಯಿಸಬೇಕೆ? ಅಂದರೆ ಎಷ್ಟು ಬಾರಿ ಬದಲಾಯಿಸಬೇಕು ಎಂಬುದನ್ನು ನಿರ್ಧರಿಸಬಹುದು. ಮರಿಯ ವಯಸ್ಸಿನ

ಬಾಲಕನು ಸಾಮಾನ್ಯವಾಗಿ ಈ ಬದಲಾವಣೆಗಳಿಲ್ಲದೆ ಮಾಡಬಹುದು ಅಥವಾ ಒಂದು ಬಾರಿ ಬದಲಾವಣೆ ಸಾಕಾಗುತ್ತದೆ.

ಹಗ್ಗದ ಜಿಗಿತ (ಸ್ಕಿಪ್ಪಿಂಗ್)

ಈ) ಹಗ್ಗದ ಜಿಗಿತ (ಸ್ಕಿಪ್ಪಿಂಗ್)

ಎರಡೂ ಪಾದಗಳನ್ನು ಒಮ್ಮೆಲೇ ಮೇಲೆತ್ತಿ ಜಿಗಿಯಬೇಕು, ಹಗ್ಗವನ್ನು ಚಿತ್ರದಲ್ಲಿರುವಂತೆ ಹಾರಿಸಿ ಮುಂದೆ ತಂದು, ಅದು ನೆಲಮುಟ್ಟಿ ಹಿಂದೆ ಹೋಗುವಾಗ ಥಂಗನೆ ಕಾಲು ಬೆರಳುಗಳ ಮೇಲೆ ಜಿಗಿಯಬೇಕು. ಹಾಗೆ ಜಿಗಿಯುವಾಗ ಬೇಕಾದರೆ ಮೊಣಕಾಲುಗಳನ್ನು ಬಾಗಿಸ ಬಹುದು.

6. ಹತ್ತು ವಿವಿಧ ಎಲೆಗಳನ್ನೂ, ಹತ್ತು ವಿವಿಧ ಹೂವುಗಳನ್ನೂ ಸಂಗ್ರಹಿಸಿ ಒಂದೊಂದರ ಹೆಸರನ್ನೂ ಹೇಳಬೇಕು.

ನಿಸರ್ಗವನ್ನು ಕಂಡುಕೊಳ್ಳಲು ಇದು ಸಹಾಯಕವಾಗುತ್ತದೆ. ಮರಿಗಳಲ್ಲಿ ಪ್ರಪಂಚದ ಪ್ರಕೃತಿಯ ಕೌತುಕಗಳ ಬಗ್ಗೆ ಜಾಗೃತಿಯನ್ನುಂಟು ಮಾಡುವುದು, ಈ ಚಟುವಟಿಕೆಯ ಉದ್ದೇಶವಾಗಿರುತ್ತದೆ. ಹಾಗೆಯೇ ಅದನ್ನು ಮೆಚ್ಚಿಕೊಳ್ಳುವುದು ಮತ್ತು ಸಂರಕ್ಷಣೆಯ ಆಕಾಂಕ್ಷೆಯನ್ನು ವ್ಯಕ್ತಪಡಿಸುವುದು ಮುಂದಿನ ಹೆಜ್ಜೆಗಳು.

ಈ ಚಟುವಟಿಕೆಯು, ನೋಡುವ ಹಂತದಿಂದ ಮಾಡುವ ಹಂತಕ್ಕೂ, ಮುಂದೆ ಅದು ಏಕೆ ಹಾಗೆ? ಎಂದು ವಿಚಾರ ಮಾಡುವ ಹಂತಕ್ಕೂ ಬರುತ್ತದೆ. ಇದನ್ನು ಪ್ರಗತಿಯ ಹಾದಿಯೆನ್ನಬಹುದು.

ಎಲೆಯ ಆಕಾರವೇನು?

ಮರಿಗಳಿಗೆ ಎಲೆಯ ಪಡಿಯಚ್ಚು (ಕಾರ್ಬನ್ ಇಂಪ್ರೆಷನ್) ಮಾಡುವುದನ್ನು ತೋರಿಸಿ, ಮರಿಗಳು ಹೂವುಗಳ ಮತ್ತು ಮರಗಳ ಪಟಗಳು ಅಥವಾ ದಾಖಲೆ ಪುಸ್ತಕಗಳನ್ನು ತಯಾರಿಸಲಿ. ಇದಕ್ಕೆ ಅವರು ಎಲೆ, ಹೂವುಗಳನ್ನು ಸಂಗ್ರಹಿಸಬೇಕು. ಒತ್ತಡದಲ್ಲಿ ಒಣಗಿಸಬೇಕು. ಅವುಗಳನ್ನು ದಾಖಲೆ ಪುಸ್ತಕ ಇಲ್ಲವೇ ಪಟಗಳಿಗೆ ಲಗತ್ತಿಸಬೇಕು. ಅವುಗಳ ಬಣ್ಣ, ಅಳತೆ, ಆಕಾರ, ವಾಸನೆ ಮುಂತಾದ ಗುರುತಿಸಬೇಕಾದ ವಿವರಗಳನ್ನೂ; ಅವುಗಳು ಬೆಳೆಯುವ ಜಾಗದ ಬಗ್ಗೆ –ನೆರಳಿನಲ್ಲೆ? ಬಿಸಿಲಿನಲ್ಲೆ? ನೀರಿನಲ್ಲೆ? ಮರಳಿನಲ್ಲೆ? ವಿವರಗಳನ್ನೂ ಬರೆಯಬೇಕು. ಅವರಿಂದ ಅಕೇಲರು ಸೂಕ್ಷ್ಮ

ವಿವರಗಳನ್ನು ನಿರೀಕ್ಷಿಸಬಾರದು. ಅತಿಯಾದ ವಿವರಗಳಿಂದ ಅವರು ಸ್ಕೌಟ್ ವಿಭಾಗವನ್ನು ಅತಿಕ್ರಮಿಸದಂತೆ ಎಚ್ಚರಿಕೆ ವಹಿಸಬೇಕು.

7. ಗಡಿಯಾರವನ್ನು ನೋಡಿ ಸಮಯವನ್ನು ತಿಳಿಸುವಂತಿರಬೇಕು.

ಗಡಿಯಾರವನ್ನು ನೋಡಿ ಸಮಯವನ್ನು ಹೇಳಲು, ಮರಿಗೆ ಬರಬೇಕು. ಅದು ಬಾಲಕರಿಗೆ ಕಷ್ಟಕರವಾದ ಕೆಲಸವೇನಲ್ಲ. ಸುಲಭವಾದರೂ ಅಕೇಲರಾಗಿ, ನೀವು ಮರಿಗೆ ವಿವರಗಳನ್ನು ತಿಳಿಸಬೇಕು.

ಗಡಿಯಾರದ ವರ್ತುಲವನ್ನು (1) 12 ಗಂಟೆಗಳಾಗಿಯೂ, 60 ನಿಮಿಷಗಳಾಗಿಯೂ, ವಿಭಾಗಿಸಲಾಗಿದೆ. (2) ಪ್ರತಿ 2 ಅಂಕೆಗಳ ಮಧ್ಯಭಾಗವನ್ನು 5 ನಿಮಿಷಗಳ ಅವಧಿಯೆಂದು ಗುರುತಿಸಬೇಕು. (3) ಪ್ರತಿ ನಿಮಿಷಕ್ಕೂ 60 ಬಾರಿ, ಸೆಕೆಂಡುಗಳ ಸೂಚಕವಾಗಿ, ಗಡಿಯಾರವು ಟಿಕ್ ಟಿಕ್ ಶಬ್ದ ಮಾಡುತ್ತದೆ. ಕೆಲವು ಗಡಿಯಾರಗಳಲ್ಲಿ ಸೆಕೆಂಡುಗಳ ಮುಳ್ಳು ಸಹ ಇರುತ್ತದೆ. (4) ಗಂಟೆಗಳ ಮುಳ್ಳು ಒಂದು ಸುತ್ತು ತಿರುಗಲು 12 ಗಂಟೆಗಳ ಕಾಲ ಬೇಕು. (5) ನಿಮಿಷಗಳ ಮುಳ್ಳು ಒಂದು ಸುತ್ತು ಸುತ್ತಲು 60 ನಿಮಿಷಗಳು/ 1 ಗಂಟೆ ಬೇಕು; ಸೆಕೆಂಡ್ ಮುಳ್ಳು 1 ಸುತ್ತು ಸುತ್ತಲು ಒಂದು ನಿಮಿಷ ಸಾಕು. ಇಷ್ಟೂ ಮಾಹಿತಿಯನ್ನು, ಗಡಿಯಾರವನ್ನು ನೋಡಿದ ಕೂಡಲೇ ಹೇಳಲು ಬರಬೇಕು. ಈ ಮಾಹಿತಿಯ ಆಧಾರದ ಮೇಲೆ, ಅವನ ಲೆಕ್ಕಾಚಾರವಿರಬೇಕು.

8. **ಸಮಗಂಟು ಮತ್ತು ಕೊಟ್ಟಿಗೆ ಗಂಟುಗಳನ್ನು ಹಾಕಬೇಕು ಮತ್ತು ಅವುಗಳ ಪ್ರಯೋಜನವನ್ನು ಕಾಣಿಸಬೇಕು.**

ಸಮಗಂಟು: ಸಮಗಂಟನ್ನು ಹಾಕುವ ವಿಧಾನವನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ.



ಸಮಗಂಟನ್ನು ಒಂದೇ ಹಗ್ಗದ ಎರಡು ತುದಿಗಳನ್ನು ಅಥವಾ ಒಂದೇ ಗಾತ್ರದ ಎರಡು ಹಗ್ಗಗಳ ತುದಿಗಳನ್ನು ಮತ್ತು ಗಾಯಪಟ್ಟಿ (ಬ್ಯಾಂಡೇಜ್)ಗಳನ್ನು ಕಟ್ಟಲು ಉಪಯೋಗಿಸಲಾಗುತ್ತದೆ.

ಕೊಟ್ಟಿಗೆ ಗಂಟು

ಗೂಟಗಳು, ಕೋಲುಗಳು, ಕಂಬಗಳು ಮುಂತಾದವುಗಳಿಗೆ ಹಗ್ಗವನ್ನು ಬಿಗಿಸಲು ಉಪಯೋಗಿಸಲಾಗುತ್ತದೆ.



ಈ ಗಂಟನ್ನು ಹಾಕುವ ವಿಧಾನವನ್ನು ಚಿತ್ರದಲ್ಲಿ ತೋರಿಸಲಾಗಿದೆ

9. ಈ ಮುಂದಿನವುಗಳಲ್ಲಿ ಯಾವ ಮೂರನ್ನಾದರೂ ಮಾಡಿ ತೋರಿಸಬೇಕು.

ಅ) ಒಂದು ಮರ ಅಥವಾ ಹಗ್ಗವನ್ನು ಏರಿ, ಇಳಿಯಬೇಕು.

ಆ) ಬೈಸಿಕಲ್ ಮೇಲೆ ಸುರಕ್ಷಿತವಾಗಿ ಪ್ರಯಾಣ ಮಾಡಬೇಕು.

ಇ) ಅಂಚೆಗೆ ಹಾಕುವ ಲಕೋಟೆಯ ಮೇಲೆ (ಎನ್‌ವೆಲಪ್) ವಿಳಾಸ ಬರೆದು, ಅಂಚೆಚೀಟಿ (ಸ್ಟಾಂಪ್) ಹಚ್ಚಬೇಕು.

ಈ) ರಾಷ್ಟ್ರೀಯ ಧ್ವಜಗಳನ್ನು ಹಾರಿಸುವಾಗ ಮತ್ತು ರಾಷ್ಟ್ರಗೀತೆಯನ್ನು ಹಾಡುವಾಗ/ನುಡಿಸುವಾಗ, ಏನು ಮಾಡಬೇಕೆಂಬುದನ್ನು ತಿಳಿದಿರಬೇಕು.

ಉ) ದೀಕ್ಷೆ ಸ್ವೀಕರಿಸಿದ ವೇಳೆ ಕೊಡಲಾದ ಪದಕದ ಅರ್ಥವನ್ನು ಕಂಡು ಕೊಳ್ಳಬೇಕು.

ಊ) ದೂರವಾಣಿ ಮತ್ತು ಸಂಚಾರಿ ದೂರವಾಣಿ ಬಳಸುವುದನ್ನು ತಿಳಿದಿರಬೇಕು.

ಅ. ಮರ, ಹಗ್ಗವನ್ನು ಏರಿ ಇಳಿಯುವುದು.

ಮರದ ಕೊಂಬೆಗಳ ಮೇಲೆ ಭಾರ ಹಾಕುವ ಮುಂಚೆ, ಅವುಗಳ ಬಲಾಬಲಗಳನ್ನು ಪರೀಕ್ಷಿಸಬೇಕು. ಕೆಳಗಡೆ ಸುಲಭವಾಗಿ ಸಿಗುವಂತಿರುವ, ಕೊಂಬೆಗಳಿರುವ ಮರಗಳನ್ನು ಆರಿಸಿಕೊಳ್ಳಬೇಕು. ಹೆಚ್ಚು ಎತ್ತರಕ್ಕೆ ಏರಬಾರದು. ಮರಗಳ ಮೇಲೆ ಅಥವಾ ಅಕ್ಕಪಕ್ಕಗಳಲ್ಲಿ ವಿದ್ಯುತ್ ತಂತಿ ಹಾದುಹೋಗಿದ್ದರೆ, ಅಂತಹ ಮರಗಳನ್ನು ಬಿಟ್ಟುಬಿಡಬೇಕು. ಭಾರವು ಕೊಂಬೆ ಅಥವಾ ಮುಂದೆ ಚಾಚಿದ ಕೊಂಬೆಯ ಭಾಗದ ಮೇಲಿರಬೇಕು. ಯಾವಾಗಲೂ ಅದು ಕನಿಷ್ಠ 2 ಅಡಿ ಅಂತರದಲ್ಲಿರುವ (ಕೈಯಳತೆ ಮತ್ತು ಒಂದು ಅಡಿ) ಮೂರು ಬಿಂದುಗಳ ಮೇಲೆ ಆಧಾರಿತವಾಗಿರಬೇಕು.

ಪ್ರತಿ ಬಾಲಕನೂ ಹತ್ತುವುದನ್ನು (ಏರುವುದನ್ನು) ಇಷ್ಟಪಡುತ್ತಾನೆ. ಅವನು ಅದನ್ನು ಅಭ್ಯಾಸ ಮಾಡಿ ಪರಿಣಿತನಾದರೆ, ಎಂದಿಗೂ ಬಿಡುವುದಿಲ್ಲ.

ಅನೇಕ ಪರ್ವತಾರೋಹಿಗಳು, ಬಾಲಕರಾಗಿದ್ದಾಗ್ಗೆ ಹಗ್ಗ ಮತ್ತು ಮರಗಳನ್ನು ಏರುವುದನ್ನು ಅಭ್ಯಾಸ ಮಾಡಿಕೊಂಡಿದ್ದರು. ಸತತ ಪ್ರಯತ್ನ ಮತ್ತು ಅಭ್ಯಾಸಗಳಿಂದ, ತಮ್ಮ ಮಾಂಸಖಂಡಗಳನ್ನು ಬಲಪಡಿಸಿಕೊಳ್ಳದೇ ಇದ್ದರೆ, ಏರುವಾಗ ಕೆಳಗೆ ಬಿದ್ದು ವಿಫಲರಾಗುತ್ತಾರೆ. ಕೆಲವರು ವಯಸ್ಸಾದಂತೆ ಬೆಟ್ಟ ಹತ್ತುವ ಅಥವಾ ಬಂಡೆಗಳನ್ನೇರುವ

ಹವ್ಯಾಸವನ್ನು ಬೆಳೆಸಿಕೊಳ್ಳುತ್ತಾರೆ. ಇದಕ್ಕೆ ಗಟ್ಟಿಮುಟ್ಟಾದ ಕೈಕಾಲುಗಳು, ಕೆಚ್ಚೆದೆ, ದೃಢಸಂಕಲ್ಪ ಮತ್ತು ತಾಳ್ಮೆ ಹಾಗೂ ಕಷ್ಟಸಹಿಷ್ಣುತೆಗಳು ಬೇಕು. ಅಭ್ಯಾಸಬಲದಿಂದ ಇವುಗಳು ಬರುತ್ತವೆ. ಸದಾ ಸ್ಥಿರಚಿತ್ತವುಳ್ಳವರಾಗಿಯೂ, ಅವಶ್ಯಕತೆ ಬಿದ್ದಾಗ ಚುರುಕುಗತಿಯಿಂದ ಚಲಿಸುವವರಾಗಿಯೂ ಇರುವಂತೆ ತಯಾರಾಗುತ್ತಾರೆ.

ಹಗ್ಗ ಏರುವುದು ಮತ್ತು ಇಳಿಯುವುದು: ಏರುವುದಕ್ಕೆ ಉಪಯೋಗ ಮಾಡುವ ಹಗ್ಗವು, ಕನಿಷ್ಠ ಒಂದು ಇಂಚು ಗಾತ್ರವಿರಬೇಕು. ಹಗ್ಗವನ್ನು ತಡೆತಕ್ಕೆ ಪರೀಕ್ಷಿಸಿ, ಅನಂತರದಲ್ಲಿ ಅದರ ಮೇಲೆ ಭಾರಹಾಕಬೇಕು. ಹಗ್ಗವನ್ನು ಏರುವಾಗ, ಮೊದಲು ಬಲಗೈಯನ್ನು ಆದಷ್ಟೂ ಎತ್ತರಕ್ಕೆ ಚಾಚಿ, ಹಗ್ಗವನ್ನು ಹಿಡಿಯಬೇಕು. ಎಡಗೈನಿಂದ ಬಲಗೈ ಕೆಳಗೆ, ಹಗ್ಗವನ್ನು ಹಿಡಿಯಬೇಕು. ಈಗ ಎರಡೂ ಕೈಗಳ ಮೇಲೆ ಭಾರ ಹಾಕಿ ಕಾಲುಗಳನ್ನು ಮಡಚಿ, ಆದಷ್ಟೂ ಎತ್ತರದಲ್ಲಿ, ಮೊಣಕಾಲುಗಳು ಮತ್ತು ಒಂದು ಕಾಲಿನ ಹಿಮ್ಮಡಿ ಮತ್ತು ಇನ್ನೊಂದರ ಒಳಗಾಲುಗಳಿಂದ ಹಗ್ಗವನ್ನು ಬಲವಾಗಿ ಹಿಡಿಯಬೇಕು. ಈಗ ಕೈಗಳನ್ನು ಮಡಚಿ, ತೊಡೆಗಳನ್ನು ಹಗ್ಗಕ್ಕೆ ಸಮನಾಗಿ ಮೇಲೆ ಮಾಡಿ, ದೇಹವನ್ನು ಮೇಲೆತ್ತಬೇಕು. ಇದೀಗ ಬಲಗೈಯನ್ನು ಮೇಲೆ ಚಾಚಿ ಹಗ್ಗವನ್ನು ಹಿಡಿಯಬೇಕು. ಎಡಗೈ ಮೇಲೆತ್ತಿ ಬಲಗೈನ ಕೆಳಗೆ ಹಗ್ಗವನ್ನು ಹಿಡಿಯಬೇಕು. ಕೈಗಳ ಮೇಲೆ ಭಾರ ಹಾಕಿ, ಕಾಲುಗಳ ಹಿಡಿತಕ್ಕೆ ಸ್ವಲ್ಪ ವಿಶ್ರಾಂತಿ ಕೊಡಬೇಕು. ಇದೀಗ ಮೊದಲಿನಂತೆ ಪುನಃ ಮುಂದುವರೆಸಬೇಕು.

ಕೆಳಗಿಳಿಯುವಾಗ ಜಾರಬಾರದು. ಜಾರಿದರೆ ಕೈಗಳು ಸುಟ್ಟು ಬೊಬ್ಬೆ ಹೊಡೆದು, ಚರ್ಮವು ಸುಲಿದು ಗಾಯಗಳಾಗಿ ತೊಂದರೆಗೀಡಾಗಬೇಕಾಗುತ್ತದೆ. ತೋಳುಗಳು ನೇರವಾಗುವಂತೆ ದೇಹವನ್ನು ಕೆಳಗಿಳಿಸಿ, ಕೈಗಳ ಮೇಲೆ ಭಾರವನ್ನಿಟ್ಟುಕೊಂಡು, ಕಾಲುಗಳನ್ನು ನಿಧಾನವಾಗಿ ನೇರವಮಾಡಿ. ಈ ಹಿಮ್ಮಡಿ, ಒಳಗಾಲು ಮತ್ತು ಮೊಣಕಾಲುಗಳಿಂದ ಹಗ್ಗವನ್ನು ಭದ್ರವಾಗಿ ಹಿಡಿಯಿರಿ. ಮೊದಲು ಎಡಗೈಯನ್ನೂ ಬಳಿಕ ಬಲಗೈಯನ್ನೂ ಎದೆಯ ಮುಂಭಾಗದ ಮಟ್ಟದವರೆಗೆ ಕೆಳತನ್ನಿ. ಈಗ ಕೈಗಳಿಂದ ಹಗ್ಗವನ್ನು ಬಲವಾಗಿ ಹಿಡಿಯಿರಿ. ಕಾಲುಗಳಿಗೆ ವಿಶ್ರಾಂತಿ ಕೊಟ್ಟು ದೇಹವನ್ನು ಕೆಳತನ್ನಿ. ಈಗ ಮೊದಲಿನಂತೆ ಮುಂದುವರೆಸಿ ಕಾಲುಗಳು ನೆಲಮುಟ್ಟುವವರೆಗೂ ಹೀಗೆಯೇ ಮುಂದುವರೆಯಿರಿ.

ಆ. ಬೈಸಿಕಲ್ ಮೇಲೆ ಸುರಕ್ಷಿತವಾಗಿ ಸವಾರಿ ಮಾಡಬೇಕು

ಬೈಸಿಕಲ್ ಬಹಳ ಉಪಯುಕ್ತವಾದ ವಾಹನ. ಮರಿಗಳಿಗೆ, ಸೈಕಲ್ ಬಗ್ಗೆ ಎಚ್ಚರಿಕೆ ವಹಿಸಲೂ, ಸದಾ ಒಳ್ಳೆಯ ಸ್ಥಿತಿಯಲ್ಲಿ ಇಟ್ಟುಕೊಳ್ಳಲೂ, ವಿನೋದಕ್ಕಾಗಿಯೂ,

ಪೂರಾ ಉಪಯೋಗಕ್ಕಾಗಿಯೂ, ಸಾಮಾನ್ಯವಾಗಿ ಸವಾರಿ ಮಾಡಲು ತಿಳಿದಿರುತ್ತದೆ. ಮರಿಗಳು ರಸ್ತೆಯ ನಿಯಮಗಳನ್ನು ತಿಳಿದಿರಬೇಕು. ಅವುಗಳನ್ನು ಆಚರಣೆಯಲ್ಲಿ ತರಬೇಕು.

ಸ್ಥಳೀಯ ಸೈಕಲ್ ಷಾಪ್‌ನ ಮ್ಯಾನೇಜರನ್ನಾಗಲೀ, ಪೋಲೀಸರನ್ನಾಗಲೀ ಸೈಕಲ್ ಸವಾರಿ ಮಾಡುವಾಗ, ರಸ್ತೆಯಲ್ಲಿ ಅನುಸರಿಸಬೇಕಾದ ಅಂಶಗಳನ್ನು ಹಿಂಡಿನಲ್ಲಿ ಮರಿಗಳಿಗೆ ತಿಳಿಯ ಹೇಳಲು ಕೇಳಿಕೊಳ್ಳಿ. ಸೈಕಲ್ ಸವಾರಿ ಎಚ್ಚರಿಕೆಯ ಕ್ರಮಗಳು, ಬಾಳಿಕೆ ಬರುವಂತೆ ಸೈಕಲ್ ಅನ್ನು ಇಟ್ಟುಕೊಳ್ಳುವ ರೀತಿ, ಇವುಗಳೆಲ್ಲವನ್ನೂ ತಿಳಿಸಿಕೊಡಲು, ಹಿಂಡಿನ ಒಂದು ಸಂಜೆಯ ಕಾರ್ಯಕ್ರಮದಲ್ಲಿ ಅಳವಡಿಸಿ ಕೊಳ್ಳಬಹುದು. ಪೆಟ್ರೋಲ್ ಲೀಡರುಗಳೂ, ರೋವರ್ ಸ್ಕೌಟುಗಳೂ, ತಾಯಿ ತಂದೆಯರೂ ಈ ಕೆಲಸದಲ್ಲಿ ನೆರವಾಗಬಹುದು.

ಸೈಕಲ್ ಇರುವ ಎಲ್ಲಾ ಮರಿಗಳೂ, ಸೈಕಲ್‌ನ್ನು ಹಿಂಡಿಗೆ ತರಲಿ. ಆಗ ಹಿಂಡಿನ ಇತರ ಮರಿಗಳೂ ಸಹ, ಸೈಕಲ್‌ನ ವಿವಿಧ ಭಾಗಗಳು, ಸೈಕಲ್‌ಗೆ ಎಣ್ಣೆ ಹಾಕುವ, ಪಂಕ್ಚರ್ ಹಾಕುವ ವಿಧಗಳು ಇವೇ ಮುಂತಾದ ವಿವರಗಳನ್ನು ಚರ್ಚಿಸಿ, ಗಮನಿಸಿ ತಿಳಿದುಕೊಳ್ಳಲು ಸಹಾಯವಾಗುತ್ತದೆ.

ಇ. ಅಂಚೆಗೆ ಹಾಕುವ ಲಕೋಟೆಯ ಮೇಲೆ ವಿಳಾಸವನ್ನು ಬರೆದು ಅಂಚೆ ಚೀಟಿಯನ್ನು ಅಂಟಿಸಬೇಕು

ಅಂಚೆ ಲಕೋಟೆಯು ಊರಿಂದೂರಿಗೆ ಪ್ರಯಾಣ ಮಾಡುವುದನ್ನೂ, ದೂರದಲ್ಲಿ ವಾಸಿಸುವ ಜನರಿಗೆ, ಅದು ನೀಡುವ ಸಂತೋಷವನ್ನೂ, ಕಥೆಯ ರೂಪದಲ್ಲಿ ಮರಿಗಳಿಗೆ ಹೇಳಬೇಕು.

ಮರಿಗಳು, ಹಲವಾರು ಉಪಯೋಗಿಸಿದ ಅಂಚೆ ಲಕೋಟೆಗಳನ್ನು ಪರೀಕ್ಷಿಸಿ, ಲಕೋಟೆಯ ಮೇಲೆ ಅಂಟಿಸಿರುವ ಅಂಚೆಚೀಟಿಯ ಸ್ಥಾನ, ಅದರ ಮೌಲ್ಯ; ಆ ಮೌಲ್ಯವು ಏಕೆ? ಹೇಗೆ? ಬದಲಾಗುತ್ತದೆ; ಕಳುಹಿಸುವವರ ಹಾಗೂ ಲಕೋಟೆ ಸೇರಬೇಕಾದವರ ವಿಳಾಸಗಳನ್ನು ಬರೆದಿರುವ ಭಾಗ ಮತ್ತು ರೀತಿ, ಮುಂತಾದ ಅಂಶಗಳನ್ನು ಅಧ್ಯಯನ ಮಾಡಿ, ತಿಳಿದುಕೊಳ್ಳಲಿ.

ಅಂಚೆ ಲಕೋಟೆಯ ಉಪಯೋಗ: ಲಕೋಟೆಯ ಮೇಲೆ ಏನೇನಿರುತ್ತದೆ? ಅಂಚೆ ಚೀಟಿಗಳನ್ನು ಏಕೆ ಹಚ್ಚಬೇಕು? ಹಚ್ಚಬೇಕಾದ ಅಂಚೆ ಚೀಟಿಗಳ ಸರಿಯಾದ ಮೌಲ್ಯವೇನು? ಲಕೋಟೆಯ ಮೇಲೆ ಅಂಚೆಚೀಟಿಗಳನ್ನು ಯಾವ ಜಾಗದಲ್ಲಿ ಅಂಟಿಸಬೇಕು? ಸ್ಫುಟವಾಗಿಯೂ, ಅಂದವಾಗಿಯೂ ವಿಳಾಸವನ್ನು ಬರೆಯುವ

ಅಗತ್ಯವೇನು? ಪಿನ್‌ಕೋಡನ್ನು ಏಕೆ ಉಪಯೋಗಿಸಬೇಕು? ಅಂಚೆ ಇಲಾಖೆಯಲ್ಲಿ ಜನರಿಗೆ ದೊರಕುವ ಸೌಲಭ್ಯಗಳೇನು? ಇವುಗಳ ಬಗ್ಗೆ ಅಕೇಲರು ಮರಿಗಳಿಗೆ ಅರ್ಥವಾಗುವಂತೆ ತಿಳಿಸಬೇಕು.

ಸರಿಯಾದ ಮೌಲ್ಯದ ಅಂಚೆ ಚೀಟಿಗಳನ್ನು ಅಂಟಿಸಲೂ, ಕಳುಹಿಸುವವರ ವಿಳಾಸವನ್ನು ಅಂದವಾಗಿಯೂ, ಸ್ಫುಟವಾಗಿಯೂ ಬರೆಯಲೂ ಅಭ್ಯಾಸ ಮಾಡಿಸಿರಿ. ಈ ಬಗ್ಗೆ ಪರೀಕ್ಷೆಗಳನ್ನು ನಡೆಸಿ, ತಪ್ಪುಗಳನ್ನು ತಿದ್ದಿ, ಒಪ್ಪುಗಳನ್ನು ಮೆಚ್ಚಿಕೊಳ್ಳಿರಿ. ವಿಳಾಸದಲ್ಲಿ ವ್ಯಕ್ತಿಯ ಹೆಸರು, ಮನೆ ನಂ., ರಸ್ತೆ, ಮೊಹಲ್ಲಾ, ಊರು, ಪಿನ್‌ಕೋಡ್ ಮತ್ತು ರಾಜ್ಯದ ಹೆಸರುಗಳು ಇರಬೇಕು. ಸೇರುವ ಸ್ಥಳ, ಹಳ್ಳಿಯಾದರೆ ಯಾವ ಪೋಸ್ಟಾಫೀಸಿನ ವ್ಯಾಪ್ತಿಗೆ ಒಳಪಡುತ್ತದೆ ಎಂಬುದನ್ನು ತಿಳಿಸಬೇಕು.

ಈ. ರಾಷ್ಟ್ರಧ್ವಜವನ್ನು ಹಾರಿಸುವಾಗ ಮತ್ತು ರಾಷ್ಟ್ರಗೀತೆಯನ್ನು ಹಾಡುವಾಗ/ ನುಡಿಸುವಾಗ ಏನು ಮಾಡಬೇಕೆಂಬುದನ್ನು ತಿಳಿದಿರಬೇಕು.

ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳು, ನಮ್ಮ ದೇಶ ಭಾರತವನ್ನು ಪ್ರತಿನಿಧಿಸುತ್ತವೆ. ರಾಷ್ಟ್ರಧ್ವಜವನ್ನು ಸರಿಯಾದ ರೀತಿಯಲ್ಲಿ ಹಾರಿಸುವ ಬಗ್ಗೆ ತಿಳಿದಿರಬೇಕು, ಮತ್ತು ರಾಷ್ಟ್ರಗೀತೆ "ಜನಗಣಮನ..."ವನ್ನು ಹಾಡಲು ಬರಬೇಕು.

ಕೇಸರಿ ಬಣ್ಣವು ಮೇಲ್ಭಾಗದಲ್ಲೂ, ಹಸಿರು ಬಣ್ಣವು ಕೆಳಗಡೆಯೂ ಬರುವಂತೆ ಹಾರಿಸುವುದು (ಈ ಕೆಳಗಿರುವ ಚಿತ್ರದಲ್ಲಿ ತೋರಿಸಲಾಗಿದೆ) ಸರಿಯಾದ ರೀತಿಯಾಗುತ್ತದೆ.

ರಾಷ್ಟ್ರಧ್ವಜವನ್ನು ಹಾರಿಸುವಾಗ ಮತ್ತು ರಾಷ್ಟ್ರಗೀತೆಯನ್ನು ಹಾಡುವಾಗ/ ನುಡಿಸುವಾಗ, 'ಸಾವಧಾನ್' ಸ್ಥಿತಿಗೆ ಬಂದು, ವಂದಿಸಿ, ಮರ್ಯಾದೆ ಕೊಡುವುದು ಸೂಕ್ತವಾದುದು.



ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ ॥
ಪಂಜಾಬ, ಸಿಂದು, ಗುಜರಾತ, ಮರಾಠಾ
ದ್ರಾವಿಡ, ಉತ್ಕಲ, ವಂಗ
ವಿಂಧ್ಯ, ಹಿಮಾಚಲ, ಜಮುನಾ, ಗಂಗಾ
ಉಚ್ಛಲ ಜಲಧಿ ತರಂಗ
ತವ ಶುಭ ನಾಮೇ ಜಾಗೇ
ತವ ಶುಭ ಆಶಿಷ ಮಾಘೇ
ಗಾಹೇ ತವ ಜಯ ಗಾಥಾ
ಜನಗಣಮನ ಮಂಗಳ ದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ ॥

ನಮ್ಮ ರಾಷ್ಟ್ರಗೀತೆ "ಜನಗಣಮನ....."ವನ್ನು ನಮ್ಮ ರಾಷ್ಟ್ರದ ಮಹಾನ್ ಕವಿ ಶ್ರೀ ರಬೀಂದ್ರನಾಥ ಠಾಗೂರ್‌ರವರು ರಚಿಸಿದರು. ಅವರೇ ನೀಡಿರುವ ಅದರ ಅರ್ಥವು ಹೀಗಿದೆ:– ಭಾರತದ ಜನಗಳ ಮನವನ್ನಾಳುವ ಪ್ರಭುವು ನೀನು. ಭಾರತದ ಭಾಗ್ಯ ವಿಧಾತನು ನೀನು. ಪಂಜಾಬ್, ಸಿಂಧು, ಗುಜರಾತ, ಮರಾಠಾ, ದ್ರಾವಿಡ (ಆಂಧ್ರ, ಕರ್ನಾಟಕ, ಕೇರಳ ಮತ್ತು ತಮಿಳುನಾಡುಗಳು ಸೇರಿ) ಒರಿಸ್ಸಾ ಮತ್ತು ಬಂಗಾಳಗಳ ಜನರ ಹೃದಯವಾಸಿಯಾಗಿರುವೆ ನೀನು. ವಿಂಧ್ಯ ಮತ್ತು ಹಿಮಾಚಲಗಳ ಪರ್ವತ ಶ್ರೇಣಿಯಲ್ಲಿ ನಿನ್ನ ಧ್ವನಿಯು ಎದುರುಲಿಯುತ್ತದೆ. ಜಮುನೆ ಗಂಗೆಯರ ಸಂಗೀತದಲ್ಲಿ ಬೆರೆಯುತ್ತದೆ. ಹಿಂದೂ ಮಹಾಸಾಗರದ ಅಲೆಗಳು ಮಂತ್ರೋಚ್ಚಾರಣೆ ಮಾಡುತ್ತವೆ. ನಿನ್ನ ಆಶೀರ್ವಾದಕ್ಕಾಗಿ ಪ್ರಾರ್ಥಿಸುತ್ತವೆ ನಿನ್ನನ್ನು ಬಣ್ಣಿಸಿ ಹಾಡುತ್ತಿವೆ. ಭಾರತ ಭಾಗ್ಯ ವಿಧಾತನೇ, ನಿನಗೆ ಜಯವಾಗಲಿ, ಜಯವಾಗಲಿ, ಜಯವಾಗಲಿ.

ಊ. ದೀಕ್ಷೆ ಸ್ವೀಕರಿಸಿದ ವೇಳೆ ಕೊಡಲಾದ ಪದಕದ ಅರ್ಥವನ್ನು ಕಂಡುಕೊಳ್ಳಬೇಕು.

ಮರಿಯನ್ನು ಸಂಸ್ಥೆಯ ಸದಸ್ಯನನ್ನಾಗಿ, ಪ್ರವೇಶ ಕೊಡುವ ವೇಳೆಯಲ್ಲಿ, ನೀಡುವ ಬಟ್ಟೆಯ ಪದಕವು ಸಂಸ್ಥೆಯ ಚಿಹ್ನೆ ಹೊಂದಿದ್ದು, ನೀಲಿ ಬಣ್ಣದಲ್ಲಿರುತ್ತದೆ.

ಅದರಲ್ಲಿ ತ್ರಿದಳ ಕಮಲದ ಹಳದಿಯ ರೇಖಾಚಿತ್ರವಿದ್ದು, ತ್ರಿದಳಪತ್ರ ಮತ್ತು ಅಶೋಕ ಚಕ್ರಗಳನ್ನು ಒಳಗೊಂಡಿರುತ್ತದೆ. ಅವುಗಳು ಸ್ಕೌಟ್ ಮತ್ತು ಗೈಡ್ ಚಳುವಳಿಗಳನ್ನೂ, ನಮ್ಮ ಭಾರತ ದೇಶವನ್ನೂ ಸೂಚಿಸುತ್ತವೆ.

ಬಾಲಕರು ಉಮೇದುವಾರರಾಗಿ, ಸೇರಿ ಪ್ರವೇಶ್ ಪರೀಕ್ಷೆಗಳಲ್ಲಿ ಅರ್ಹತೆ ಪಡೆದು ಸಂಪಾದಿಸಿಕೊಳ್ಳುವುದರಿಂದ, ಇದನ್ನು ಪ್ರವೇಶ್ ಪದಕವೆಂದು ಕರೆಯುತ್ತಾರೆ. ಇದು ತಪ್ಪು ಅಭಿಪ್ರಾಯವಾಗಿರುತ್ತದೆ. ಈ ಪದಕವು ಸಂಸ್ಥೆಯಲ್ಲಿ ಸದಸ್ಯತ್ವವನ್ನು ಕೊಡುತ್ತದೆ. ಸಮವಸ್ತ್ರದಲ್ಲಿ ಇದಕ್ಕೆ ನಿಗದಿತ ಸ್ಥಳವಿರುತ್ತದೆ. ಮುಂದಿನ ಪದಕ ಬಂದಂತೆ ಬದಲಾಯಿಸುವ ಇತರ ಪದಕಗಳಂತಲ್ಲದೆ, ಇದು ಅದೇ ಸ್ಥಳದಲ್ಲಿರುತ್ತದೆ. ಆದ್ದರಿಂದ ಇದನ್ನು ಸದಸ್ಯತ್ವ ಪದಕವೆಂದು ಕರೆಯುವುದು ಹೆಚ್ಚು ಸೂಕ್ತವೆನಿಸೀತು. ಬಾಲಕನು ಮರಿಯಾಗಿರುವವರೆಗೂ ಇದನ್ನು ಧರಿಸಬಹುದು.

ಊ. ದೂರವಾಣಿ ಮತ್ತು ಸಂಚಾರಿ ದೂರವಾಣಿ ಬಳಸುವುದನ್ನು ತಿಳಿದಿರಬೇಕು

ನಮಗೆಲ್ಲರಿಗೂ ತಿಳಿದಿರುವಂತೆ ದೂರವಾಣಿ (ಭಾರತ್ ಸಂಚಾರ್ ನಿಗಮ್ ಅವರು ಕೊಡುವ ಫೋನ್. ಇದನ್ನು ಲ್ಯಾಂಡ್‌ಲೈನ್ ಎನ್ನುತ್ತಾರೆ.) ವ್ಯವಸ್ಥೆಯು, ದೂರದಲ್ಲಿರುವ ವ್ಯಕ್ತಿಗಳನ್ನು ಸಂಪರ್ಕ ಮಾಡಬಹುದಾದ ಸಾಧನವಾಗಿದೆ. ಇದಕ್ಕೆ ಎರಡೂ ಕಡೆಗಳಲ್ಲಿ, ಮಾತನಾಡಬಹುದಾದ, ಕೇಳಿಸಿಕೊಳ್ಳಬಹುದಾದ, ಉಪಕರಣಗಳಿರುತ್ತವೆ, ಎರಡೂ ಕಡೆಗಳನ್ನು ಏಕ ರೀತಿಯ ತಂತಿಗಳಿಂದ ಸೇರಿಸಿರುತ್ತದೆ. ತುರ್ತು ಸಮಯಗಳಲ್ಲಿ, ಮರಿಗಳು ದೂರವಾಣಿಯನ್ನು ಬಳಸಬೇಕಾಗಬಹುದು. ಅಕೇಲರು, ಮನೆಗಳಲ್ಲಿಯೂ, ಸಾರ್ವಜನಿಕ ಸ್ಥಳಗಳಲ್ಲಿಯೂ, ಇರಬಹುದಾದ ದೂರವಾಣಿ ಉಪಕರಣದ ಬಗ್ಗೆ ಮರಿಗಳಿಗೆ ತಿಳುವಳಿಕೆ ನೀಡಬೇಕು. ಅದು ಕೆಲಸ ಮಾಡುವ ರೀತಿಯನ್ನು ಅವರಿಗೆ ವಿವರಿಸಬೇಕು. ರಿಸೀವರ್, ಡಯಲ್ ಟೋನ್, ಸಂಖ್ಯಾಪದ್ಧತಿ ಇವುಗಳ ಬಗ್ಗೆ ತಿಳಿಯ ಹೇಳುವುದಲ್ಲದೆ, ದೂರವಾಣಿ ಕರೆಕೊಟ್ಟು ಮಾತನಾಡುವ ಬಗ್ಗೆ, ಅದರಲ್ಲೂ ಸಾರ್ವಜನಿಕ ಬೂತ್‌ಗಳಲ್ಲಿ ಮಾತನಾಡುವ ಬಗ್ಗೆ ಅವರಿಗೆ ಅಭ್ಯಾಸ ನೀಡಬೇಕು.

ಸಾರ್ವಜನಿಕ ಬೂತ್‌ಗಳಲ್ಲಿ ಹೇಗೆ ಡಯಲಿಂಗ್ ಟೋನ್ ಕೇಳಿಸಿಕೊಳ್ಳಬೇಕು; ಯಾವಾಗ ದುಡ್ಡನ್ನು ಉಪಕರಣದೊಳಗೆ ಹಾಕಬೇಕು; ಎಂಗೇಜ್ ಆಗಿದ್ದರೆ ಧ್ವನಿ ಹೇಗೆ ಬರುತ್ತದೆ ಇತ್ಯಾದಿ ಅವರಿಗೆ ತಿಳಿಯ ಹೇಳಬೇಕು. ಮರಿಯು ಒಂದು ಫೋನಿನ ರಿಸೀವರನೆತ್ತಿ, ಅದೇ ಫೋನಿನ ನಂಬರ್‌ಗೆ ಡಯಲ್ ಮಾಡಿದಲ್ಲಿ ಎಂಗೇಜ್ಡ್ ಧ್ವನಿ

ಬರುತ್ತದೆ. ಅವರಿಗೆ ಫೋನಿನಲ್ಲಿ ಮಾತನಾಡುವ ಕ್ರಮವನ್ನೂ ಕಲಿಸಿಕೊಡಬೇಕು. ಸಂಭಾಷಣೆ ಪ್ರಾರಂಭಿಸುವ ಮುನ್ನ ತನ್ನ ಹೆಸರು ಮತ್ತು ಫೋನ್ ನಂಬರ್ ಹೇಳುವುದು; ಎದುರು ವ್ಯಕ್ತಿಯ ನಂಬರು ಮತ್ತು ಹೆಸರನ್ನು ಕೇಳಿ, ತಾವು ಮಾತನಾಡಬೇಕಾದವರ ಬಗ್ಗೆ ಖಚಿತಪಡಿಸಿಕೊಳ್ಳುವುದು, ಇವುಗಳನ್ನು ತಿಳಿಸಬೇಕು. ಟೆಲಿಫೋನ್ ಡೈರೆಕ್ಟರಿಯ ಮೊದಲ ಪುಟಗಳಲ್ಲಿ ಫೋನ್ ಮಾಡುವ ಮತ್ತು ಮಾತನಾಡುವ ಬಗ್ಗೆ, ತಿಳಿಸಿರುವ ಕ್ರಮಗಳನ್ನು ಒಂದೊಂದಾಗಿ ವಿವರಿಸಬೇಕು. ಫೋನುಗಳನ್ನು ವಿನೋದಕ್ಕಾಗಿ, ಆಟಕ್ಕಾಗಿ, ಬೇಜವಾಬ್ದಾರಿಯಿಂದ ಬಳಸಬಾರದೆಂಬ ಅಂಶವನ್ನು ಅರ್ಥವಾಗುವಂತೆ ಒತ್ತಿ ಹೇಳಬೇಕು. ಅದರಿಂದ ಪೋಲಾಗುವ ಅಮೂಲ್ಯ ಕಾಲವನ್ನೂ; ಇತರರಿಗೆ, ಅದರಲ್ಲಿಯೂ ಅತಿ ಅವಶ್ಯಕತೆಯಿರುವವರಿಗೆ ಆಗಬಹುದಾದ ತೊಂದರೆಯನ್ನೂ, ವಿವರಿಸಿ ಹೇಳಬೇಕು.

ಸಂಚಾರೀ ದೂರವಾಣಿ (ಮೊಬೈಲ್). ಇದೂ ಸಹ ಭೂಸಂಪರ್ಕದಂತೆಯೇ. ಮೊದಲು ಆನ್ ಮಾಡಿಕೊಳ್ಳುವುದು. ನಮಗೆ ಬೇಕಾದ ನಂಬರನ್ನು ಒತ್ತುವುದು. (1ರಿಂದ 9 ಮತ್ತು 0 ಸಂಖ್ಯೆಗಳು ಮೊಬೈಲ್ ಮೇಲೆ ಇರುತ್ತವೆ.) ಆ ಬಳಿಕ ಕರೆಯ ಬಟನ್ ಒತ್ತುವುದು. ರಿಂಗ್‌ಟೋನ್ ಬರುತ್ತದೆ. ಬಂದ ಕೂಡಲೇ ನಿಮ್ಮ ಗುರುತು ಹೇಳಿ, ಎದುರು ವ್ಯಕ್ತಿಯ ಗುರುತು ಖಚಿತಪಡಿಸಿಕೊಳ್ಳಬೇಕು. ಬಳಿಕ ಮಾತನಾಡಿಸಬೇಕು. ಮಾತು ಸಂಕ್ಷಿಪ್ತವಾಗಿರಬೇಕು. ಮುಗಿದ ಕೂಡಲೇ ಆಫ್ ಮಾಡಬೇಕು. ಪ್ರತಿ ನಿಮಿಷಕ್ಕೂ ಬೆಲೆ ತೆರಬೇಕಾದ್ದರಿಂದ ಎಷ್ಟೋ ಅಷ್ಟು. ಆಗಾಗ್ಗೆ ದುಡ್ಡು ಕಟ್ಟಿ ಆ್ಯಕ್ಟಿವ್ ಮಾಡಿಕೊಳ್ಳಬೇಕು. ಪ್ರತಿ ಕರೆ ಮುಗಿದ ಮೇಲೂ ನಿಮ್ಮ ಬಾಕಿ ಹಣ ಎಷ್ಟಿದೆ ತಿಳಿಯುತ್ತದೆ. ಫೋನ್‌ನಲ್ಲಿ ಹಾಡುಗಳು ಕೇಳಬಹುದು, ಚಿತ್ರಗಳನ್ನು ನೋಡಬಹುದು. ಲೆಕ್ಕ ಮಾಡಬಹುದು, ಮಾಹಿತಿ ಸಂಗ್ರಹ ಮಾಡಬಹುದು ಇತ್ಯಾದಿ. ಹಿರಿಯರನ್ನು ಕೇಳಿ ತಿಳಿದುಕೊಳ್ಳಿ. ಇದೊಂದು ಕಂಪ್ಯೂಟರ್ ಕೈಲಿದ್ದಂತೆ.

10. ಮರಿಗಳ ಪ್ರಾರ್ಥನಾ ಗೀತೆ, ರಾಷ್ಟ್ರಗೀತೆ ಮತ್ತು ಸ್ಕೌಟ್ ಧ್ವಜಗೀತೆಯನ್ನು ಹಾಡಲು ಬರಬೇಕು

ಮರಿಗಳ ಪ್ರಾರ್ಥನಾ ಗೀತೆ

ಹಂ ಹೈ ಛೋಟೇ ಛೋಟೇ ಬಾಲ್
ಹಮಾರೀ ಲೇನಾ ತೂ ಸಂಭಾಲ್
ಕದಂ ಕದಂ ಪರ್ ಕರೇ ಗಲ್ತಿಯಾ
ಸದ್‌ಬುದ್ಧಿ ದೇನಾ ಭೂಲಾ ಗಲ್ತಿಯಾ

ತುಮ ಬಿನ್ ಕೋನ್ ಲೇಗಾ ಸಂಭಾಲ್ (2)
ಹಂ ಹೈ ಛೋಟೇ ಛೋಟೇ ಬಾಲ್
ಹಮಾರೀ ಲೇನಾ ತೂ ಸಂಭಾಲ್

ಸ್ಕೌಟ್ ಧ್ವಜಗೀತೆ

ಭಾರತ ಸ್ಕೌಟು, ಗೈಡು ಝುಂಡಾ, ಊಂಭಾ ಸದಾ ರಹೇಗಾ
ಊಂಭಾ ಸದಾ ರಹೇಗಾ ಝುಂಡಾ, ಊಂಭಾ ಸದಾ ರಹೇಗಾ ॥
ನೀಲಾರಂಗ್ ಗಗನಸಾ ವಿಸ್ತೃತ ಭ್ರಾತೃಭಾವ ಪೆಹಲಾತಾ
ತ್ರಿದಳ ಕಮಲನಿತ್ ತೀನ್ ಪ್ರತಿಜ್ಞೋ ಊಂಖೀಯಾದ್ ದಿಲಾತಾ'
ಔರ್ ಚಕ್ರ ಕಹತಾಹೈ ಪ್ರತಿಫಲ್, ಆಗೇ ಕದಂ ಬಡೇಗಾ ॥
ಊಂಭಾ ಸದಾ ರಹೇಗಾ ಝುಂಡಾ ಊಂಭಾ ಸದಾ ರಗೇಗಾ ॥

ರಾಷ್ಟ್ರಗೀತೆ

ಈಗಾಗಲೇ ಪುಟ 84ರಲ್ಲಿ ತಿಳಿಸಲಾಗಿದೆ.

ಅಧ್ಯಾಯ-16

ದ್ವಿತೀಯ ಚರಣ್ ಪದಕದ ಪರೀಕ್ಷಾಂಶಗಳು

☆ ☆

(ನಿಯಮ 1 ಎ.ಪಿ.ಆರ್.ಓ.II ಅಧ್ಯಾಯ–1)

1. **ಗ್ರಾಮ ಅಥವಾ ಮೊಹಲ್ಲ (ವಾಸಿಸುತ್ತಿರುವ ನೆರೆಹೊರೆಯಲ್ಲಿ) ಕೆಲವರು ಗಣ್ಯರ ಬಗೆಗೆ, ತಮ್ಮ ತಾಯಿ ತಂದೆಯರನ್ನು ಕೇಳಿ ತಿಳಿದು ಅವರುಗಳ ವಿಚಾರವಾಗಿ, ಕಬ್‌ಮಾಸ್ಟರಿಗೆ (ಅಕೇಲರಿಗೆ) ಹೇಳಬೇಕು.**

(ಅ) ಗ್ರಾಮದಲ್ಲಿ ಗಣ್ಯವ್ಯಕ್ತಿಗಳು :

i) ಸರ್ ಪಾಂಚರು

ii) ಹಕೀಂ ಅಥವಾ ವೈದ್ಯರು

iii) ಎಂ.ಎಲ್.ಎ./ಎಂ.ಎಲ್.ಸಿ./ಎಂ.ಪಿ. ಅಥವಾ ನಿವೃತ್ತ ಗೆಜೆಟೆಡ್ ಸರ್ಕಾರಿ ಅಧಿಕಾರಿಗಳು

iv) ಸದ್ಭಾವನಾಯುತ ಜನೋಪಕಾರಿ ವ್ಯಕ್ತಿಗಳು

v) ಕೈಗಾರಿಕೋದ್ಯಮಿ/ ಜಮೀಂದಾರರು

(ಆ) ಮೊಹಲ್ಲಾದಲ್ಲಿನ ಗಣ್ಯವ್ಯಕ್ತಿಗಳು :

i) ಮುನಿಸಿಪಲ್ ಚೇರ್ಮನ್/ ಎಕ್ಸಿಕ್ಯೂಟಿವ್ ಆಫೀಸರು.

ii) ಡಾಕ್ಟರು/ ವೈದ್ಯರು/ ಶಸ್ತ್ರಚಿಕಿತ್ಸಕರು.

iii) ಎಂ.ಎಲ್.ಎ./ಎಂ.ಎಲ್.ಸಿ./ಎಂ.ಪಿ.

iv) ಸತ್ಪ್ರವೃತ್ತಿಯುಳ್ಳ ಸೇವಾಮನೋಭಾವವುಳ್ಳ ವ್ಯಕ್ತಿ.

v) ಕೈಗಾರಿಕೋದ್ಯಮಿಗಳು/ಬಂಡವಾಳಗಾರ/ನಿವೃತ್ತ ಅಥವಾ ಸೇವೆ ಯಲ್ಲಿರುವ ಪ್ರಮುಖ ಸರ್ಕಾರಿ ಅಧಿಕಾರಿಗಳು.

ಮರಿಯು ಈ ಗಣ್ಯವ್ಯಕ್ತಿಗಳು ಮತ್ತು ಅವರ ಜೀವನದ ಪರಿಚಯ ಮಾಡಿಕೊಂಡು, ಅವರುಗಳು ಜನರಿಗೆ ಹೇಗೆ ಸೇವೆ ಸಲ್ಲಿಸುತ್ತಿದ್ದಾರೆಂಬ ಬಗ್ಗೆ ತಿಳಿದುಕೊಳ್ಳಬೇಕು.

"ಇತರರಿಗೆ ಸೇವೆ ಸಲ್ಲಿಸುವವರು
ತಮಗೆ ತಾವೇ ಹೆಚ್ಚು ಲಾಭ ಹೊಂದುತ್ತಾರೆ"

2. ಮನೆಯಲ್ಲಿರುವ ಪೆಡುಸಾದ/ಹರಿತವಾದ/ಬೆಲೆಬಾಳುವ ವಸ್ತುಗಳ ಬಗೆಗೆ, ಯಾವ ರೀತಿಯಲ್ಲಿ ಎಚ್ಚರಿಕೆ ವಹಿಸಬೇಕೆಂಬುದನ್ನು, ತಾಯಿ ತಂದೆಯರಿಂದ ತಿಳಿದುಕೊಳ್ಳಬೇಕು.

ಪೆಡುಸಾದ ವಸ್ತುಗಳು : ಗಾಜಿನ ವಸ್ತುಗಳು, ಪಿಂಗಾಣಿ ವಸ್ತುಗಳು ಮುಂತಾದವುಗಳು.

ಹರಿತವಾದ ವಸ್ತುಗಳು : ಚಾಕು, ಬ್ಲೇಡು, ಕತ್ತರಿ, ಸೂಜಿ, ಕೈಗೊಡಲಿ, ಮುಂತಾದವುಗಳು.

ಬೆಲೆಬಾಳುವ ವಸ್ತುಗಳು : ವಿದ್ಯುದುಪಕರಣಗಳು, ಗ್ಯಾಸ್ ಸ್ಟೌವ್, ಪೀಠೋಪಕರಣಗಳು; ಗೋಡೆ ಗಡಿಯಾರ, ಅಲಾರಾಂ ಗಡಿಯಾರ, ಕೈ ಗಡಿಯಾರ, ಚಿನ್ನ, ಬೆಳ್ಳಿ ವಸ್ತುಗಳು ಮತ್ತು ಆಭರಣಗಳು ಇತ್ಯಾದಿ.

ಹೀಗೆ ಮಾಡಬಾರದು : ಆಟಿಕೆಗಳನ್ನು ನೆಲದ ಮೇಲೆ ಬಿಡುವುದು; ಬೆಂಕಿಕಡ್ಡಿಗಳು ಮತ್ತು ಔಷಧಿ ಸೀಸೆಗಳನ್ನು, ಚಿಕ್ಕ ಮಕ್ಕಳಿಗೆ ಸುಲಭವಾಗಿ ಸಿಗುವಂತೆ ಬಿಟ್ಟಿರುವುದು. ವಿದ್ಯುದುಪಕರಣಗಳನ್ನು ಉದಾ: ಕಾದಿರುವ ಇಸ್ತ್ರಿಪೆಟ್ಟಿಗೆ ಇತ್ಯಾದಿ ಓಡಾಡುವ ದಾರಿಯಲ್ಲಿ ಬಿಡುವುದು.

ಒಲೆ/ಸ್ಟೌವ್ ಮೇಲೆ ಬಾಂಡ್ಲಿ/ತವದ ಹಿಡಿಯನ್ನು ಅಪಾಯಕಾರ ಸ್ಥಿತಿಯಲ್ಲಿ ಬಿಟ್ಟಿರುವುದು, ಗ್ಯಾಸ್ ನಿಲ್ಲಿಸದೇ ಇರುವುದು, ಹೀಗೆ ನೂರಾರು ನಿದರ್ಶನಗಳನ್ನು ಹೇಳಬಹುದು.

ವಿಶ್ವದ ಆಕಸ್ಮಿಕ ಅಪಘಾತಗಳ ಅಂಕಿಅಂಶಗಳನ್ನು ಪರಿಶೀಲಿಸಿದರೆ, ಮನೆಗಳು ಬಹಳ ಅಪಾಯಕಾರ ಸ್ಥಳಗಳೆಂದೇ ಹೇಳಬೇಕಾಗುತ್ತದೆ. ಜನರು ತಮ್ಮ ಹೆಚ್ಚು

ಕಾಲವನ್ನು ಮನೆಗಳಲ್ಲಿ ಕಳೆಯುವುದೇ ಇದಕ್ಕೆ ಕಾರಣ. ಮನೆಗಳೊಳಗೆ ಅಜಾಗರೂಕತೆಯ ನಿದರ್ಶನಗಳೂ ಹೆಚ್ಚು.

ಬೆಂಕಿಕಡ್ಡಿ, ಬ್ಲೇಡುಗಳು, ಚಾಕು, ಕತ್ತರಿ, ಸೂಜಿ ಮುಂತಾದ ಹರಿತವಾದ, ಮೊನಚಾದ ಉಪಕರಣ, ಸಲಕರಣೆಗಳನ್ನು ಚಿಕ್ಕಮಕ್ಕಳ ಕೈಗೆ ಸಿಗದಂತೆ ಎಚ್ಚರಿಕೆ ವಹಿಸಬೇಕು.

ಮಕ್ಕಳ ಆಟಿಕೆಗಳನ್ನು, ಎಲ್ಲೆಂದರಲ್ಲಿ, ನೆಲದ ಮೇಲೆ ಬಿಡುವುದು ಬಹಳ ಅಪಾಯಕರ. ಪಾತ್ರೆ ತೊಳೆಯಲು, ಸ್ನಾನ ಮಾಡಲು, ಕೈಕಾಲು ತೊಳೆಯಲು, ಬಟ್ಟೆ ಒಗೆಯಲು, ಸತತವಾಗಿ ಉಪಯೋಗಿಸುವ ಸ್ಥಳಗಳು, ನೀರು ನಿರಂತರವಾಗಿ ಹರಿಯುವ ಮೋರಿಗಳು ಮತ್ತು ಕೊಳಾಯಿಗಳ ಪರಿಸರ, ಬಾವಿಯ ಅಕ್ಕಪಕ್ಕ ಇವೆಲ್ಲವೂ ಪಾಚಿಕಟ್ಟಿ, ಜಾರುವಂತಹ ಜಾಗಗಳು. ಈ ಸ್ಥಳಗಳನ್ನು ಆಗಾಗ್ಗೆ ತಿಕ್ಕಿ, ತೊಳೆದು, ಒಣಗಿಸಿ ಜಾರದಂತೆ ನೋಡಿಕೊಳ್ಳಬೇಕು.

ಮನೆಯು ಅಂದವಾಗಿ ಕಾಣಬೇಕಾದರೆ ಒಪ್ಪ ಓರಣಗಳು ಮುಖ್ಯ. ಯಾವುದೇ ಸಾಮಾನನ್ನೂ ಎಲ್ಲೆಂದರಲ್ಲಿ ಎಸೆಯದೆ, ಅದರದರ ಜಾಗದಲ್ಲಿ ಜೋಡಿಸಬೇಕು. ಓಡಾಡುವ ದಾರಿಯಲ್ಲಿ (ಮನೆಯೊಳಗೂ ಸಹ) ಯಾವುದೇ ಸಾಮಾನುಗಳು ಅಡ್ಡವಿರಬಾರದು. ಉದಾ: ಪೀಠೋಪಕರಣಗಳು ಇತ್ಯಾದಿ.

ಒಡೆದ ಗಾಜಿನ ಚೂರುಗಳನ್ನು ಗೊತ್ತುಪಡಿಸಿದ ಸ್ಥಳಗಳಲ್ಲಿ ಮಾತ್ರ ಎಸೆಯಬೇಕು. ಗುಂಡುಸೂಜಿ ಅಥವಾ ಸೂಜಿಗಳನ್ನು ಪಿನ್‌ಕುಷನ್ ಅಥವಾ ಕಾಗದ ಅಥವಾ ಬಟ್ಟೆಗೆ ಚುಚ್ಚಿಟ್ಟು, ಅಪಾಯವಾಗದಂತೆ ನೋಡಿಕೊಳ್ಳಬೇಕು. ತಗಡಿನ ಹರಿತವಾದ ಚೂರುಗಳೊಡನೆ ಕೆಲಸಮಾಡುವಾಗ ಎಚ್ಚರಿಕೆಯಿಂದಿರಬೇಕು.

ಬಸ್ಸು, ರೈಲು ಮುಂತಾದವುಗಳಲ್ಲಿ ಕಿಟಕಿಯಿಂದ ಹೊರಗಡೆಗೆ ಬಾಗಬಾರದು. ಮನೆಯಲ್ಲಿ ಬೀರುಗಳನ್ನು ಹುಷಾರಾಗಿ ತೆರೆದು ಮುಚ್ಚುವುದನ್ನೂ, ಅಥವಾ ಸ್ಥಳಾಂತರಿಸುವುದನ್ನೂ ಮಾಡಬೇಕು. ಇಲ್ಲವಾದರೆ ಒಳಗಿರುವ ವಸ್ತುಗಳು, ಹೊರಗಡೆಗೆ ಬಿದ್ದು ಹೋಗುವ ಸಾಧ್ಯತೆಯುಂಟು.

ಮೇಲಂತಸ್ತುಗಳಿಗೆ ಹೋಗುವಾಗ ಏಣಿ, ಮೆಟ್ಟಲುಗಳು ಅಥವಾ ಲಿಫ್ಟನ್ನು ಉಪಯೋಗಿಸಬೇಕು.

ಬಕೆಟ್ಟುಗಳಲ್ಲಿ ಬಿಸಿನೀರನ್ನೊಯ್ಯುವಾಗ ದಾರಿಯಲ್ಲಿ ಢಿಕ್ಕಿ ಹೊಡೆಯದಂತೆ ಎಚ್ಚರಿಕೆ ವಹಿಸಬೇಕು. ವಿದ್ಯುತ್‌ವಾಹಕ ತಂತಿಗಳ ಮೇಲೆ ಬಟ್ಟೆ ಒಣಹಾಕಬಾರದು.

ಒಳ ಮಾಳಿಗೆಯ ಪಂಖಗಳು ತುಂಬಾ ಕೆಳಗಿರಬಾರದು. ಮೇಜಿನ ಮೇಲೆ ಉಪಯೋಗಿಸುವ ಪಂಖಗಳಿಗೆ ಇರುವ ಜಾಲರಿಯನ್ನು ಸರಿಯಾಗಿ ಹಾಕಿರಬೇಕು. ಪಂಖಗಳನ್ನು ನಿಲ್ಲಿಸಿದ ಬಳಿಕವೇ ಅವುಗಳ ಕೆಳಗಿನ ಜಾಗವನ್ನು ಚೊಕ್ಕಟ ಮಾಡಬೇಕು.

3. **ಕಸದಂತೆ ಬಿಸಾಡಬಹುದಾದ ವಸ್ತುಗಳಿಂದ, ಕರಕುಶಲ ವಸ್ತುವೊಂದನ್ನು ತಯಾರಿಸಬೇಕು ಅಥವಾ ಜೇಡಿಮಣ್ಣಿನಿಂದ ಒಂದು ಮಾದರಿಯನ್ನು ರೂಪಿಸಬೇಕು.**

ಈ ದಿಶೆಯಲ್ಲಿ ಅಧ್ಯಾಯ-II ರಲ್ಲಿ ಹೇಳಿರುವ ಕರಕುಶಲ ಕಲೆಗಳ ವಿಷಯವನ್ನು ಅಕೇಲರು ಗಮನಿಸಬೇಕು.

4. **ತೋಟದಲ್ಲಿರುವ ಹೂವುಗಳನ್ನು, ನೆರೆಹೊರೆಯಲ್ಲಿರುವ ಮರಗಳನ್ನು ಅವಲೋಕಿಸಿ ಅವುಗಳಲ್ಲಿ ಹತ್ತು ಹೂಗಳನ್ನೂ, ಹತ್ತು ಎಲೆಗಳನ್ನೂ ಹತ್ತಿಸಿ ಒಂದು ದೃಶ್ಯಪಟವನ್ನು ತಯಾರಿಸಬೇಕು.**

ಹೂವುಗಳು: ಮಲ್ಲಿಗೆ, ಚೆಂಡುಹೂವು, ಗುಲಾಬಿ ಮೊದಲಾದವು, ಸಾಮಾನ್ಯವಾಗಿ ಎಲ್ಲಾ ತೋಟಗಳಲ್ಲಿಯೂ ಕಂಡುಬರುತ್ತವೆ. ಆಯಾ ಋತುಗಳಿಗೆ ತಕ್ಕಂತೆ, ವಿವಿಧ ಹೂವುಗಳನ್ನು ಬೆಳೆಸಲಾಗುತ್ತದೆ. ಹೂವುಗಳು ನೋಡಲು ಸುಂದರವಾಗಿರುತ್ತವೆ. ಕೆಲವು ಹೂವುಗಳು ಸುವಾಸನೆಯಿಂದ ಕೂಡಿರುತ್ತವೆ. ಬಹುತೇಕ ಜನರಿಗೆ, ಅದರಲ್ಲೂ ಹೆಂಗಸರು ಮಕ್ಕಳಿಗೆ, ಹೂಗಳೆಂದರೆ ಪ್ರೀತಿ. ದೇವರ ಪೂಜೆಗೆ ಹೂ ಬೇಕೇ ಬೇಕು. ಮನೆಗಳು, ಸಮಾರಂಭಗಳ ವೇಳೆಯಲ್ಲಿ ವೇದಿಕೆ ಇತ್ಯಾದಿ ಅಲಂಕರಿಸಲೂ, ವ್ಯಕ್ತಿಗಳನ್ನು ಸನ್ಮಾನಿಸಲೂ, ಹೂವುಗಳನ್ನು ಉಪಯೋಗಿಸುತ್ತಾರೆ. ಮರಗಳ ಜೀವನ ಚಕ್ರದಲ್ಲಿ ಹೂಗಳು, ಹಣ್ಣು, ಬೀಜಗಳ ತಯಾರಿಕೆಯಲ್ಲಿ ಮೊದಲ ಹೆಜ್ಜೆ. ಮರಿಗಳು ಸಾಮಾನ್ಯ ಬಳಕೆಯಲ್ಲಿರುವ ಹೂವುಗಳ ಬಗ್ಗೆ ತಿಳಿದಿರಬೇಕು. ಹೂ ಬಿಡುವ ಮರಗಳನ್ನೂ ಅವಲೋಕಿಸಬೇಕು.

ದೃಶ್ಯಪಟ ತಯಾರಿಕೆ: ಹತ್ತು ವಿವಿಧ ರೀತಿಯ ಎಲೆಗಳನ್ನೂ, ಹತ್ತು ಬಗೆಯ ಹೂಗಳನ್ನೂ ಸಂಗ್ರಹಿಸಿ, ವಾರ್ತಾಪತ್ರಿಕೆಯ ಹಾಳೆಗಳ ಮಧ್ಯೆ ಬೇರೆ ಬೇರೆ ಜೋಡಿಸಿ, ಒತ್ತಡದಲ್ಲಿ ಒಣಗಿಸಲಿ.

ಆ ಬಳಿಕ ಅವುಗಳನ್ನು ಕೆಜಿ ಕಾರ್ಡ್‌ಬೋರ್ಡ್ ಹಾಳೆಯ ಮೇಲೆ ಸಾಲು ಸಾಲಾಗಿ, ಅಂದವಾಗಿ ಸೆಲ್ಲೋಟೇಪ್ ಸಹಾಯದಿಂದ ಅಂಟಿಸಲಿ.

ಪ್ರತಿ ಎಲೆ/ಹೂ ಕೆಳಗೂ ಗಿಡದ ಹೆಸರು, ಎಲೆಯ ಆಕಾರ, ವಿಶೇಷ, ಹೂವಿನ ಬಣ್ಣ ಇತ್ಯಾದಿ ವಿವರ ಮತ್ತು ಸಂಗ್ರಹಿಸಿದ ತಾರೀಖನ್ನು ಗುರ್ತಿಸಲಿ.

ಅಕೇಲರು ಈ ಬಗ್ಗೆ ಮರಿಗಳಿಗೆ ಮಾರ್ಗದರ್ಶನ ನೀಡಬೇಕು.

5. ಸಂಗ್ರಹಿಸಿದ ವಸ್ತುಗಳನ್ನು ಸುರಕ್ಷಿತವಾಗಿಡಲು ತಿಳಿದಿರಬೇಕು.

ಯಾವುದೇ ಒಂದು ಗುಂಪಿನ ವಸ್ತುಗಳನ್ನು ಸಂಗ್ರಹಿಸಲೂ, ಅಂದವಾಗಿಯೂ, ಕ್ರಮಬದ್ಧವಾಗಿಯೂ ಇರಿಸಲು, ಆ ರೀತಿ ಸಂಗ್ರಹಿಸಿ, ಇರಿಸಿಕೊಂಡ ವಸ್ತುಗಳ ಬಗ್ಗೆ ಆದಷ್ಟು ವಿವರಗಳನ್ನು ತಿಳಿದುಕೊಳ್ಳಲೂ, ಮರಿಗಳಿಗೆ ಉತ್ತೇಜನ ನೀಡಬೇಕು.

ಅಂಚೆ ಚೀಟಿಗಳು, ಹಕ್ಕಿ ಪಕ್ಷಿಗಳ ಪುಕ್ಕಗಳು, ಬೆಂಕಿಪೆಟ್ಟಿಗೆ ಚೀಟಿಗಳು, ಎಲೆಗಳು /ಹೂಗಳು, ಅವುಗಳ ಒತ್ತು ಚಿತ್ರಗಳು (ಕಾರ್ಬನ್ ಇಂಪ್ರೆಷನ್ಸ್) ಅಥವಾ ಫೋಟೋಗಳು, ಪಕ್ಷಿಗಳ ಪ್ರಾಣಿಗಳ ಫೋಟೋಗಳು ಇತ್ಯಾದಿ, ಮೊದಲು ಹತ್ತು ವಸ್ತುಗಳಿಂದ ಪ್ರಾರಂಭಮಾಡಿ, ನಿಧಾನವಾಗಿ ಇಪ್ಪತ್ತೈದಕ್ಕೆ ಹೆಚ್ಚಿಸಬಹುದು.

6. ಮೂಲೆ ಗಂಟು ಮತ್ತು ಬೆಸ್ತರಗಂಟು ಹಾಕಬೇಕು. ಅವುಗಳ ಉಪಯೋಗಗಳನ್ನು ತೋರಿಸಿ ವಿವರಿಸಬೇಕು

ಮೂಲೆಗಂಟಿನ "ಮೂಲೆ" ಪದವು ಗಂಟು ಹಾಕುವ ಹಾಯಿಯ ಮೂಲೆಯನ್ನು ಹೇಳುತ್ತದೆಯೇ ಹೊರತು ಮತ್ತೇನೂ ಅಲ್ಲ. ಈ ಪದವನ್ನು ನಾವಿಕರು ಉಪಯೋಗಿಸುತ್ತಾರೆ. ದೋಣಿಯ/ಹಡಗಿನ ಹಾಯಿಯನ್ನು ಹಗ್ಗಕ್ಕೆ ಕಟ್ಟಲು ಈ ಗಂಟನ್ನು ಹಾಕುತ್ತಾರೆ.

ಮೂಲೆ ಗಂಟನ್ನು ಹಾಕುವ ವಿಧಾನವನ್ನು ಈ ಕೆಳಗಿನ ಚಿತ್ರದಲ್ಲಿ ಕೊಡಲಾಗಿದೆ.



ದೊಡ್ಡ ಬೆಡ್‌ಷೀಟ್ ಅಥವಾ ಧೋತಿಯನ್ನು ಒಣಗಲು ಹಾಕುವಾಗ, ಬೆಡ್‌ಷೀಟ್ ಅಥವಾ ಧೋತಿಯ ಕೊನೆಗಳಿಗೆ, ಈ ಗಂಟನ್ನು ಹಾಕಬಹುದು. ಸಾಮಾನ್ಯವಾಗಿ ಹಳ್ಳಿಯ ಮನೆಗಳಲ್ಲಿ ವಸ್ತ್ರಗಳನ್ನು (ಧೋತಿ, ಸೀರೆ ಮೊದಲಾದವು) ಒಣಗಿಹಾಕುವುದೇ ಹೀಗೆ. ವಸ್ತ್ರದ ಕೊನೆಯನ್ನು ಮಡಚಿಕೊಳ್ಳುವುದು. ಹಗ್ಗವನ್ನು ಈ ಮಡಿಕೆಯೊಳಗೆ ತೂರಿಸಿ, ಸುತ್ತುಹಾಕಿ, ಹಗ್ಗಕ್ಕೂ, ವಸ್ತ್ರಕ್ಕೂ ಮಧ್ಯೆ ಪುನಃ ತೂರಿಸಿದರೆ ಗಂಟು ಮುಗಿಯಿತು. ಮೂಲೆ ಗಂಟನ್ನು, ದಪ್ಪ ಮತ್ತು ಸಣ್ಣ ಗಾತ್ರದ, ಹಗ್ಗಗಳ ತುದಿಗಳನ್ನು ಸೇರಿಸಲು ಉಪಯೋಗಿಸಲಾಗುತ್ತದೆ. ದಪ್ಪ ಹಗ್ಗದಲ್ಲಿ ಮಡಿಕೆಯಿದ್ದು, ಸಣ್ಣ ಹಗ್ಗದ ತುದಿಯಿಂದ ಗಂಟು ಮುಗಿಯುತ್ತದೆ.

ಬಹಳ ದಪ್ಪ ಗಾತ್ರದ ಹಗ್ಗಗಳನ್ನು ಸೇರಿಸುವಾಗ, ಗಂಟು ನಿಲ್ಲದೆ, ಮಡಿಕೆಯು ನೇರವಾಗುವ ಸಂಭವವು ಜಾಸ್ತಿಯಿರುತ್ತದೆ. ಆಗ ಸಣ್ಣ ಹಗ್ಗದಿಂದ, ಹಾಕುವ ಒಂದು ಸುತ್ತಿನ ಬದಲು, ಎರಡು ಸುತ್ತು ಹಾಕಿ, ಗಂಟನ್ನು ಪೂರ್ತಿ ಮಾಡಬೇಕಾಗಿ ಬರುತ್ತದೆ. ಇಂತಹ ಗಂಟೆಗೆ ಇಮ್ಮೂಲೆ ಗಂಟು (ಡಬಲ್ ಷೀಟ್ ಬೆಂಡ್) ಎಂದು ಹೇಳುತ್ತಾರೆ.



ಅವಶ್ಯಕತೆಯಿದ್ದರೆ, ದಪ್ಪ ಹಗ್ಗದ ತುದಿಯಿಂದ, ಅದರದೇ ನಿಲುಗಡೆ ಭಾಗಕ್ಕೆ (ಉದ್ದನೆಯ ಭಾಗಕ್ಕೆ ಹೆಸರು) ಕಟ್ಟಬಹುದು. ಇದಕ್ಕೆ "ಮುಷ್ಟಿಹಿಡಿತ" (ಸೀಜಿಂಗ್) ಎಂದು ಹೇಳುತ್ತಾರೆ.

ಬೆಸ್ತರ ಗಂಟು: ಹಾಕುವುದು ಸುಲಭ ಮತ್ತು ಕೊನೆಗಳನ್ನು ಎಳೆದು ಸುಲಭವಾಗಿ ಬಿಚ್ಚಬಹುದು.



ಬೇರೆ ಬೇರೆ ಗಾತ್ರದ ಎರಡು ಹಗ್ಗಗಳನ್ನು ಒಟ್ಟಿಗೆ ಕಟ್ಟಲು ಈ ಗಂಟನ್ನು ಉಪಯೋಗಿಸುತ್ತಾರೆ.

7. **ಸಣ್ಣ ಕೊಯ್ದ ಗಾಯ, ಸುಟ್ಟಗಾಯ, ತರಚುಗಾಯಗಳಿಗೆ ಪ್ರಥಮ ಚಿಕಿತ್ಸೆ ಮಾಡಬೇಕು.**

ಸಮರ್ಥ ಪ್ರಥಮ ಚಿಕಿತ್ಸಕನಾಗಲು ಬೇಕಾದ ಪರಿಶ್ರಮವನ್ನು ಮುಂದೆ ದೊಡ್ಡವನಾದಾಗ, ಪಡೆಯಬಹುದಾದರೂ, ಪ್ರಥಮ ಚಿಕಿತ್ಸೆಯ ಬಗ್ಗೆ ಸೂಕ್ತ ಮನೋಭಾವನೆಯನ್ನು ಮರಿಯು ಈಗ ಬೆಳೆಸಿಕೊಳ್ಳಬಹುದು.

ಬಹಳ ಸಣ್ಣ ಪ್ರಮಾಣದ ತರಚು ಅಥವಾ ಕೊಯ್ದಗಾಯಗಳಿಗೆ ಡೆಟಾಲ್ ಅಥವಾ ಸೋಪು (ಕಾರ್ಬಾಲಿಕ್) ನೀರಿನಿಂದ ತೊಳೆದು, ಒರೆಸಿ, ಸ್ವಚ್ಛಮಾಡಿ ಬ್ಯಾಂಡೇಜ್ ಕಟ್ಟುವ/ ಬ್ಯಾಂಡ್ ಏಯ್ಡ್ ಹಾಕುವ ಬಗ್ಗೆ ಮರಿಗೆ ತಿಳಿಸಬಹುದು ಮತ್ತು ಮಾಡಿಸಿ ಅನುಭವ ನೀಡಬಹುದು.

ಅಪಾಯಕಾರಿ ಸ್ಥಿತಿಯಲ್ಲದ, ರಕ್ತಸ್ರಾವವಿರುವ ಸಣ್ಣ ಗಾಯಗಳಿಗೆ ಚಿಕಿತ್ಸೆ

ಮರಿಯು ತನ್ನ ಕೈಗಳನ್ನು ಮೊದಲು ತೊಳೆದು ಒರೆಸಿಕೊಳ್ಳಬೇಕು. ಡೆಟಾಲ್ ದ್ರವದಲ್ಲಿ ಅದ್ದಿದ ಗಾಜ್‌ನಿಂದ (ಮೆತು ಬಟ್ಟೆಯ ಸುರುಳಿಯೂ ಆದೀತು) ಗಾಯವನ್ನು ಪರಿಶುಭ್ರಗೊಳಿಸಬೇಕು. ಹತ್ತು ನಿಮಿಷಕಾಲ ಗಾಯವನ್ನು ಒತ್ತಿ ಹಿಡಿದು ರಕ್ತಸ್ರಾವವನ್ನು ನಿಲ್ಲಿಸಬೇಕು. ಅದರ ಮೇಲೆ ಸೋಫ್ರೋಮೈಸಿನ್ ಅನ್ನು ಲೇಪಿಸಿ, ಸಂಸ್ಕರಿಸಿದ ಗಾಜ್‌ನ್ನಿಡಬೇಕು. ಮೆತ್ತುವ ಟೇಪ್ ಅಥವಾ ಬ್ಯಾಂಡೇಜ್‌ನಿಂದ ಕಟ್ಟಬೇಕು.

ಪ್ರಥಮ ಚಿಕಿತ್ಸೆ ಪೆಟ್ಟಿಗೆಗೆ ಬೇಕಾದ ಸಾಮಾನುಗಳು

ಪರಿಶುದ್ಧವಾದ ನೀರಿರುವ ವಾಟರ್ ಬಾಟಲ್; ಒಂದು ಸಣ್ಣ ಬೋಗುಣಿ; ಗಾಜ್‌ನ ಚೂರುಗಳು; ಅಂಟಿಸಿದ ಲಕೋಟೆಯಲ್ಲಿ ಸಂಸ್ಕರಿಸಿದ ಗಾಜ್; ಮೆತ್ತುವ ಟೇಪ್; ಕತ್ತರಿ, ಬ್ಯಾಂಡೇಜು; ಡೆಟಾಲ್ ಬಾಟಲು ಮತ್ತು ಸಾಫ್ರೋಮೈಸಿನ್ ಲೇಪ.

ಮರಿಗಳಿಗೆ ಈ ಎಲ್ಲಾ ಅಂಶಗಳೂ, ಚೆನ್ನಾಗಿ ಮನದಟ್ಟಾಗಬೇಕಾದರೆ, ತೋರಿಕೆಯ ರೋಗಿಗೆ ಪ್ರಥಮ ಚಿಕಿತ್ಸೆ ಮಾಡಿ, ಪ್ರದರ್ಶನ ನೀಡುವ ಮತ್ತು ಅಭ್ಯಾಸ ಮಾಡುವ, ಅವಕಾಶಗಳನ್ನೊದಗಿಸುವ ಅವಶ್ಯಕತೆಯಿದೆ.

ಸುಟ್ಟಗಾಯಗಳು

ರೋಗಿಯನ್ನು ಕೂಡಲೇ ಶಾಖದ ಮೂಲದಿಂದ ದೂರಮಾಡಬೇಕು. ಉರಿಯನ್ನಾರಿಸಿ ಶಾಖವನ್ನು ಶಮನ ಮಾಡಬೇಕು. ರೋಗಿಯ ಚರ್ಮವನ್ನು ತಣ್ಣೀರು ಸುರಿದು ಕೂಡಲೇ ತಣ್ಣಗೆ ಮಾಡಬೇಕು. ರೋಗಿಯ ಸುಟ್ಟ ಭಾಗವನ್ನು ಕೂಡಲೇ ತಣ್ಣೀರಿನ ಬಕೆಟ್‌ನಲ್ಲಿ 10 ನಿಮಿಷ ಕಾಲ ಅದ್ದಿರಬೇಕು.

8. ಷಟ್ಕದೊಂದಿಗೆ ಅಕೇಲರ ಮೇಲ್ವಿಚಾರಣೆಯಲ್ಲಿ, ಶಾಲೆಯಲ್ಲಿ ಅಥವಾ ಮೊಹಲ್ಲಾದಲ್ಲಿ ಒಂದು ಉಪಕಾರ (ಸೇವೆ) ಮಾಡಬೇಕು.

ಷಟ್ಕದ ಉಪಕಾರಗಳು: ಶಾಲೆ ಮೊಹಲ್ಲಾದಲ್ಲಿ ಷಟ್ಕದ ಉಪಕಾರಗಳು ಈ ರೀತಿ ಇರಬಹುದು.

ಗಿಡಗಳಿಗೆ ನೀರು ಹಾಕುವುದು; ಕಸ ಹಾಕಲು ಕಸದ ತೊಟ್ಟಿಗಳನ್ನೇ ಉಪಯೋಗಿಸುವುದು; ಕ್ಲಾಸ್ ರೂಮನ್ನು ಚೊಕ್ಕಟ ಮಾಡುವುದು, ಅಲಂಕರಿಸುವುದು; ಕುಡಿಯುವ ನೀರನ್ನು ಒದಗಿಸುವುದು; ಕ್ಯೂ ಸಿಸ್ಟಮ್ ಅನುಸರಿಸುವುದು; ಗೋಡೆಗಳಿಗೆ ಸುಣ್ಣವನ್ನು ಹೊಡೆಯುವುದು; ಬಾಗಿಲು ಕಿಟಕಿಗಳಿಗೆ ಬಣ್ಣ ಬಳಿಯುವುದು ಇತ್ಯಾದಿ.

9. ಈ ಮುಂದೆ ಹೇಳಿರುವ ಅಂಶಗಳಲ್ಲಿ ಯಾವುದಾದರೂ ಮೂರನ್ನು ಮಾಡಿ ತೋರಿಸಬೇಕು

ಅ) ಒಂದು ತಿಂಗಳ ಮಟ್ಟಿಗಾದರೂ, ಪ್ರತಿದಿನವೂ ಹಾಸಿಗೆಯನ್ನು ಮಲಗುವ ಮೊದಲು, ಲಕ್ಷಣವಾಗಿ ಹಾಸಿಕೊಳ್ಳುವುದು ಮತ್ತು ಎದ್ದ ಬಳಿಕ ಚೊಕ್ಕಟವಾಗಿ ಮಡಿಸಿ ಇರಿಸುವುದು.

ಆ) ರಾಷ್ಟ್ರಧ್ವಜದ ಪ್ರಾಮುಖ್ಯತೆಯನ್ನು ತಿಳಿಯುವುದು.

ಇ) ಬೀಜ ಬಿತ್ತಿ ಗಿಡ ಬೆಳೆಯುವುದು, ಇದರ ಬೆಳವಣಿಗೆಯನ್ನು ಆಗಾಗ್ಗೆ ಗುರುತು ಹಾಕಿ ಅಕೇಲರಿಗೆ ವರದಿ ಸಲ್ಲಿಸುವುದು.

ಈ) ಇಷ್ಟವಾದ ಯಾವುದಾದರೂ ಒಂದು ವಿಷಯವನ್ನು ಕುರಿತು ಒಂದು ಚಿತ್ರವನ್ನು ಬರೆದು ಬಣ್ಣ ಹಾಕುವುದು. (ಬಣ್ಣಗಳಿಂದ ರಚಿಸುವುದು)

ಉ) ಲಾಂದ್ರವೊಂದನ್ನು ಶುಭ್ರಗೊಳಿಸಿ, ಹದಮಾಡಿ, ಎಣ್ಣೆ ಹಾಕಿ ಹಚ್ಚಲೂ, ಆರಿಸಲೂ ಕಲಿತಿರಬೇಕು.

ಊ) ಹತ್ತು ಪದಗಳಿಗೆ ಕಡಿಮೆಯಿರದ, ಬಾಯಿಮಾತಿನ ಸುದ್ದಿಯೊಂದನ್ನು (ವರ್ಬಲ್ ಮೆಸೇಜ್) ನಿರ್ದಿಷ್ಟ ಮಾರ್ಗದಲ್ಲಿ, ಕಾಲೋಟದಿಂದಾದರೆ ಐದು ನಿಮಿಷಗಳಲ್ಲಿ, ಸೈಕಲ್ ಮೇಲಾದರೆ ಮೂರು ನಿಮಿಷಗಳಲ್ಲಿ ಹೋಗಿ, ಸರಿಯಾಗಿ ವರದಿ ಮಾಡಬೇಕು.

ಅ) ಒಂದು ತಿಂಗಳ ಕಾಲ ಹಾಸಿಗೆಯನ್ನು ಹಾಸಿಕೊಳ್ಳುವುದು

ವ್ಯಕ್ತಿಯು ಆದಷ್ಟೂ ಸೌಖ್ಯವಾಗಿರುವಂತೆ ಮಾಡುವುದೇ ಈ ಅಂಶದ ಉದ್ದೇಶವಾಗಿದೆ. ಮಲಗುವ ಕೋಣೆಯ ಒಪ್ಪ ಓರಣಗಳ ನೆಪದಲ್ಲಿ ಸೌಖ್ಯವನ್ನು

ಕಡೆಗಣಿಸಬಾರದು. ಬೆಡ್‌ಷೀಟ್‌ನ ಕೆಳಗಿರುವ ಎಲ್ಲಾ ಬಟ್ಟೆಗಳೂ, ಮಟ್ಟವಾಗಿಯೂ, ಒತ್ತಾಗಿಯೂ, ಮೃದುವಾಗಿಯೂ ಇರಬೇಕು. ಬೆಡ್‌ಷೀಟ್‌ನ ಮೇಲುಗಡೆ ಇರುವಂತಹವು ಹಗುರವಾಗಿಯೂ ವಿರಳವಾಗಿಯೂ ಇದ್ದರೂ ತಡೆಯುತ್ತದೆ.

ಹಾಸಿಗೆಯನ್ನು ಲಕ್ಷಣವಾಗಿ ಹಾಸುವಾಗ, ಹಾಸಿಗೆಯ ಎದುರು ಭಾಗದಲ್ಲಿ ನಿಂತು ಸಹಾಯ ಮಾಡುವವರಿದ್ದರೆ, ಕೆಲಸವು ಸುಲಭವಾಗುತ್ತದೆ. ಮೊದಲು ಜಮಖಾನ ಅಥವಾ ಪಟ್ಟೆಯನ್ನು ಹಾಸಬೇಕು. ಅದರ ಮೇಲೆ ಮೆತ್ತೆಯನ್ನು ಹಾಕಬೇಕು. ಮೆತ್ತೆಯ ಮೇಲೆ ಮೇಲು ಹಾಸನ್ನು ಹಾಸಿ, ಅಕ್ಕಪಕ್ಕಗಳನ್ನು ಒಳ ಸೇರಿಸಬೇಕು.

ಎರಡು ದಿಂಬುಗಳು, ಅವುಗಳ ದಿಂಬುಚೀಲಗಳು, ದಿಂಬುಗಳನ್ನು ಚೀಲದೊಳಗೆ ಸೇರಿಸಲೂ, ದಿಂಬು ಚೀಲಗಳನ್ನು ಆಗಾಗ್ಗೆ ತೆಗೆದು ಒಗೆದು ಶುಭ್ರಮಾಡಿ ಉಪಯೋಗಿಸಲೂ ತಿಳಿದಿರಬೇಕು.

ಎರಡು ಹಗುರವೂ, ಬೆಚ್ಚಗೂ ಇರುವ ಕಂಬಳಿಗಳು (ಚಳಿಗಾಲದ ಉಪಯೋಗಕ್ಕೆ) ಇರಬೇಕು. ಇವುಗಳನ್ನು ಆಗಾಗ್ಗೆ ಬಿಸಿಲಿಗೆ ಹಾಕಬೇಕು. ಈ ರೀತಿ ಮಾಡಬೇಕಾದುದರ ಔಚಿತ್ಯವನ್ನು ತಿಳಿದಿರಬೇಕು.

ಅವರವರ ಮನೆಯಲ್ಲಿ ಇವೆಲ್ಲವನ್ನೂ ಮಾಡುವುದು ಒಳ್ಳೆಯದು. ಹಾಗಾಗದಿದ್ದ ಪಕ್ಷದಲ್ಲಿ, ಅಕೇಲರ ಮನೆಯಲ್ಲಿ ಇದನ್ನು ಮಾಡಬಹುದು. ಅದೂ ಆಗದಿದ್ದರೆ, ಹಿಂಡಿನಲ್ಲಿ ಅದರ ಪ್ರದರ್ಶನವನ್ನೇರ್ಪಡಿಸಿ, ಅದೇ ರೀತಿಯಲ್ಲಿ ಮನೆಯಲ್ಲಿ ತನ್ನ ಹಾಸಿಗೆಯನ್ನು, ಮರಿಯು ಮಾಡಿಕೊಳ್ಳುತ್ತಿದ್ದಾನೆಯೇ? ಎಂಬುದನ್ನು ತಿಳಿಸಲು ತಾಯಿತಂದೆಯರನ್ನು ಕೇಳಿಕೊಳ್ಳಬಹುದು. ಸ್ವಾವಲಂಬನೆಯ ಮೊದಲ ಹೆಜ್ಜೆಗಳಲ್ಲಿ ಇದು ಒಂದು.

ಆ) ರಾಷ್ಟ್ರಧ್ವಜದ ಪ್ರಾಮುಖ್ಯತೆಯನ್ನು ತಿಳಿಯುವುದು

ಈಗಾಗಲೇ ತಿಳಿದುಕೊಂಡಿರುವ ವಿಷಯಗಳಲ್ಲಿ ಮುಂದುವರೆದ ಜ್ಞಾನವನ್ನು ಪಡೆದಿದ್ದಾನೆಯೇ? ಎಂದು ಪರೀಕ್ಷಿಸುವುದು ಈ ಅಂಶದ ಉದ್ದಿಶ್ಯ. ಸದಾಕಾಲದಲ್ಲಿಯೂ ಈ ಧ್ವಜವನ್ನು ಗೌರವ ಮರ್ಯಾದೆಗಳಿಂದ ನೋಡಿಕೊಳ್ಳಬೇಕು. ರಾಷ್ಟ್ರಧ್ವಜವನ್ನು ಸರಿಯಾಗಿ ಹಾರಿಸುವುದು ಹೇಗೆ ಎಂದು ತಿಳಿದಿರಬೇಕು ಮತ್ತು ರಾಷ್ಟ್ರಗೀತೆಯನ್ನು ಹಾಡಲು ಬರಬೇಕು.

- ಧ್ವಜವನ್ನು ಸೂರ್ಯೋದಯವಾದ ಮೇಲೆ ಹಾರಿಸಬೇಕು. ಸೂರ್ಯಾಸ್ತಕ್ಕೆ ಸರಿಯಾಗಿ ಕೆಳಗಿಳಿಸಬೇಕು.
- ಧ್ವಜವು ಎಂದೂ ನೆಲವನ್ನು ಮುಟ್ಟಬಾರದು.
- ಧ್ವಜವನ್ನು ಮರ್ಯಾದೆ ಸೂಚಕವಾಗಿ ಯಾವ ವೇಳೆಯಲ್ಲೂ, ಯಾರಿಗೂ ಯಾವಕಾರಣಕ್ಕೂ ಇಳಿಮೋರೆ (ಡಿಪ್) ಮಾಡಬಾರದು.
- ಯಾವುದೇ ಇತರ ಧ್ವಜವನ್ನಾಗಲೀ, ಪತಾಕೆಯನ್ನಾಗಲೀ ಈ ಧ್ವಜದ ಬಲಗಡೆಯಲ್ಲಿ ಮತ್ತು ಈ ಧ್ವಜದ ಮಟ್ಟಕ್ಕಿಂತ ಎತ್ತರದಲ್ಲಿ ಹಾರಿಸಬಾರದು.
- ಶಾಂತಿಕಾಲದಲ್ಲಿ, ನಾಲ್ಕಾರು ರಾಷ್ಟ್ರಧ್ವಜಗಳನ್ನು ಒಟ್ಟಾಗಿ ಹಾರಿಸಿದಾಗ ಯಾವುದೇ ರಾಷ್ಟ್ರಧ್ವಜವನ್ನೂ ಇತರ ರಾಷ್ಟ್ರಧ್ವಜಗಳ ಮಟ್ಟಕ್ಕಿಂತ ಎತ್ತರದಲ್ಲಿ ಹಾರಿಸಬಾರದು. ಇದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ನಿಷೇಧಿಸಲಾಗಿದೆ. ಎಲ್ಲಾ ಧ್ವಜಗಳೂ ಒಂದೇ ಮಟ್ಟದಲ್ಲಿ ಇರಬೇಕು.
- ಧ್ವಜವನ್ನು ಯಾವುದೇ ಸಂದರ್ಭದಲ್ಲಿಯೂ ಹೊದಿಕೆ, ಪರದೆ ಅಥವಾ ಅಲಂಕಾರಿಕ ವಸ್ತುವನ್ನಾಗಿ ಉಪಯೋಗಿಸಬಾರದು.
- ಧ್ವಜವನ್ನು ತೊಡಿಗೆ, ಕರವಸ್ತ್ರ, ಜಾಹಿರಾತು ಇತ್ಯಾದಿಗಳಿಗೆ ಉಪಯೋಗಿಸಬಾರದು.
- ಧ್ವಜವನ್ನು ಈ ಕೆಳಕಂಡ ವಿಶೇಷ ದಿವಸಗಳಲ್ಲಿ ವಿಧಿವತ್ತಾಗಿ ಹಾರಿಸಲಾಗುತ್ತದೆ.

  26 ಜನವರಿ– ರಿಪಬ್ಲಿಕ್ ದಿನಾಚರಣೆ

  15 ಆಗಸ್ಟ್ –ಸ್ವಾತಂತ್ರ್ಯ ದಿನಾಚರಣೆ

  2 ಅಕ್ಟೋಬರ್ –ಬಾಪೂಜಿ ಜನ್ಮದಿನ

  14 ನವೆಂಬರ್ –ಪಂಡಿತ್ ಜವಹರಲಾಲ್ ನೆಹರು ಜನ್ಮದಿನ

ಈ ದಿನಗಳಲ್ಲದೆ ಸರ್ಕಾರದಿಂದ ಆಗಾಗ್ಗೆ ಘೋಷಿಸಲ್ಪಡುವ ಇತರ ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ದಿನಗಳು.

ಇ) ಬೀಜ ಬಿತ್ತಿ ಗಿಡ ಬೆಳೆಯುವುದು. ಇದರ ಬೆಳವಣಿಗೆಯನ್ನು ಗುರುತು ಹಾಕಿಕೊಳ್ಳುತ್ತಿದ್ದು, ಅಕೇಲರಿಗೆ ವರದಿ ಒಪ್ಪಿಸಬೇಕು.

ಸಾಸುವೆ ಮತ್ತು ಕೊತ್ತಂಬರಿ ಸೊಪ್ಪು ಬಹಳ ಬೇಗ ಬೆಳೆಯುತ್ತವೆ. ತಿನ್ನುವುದಕ್ಕೂ ಬರುತ್ತದೆ. ಒಂದು ತಟ್ಟೆಯಲ್ಲಿ ಫೋಮ್ ರಬ್ಬರನ್ನಿಟ್ಟು, ಅದರ

ಮೇಲೆಬೀಜಗಳನ್ನು ಹರಡಿ. ಸಾಸುವೆಯು ಬೇಗ ಬರುತ್ತದಾದ್ದರಿಂದ ಅದನ್ನು 3 ದಿನಗಳ ಬಳಿಕ ಬಿತ್ತಬೇಕು. ಫೋಮನ್ನು ನೀರು ಚುಮುಕಿಸುತ್ತಾ ಒದ್ದೆಯಾಗಿಟ್ಟಿರಬೇಕು. ಅದು ತೇಲುವಂತೆ ನೀರು ಹಾಕಬಾರದು. ಒಣಗಲೂಬಾರದು.

ಶಾಲೆಯಲ್ಲಾಗಲೀ, ಮನೆಯಲ್ಲಾಗಲೀ, ಇವುಗಳನ್ನಾಗಲೇ ಬೆಳೆಸಿದ್ದರೆ, ಬದಲಾವಣೆಗೆ, ಈರುಳ್ಳಿ ಮೊದಲಾದ ಗಡ್ಡೆಗಳನ್ನು ಬೆಳೆಸಬಹುದು. ಒಂದು ಕುಂಡದ ತುಂಬ ಬೆಳೆದ ಬೆಳೆಯನ್ನು ಸ್ವೀಕರಿಸಲು ಅವರ ತಾಯಿಯೂ ಸಂತೋಷಪಟ್ಟಾರು. ನೆಲೆಗಡಲೆ ಬೆಳೆಯುವುದೂ, ಅದೂ ಹೂ ಬಿಟ್ಟು, ಕಾಯಿ ಆಗುವ ವೇಳೆಗೆ ನೆಲದೊಳಗೆ ಸೇರುವುದು, ಸೋಜಿಗವೇ ಸರಿ. ಹಿತ್ತಲು ಅಥವಾ ಸಾಕಷ್ಟು ವಿಶಾಲವಾದ, ತೋಟ ಮಾಡಲು ಭೂಮಿಯಿದ್ದರೆ, ಬೀನ್ಸ್, ಬಟಾಣಿ, ಕ್ಯಾರೆಟ್, ಎಲೆಕೋಸು, ಹೂ ಕೋಸು ಮುಂತಾದ ತರಕಾರಿಗಳನ್ನು ಬೆಳೆಯಬಹುದು.

ಬೀಜ ಬಿತ್ತಿದ ದಿನ, ಮೊಳಕೆ ಬಂದ ದಿನ, ಎಲೆಯೊಡೆದ ದಿನ, ಹೂ ಬಂದ ದಿನ, ಹೀಗೆ ಹಂತಹಂತವಾಗಿ ಬೆಳವಣಿಗೆಯನ್ನು ಗುರ್ತಿಸಲಿ.

ಈ) ಇಷ್ಟವಾದ ಯಾವುದಾದರೂ ವಿಷಯವನ್ನು ಕುರಿತು, ಒಂದು ಚಿತ್ರವನ್ನು ಬರೆದು, ಬಣ್ಣ ಹಾಕುವುದು (ಬಣ್ಣಗಳಿಂದ ರಚಿಸುವುದು)

ಬಾಲಕನ ಸಹಜ ಪ್ರವೃತ್ತಿಗಳಿಗೆ, ಎಲ್ಲ ರೀತಿಯಲ್ಲಿಯೂ ಉತ್ತೇಜನ ನೀಡುವ ಉದ್ದೇಶದಿಂದ, ಅವನು ಕೆಲಸದ ಬಗ್ಗೆ ತೋರುವ ಉತ್ಸಾಹ ಮತ್ತು ಶ್ರದ್ಧೆ ಇವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಚಿತ್ರ ರಚನೆಗೆ ಪೆನ್ಸಿಲ್ಲು, ಬ್ರಷ್ಷು ಅಥವಾ ಪೆನ್ನುಗಳನ್ನು ಉಪಯೋಗಿಸಬಹುದು.

ಮೊದಲಿಗೆ ಶುಭಾಶಯ ಕೋರುವ ಕಾರ್ಡುಗಳನ್ನು ಮಾಡಬಹುದು. ಸ್ಕೆಚ್ ಪುಸ್ತಕದಲ್ಲಿ ಕುರ್ಚಿ, ಮೇಜು, ಸ್ಟೂಲು, ಪೆಟ್ಟಿಗೆ ಇತ್ಯಾದಿ ವಸ್ತುಗಳನ್ನು ಚಿತ್ರಿಸಬಹುದು.

ಉ) ಲಾಂದ್ರವೊಂದನ್ನು ಶುಭ್ರಗೊಳಿಸಿ, ಹದಮಾಡಿ ಎಣ್ಣೆ ಹಾಕಿ, ಹಚ್ಚಲು ಮತ್ತು ಆರಿಸಲು (ನಂದಿಸಲು) ಬರಬೇಕು

ಅಕೇಲರು ಲಾಂಧ್ರವೊಂದನ್ನು ತಂದು, ಅದರ ವಿವಿಧ ಭಾಗಗಳನ್ನು ವಿವರಿಸಬೇಕು. ಅದರ ಚಿಮಣಿಯನ್ನು ಒರೆಸಿ, ಸ್ವಚ್ಛಗೊಳಿಸುವ ರೀತಿಯನ್ನೂ ಮತ್ತು ಎಚ್ಚರಿಕೆಯ ಕ್ರಮಗಳನ್ನೂ ತಿಳಿಸಬೇಕು; ಎಣ್ಣೆ ತುಂಬಿಸುವುದು ಮತ್ತು ಮುಚ್ಚಳವನ್ನು ಭದ್ರವಾಗಿ ಮುಚ್ಚುವುದು; ಬತ್ತಿಯನ್ನು ಪ್ರಕಾಶಮಾನವಾದ ಜ್ವಾಲೆಯು ಬರುವ ರೀತಿಯಲ್ಲಿ ಕತ್ತರಿಸುವುದು ಮತ್ತು ಅದು ಒಳಗೆ ಬಿದ್ದು ಹೋಗದಂತೆ ಎಚ್ಚರಿಕೆ

ವಹಿಸುವುದು; ಹತ್ತಿಸುವುದು ಮತ್ತು ಆರಿಸುವುದು, ಈ ಎಲ್ಲವನ್ನೂ ವಿವರಿಸಿ, ಮಾಡಿ ತೋರಿಸಬೇಕು.

ಊ) ಹತ್ತು ಪದಗಳಿಗೆ ಕಡಿಮೆಯಿರದ, ಬಾಯಿಮಾತಿನ ಸುದ್ದಿಯೊಂದನ್ನು (ವರ್ಬಲ್ ಮೆಸೇಜ್) ನಿರ್ದಿಷ್ಟ ಮಾರ್ಗದಲ್ಲಿ, ಕಾಲ್ನೋಟದಿಂದಾದರೆ 5 ನಿಮಿಷಗಳಲ್ಲಿ, ಸೈಕಲ್ ಮೇಲಾದರೆ 3 ನಿಮಿಷಗಳಲ್ಲಿ ಹೋಗಿ, ಸರಿಯಾಗಿ ವರದಿ ಮಾಡಬೇಕು (ಹೇಳಿ ಬರಬೇಕು).

ಒಯ್ಯಬಹುದಾದ ಸುದ್ದಿಯ ಉದಾಹರಣೆಗಳು:

i) ಶುಕ್ರವಾರದ/ ಪೂಜೆಗೆ/ ಒಂದು/ ತೆಂಗಿನಕಾಯಿ/ಆರು/ ಬಾಳೆ ಹಣ್ಣುಗಳು/ ಒಂದು/ ಊದುಕಡ್ಡಿ/ ಪೊಟ್ಟಣ/ 50 ಪೈಸೆ/ ಕರ್ಪೂರ/ ಹತ್ತು/ ಮೊಳ/ ಹೂವು/ ತನ್ನಿ.

ii) ಅಪಘಾತದಲ್ಲಿ/ ಇಬ್ಬರಿಗೆ/ ಕಾಲು/ ಮುರಿದಿದೆ/ ನಾಲ್ವರಿಗೆ/ ಪ್ರಜ್ಞೆ/ ತಪ್ಪಿದೆ/ ವೈದ್ಯಕೀಯ/ ಸಹಾಯ/ ಕೂಡಲೇ/ ಬೇಕು.

ಮಾರ್ಗವನ್ನು ಹೇಳುವಾಗ, ದಿಕ್ಸೂಚಿಯನ್ನುಪಯೋಗಿಸಿ ಈಶಾನ್ಯ, ಆಗ್ನೇಯ ಇತ್ಯಾದಿ ದಿಕ್ಕುಗಳನ್ನೂ, ಮೀಟರ್‌ಗಳಲ್ಲಿ ಕ್ರಮಿಸಬೇಕಾದ ದೂರಗಳನ್ನೂ, ಸುದ್ದಿಯನ್ನು ಒಯ್ದು ಮುಟ್ಟಿಸಿ ವಾಪಸ್ ಬರಲು ಮರಿಗಳಿಗೆ ಹೇಳಬೇಕು.

ಬೇರೆ ಬೇರೆ ಅಂತರಗಳಲ್ಲಿ, ನಾಲ್ಕಾರು ಸುದ್ದಿಗಳನ್ನು ಕೊಟ್ಟು ಷಟ್ಕಗಳಿಗೆ ರಿಲೇ ರೀತಿಯ ಆಟವನ್ನು ಕೊಡಬಹುದು.

ಎ) ಅರ್ಧ ಕಿ.ಮೀ.ಗೆ ಕಡಿಮೆ ಇಲ್ಲದ, ಒಂದು ಕಿ.ಮೀ. ದೂರಮೀರದ ಗುರುತು ಹಾಕಿದ ದಾರಿಯನ್ನು (Trail) ಕ್ರಮಿಸಬೇಕು

ಹೆಣ್ಣೆದ ಕಥೆಯ ಆಧಾರಿತ ಚಿಹ್ನೆಗಳು, ಅವುಗಳನ್ನು ಅನುಸರಿಸಿ ಹೋಗುತ್ತಾ ಮರಿಗಳು ಏನು ಮಾಡಬೇಕು? ಕೊನೆ ಹೇಗೆ? ಅಥವಾ ತಿಳಿಯ ಹೇಳಿದ ಅರಣ್ಯ ಕೌಶಲದ ಚಿಹ್ನೆಗಳು, ಅವುಗಳನ್ನು ಗುರುತು ಮಾಡಿರುವ ರೀತಿ, ದಾರಿಯಲ್ಲಿ ಅನುಸರಿಸಬೇಕಾದ ಎಚ್ಚರಿಕೆ ಕ್ರಮಗಳು, ಹೀಗೆ ವಿವರವಾಗಿ ಅಕೇಲರು ಮಕ್ಕಳಿಗೆ ತಿಳಿಸಬೇಕು.

ಈ ಮಾರ್ಗಾನುಸರಣೆಯಿಂದ ಮಕ್ಕಳ ಅವಲೋಕನಾ ಶಕ್ತಿ, ಕಾಲ್ಪನಿಕ ಶಕ್ತಿಗಳು ವೃದ್ಧಿಹೊಂದುತ್ತವೆ.

◆

ಅಧ್ಯಾಯ-17

ತೃತೀಯ ಚರಣ್ ಪದಕದ ಪರೀಕ್ಷಾಂಶಗಳು

☆ ☆ ☆

1. ಕರಕುಶಲ ವಸ್ತುವೊಂದನ್ನು ತಯಾರಿಸಬೇಕು. ನೆರೆಹೊರೆಯಲ್ಲಿ ಇರಬಹುದಾದ, ಅಂಗವಿಕಲ ಮಗುವೊಂದಕ್ಕೆ ಇದನ್ನು ಕೊಡಬೇಕು

ಮರಿಯು ತನ್ನ ನೆರೆಹೊರೆಯಲ್ಲಿರಬಹುದಾದ, ಅಂಗವಿಕಲ ಮಗುವೊಂದನ್ನು ದೃಷ್ಟಿಯಲ್ಲಿಟ್ಟುಕೊಂಡು, ಅದಕ್ಕಾಗಿ ಒಂದು ಕರಕುಶಲ ವಸ್ತುವನ್ನು ತಯಾರಿಸಿ ಕೊಡುವಂತೆ, ಅಕೇಲರು ಪ್ರಚೋದಿಸಬೇಕು. ಇದರಿಂದ ಮರಿಗೆ ಹೆಮ್ಮೆಯೆನಿಸುತ್ತದೆ. ಅಲ್ಲದೆ, ತನಗಿಂತ ಚಿಕ್ಕವರೊಡನೆ, ತಾನು ತಯಾರಿಸಿದ ವಸ್ತುವನ್ನು ಹಂಚಿಕೊಳ್ಳುವ ತೃಪ್ತಿಯೂ, ಇತರರಿಗೆ ಉಪಯೋಗವಾಗುವಂತಹ ವಸ್ತುವನ್ನು ತಯಾರಿಸಿದ ಸಮಾಧಾನವೂ, ದೊರಕುತ್ತದೆ. ತನ್ನಷ್ಟು ಭಾಗ್ಯಶಾಲಿಯಲ್ಲದ ವ್ಯಕ್ತಿಯ ಜೀವನದಲ್ಲಿ, ಸಂತೋಷವನ್ನುಂಟು ಮಾಡಿದೆನೆಂಬ ಭಾವನೆಯೂ ಬರುತ್ತದೆ.

ಮರಿಗಳ ಮನಸ್ಸಿನಲ್ಲಿ, ಪರಹಿತ ಚಿಂತನೆ ಮತ್ತು ದಯಾರ್ದ್ರ ಹೃದಯತೆಗಳ ಬೀಜವನ್ನು ಬಿತ್ತುವುದಕ್ಕೆ, ಈ ಪರೀಕ್ಷಾಂಶವು, ಅಕೇಲರಿಗೆ ಒಳ್ಳೆಯ ಅವಕಾಶವಾಗಿದೆ.

2. ದಿಕ್ಸೂಚಿಯ ಎಂಟು ಮುಖ್ಯ ದಿಕ್ಕುಗಳನ್ನು ತಿಳಿದಿರಬೇಕು

ತೃತೀಯ ಚರಣ್ ಪದಕಕ್ಕೆ ಬೇಕಾದ ಅರ್ಹತೆಯೆಂದರೆ, ಮರಿಗಳು ದಿಕ್ಸೂಚಿಯ ಎಂಟು ಮುಖ್ಯ ದಿಕ್ಕುಗಳನ್ನು ತಿಳಿದಿರಬೇಕು. ಎಂದರೆ ಈ ಎಂಟು ದಿಕ್ಕುಗಳು –ಉತ್ತರ, ಈಶಾನ್ಯ, ಪೂರ್ವ, ಆಗ್ನೇಯ, ದಕ್ಷಿಣ, ನೈಋತ್ಯ, ಪಶ್ಚಿಮ ಮತ್ತು ವಾಯುವ್ಯ –ಹೆಸರುಗಳನ್ನು ಹೇಳುವುದು ಮಾತ್ರವಲ್ಲದೆ, ಆ ದಿಕ್ಕುಗಳನ್ನು ಸರಿಯಾಗಿ ತೋರಿಸಿ ಹೇಳಲೂ ಬರಬೇಕು.

ದಿಕ್ಕುಗಳನ್ನು ಸಹಜ ರೀತಿಯಲ್ಲಿ ತಿಳಿದುಕೊಳ್ಳುವುದು ಮೊದಲ ಹೆಜ್ಜೆ. ಸೂರ್ಯನು ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುತ್ತಾನೆ. ಪೂರ್ವ ಪಶ್ಚಿಮಗಳನ್ನು ತಿಳಿದಾದ ಮೇಲೆ, ದಕ್ಷಿಣ ಉತ್ತರಗಳನ್ನು ಹೇಳುವುದು ಸುಲಭ. ಪೂರ್ವಾಭಿಮುಖ ವಾಗಿ ನಿಂತುಕೊಂಡರೆ, ಎದುರಿಗೆ ಪೂರ್ವ ಹಿಂದುಗಡೆ ಪಶ್ಚಿಮ.

ಈಗ ಎರಡು ಕೈಗಳನ್ನೂ ಪಕ್ಕಕ್ಕೆ ಚಾಚಿದರೆ, ಎಡಗೈ ಉತ್ತರ ದಿಕ್ಕನ್ನೂ, ಬಲಗೈ ದಕ್ಷಿಣ ದಿಕ್ಕನ್ನೂ ತೋರಿಸುತ್ತದೆ. ಉತ್ತರ, ಪೂರ್ವ, ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳನ್ನು ತಿಳಿದಾದ ಮೇಲೆ, ಇವುಗಳ ಮಧ್ಯ ದಿಕ್ಕುಗಳಾದ, ಕ್ರಮವಾಗಿ ಈಶಾನ್ಯ, ಆಗ್ನೇಯ, ನೈಋತ್ಯ ಮತ್ತು ವಾಯುವ್ಯ ದಿಕ್ಕುಗಳನ್ನು ತಿಳಿಯುವುದು ಸುಲಭ.

ಮರಿಗಳಿಗೆ ದಿಕ್ಕುಗಳ ಬಗ್ಗೆ ವಿವೇಚನಾ ಶಕ್ತಿ ಇರುವುದೇ ಎಂಬುದನ್ನು ಪರೀಕ್ಷಿಸುವುದು, ಈ ಅಂಶದ ಉದ್ದೇಶವಾಗಿದೆ. ದಿಕ್ಸೂಚಿಯ ಎಂಟು ದಿಕ್ಕುಗ್ಗಳನ್ನು ಮರಿಗಳಿಗೆ ಆಡಿಸುವ ಆಟಗಳು, ಹೇಳುವ ಸಾಹಸಮಯ ಕತೆಗಳು ಇತ್ಯಾದಿಗಳಲ್ಲಿ ಬಳಸುತ್ತಿದ್ದರೆ, ಈ ಪರೀಕ್ಷಾಂಶದ ಉದ್ದೇಶವನ್ನು ಮತ್ತಷ್ಟು ಬಲಪಡಿಸಿದಂತಾಗುತ್ತದೆ.

3. ತಮ್ಮ ಗ್ರಾಮ/ ನಗರದ ರೈಲು, ಬಸ್ಸು, ವೈದ್ಯಕೀಯ, ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ತಿಳುವಳಿಕೆ

ಈ ಪರೀಕ್ಷಾಂಶವು, ಮರಿಗಳಿಗೆ ತಮ್ಮ ಗ್ರಾಮ/ ನಗರದ ಸಂಚಾರ ವ್ಯವಸ್ಥೆ, ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ತಿಳಿದಿರಲೂ, ಅವಶ್ಯಕತೆಬಿದ್ದಾಗ, ದಿನದ ಉಪಕಾರ ಮಾಡಲೂ, ತಾವುಗಳು ದೊಡ್ಡವರಾದಾಗ, ಅವುಗಳ ಉಪಯೋಗ ಪಡೆಯಲೂ ಸಹಾಯವಾಗುತ್ತದೆ.

ಊರಿಗೆ ರೈಲು, ಬಸ್ಸು, ಸಂಚಾರವಿದ್ದರೆ ಅವುಗಳ ನಿಲ್ದಾಣ/ನಿಲುಗಡೆ ಎಲ್ಲಿದೆ? ಬಂದು, ನಿಂತು ಹೋಗುವ ವಾಹನಗಳ ಸುಮಾರು ವೇಳೆಗಳು, ಎಲ್ಲಿಂದ, ಎಲ್ಲಿಗೆ ಇತ್ಯಾದಿ ತಿಳಿದಿರಬೇಕು. ಊರಿಗೆ ಸಂಚಾರ ವ್ಯವಸ್ಥೆ ಇಲ್ಲದೆ ಇದ್ದರೆ; ಸಮೀಪದ ನಿಲ್ದಾಣ/ನಿಲುಗಡೆ ಬಗ್ಗೆ ತಿಳಿದಿರಬೇಕು.

ಅಕೇಲರು ಈ ವಿಷಯದಲ್ಲಿ ಸೂಕ್ತ ಮಾರ್ಗದರ್ಶನ ನೀಡಬೇಕು.

ಅದೇ ರೀತಿ ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ವೈದ್ಯರುಗಳ ಬಗ್ಗೆ ಸಹ ತಿಳಿಸಿರಬೇಕು.

4. ಉಳುಕಿಗೆ ಮತ್ತು ಕುಟುಕು (ಕಣಜ, ಜೇನು ಮುಂತಾದವು) ಗಾಯಗಳಿಗೆ ಪ್ರಥಮ ಚಿಕಿತ್ಸೆ ಮಾಡಬೇಕು

ಉಳುಕು: ದೇಹದಲ್ಲಿರುವ ಕೀಲುಗಳ ಭಾಗದಲ್ಲಿ ಅಸ್ತಿರಜ್ಜು (ಲಿಗಮೆಂಟ್ಸ್) ಮತ್ತು ಅಂಗಸತ್ವಗಳು (ಟಿಷ್ಯೂಸ್) ಬಲವಾದ ನುಲಿತ (ರೆಂಚಿಂಗ್) ಮತ್ತು ಎಳೆತಕ್ಕೆ

(ಟೇರಿಂಗ್) ಒಳಗಾದಾಗ, ಉಳುಕು ಸಂಭವಿಸುತ್ತದೆ. ಇದು ಸಾಮಾನ್ಯವಾಗಿ ಪಾದಗಳ ಕೀಲು ಪ್ರದೇಶದಲ್ಲಿ ಸಂಭವಿಸುತ್ತದೆ.

ಚಿಹ್ನೆಗಳು: ಕೀಲು ನೋವಿರುತ್ತದೆ. ಆ ಕೀಲನ್ನುಪಯೋಗಿಸಿದಾಗ ಹೆಚ್ಚು ನೋವುಂಟಾಗುತ್ತದೆ. ಕೀಲಿನ ಸುತ್ತಲೂ ಊತವಿರುತ್ತದೆ. ಹೆಚ್ಚು ಪ್ರಮಾಣದಲ್ಲಿ ಉಳುಕಿದ್ದರೆ ಕೀಲನ್ನುಪಯೋಗಿಸಲು ಬರುವುದಿಲ್ಲ.

ಪ್ರಥಮ ಚಿಕಿತ್ಸೆ ರೋಗಿಗೆ ಹೆಚ್ಚು ನೋವುಂಟಾಗದಂತೆ, ಸೌಖ್ಯವಾದ ಸ್ಥಿತಿಯಲ್ಲಿ ಈ ಭಾಗವನ್ನಿಡಿ. ಕೀಲು ಪ್ರದೇಶವನ್ನು ಗಾಳಿಯಾಡುವಂತೆ ಮಾಡಿ. ಐಸ್‌ಪ್ಯಾಕ್ ಹಾಕಿ. ತಣ್ಣೀರು ಬಟ್ಟೆಯನ್ನು ಬಲವಾಗಿ ಸುತ್ತಲೂ ಬರುತ್ತದೆ. ಹೀಗೆ ಕನಿಷ್ಠ 30 ನಿಮಿಷಕಾಲ ಮಾಡಬೇಕು. ಷೂಸ್ ಮತ್ತು ಸಾಕ್ಸ್ ಹಾಕಿದ್ದರೆ ತೆಗೆಯಬಾರದು. ರೋಗಿಯನ್ನು ಒಯ್ಯುವಾಗ ಉಳುಕಿದ ಭಾಗದ ಮೇಲೆ ಭಾರ ಬೀಳದಂತೆ ಎಚ್ಚರ ವಹಿಸಬೇಕು.

ಕುಟುಕು ಗಾಯಗಳು: ಕಣಜ, ಜೇನು ಮುಂತಾದ ಕೀಟಗಳೂ, ಚೇಳು ಮುಂತಾದ ಪ್ರಾಣಿಗಳು ಕುಟುಕುವುದರಿಂದ ಉಂಟಾಗುತ್ತದೆ. ಕೀಟಗಳ ಕುಟುಕು ನಮ್ಮ ದೇಶದಲ್ಲಿ ಸಾಮಾನ್ಯವಾದುದು. ಇದರ ಮುಳ್ಳನ್ನು ತೆಗೆಯಿರಿ. ಚೇಳು ಕುಟುಕು ಗಾಯದ ಮೇಲೆ ಒತ್ತಡ ಬೀಳದಂತೆ, ವಿಷಕೋಶದಿಂದ ಹೆಚ್ಚು ವಿಷವು ದೇಹದೊಳಕ್ಕೆ ಹೋಗದಂತೆ, ಎಚ್ಚರಿಕೆ ವಹಿಸಬೇಕು. ನೋವು ಮತ್ತು ಕೆರೆತವನ್ನು ತಡೆಗಟ್ಟಲು ಐಸ್‌ಪ್ಯಾಕ್ ಹಾಕಬೇಕು.

5. ಹಿಂಡಿನ ಕಾರ್ಯಗಳ ವೇಳೆ, ಎರಡಾದರೂ ಪ್ರಾರ್ಥನಾ ಕೂಟಗಳಲ್ಲಿ ಭಾಗವಹಿಸಿರಬೇಕು

ಹಿಂಡಿನ ಪ್ರಾರ್ಥನಾ ಕಾರ್ಯಕ್ರಮದಲ್ಲಿ, ಎಲ್ಲಾ ಮರಿಗಳೂ ಪಾಲ್ಗೊಳ್ಳಬೇಕು. ಮರಿಗಳು ತಮ್ಮದೇ ಪ್ರಾರ್ಥನೆಗಳನ್ನು ರಚಿಸಬಲ್ಲರು; ಆದರೆ ಪ್ರಾರಂಭದಲ್ಲಿ ಪುಸ್ತಕಗಳಿಂದ ಆರಿಸಿಕೊಳ್ಳುವುದು ಒಳ್ಳೆಯದು. ಎಲ್ಲಾ ಪ್ರಾರ್ಥನೆಗಳಿಗೂ ಆರಾಳಿಗಳೇ ಮುಂದಾಳಾಗಬೇಕಾಗಿಲ್ಲ. ಪುಟ್ಟಮರಿಗಳೂ ಪಾತ್ರವಹಿಸಲು ಅವಕಾಶವನ್ನು ಕೊಡಬೇಕು. ಮರಿಗಳೇ ಬರೆದ, ಚಿತ್ರಸಹಿತ ರಚನೆಗಳನ್ನೊಳಗೊಂಡ, ಹಿಂಡಿನ ಪ್ರಾರ್ಥನಾ ಪುಸ್ತಕವನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಪ್ರಶಸ್ತವಾಗಿರುತ್ತದೆ.

ಹಾಡಿನ ಪ್ರಾರ್ಥನೆಗಳು, ಆ ಬಾಲಕರ ವಯಸ್ಸಿಗನುಗುಣವಾಗಿರಬೇಕು. ಅದರಲ್ಲಿ ಬರುವ ಪ್ರತಿ ಪದವೂ ಅರ್ಥವತ್ತಾಗಿರಬೇಕು. ಪುಟ್ಟ ಬಾಲಕರಿಗೆ ಕ್ಲಿಷ್ಟವಾದ ಪದಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ನಾಯಕರುಗಳು ಕಷ್ಟಕರವಾದ

ಪದಗಳನ್ನೂ, ಪದಸಮುಚ್ಚಯಗಳನ್ನೂ ಉಪಯೋಗಿಸಬಾರದು. ಪ್ರಾರ್ಥನೆಯು, ಬಾಲಕರಿಗೆ ಸಂಬಂಧಿಸಿದ ವಿಷಯದಲ್ಲಿರಬೇಕು. ಉದಾ: ಅವರ ಮನೆ, ಕುಟುಂಬ, ಕಾಯಿಲೆ, ಆಟಿಕೆಗಳು, ಆಟಗಳು, ಆಹ್ಲಾದಕರ ಹೊರ ಸಂಚಾರಗಳು, ಕೊಟ್ಟ ಮಾತಿಗೆ ತಪ್ಪದಂತಿರುವುದು, ಇತ್ಯಾದಿ, ಪ್ರಕೃತಿಗೆ ಸಂಬಂಧಿಸಿದಂತೆ ಹೂ, ಹಣ್ಣುಗಳು, ಮಾದರಿಗಳು, ಚಿತ್ರಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಹಾ ಇರಬಹುದು.

ಪ್ರದರ್ಶನಗಳು ಮತ್ತು ವಸ್ತು ವೀಕ್ಷಣೆಗಳ ಸಮಯದಲ್ಲಿ ಉದಾ: ಪ್ರಕೃತಿ ಸಂಬಂಧ ಭಿತ್ತಿಚಿತ್ರಗಳು, ಹೂ ಕುಂಡಗಳು, ವಾರ್ತಾ ಮತ್ತು ವಾರಪತ್ರಿಕೆಗಳಿಂದ ಆಯ್ದ ಚಿತ್ರ ಪ್ರದರ್ಶನ ಇತ್ಯಾದಿ; ವಿಶೇಷ ಕಾರ್ಯಕ್ರಮಗಳ ವೇಳೆಯಲ್ಲಿ ಎಂದರೆ ಆರಾಳಿಗಳ ಸಭೆ, ಹಿಂಡಿನ ರಜಾದಿನ, ದೀಕ್ಷಾ ಸಮಾರಂಭ, ಆರಾಳಿಗಳ ನೇಮಕ, ಜನ್ಮದಿನಗಳು, ಮರಿಗಳ ಮನೆಯಲ್ಲಿ ತಮ್ಮ/ ತಂಗಿ ಹುಟ್ಟಿದಾಗ, ಹೊರ ಸಂಚಾರಕ್ಕೆ ಮೊದಲು, ಯಾವುದಾದರೂ ಮರಿಯು ಹಿಂಡನ್ನು ಬಿಡುವಾಗ, (ವರ್ಗಾವಣೆ/ ಆರೋಹಣ) ಸ್ಕೌಟರುಗಳ ವರ್ಗಾವಣೆ ಇತ್ಯಾದಿ ಸಂದರ್ಭಗಳಲ್ಲಿ ಪ್ರಾರ್ಥನಾ ಸಭೆಗಳು ಹೆಚ್ಚು ಪರಿಣಾಮಕಾರಿಯಾಗಿರುತ್ತವೆ, ಸಹಜವಾಗಿಯೂ ಇರುತ್ತವೆ. ವಾರಕ್ಕೊಮ್ಮೆ ಅಥವಾ ಪಕ್ಷಕ್ಕೊಮ್ಮೆ ಸಹ ಹಿಂಡಿನ ಕಾರ್ಯಕ್ರಮಗಳ ಭಾಗವನ್ನಾಗಿ ಸಹ ಪ್ರಾರ್ಥನಾ ಸಭೆ ಏರ್ಪಡಿಸಬಹುದು.

6. ಕೋರಿಕೊಂಡಿರುವ ಸಾರ್ವಜನಿಕ ಸ್ಥಳವೊಂದರಲ್ಲಿ, ಹಿಂಡು ನಡೆಯಿಸುವ ಉಪಕಾರ (ಸೇವೆ) ಚಟುವಟಿಕೆಯೊಂದರಲ್ಲಿ ಭಾಗವಹಿಸಿರಬೇಕು

ಒಬ್ಬೊಬ್ಬರೇ ಮಾಡುವ ಉಪಕಾರಗಳು ಸಹಜ ರೀತಿಯಲ್ಲಿ, ಕ್ರಮೇಣ, ಸಾಮೂಹಿಕ ಉಪಕಾರವಾಗಿ, ಹಿಂಡಿನ ಸೇವಾ ಕಾರ್ಯಕ್ರಮವಾಗಿ ರೂಪುಗೊಳ್ಳಬೇಕು. ಈ ಅಂಶವನ್ನೆಂದೂ ಕಡೆಗಣಿಸಬಾರದು. ಹಿಂಡಿನ ಸೇವಾ ಕಾರ್ಯಕ್ರಮವನ್ನು ಯಾವ ರೀತಿಯಲ್ಲಿ ಎಲ್ಲಿ, ಹೇಗೆ ನಡೆಯಿಸಬೇಕೆಂಬ ಬಗ್ಗೆ ಚರ್ಚಿಸಲು ಪ್ರಯತ್ನಿಸಬೇಕು. ಇದು ಸಮಗ್ರವಾಗಿ ಹಿಂಡಿನ ಜೀವನಕ್ಕೆ, ಒಳ್ಳೆಯದನ್ನುಂಟು ಮಾಡುವ ಅದ್ಭುತ ಅವಕಾಶವಾಗಿದೆ. ಇದರಿಂದ ಪ್ರಾಮಾಣಿಕವಾಗಿ, ಕೈಲಾದಷ್ಟು ಸೇವೆ ಸಲ್ಲಿಸಿದ್ದೇವೆಂಬ ತೃಪ್ತಿಯೂ, ಸಹಜವಾಗಿ ದೊರಕುವ ಆನಂದವೂ, ಆಸಕ್ತಿಯೂ ಹೆಚ್ಚುತ್ತದೆ. ಉದ್ಯಾನವನ, ಬಸ್‌ಸ್ಟ್ಯಾಂಡು, ಶಾಲಾ ಆವರಣ, ದೇವಾಲಯ ಮುಂತಾದ ಪ್ರದೇಶಗಳನ್ನು, ಸ್ಥಳೀಯ ಆದ್ಯತೆಗಳಿಗನುಗುಣವಾಗಿ, ಹಿಂಡಿನ ಸೇವೆ ಸಲ್ಲಿಸಲು ಆರಿಸಿಕೊಳ್ಳಬಹುದು. ಹೆಚ್ಚು ಸೂಕ್ತವೆನಿಸಿದ ಸಂದರ್ಭದಲ್ಲಿ ಹಿಂಡಿನ ಎಲ್ಲರೂ ಕೂಡಿ, ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು.

7. (ಪಂಚ) ಇಂದ್ರಿಯ ಶಿಕ್ಷಣ ಆಟಗಳಲ್ಲಿ ಮೂರರಲ್ಲಾದರೂ ಜಯಪ್ರದವಾಗಿ ಭಾಗವಹಿಸಿರಬೇಕು

(i) **"ಕಿಂ" ಆಟ:** ಈ ಆಟವು ಕಷ್ಟಕರವಾದುದೇನೂ ಅಲ್ಲ. ಅಭ್ಯಾಸ ಬೇಕಷ್ಟೆ. ಈ ಆಟವನ್ನು ಒಂದು ಷಟ್ಕದವರು ಆಡಬಹುದು ಇಲ್ಲವೇ ಇಡೀ ಹಿಂಡು ಆಡಬಹುದು.

ಒಂದು ಹರಿವಾಣದಲ್ಲಿ ಇಲ್ಲವೇ ಮೇಜಿನ ಮೇಲೆ, ಹನ್ನೆರಡು ವಸ್ತುಗಳಿಗೆ ಮೀರದಂತೆ ಸಂಗ್ರಹಿಸಿ. ಉದಾ: ಗುಂಡಿಗಳು, ಚಾಕು, ಪೆನ್ಸಿಲ್, ಪೆನ್ನು, ಕಾಗದ, ಬೆಂಕಿಕಡ್ಡಿ, ಪೆನ್ನಿನ ನಿಬ್ಬು, ಇಂಕ್‌ಬಾಟಲ್, ಬೆಂಕಿಪೊಟ್ಟಣ ಇತ್ಯಾದಿ. ಮರಿಗಳು ಹರಿವಾಣ/ಮೇಜಿನ ಸುತ್ತಲೂ ನಿಲ್ಲುತ್ತಾರೆ/ಕೂಡುತ್ತಾರೆ. ವಸ್ತುಗಳ ಮೇಲೆ ಮುಚ್ಚಿದ ಬಟ್ಟೆಯನ್ನು ತೆಗೆದು 50 ಎಣಿಸುವವರೆಗೆ/ ಒಂದು ನಿಮಿಷ ಕಾಲ ಮರಿಗಳಿಗೆ ನೋಡಲು ಬಿಡಬೇಕು. ಪುನಃ ಬಟ್ಟೆಯನ್ನು ಮುಚ್ಚಿ, ಸಾಮಾನುಗಳ ಪಟ್ಟಿಯನ್ನು ಮಾಡಲು ಮರಿಗಳಿಗೆ ಹೇಳುವುದು. ಪ್ರತಿ ಮರಿಯೂ ಅಕೇಲನ ಬಳಿ ಹೋಗಿ, ಪಿಸುಧ್ವನಿಯಲ್ಲಿ, ಪಟ್ಟಿಮಾಡಿರುವ ಸಾಮಾನುಗಳ ಹೆಸರನ್ನು ಓದಿ ಹೇಳಬೇಕು. ಆಟವು ಮುಗಿಯಬೇಕಾದರೆ, ಪ್ರತಿ ಮರಿಯೂ 12ರಲ್ಲಿ 9ಕ್ಕೂ ಮೇಲ್ಪಟ್ಟು ವಸ್ತುಗಳನ್ನು ಗಮನಿಸಿರಬೇಕು. ಹೆಸರುಗಳನ್ನು ಹೇಳಬೇಕು.

(ii) ಕೊಠಡಿಯ ಉದ್ದಕ್ಕೂ ಒಂದು ಹಗ್ಗವನ್ನು ಎಳೆದು ಕಟ್ಟುವುದು. ಅದರಲ್ಲಿ ಸಮಾನಾಂತರದಲ್ಲಿ 12 ಸಣ್ಣ ಚೀಲಗಳನ್ನು ಕಟ್ಟುವುದು, 6ರಲ್ಲಿ ವಾಸನೆ ಹಿಡಿಯಬಹುದಾದ ವಸ್ತುಗಳಿರುತ್ತವೆ. 6ರಲ್ಲಿ ಮುಟ್ಟಿ ಹೇಳಬಹುದಾಧ ವಸ್ತುಗಳಿರುತ್ತವೆ. ವಾಸನೆ ಮತ್ತು ಸ್ಪರ್ಶದ ಚೀಲಗಳು ಒಂದಾದ ಮೇಲೊಂದರಂತೆ ಇರುತ್ತವೆ. ಹಗ್ಗದ ಆಚೆ ಕೊನೆಯಲ್ಲಿ ಅಕೇಲರು ಕುಳಿತಿರುತ್ತಾರೆ. ಮರಿಗಳಿಗೆ ಕಣ್ಣು ಕಟ್ಟಲಾಗುತ್ತದೆ. ಅವರು ಈಚೆ ಕಡೆಯಿಂದ ಹೊರಟು ವಸ್ತುಗಳನ್ನು ಒಂದೊಂದಾಗಿ ಮೂಸಿ ನೋಡುತ್ತಾ, ಮುಟ್ಟಿನೋಡುತ್ತಾ ಹೋಗಿ, ಆಚೆ ಕಡೆ ಕೊನೆಯಲ್ಲಿ, ಅಕೇಲರಿಗೆ ಅವರು ಮೂಸಿ ನೋಡಿದ, ಮುಟ್ಟಿನೋಡಿದ ವಸ್ತುಗಳ ಹೆಸರುಗಳನ್ನು ಹೇಳಬೇಕು. ವಾಸನೆಯ ವಸ್ತುಗಳು ತೀವ್ರವಾದ ವಾಸನೆಯುಳ್ಳವಾಗಿರಬೇಕು. ಮತ್ತು ಸ್ಪರ್ಶಿಸುವ ವಸ್ತುಗಳು ಚುಚ್ಚುವಂತಿರಬಾರದು ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

(iii) ಇಬ್ಬರು ಮರಿಗಳು ವೃತ್ತದ ಹೊರಗೆ ಸುತ್ತುತ್ತಿರುತ್ತಾರೆ. ಮೌಗ್ಲಿ ಮತ್ತು ಬಾಲು. ಇಬ್ಬರಿಗೂ ಅಥವಾ ಬಾಲುವಿಗೆ ಮಾತ್ರ ಕಣ್ಣು ಕಟ್ಟಲಾಗಿರುತ್ತದೆ.

ಬಾಲುವು ಮೌಗ್ಲಿಯನ್ನು ಹಿಡಿಯಲು ಪ್ರಯತ್ನಿಸುತ್ತಾನೆ. ಇಬ್ಬರಿಗೂ ಕಣ್ಣು ಕಟ್ಟಿರುವಾಗ (ಇದು ಆಟದ ಬದಲಾವಣೆ) ಇಬ್ಬರ ಕೈಯಲ್ಲಿಯೂ ಕೋಲಿನಂತೆ ಸುತ್ತಿದ, ವಾರ್ತಾಪತ್ರಿಕೆ ಇರುತ್ತದೆ. ಯಾರು ಇನ್ನೊಬ್ಬರನ್ನು ಮೊದಲು ಹೊಡೆಯುತ್ತಾರೆಯೋ ಅವರು ಗೆದ್ದಂತೆ. ನಿರ್ದಿಷ್ಟ ಎಣಿಕೆ ಮಾಡುವುದರೊಳಗೆ ಅಥವಾ ನಿರ್ದಿಷ್ಟ ಕಾಲ ಮಿತಿಯೊಳಗೆ ಹಿಡಿಯಬೇಕು/ ಹೊಡೆಯಬೇಕು. ಇನ್ನೊಂದು ಬದಲಾವಣೆ ಯೆಂದರೆ, ಇಬ್ಬರೂ ಪ್ರಾಣಿಗಳಂತೆ, ನಾಲ್ಕು ಕಾಲುಗಳಲ್ಲಿ ನಡೆಯುತ್ತಾ, ಎಡಗೈ ಅಥವಾ ಬಲಗೈಯಿಂದ ಮುಟ್ಟಬೇಕು.

ಇಂತಹ ಅನೇಕ ಇಂದ್ರಿಯ ಶಿಕ್ಷಣ ಆಟಗಳನ್ನು ಹಿಂಡಿನ ಕಾರ್ಯಕ್ರಮಗಳಲ್ಲಿ ಸೇರಿಸಿಕೊಂಡು, ಆಡಿಸಬಹುದು.

೮. ತನ್ನ ಹಿಂಡಿನೊಡನೆ ಒಂದು ದಿನದ ಶಿಬಿರಕ್ಕೆ ಹೋಗಿರಬೇಕು

ಶಿಬಿರವು ಮರಿಗಳಿಗೆ ಹೊರಬಯಲಿನಲ್ಲಿರಲು ಅವಕಾಶವನ್ನು ಕಲ್ಪಿಸುತ್ತವೆ. ಇದು ದಿನನಿತ್ಯದ ವಾತಾವರಣದಿಂದ ದೂರವಿರುವ ಅವಕಾಶವೂ ಹೌದು. ಮರಿಗಳಿಗೆ ಆರೋಗ್ಯದಾಯಕ, ಸುಖದಾಯಕ ವಾತಾವರಣವನ್ನು ನೀಡುತ್ತದೆ. ಚಟುವಟಿಕೆಯಿಂದ ಕೂಡಿದ ಸ್ವಾರಸ್ಯಕರವಾದ, ಹೊರಾಂಗಣದ ಅನುಭವವನ್ನು ನೀಡುತ್ತದೆ. ಮರಿಗಳ ನಿಯಮವನ್ನು ಪಾಲಿಸುವ ಶಿಕ್ಷಣವನ್ನು ನೀಡುತ್ತದೆ. ಮರಿಗಳ ಕಾಲ್ಪನಿಕ ಭಾವನೆ ಮತ್ತು ಸಾಹಸಮಯ ಆಕಾಂಕ್ಷೆಗಳನ್ನು ಪೂರೈಸುತ್ತದೆ. ಶಿಬಿರದಲ್ಲಿ ಮರಿಗಳು, ತಮಗೆ ದೊರಕುವ ಅಪಾರ ಅವಕಾಸಗಳನ್ನು ಉಪಯೋಗಿಸಿಕೊಂಡು, ಹೆಚ್ಚು ಉತ್ಸಾಹ ದಿಂದಲೂ, ಸಮರ್ಥ ರೀತಿಯಲ್ಲಿಯೂ ತಮ್ಮ ಕೆಲಸಗಳನ್ನು ನಿರ್ವಹಿಸುತ್ತಾರೆ. ದೈಹಿಕವಾಗಿಯೂ, ಮಾನಸಿಕವಾಗಿಯೂ, ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳಲು, ಮರಿಗಳಿಗೆ, ಶಿಬಿರದಲ್ಲಿ ಪ್ರಚೋದನೆ ಸಿಗುತ್ತದೆ.

ಸ್ಕೌಟುಗಳಿಗೆ ಶಿಬಿರವಾಸವು ಪ್ರಮುಖ ಚಟುವಟಿಕೆಯಾಗಿದೆ. ಅವರು ಸ್ವಾವಲಂಬಿಗಳಾಗಲು ಕಲಿತುಕೊಳ್ಳುತ್ತಾರೆ. ಈ ಕಲಿಕೆಯ ವೇಳೆಯಲ್ಲಿ ಅವರಿಗೆ ಅಮೂಲ್ಯವಾದ ಶಿಕ್ಷಣ ದೊರಕುತ್ತದೆ. ಮರಿಗಳು ಇನ್ನೂ ಚಿಕ್ಕವಯಸ್ಸಿನವರು. ಅವರನ್ನು ಹೊರಗೆ ಕರೆದೊಯ್ದು, ಸ್ಕೌಟುಗಳ ಹಾಗೆ, ಟೆಂಟುಗಳಲ್ಲಿ ವಾಸಿಸುವಂತೆ ಮಾಡುವುದು ಉಚಿತವೂ ಅಲ್ಲ, ಸುರಕ್ಷಿತವೂ ಅಲ್ಲವೆಂದು ಭಾವಿಸಲಾಗಿದೆ. ಸಾಮಾನ್ಯವಾಗಿ ಮರಿಗಳನ್ನು ಶಿಬಿರಗಳಿಗೆ ಕರೆದುಕೊಂಡು ಹೋಗಬಾರದು. ಆದರೆ ಆಗಾಗ್ಗೆ ಮರಿಗಳಾಗಿಯೇ ಏರ್ಪಡಿಸಿದ ಶಿಬಿರಗಳಲ್ಲಿ ಸಹಾಯಮಾಡಿ, ಅವಶ್ಯಕವಾದ

ಜ್ಞಾನ ಮತ್ತು ವ್ಯಾವಹಾರಿಕ ಅನುಭವಗಳನ್ನು ಪಡೆದ ಅಕೇಲರುಗಳು ಮತ್ತು ನುರಿತ ಅಕೇಲರುಗಳು ಮಾತ್ರ, ಜಿಲ್ಲಾ ಕಮೀಷನರು ಮತ್ತು ತಾಯಿ ತಂದೆಯರು/ ಪೋಷಕರುಗಳ ಲಿಖಿತ ಅನುಮತಿ ಪಡೆದು, ಶಿಬಿರಗಳನ್ನು ಏರ್ಪಡಿಸಬಹುದು.

ಹಾಗೆ ಏರ್ಪಡಿಸುವಾಗ ಈ ಕೆಳಗೆ ಕಾಣಿಸಿರುವ ಅಂಶಗಳನ್ನು ಪೂರೈಸಬೇಕು:

(i) ಒಂದಲ್ಲ ಒಂದು ರೀತಿಯಲ್ಲಿ ಸುರಕ್ಷಿತವಾದ ಆಶ್ರಯವಿರಬೇಕು. (ಮನೆ ಮಠ ಇತ್ಯಾದಿ).

(ii) ಅಕೇಲರಿಗೆ ಸಹಾಯ ಮಾಡಲು ಷಟ್ಕಕ್ಕೊಬ್ಬರಂತೆ, ಇಲ್ಲದಿದ್ದರೆ ಕನಿಷ್ಠ ಇಬ್ಬರಾದರೂ ವಯಸ್ಕ ವ್ಯಕ್ತಿಗಳಿರಬೇಕು.

(iii) ಶಿಬಿರಕ್ಕೆ ಆಯ್ಕೆಮಾಡಿದ ಸ್ಥಳವು, ವೈದ್ಯಕೀಯ, ಅಂಚೆ ಮತ್ತು ಇತರ ಸೌಕರ್ಯವಿರುವ, ನಗರ ಪ್ರದೇಶಕ್ಕೆ ಸಮೀಪವಾದ ಸ್ಥಳವಾಗಿರಬೇಕು.

(iv) ಹಾಲು, ಮೊಸರು, ಸೌದೆ, ಕಿರಾಣಿ ವಸ್ತುಗಳು ಸುಲಭವಾಗಿ ದೊರಕುವಂತೆ ಇರಬೇಕು.

(v) ಶಿಬಿರವನ್ನು ಸೇರಲು ಮಾಡುವ ಪ್ರಯಾಣವು ಸುಖಕರವಾಗಿಯೂ, ಆಹ್ಲಾದಕರವಾಗಿಯೂ ಇರಬೇಕು. ಮರಿಗಳು ದೂರ ಪ್ರಯಾಣ ಮಾಡಬಾರದು.

(vi) ಮರಿಗಳನ್ನು ಕರೆದೊಯ್ಯಲು ಸೂಕ್ತವಾದ ವಾಹನ ವ್ಯವಸ್ಥೆ ಇರಬೇಕು. ಶಿಬಿರವನ್ನು ಸೇರುವ ಈ ಪ್ರಯಾಣವು ಆನಂದದಾಯಕವಾಗಿರಬೇಕು.

(vii) ಮರಿಗಳನ್ನು ಶಿಬಿರಕ್ಕೆ ಕರೆದುಕೊಂಡು ಹೋದಾಗ, ಆ ಸ್ಥಳವು, ಎಲ್ಲಾ ರೀತಿಯಲ್ಲಿಯೂ ಸಜ್ಜಾಗಿರಬೇಕು. ಮೊದಲಿನಿಂದಲೇ, ಎಲ್ಲವೂ ದೊರಕುವಂತಿರಬೇಕು.

(viii) ಅಡಿಗೆಮನೆ ಮತ್ತು ಪಾಕೀಜು ವ್ಯವಸ್ಥೆಯು ಅತಿಮುಖ್ಯವಾದ ಅಂಶಗಳು. ಮರಿಗಳು ಶಿಬಿರವನ್ನು ಸೇರಿದ ಕೂಡಲೇ ಉಪಹಾರ ಮತ್ತು ಟೀ ಅಥವಾ ಊಟದ ವ್ಯವಸ್ಥೆಯು, ಯಾವುದು ಸೂಕ್ತವೋ ಅದು ತಯಾರಾಗಿರಬೇಕು. ಪಕ್ಕಾ ಪಾಕೀಜು ವ್ಯವಸ್ಥೆಯಿರಬೇಕು. ಫ್ಲಷ್‌ಔಟ್ ಪದ್ಧತಿಯಾದರೆ ಬಹಳ ಒಳ್ಳೆಯದು. ಕಕ್ಕಸುಗಳು, ಖಾಯಂ ಕಟ್ಟಡಗಳಾಗಿದ್ದು, ಬಿಸಿಲು, ಗಾಳಿ ಮತ್ತು ಮಳೆಗಳಿಂದ ರಕ್ಷಣೆಯಿರಬೇಕು. ಸುಲಭವಾಗಿ ಸೇರುವಂತಿರಬೇಕು.

(ix) ಮರಿಗಳ ಶಿಬಿರದಲ್ಲಿ ಅಡಿಗೆ ಮನೆಯ ಜವಾಬ್ದಾರಿಯನ್ನು ವಯಸ್ಕರೇ –ಅಕೇಲರು ಮತ್ತು ಅವರ ಸಹಾಯಕರು, ನಿರ್ವಹಿಸಬೇಕು. ಊಟ, ತಿಂಡಿ ವೇಳೆಯನ್ನು ಬಿಟ್ಟರೆ ಡ್ಯೂಟಿ ಮರಿಗಳಿಗೆ ಸಹ ಆ ಪ್ರದೇಶಕ್ಕೆ ಪ್ರವೇಶವಿರಬಾರದು. ಸಕಾಲದಲ್ಲಿ ಊಟ, ಉಪಹಾರಗಳನ್ನೊದಗಿಸುವುದು, ಅಕೇಲರ ಜವಾಬ್ದಾರಿಯಾಗಿರುತ್ತದೆ. ಅಡಿಗೆ ಮಾಡುವ/ ಮಾಡಿಸುವ ಜವಾಬ್ದಾರಿಯನ್ನು ತನ್ನ ಸಹಾಯಕರಲ್ಲೊಬ್ಬರಿಗೆ ಅಕೇಲರು ವಹಿಸಿಕೊಡಬಹುದು.

(x) ಅಕೇಲರಿಂದ ಪೂರ್ವಯೋಜಿತ ರೀತಿಯಲ್ಲಿ, ಮರಿಗಳು ಸ್ವತಂತ್ರವಾಗಿ, ತಮ್ಮ ಹವ್ಯಾಸಗಳನ್ನು ಮುಂದುವರೆಸಿ, ಐಚ್ಛಿಕ ಚಟುವಟಿಕೆಗಳಲ್ಲಿ ಭಾಗವಹಿಸಿ, ಆನಂದಕರವಾಗಿ ತಮ್ಮ ಕಾಲವನ್ನು ಕಳೆಯಲು ಅವಕಾಶವಿರಬೇಕು. ಅವರಿಗೆ ಯಾವುದೇ ರೀತಿಯ, ಕಷ್ಟಕರವಾದ ಕೆಲಸವನ್ನೂ ಕೊಡಬಾರದು.

(xi) ಶಿಬಿರದಲ್ಲಿ ಭಾಗವಹಿಸುವ ಸಂಖ್ಯೆಗನುಗುಣವಾಗಿ, ಅಕೇಲರು ತನ್ನ ಸಹಾಯಕರನ್ನು ಎಣಿಸಿಕೊಳ್ಳಬೇಕು.

(xii) ಅಕೇಲರನ್ನು ಬಿಟ್ಟು, ಶಿಬಿರದಲ್ಲಿ ಷಟ್ಕಕ್ಕೊಬ್ಬರಂತೆ, ಸಹಾಯಕರಿರಬೇಕು. ಅಕೇಲರು ಶಿಬಿರದ ಒಟ್ಟಾರೆ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ತನ್ನ ಸಹಾಯಕರ ಶಕ್ತಿ ಸಾಮರ್ಥ್ಯಗಳಿಗನುಗುಣವಾಗಿ, ಶಿಬಿರಕ್ಕೆ ಸಂಬಂಧಿಸಿದ, ಎಲ್ಲಾ ಕೆಲಸಗಳನ್ನೂ ವಯಸ್ಕ ಸಹಾಯಕರಿಗೆ, ಅಕೇಲರು ಹಂಚಿಬಿಡ ಬೇಕು.

(xiii) ಅಡಿಗೆ ಮಾಡಲು, ಒಬ್ಬ ಅಡಿಗೆಯವನನ್ನು ಗೊತ್ತು ಮಾಡಿಕೊಳ್ಳುವುದು ಬಹಳ ಒಳ್ಳೆಯದು. ಹಾಗಿಲ್ಲದಿದ್ದರೆ, ಸಹಾಯಕರ ಪೈಕಿ ಒಬ್ಬರು, ಇದರ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಹೇಗೇ ಆದರೂ ಮರಿಗಳಿಗೆ ರುಚಿಯಾದ, ಶುಚಿಯಾದ, ಆರೋಗ್ಯಕರ ಮತ್ತು ಪುಷ್ಟಿಕರ ಆಹಾರವು ಸಮಯಕ್ಕೆ ಸರಿಯಾಗಿ ದೊರೆತರಾಯಿತು.

(xiv) ಶಿಬಿರದಲ್ಲಿರುವಾಗ್ಗೆ ಮರಿಗಳು ಸಂತೋಷವಾಗಿಯೂ, ಆಹ್ಲಾದಕರವಾಗಿಯೂ, ಉಪಯೋಗಕರವಾಗಿಯೂ ತಮ್ಮ ಕಾಲವನ್ನು ಉಪಯೋಗಿಸುವುದು ಮುಖ್ಯ ಗುರಿಯಾಗಿರಬೇಕು. ಅಕೇಲರು ಆ ದಿಶೆಯಲ್ಲಿ, ಮರಿಗಳಿಗೆ ಸಾಕಷ್ಟು ಅವಕಾಶಗಳನ್ನೊದಗಿಸಬೇಕು.

ತನ್ನ ಮರಿಗಳನ್ನು ಶಿಬಿರಗಳಿಗೆ ಕರೆದುಕೊಂಡು ಹೋಗಲು ಇಷ್ಟಪಡುವ ಅಕೇಲರು, ನುರಿತ ಅಕೇಲರುಗಳು ಏರ್ಪಡಿಸಿದ, ಸುವ್ಯವಸ್ಥಿತ ಶಿಬಿರಗಳಲ್ಲಿ ಸಹಾಯ ಮಾಡಿ, ವ್ಯಾವಹಾರಿಕ ಜ್ಞಾನವನ್ನೂ, ಅನುಭವವನ್ನೂ ಪಡೆಯಬೇಕೆಂಬ ಕಾರಣಕ್ಕಾಗಿಯೇ, ಜಿಲ್ಲಾ ಕಮೀಷನರ್‌ರವರಿಗೆ ಒಪ್ಪಿಗೆಯಾಗುವ ರೀತಿಯ ಅನುಭವವಿರಬೇಕೆಂದೂ ಅವರ ಅನುಮತಿ ಪಡೆಯಬೇಕೆಂದೂ ಹೇಳುವುದು.

9. ತನಗಿಂತ ಎಳೆಯದಾದ ಮಗುವೊಂದಕ್ಕೆ ನೈರ್ಮಲ್ಯದ ಅಭ್ಯಾಸಗಳಲ್ಲಿ ಸಹಾಯ ಮಾಡಬೇಕು

ನೈರ್ಮಲ್ಯದ ವಿಷಯವನ್ನು ಮರಿಗೆ ಅರ್ಥಮಾಡಿಸುವುದು ಕಷ್ಟಕರವಾದುದು ಅದು ಏಕೆ? ಎಂಬುದು ಅವನಿಗೆ ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ. ಅವನು ಕ್ರಿಮಿಗಳನ್ನು ನೋಡಲಾರ. ಅದರಿಂದಾಗುವ ಪರಿಣಾಮವನ್ನು ಮಾತ್ರ ಕಾಣಬಲ್ಲ. ಆದ್ದರಿಂದ 8 ವರ್ಷ ವಯಸ್ಸಿನ ಬಾಲಕನಿಗೆ ಅರ್ಥವಾಗುವ ರೀತಿ ಮನದಟ್ಟು ಮಾಡಿಸಬೇಕು. ಆ ಕೆಲಸಗಳನ್ನು ಅವನು ಮಾಡಿ, ಅನುಭವ ಪಡೆಯುವಂತೆ ಮಾಡಬೇಕು.

ಹಲ್ಲು ತೊಳೆಯುವುದನ್ನು ಪ್ರದರ್ಶಿಸಿ ತೋರಿಸಬಹುದು.

ಸಾಮಾನ್ಯವಾಗಿ ಶೀತದಿಂದ ಆರೋಗ್ಯ ಕೆಡುವುದೆಂದು ಹೇಳುವುದುಂಟು. ಕೆಮ್ಮು ಮತ್ತು ನೆಗಡಿಗಳು–ಶೀನುವುದರಿಂದ ಹರಡುತ್ತದೆ. ಕಾರಣ ಕೈವಸ್ತ್ರ ಉಪಯೋಗಿಸುವುದನ್ನು ಅಭ್ಯಾಸ ಮಾಡಿಸಬೇಕು.

ಆರೋಗ್ಯ ನಿಯಮಗಳು

- ಕಾಲುಗಳನ್ನು ಚೆನ್ನಾಗಿ ತೊಳೆದು ಕ್ರಿಮಿಗಳು ಸೇರದಂತೆ ನೋಡಿಕೊಳ್ಳಬೇಕು.
- ವಿಶ್ರಾಂತಿಯು ಅವಶ್ಯಕವಾದುದು. ಸಾಕಷ್ಟು ನಿರಾತಂಕವಾದ ಗಾಢವಾದ ನಿದ್ರೆ ಇಲ್ಲದಿದ್ದರೆ, ದೇಹ ಸ್ವಾಸ್ಥ್ಯವು ಕೆಡುತ್ತದೆ. ಮರಿಗಳ ವಯಸ್ಸಿನ ಬಾಲಕರಿಗೆ ಕನಿಷ್ಠ 10 ಗಂಟೆಗಳ ಕಾಲ ವಿಶ್ರಾಂತಿ ಬೇಕು.
- ಕಿಟಕಿಗಳನ್ನು ತೆರೆದಿಟ್ಟು ನಿದ್ದೆ ಮಾಡಬೇಕು.
- ಮೂಗಿನಲ್ಲಿ ರಕ್ತ ಸ್ರಾವವು ಅಪಾಯಕಾರಿಯಾದುದು. ಮೂಗು ಸೀದಬಾರದು. ಮೂಗಿನ ಮೆದು ಭಾಗವನ್ನು 5 ನಿಮಿಷಗಳ ಕಾಲ ಒತ್ತಿ ಹಿಡಿಯಬೇಕು.

- ಕೀಟಗಳು–ನೊಣ, ಜೇನು, ಕಣಜ ಇತ್ಯಾದಿ ಆಹಾರದ ಮೇಲೆ ಕೂಡದಂತೆ ಎಚ್ಚರ ವಹಿಸಬೇಕು (ಎಲ್ಲಾ ಆಹಾರ ವಸ್ತುಗಳನ್ನೂ ಮುಚ್ಚಿಟ್ಟಿರಬೇಕು).
- ಸಾಕಷ್ಟು ಜಾಗರೂಕತೆ ವಹಿಸದಿದ್ದರೆ, ಸುಟ್ಟ ಮತ್ತು ಬೆಂದ ಗಾಯಗಳಿಂದ ಅವಸ್ಥೆಪಡಬೇಕಾಗುತ್ತದೆ.
- ಸ್ವಚ್ಛತೆಯು ಬಹು ಮುಖ್ಯ.
- ಜೇನುಹುಳು ಮತ್ತು ಕಣಜಗಳ ಗೂಡುಗಳಿಂದ ದೂರ ಇರಬೇಕು.
- ಸಂಪೂರ್ಣ ಹಿತಕರ, ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳಬೇಕು.
- ಪ್ರತಿದಿನವೂ ಮೈ ಮತ್ತು ಕೈಕಾಲು, ಮುಖಗಳನ್ನು ತೊಳೆದುಕೊಳ್ಳಬೇಕು.
- ತೊಳೆದುಕೊಳ್ಳುವುದಕ್ಕೆ ಸೋಪ್ ಉಪಯೋಗಿಸಿ.
- ನಿರ್ಮಲವಾದ ಗಾಳಿಯನ್ನು, ಸಮೃದ್ಧವಾಗಿ ಉಸಿರಾಡಬೇಕು.
- ಮೂಗಿನಿಂದಲೇ ಉಸಿರಾಡಬೇಕು, ಬಾಯಿಯಿಂದ ಉಸಿರಾಡಬಾರದು.
- ಮಲಗುವುದಕ್ಕೆ ಮುಂಚೆ ಹಲ್ಲುಜ್ಜಬೇಕು.
- ಪಾದರಕ್ಷೆಗಳನ್ನು (ಷೂಸ್ ಮತ್ತು ಬೂಟ್ಸ್‌ಗಳನ್ನು) ಉಪಯೋಗಿಸಿ, ಪಾದಗಳನ್ನು ರಕ್ಷಿಸಿಕೊಳ್ಳಬೇಕು.
- ಸ್ವಚ್ಛವಾದ, ನಿರ್ಮಲವಾದ, ಗಾಳಿಯಿರುವೆಡೆ ವ್ಯಾಯಾಮ ಮಾಡಬೇಕು.
- ವಾಸಿಸುವ ಸುತ್ತುಮುತ್ತಿನ ಪ್ರದೇಶವನ್ನು ಅಂದವಾಗಿಯೂ, ಚೊಕ್ಕಟವಾಗಿಯೂ ಇರಿಸಿಕೊಳ್ಳಬೇಕು.
- ಬಟ್ಟೆಗಳನ್ನು ಒಣಗಿಸಿ, ಮಡಿಸಿಡಬೇಕು.
- ಪೂತಿ ನಾಶಕಗಳನ್ನು (ಆ್ಯಂಟಿಸೆಪ್ಟಿಕ್) ಉಪಯೋಗಿಸಬೇಕು.
- ಷೂಗಳಿಗೆ ಪಾಲಿಷ್ ಮಾಡಿ ಉಪಯೋಗಿಸಬೇಕು.
- ಗುಂಡಿಗಳನ್ನು ಹೊಲೆದುಕೊಳ್ಳಬೇಕು.
- ತಲೆಯನ್ನು ಬಾಚಿಕೊಳ್ಳಬೇಕು.
- ಉಗುರುಗಳನ್ನು ಕತ್ತರಿಸಿಕೊಳ್ಳಬೇಕು.
- ಊಟ, ತಿಂಡಿಯ ವೇಳೆಗಳಲ್ಲಿ, ಚಮಚ ಮತ್ತು ಫೋರ್ಕ್‌ಗಳನ್ನು ಉಪಯೋಗಿಸಲು ಕಲಿಯಬೇಕು.

– ನೈರ್ಮಲ್ಯದಿಂದ ಆರೋಗ್ಯವು ಸುಧಾರಿಸುತ್ತದೆ ಮತ್ತು ಉತ್ತಮವಾಗುತ್ತದೆ.

ಈ ಅಂಶಗಳನ್ನು ಮರಿಗಳಿಗೆ ತಿಳಿಸುವುದು ಕಬ್‌ಮಾಸ್ಟರರ ಗುರುತರ ಜವಾಬ್ದಾರಿಯಾಗಿದೆ.

10. ಅತಿಥಿಗಳನ್ನು ಆದರದಿಂದ ಸ್ವಾಗತಿಸಲು ತಿಳಿದಿರಬೇಕು

ಸಾಮಾನ್ಯವಾಗಿ ಮನೆಗಳಿಗೆ, ಹಿಂಡಿಗೆ, ಅತಿಥಿಗಳು ಬರುತ್ತಿರುತ್ತಾರೆ. ಅವರುಗಳನ್ನು ಬರಮಾಡಿಕೊಳ್ಳುವ ರೀತಿ, ನೀತಿಗಳನ್ನು ಕಬ್‌ಮಾಸ್ಟರು ಮರಿಗಳಿಗೆ ತಿಳಿಸಬೇಕು.

ಅತಿಥಿಗಳನ್ನು ನಗುನಗುತ್ತಾ ಸ್ವಾಗತಿಸಿ, ಕೂಡಲು ಹೇಳಿ, ತಾಯಿ ತಂದೆಯರು ಹಿರಿಯರನ್ನು ಕರೆಯುವ, ಹಿಂಡಿನಲ್ಲಿ ಕಬ್‌ಮಾಸ್ಟರಿಗೆ ತಿಳಿಸುವ ಬಗ್ಗೆ ತಿಳಿಯ ಹೇಳಬೇಕು. ಅಪರಿಚಿತರ ಬಗ್ಗೆ ಎಚ್ಚರದಿಂದಲೂ ತಿಳಿಸಬೇಕು. ಆಹ್ವಾನಿತರೇ? ಪರಿಚಿತರೇ? ಅಪರಿಚಿತರೇ? ತಿಳಿದುಕೊಳ್ಳುವ ಬಗ್ಗೆ ಮಾರ್ಗದರ್ಶನ ನೀಡಬೇಕು. ಸ್ವಾಗತಿಸುವುದೊಂದು ಕಲೆ.

11. ಮುಂದಿನ ಪ್ರವೀಣತಾ ಪದಕಗಳಲ್ಲಿ ಒಂದಕ್ಕೆ ಅರ್ಹತೆಯನ್ನು ಪಡೆಯಬೇಕು

(ಅ) ತಂಡದ ಆಟಗಾರ (ಟೀಂ ಪ್ಲೇಯರ್)

(ಆ) ಗೃಹಕರ್ಮಿ (ಹೋಂ ಕ್ರಾಫ್ಟ್)

(ಇ) ಮಾರ್ಗದರ್ಶಿ (ಗೈಡ್)

ತನಗೆ ಇಷ್ಟವಾದ ಮತ್ತು ಕೆಲಸ ಮಾಡಲು ಸಾಮರ್ಥ್ಯವಿದೆಯೆಂದೆನಿಸುವ ಪದಕವನ್ನು ಆರಿಸಿಕೊಂಡು, ಸಂಪಾದಿಸಲು, ಮರಿಗೆ ಅವಕಾಶವಿದೆ. ಮರಿಯು ತಾನಾಗಿ ಕೆಲಸ ಮಾಡುವುದಾದರೆ ಒಳ್ಳೆಯದೇ. ಅವನು ಆರಿಸಿಕೊಳ್ಳುವುದಕ್ಕೆ ಅಕೇಲರು ಮಾರ್ಗದರ್ಶನ ಮತ್ತು ತಿಳುವಳಿಕೆಯನ್ನು ನೀಡಬೇಕು. ಒತ್ತಾಸೆ ಕೊಡಬೇಕು. ಮರಿಯ ಮುಂದಾಗುವಿಕೆ (ಇನಿಷಿಯೇಟಿವ್) ಮತ್ತು ವ್ಯಾವಹಾರಿಕ ಜಾಣತನ (ರಿಸೋರ್ಸ್‌ಫುಲ್‌ನೆಸ್) ಇವುಗಳ ಬೆಳವಣಿಗೆಗೂ, ತನ್ಮೂಲಕ ಸಮಗ್ರ ವ್ಯಕ್ತಿತ್ವ ವಿಕಾಸಕ್ಕೂ, ಅವನಿಗೆ ಸಹಾಯ ಮಾಡಲು, ಅಕೇಲರಿಗೆ ಇದೊಂದು ಸದವಕಾಶವಾಗಿದೆ. ಆದ್ದರಿಂದ ಅಕೇಲರು ಎಣಿಕೆಯನ್ನು ಮರಿಗೆ ಬಿಟ್ಟುಕೊಡಬೇಕೇ ಹೊರತು, ತನ್ನ ನಿರ್ಧಾರವನ್ನು ಮರಿಯ ಮೇಲೆ ಹೇರಬಾರದು.

ಈ ಪ್ರವೀಣತಾ ಪದಕಗಳ ಪರೀಕ್ಷಾಂಶಗಳ ಬಗ್ಗೆ ಗುರಿ, ನೀತಿ, ನಿಯಮ ಸಂಘಟನೆ (*A.P.R.O.*) ಮರಿಗಳ ವಿಭಾಗ ಪುಸ್ತಕವನ್ನು ನೋಡಿ.

12. **ಮಾರ್ಗ ಶೋಧನ ಚಿಹ್ನೆಗಳು**: ಸರಳವಾದ ಅರಣ್ಯಕೌಶಲ ಚಿಹ್ನೆಗಳನ್ನೂ ಅವುಗಳ ಅರ್ಥವನ್ನೂ, ಗುರುತಿಸುವ ಬಗೆ, ಅನುಸರಿಸುವ ಬಗೆ ಇತ್ಯಾದಿ ವಿವರಗಳನ್ನು ನೀವು ತಿಳಿದು ಮರಿಗಳಿಗೆ ತಿಳಿಸಬೇಕು.

ಈ ದಿಶೆಯಲ್ಲಿ ಆಟಗಳನ್ನಾಡಿಸುವಾಗ ಒಂದು ಕಿ.ಮೀ. ದೂರ ಗುರುತುಗಳನ್ನು ಹಾಕಿ ಆಡಿಸಬೇಕು.

ಮಾರ್ಗ ಶೋಧನ ಚಿಹ್ನೆಗಳು



ವಾಹನ ನಿಯಂತ್ರಣ ಸಂಚಾರಿ ಚಿಹ್ನೆಗಳು, ಫಲಕಗಳು ಅವುಗಳ ಅರ್ಥ, ರಸ್ತೆಯಲ್ಲಿ ಪಾದಚಾರಿಗಳು ಅನುಸರಿಸಬೇಕಾದ ಎಚ್ಚರಿಕೆ ಕ್ರಮಗಳ ಬಗ್ಗೆ ಮರಿಗಳಿಗೆ ತಿಳಿಸಿ. ಇದರಿಂದ ಮರಿಗಳ ಅವಲೋಕನ ಶಕ್ತಿಯು ಹೆಚ್ಚಲೂ, ಸುರಕ್ಷತೆಯ ಬಗ್ಗೆ ಜಾಗೃತವಾಗಿರಲೂ ಅನುಕೂಲವಾಗುತ್ತದೆ. ಅವಶ್ಯಕವೆನಿಸಿದಾಗ ಇತರರಿಗೆ ಸಹಾಯ ಮಾಡಲೂ ಬರುತ್ತದೆ.

ಸಂಚಾರಿ ಚಿಹ್ನೆಗಳು

 ಇದು ಏಕಮುಖ ಮಾರ್ಗ

ಬಲ ತಿರುವು ಇಲ್ಲ

ಮುಂದೆ ಹೋಗುತ್ತಿರುವ
ವಾಹನವನ್ನು ದಾಟಿ ಹೋಗಿ
ಅದನ್ನು ಹಿಂದಕ್ಕೆ *(Overtake)*ಹಿ
ಬೀಳಿಸಬಾರದು

 ವು ಇಲ್ಲ

ವಾಹನಗಳು ನಿಂತು ಮುಂದೆ
ಹೋಗುವುದು
ಕೆಂಪು ದೀಪ= ನಿಲ್ಲುವುದಕ್ಕೆ
ಹಳದಿ=ಹೊರಡಲು ತಯಾರಾಗಿ
ಹಸಿರು=ಮುಂದೆ ಚಲಿಸುವುದಕ್ಕೆ

ವೇಗ ಮಿತಿ 40 ಕಿ.ಮೀ.

ನಿಲ್ಲಿ


ಪಾದಚಾರಿಗಳು
ಹಾಯುವ ಪಥ

ಅಧ್ಯಾಯ-18

ಚತುರ್ಥ ಚರಣ್ ಪದಕದ ಪರೀಕ್ಷಾಂಶಗಳು



1. ತಮ್ಮ ಮುದ್ದಿನ ಪ್ರಾಣಿ ಅಥವಾ ಪಕ್ಷಿಯೊಂದನ್ನು ಸಾಕಿಕೊಂಡು, ಮೂರು ತಿಂಗಳಾದರೂ ಅದರ ಸಂರಕ್ಷಣೆ ಮಾಡಬೇಕು

ಪ್ರಪಂಚದಲ್ಲಿ ಮಾನವರು ಮಾತ್ರವೇ ಅಲ್ಲದೆ, ಅದ್ಭುತವಾದ ಪ್ರಾಣಿವರ್ಗವೂ ಸುಂದರವಾದ ಹಕ್ಕಿ ಪಕ್ಷಿಗಳ ಸಂತತಿಯೂ ತುಂಬಿವೆ.

ಸುಮ್ಮನೆ ಚಿತ್ರಗಳನ್ನು ಮಾತ್ರ ನೋಡಿ, ಅಷ್ಟರಲ್ಲಿ ಸಂತೃಪ್ತರಾಗದೆ, ಕೆಲವಾದರೂ ಪ್ರಾಣಿಗಳನ್ನೂ, ಪಕ್ಷಿಗಳನ್ನೂ, ಲಕ್ಷ್ಯವಿಟ್ಟು, ಗಮನಿಸಬೇಕೆಂಬುದೇ ಈ ಪರೀಕ್ಷಾಂಶದ ಉದ್ದೇಶವಾಗಿದೆ.

ಮರಿಗಳು ತಾವು ಮುದ್ದಿನಿಂದ ಸಾಕಿಕೊಳ್ಳುವ ಪ್ರಾಣಿ, ಪಕ್ಷಿಗಳ ಬಗ್ಗೆ ಕೆಲವು ಅಂಶಗಳನ್ನು ಹೇಳಲೇಬೇಕು.

ಅವು ನಿರಂತರವಾಗಿಯೂ, ಸುರಕ್ಷಿತವಾಗಿಯೂ ಇರಲು, ಸಂರಕ್ಷಣೆ ಅಗತ್ಯ.

ವಾಸಿಸಲೂ, ಓಡಾಟ, ಹಾರಾಟಗಳಿಗೂ ಅವುಗಳಿಗೆ ಪೂರ್ಣ ಸ್ವಾತಂತ್ರ್ಯವೂ, ಸ್ಥಳಾವಕಾಶವೂ ಇರಬೇಕು.

ಅದರದೇ ಆದ ವಾಸಸ್ಥಳವನ್ನು ಅಂದವಾಗಿಯೂ, ಚೊಕ್ಕಟವಾಗಿಯೂ ಇರಿಸಬೇಕು.

ಸೂಕ್ತವಾದ ಮತ್ತು ಅದಕ್ಕೆ ಬೇಕಾದ ಮತ್ತು ಅವಶ್ಯಕತೆಯಿರುವಷ್ಟು ಆಹಾರವನ್ನು ಕಾಲ ಕಾಲಕ್ಕೆ ಸರಿಯಾಗಿ ಒದಗಿಸಬೇಕು ಮತ್ತು ಉಣಿಸಬೇಕು.

ಕುಡಿಯಲೂ, ಸ್ನಾನಮಾಡಲೂ, ಸ್ವಚ್ಛವಾದ ನೀರನ್ನು ಬೇರೆ ಬೇರೆಯಾಗಿ, ಅವುಗಳಿಗೆ ಒದಗಿಸಬೇಕು.

ಸಾಕಷ್ಟು ನೆರಳಿದ್ದು, ನಿರಾತಂಕವಾಗಿ, ವಿಶ್ರಾಂತಿ ತೆಗೆದುಕೊಳ್ಳಬಹುದಾದ ಸ್ಥಳವನ್ನು ಒದಗಿಸಬೇಕು.

ಶತ್ರು ಪ್ರಾಣಿ ಪಕ್ಷಿಗಳಿಂದ ಅದಕ್ಕೆ ರಕ್ಷಣೆ ಒದಗಿಸಬೇಕು.

ಈ ರೀತಿ ಅವರು ತಮ್ಮ ಸಾಕುಪ್ರಾಣಿಯನ್ನು ಗಮನಿಸುತ್ತಾ ಹೋದಂತೆಲ್ಲಾ, ತಿಳಿದೋ, ತಿಳಿಯದೆಯೋ, ದೈವಲೀಲೆಗಳನ್ನೂ, ಕೊನೆಗೆ ದೇವರನ್ನೂ ಅರ್ಥಮಾಡಿ ಕೊಳ್ಳಲು ಅವರಿಗೆ ಸಹಾಯವಾಗುತ್ತದೆ.

2. ಪೂರ್ಣರಾತ್ರಿಯ ಹಿಂಡಿನ ಶಿಬಿರವೊಂದರಲ್ಲಿ ಭಾಗವಹಿಸಬೇಕು

ಮರಿಗಳನ್ನು ಶಿಬಿರಗಳಿಗೆ ಕರೆದುಕೊಂಡು ಹೋಗುವುದು ಹೆಚ್ಚು ಜವಾಬ್ದಾರಿ ಯಿಂದ ಕೂಡಿರುವುದರಿಂದ, ಪೂರ್ವಯೋಜನೆ ಮತ್ತು ಸಿದ್ಧತೆ ಇಲ್ಲದೆ ಆ ಬಗ್ಗೆ ಯೋಚಿಸಲೇಬಾರದು. ಮರಿಗಳ ಶಿಬಿರದ ಜವಾಬ್ದಾರಿಯನ್ನು ಹೊತ್ತ ಅಕೇಲರು, ಅದರಲ್ಲೂ, ಪೂರ್ಣ ರಾತ್ರಿಯ ಶಿಬಿರಕ್ಕಾಗಿ ಮರಿಗಳನ್ನು ಕರೆದೊಯ್ಯುವಾಗ, ತಮ್ಮ ಮೇಲೆ ಬಿದ್ದಿರುವ ಜವಾಬ್ದಾರಿಯ ಅಗಾಧತೆಯನ್ನು ಅರ್ಥಮಾಡಿಕೊಳ್ಳಬೇಕು.

1. ಮರಿಗಳ ಆರೋಗ್ಯ, ಸೌಖ್ಯ ಮತ್ತು ಆನಂದಗಳ ಬಗ್ಗೆ ಕಬ್‌ಮಾಸ್ಟರಿಗೆ ಪೂರ್ಣ ಜವಾಬ್ದಾರಿಯಿರುತ್ತದೆ.
2. ದೈಹಿಕವಾಗಿಯೂ, ನೈತಿಕವಾಗಿಯೂ ಮರಿಗಳ ಸುರಕ್ಷತೆ ಮತ್ತು ಯೋಗಕ್ಷೇಮಗಳ ಬಗ್ಗೆ ಅಕೇಲರಿಗೆ, ಮಕ್ಕಳ ತಾಯಿ ತಂದೆಯರಿಗೆ ಇರುವ ಜವಾಬ್ದಾರಿ ಇರುತ್ತದೆ.
3. ಸಾರ್ವಜನಿಕರ ಮತ್ತು ಶಿಬಿರ ವಾಸಕ್ಕೆ ಸ್ಥಳ ಬಿಟ್ಟುಕೊಟ್ಟಿರುವವರ ದೃಷ್ಟಿಯಲ್ಲಿ, ವಿಶ್ವದ ಮಹಾ ಸ್ಕೌಟ್ ಭ್ರಾತೃತ್ವದ ಹೆಸರಿಗೆ ಕಳಂಕ ಬರದಂತೆ, ತಾನು ನಿರ್ವಹಿಸುತ್ತಿರುವ ಶಿಬಿರವನ್ನು ನಡೆಸುವ ಜವಾಬ್ದಾರಿಯು, ಸಂಸ್ಥೆಯ ಪರವಾಗಿ ಅಕೇಲರ ಮೇಲಿರುತ್ತದೆ.

ಇವುಗಳು ಬಹಳ ಗುರುತರವಾದ ಜವಾಬ್ದಾರಿಗಳು. ಲಘುವಾಗಿ ಪರಿಗಣಿಸಬಾರದು. ಒಂದಾದ ಮೇಲೊಂದರಂತೆ, ಹತ್ತಾರು, ನೂರಾರು ಶಿಬಿರಗಳ ನಂತರವೇ ಶಿಬಿರಗಳ ಬಗ್ಗೆ ಜ್ಞಾನವೂ, ಅನುಭವವೂ ಬಂದೀತು. ಪೂರ್ಣ ಸಾಮರ್ಥ್ಯವನ್ನು ಸಂಪಾದಿಸದೆ, ಈ ಜವಾಬ್ದಾರಿಯನ್ನು ಹೊರಲು ಹೋಗಬಾರದು. ಪುಸ್ತಕಗಳನ್ನು ಓದುವುದರಿಂದ ಶಿಬಿರದ ಸಮಸ್ಯೆಗಳು ಅರ್ಥವಾಗುವುದಿಲ್ಲ. ಸುವ್ಯವಸ್ಥಿತ ರೀತಿಯಲ್ಲಿ ನಡೆಸುವ ಹಲವಾರು ಶಿಬಿರಗಳಲ್ಲಿ ಸಹಾಯಕರಾಗಿ, ಅಕೇಲರು ಕೆಲಸ

ಮಾಡಿದರೆ, ಅವು ಅವರಿಗೆ ಶಿಕ್ಷಣ ಕ್ಷೇತ್ರಗಳಾಗಿ ಪರಿಣಮಿಸಿ, ಬೇಕಾದ ತಿಳುವಳಿಕೆಯೂ, ಅನುಭವವೂ ದೊರಕುತ್ತದೆ. ಅಕೇಲರಾಗಿ ಭಾಗವಹಿಸುವ ಅಕೇಲರ ಶಿಕ್ಷಣ ಶಿಬಿರಗಳು, ಮರಿಗಳ ಶಿಬಿರಗಳ ಬಗ್ಗೆ ತಿಳಿಸುವುದಿಲ್ಲ. ಸೂಕ್ತ ಅನುಭವವು ಅವಶ್ಯಕವಾದುದು. ಆ ಅನುಭವವನ್ನು ಪಡೆಯಲು, ಮರಿಗಳ ಆನಂದ, ಸೌಖ್ಯ ಮತ್ತು ಸುರಕ್ಷತೆಗಳನ್ನು ಬಲಿಗೊಡಬಾರದು. ವಿಜಯವಂತವಾದ ಮರಿಗಳ ಶಿಬಿರವು ಮರಿಗಳಿಗೂ, ಸ್ಕೌಟರುಗಳಿಗೂ ಲಾಭದಾಯಕವಾಗಿರುತ್ತದೆ. ಅವರಿಬ್ಬರ ಮಧ್ಯೆ ಬಾಂಧವ್ಯವು ಬೆಸೆಯುತ್ತದೆ. "ಸುಖೀ ಕುಟುಂಬ"ದ ಭಾವನೆಯು ಬಲಗೊಳ್ಳುತ್ತದೆ. ಹಾಗಾಗದಿದ್ದರೆ ನ್ಯೂನ್ಯತೆಗಳಿಂದ ಕೂಡಿದ ಅಂತಹ ಶಿಬಿರಗಳಿಂದ ಸಂಸ್ಥೆಗೆ ಅಪಾರವಾದ ಹಾನಿಯುಂಟಾಗುತ್ತದೆ. ತಾಯಿ ತಂದೆಯರು ಮತ್ತು ಸಾರ್ವಜನಿಕರಿಗೆ ಸಂಸ್ಥೆಯ ಬಗ್ಗೆ, ಅದರಲ್ಲೂ ಕಬ್ಬಿಂಗ್ ಬಗ್ಗೆ ಇರುವ ಸದ್ಭಾವನೆಯು ಹಾಳಾಗುತ್ತದೆ. ಮರಿಗಳಿಗೂ ಇದರಿಂದ ಒಳ್ಳೆಯದಲ್ಲ.

ಎ.ಪಿ.ಆರ್.ಓ.ನಲ್ಲಿರುವ ಕೆಳಕಂಡ ನಿಬಂಧನೆಗಳು ಬಹುಮುಖ್ಯವಾದುವು.

ಎ.ಪಿ.ಆರ್.ಓ. II; ಅಧ್ಯಾಯ 1; ನಿಯಮ 16; ಇದು ಮರಿಗಳ ಶಿಬಿರಗಳಿಗೆ ಸಂಬಂಧಿಸಿದುದು. ಸ್ಕೌಟರುಗಳಿಗೆ ಸೂಕ್ತ ತಿಳುವಳಿಕೆ ನೀಡುತ್ತದೆ. ಶಿಬಿರವನ್ನು ಚಾಲೂ ಮಾಡುವ ಮುನ್ನ, ಜಿಲ್ಲಾ ಕಮೀಷನರಿಂದ ಲಿಖಿತ ಅನುಮತಿಯನ್ನು ಪಡೆಯಬೇಕೆಂಬ ಅಂಶವನ್ನು ಅದು ತೋರಿಸಿ ಹೇಳುತ್ತದೆ. ತಾಯಿ-ತಂದೆಯರ, ಪೋಷಕರ ಅನುಮತಿ ಬೇಕೆಂದೂ ಸಹ ಅದು ಹೇಳುತ್ತದೆ. ಬಾಲಕರನ್ನು ಹೊರಗೆ ಕರೆದುಕೊಂಡು ಹೋಗುತ್ತಿರುವುದರಿಂದ, ಅವರ ಸ್ವಾಸ್ಥ್ಯದ ಬಗ್ಗೆ ತಾಯಿ ತಂದೆಯರಿಂದ ಪೂರ್ಣ ಮಾಹಿತಿಯನ್ನು, ಸ್ಕೌಟರುಗಳು ಪಡೆಯಬೇಕು. ಯಾವುದೇ ಕಾರಣದಿಂದಲೂ, ಮರಿಗಳು ಮತ್ತು ಸ್ಕೌಟುಗಳು ಒಟ್ಟಿಗೆ ಶಿಬಿರ ಹೂಡಬಾರದೆಂದೂ ಸಹ ನಿಯಮವು ಹೇಳುತ್ತದೆ. ನಿಯಮವು ಹೇಳದಿದ್ದರೂ ಮರಿಗಳು ಮತ್ತು ಬುಲ್‌ಬುಲ್‌ಗಳು ಸಹ, ಖಂಡಿತ ಒಟ್ಟಿಗೆ ಶಿಬಿರವನ್ನು ಹೂಡಬಾರದು.

ರಾಜ್ಯ ಆಯುಕ್ತರವರ ಅನುಮತಿಯಿಲ್ಲದೆ ಮರಿಗಳ ಶಿಬಿರವನ್ನು, ರಾಜ್ಯದ ಹೊರಗಡೆ ಏರ್ಪಡಿಸಬಾರದು.

ಗುಡಾರಗಳನ್ನು ಬಿಟ್ಟು (ಟೆಂಟುಗಳಲ್ಲಿ ಕೂಡದು) ಕಾಯಂ ಕಟ್ಟಡಗಳಲ್ಲಿ ಮಾತ್ರ ಮರಿಗಳ ಶಿಬಿರಗಳನ್ನು ಏರ್ಪಡಿಸಬಹುದೆಂದು ನಿಯಮವು ಹೇಳುತ್ತದೆ. ಸಾಮಾನ್ಯವಾಗಿ ಶಿಬಿರದಲ್ಲಿ ಪ್ರತಿ ಆರು ಮರಿಗಳಿಗೆ ಒಬ್ಬ ವಯಸ್ಕ ಸಹಾಯಕರು ಇರಬೇಕೆಂದೂ, ಯಾವುದೇ ಪರಿಸ್ಥಿತಿಯಲ್ಲಿಯೂ ಕನಿಷ್ಠ ಇಬ್ಬರು ವಯಸ್ಕ

ಸಹಾಯಕರಿಲ್ಲದೆ, ಮರಿಗಳ ಶಿಬಿರವನ್ನು ನಡೆಸಬಾರದೆಂದೂ ಸಹ ನಿಯಮವು ಹೇಳುತ್ತದೆ.

ಸಂಬಂಧಿಸಿದ ಸ್ಕೌಟರುಗಳು, ಸುವ್ಯವಸ್ಥಿತ ಮರಿಗಳ ಶಿಬಿರದಲ್ಲಿ ಭಾಗವಹಿಸಿ ಅವಶ್ಯಕ ತಿಳುವಳಿಕೆ ಮತ್ತು ಅನುಭವಗಳನ್ನು ಪಡೆದಿದ್ದಾರೆಂದು ಖಾತರಿ ಆಗುವವರೆಗೂ ಜಿಲ್ಲಾ ಕಮೀಷನರು ಶಿಬಿರದ ಏರ್ಪಾಟಿಗೆ ಅನುಮತಿ ನೀಡಲೇಬಾರದು.

ಮರಿಗಳ ಶಿಬಿರಕ್ಕೆ ಪೂರ್ವಸಿದ್ಧತೆಯು ಈ ರೀತಿ ಇರಬಹುದು.

1. ಜಿಲ್ಲಾ ಕಮೀಷನರಿಗೆ ಅನುಮತಿಗಾಗಿ ಬರೆಯುವುದು.
   ತಾಯಿ ತಂದೆಯರಿಗೆ ಅವರ ಬಾಲಕನನ್ನು ಶಿಬಿರಕ್ಕೆ ಕಳುಹಿಸಲು ಒಪ್ಪುವ ಮತ್ತು ಅವರ ಆರೋಗ್ಯದ ಬಗ್ಗೆ ತಿಳಿಸುವ ಪತ್ರಕ್ಕಾಗಿ ಬರೆದು ಕಳುಹಿಸುವುದು.
2. ಸಹಾಯಕರನ್ನು ಆರಿಸಿಕೊಂಡು ಅವರವರ ಕೆಲಸಗಳನ್ನು ಹಂಚುವುದು.
3. ತಾರೀಖು ಮತ್ತು ಸಂಖ್ಯೆಗಳನ್ನು ನಿಗದಿಪಡಿಸುವುದು.

ಶಿಬಿರವು ಪ್ರಾರಂಭವಾಗುವುದಕ್ಕೆ ಸ್ವಲ್ಪ ದಿನ ಮುಂಚೆ, ಎಲ್ಲಾ ಶಿಬಿರ ಸಹಾಯಕರು ಮತ್ತು ಅಕೇಲರು ಸಭೆ ಸೇರಬೇಕು. ಎಲ್ಲಾ ವ್ಯವಸ್ಥೆಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲೂ, ಸಹಾಯಕರ ಕೆಲಸಗಳನ್ನು ಅವಶ್ಯಕತೆಯಿದ್ದರೆ ಪುನಃ ನಿಗದಿಪಡಿಸಲೂ ಅನುಕೂಲವಾಗುತ್ತದೆ. ಈ ಸಭೆಯನ್ನು ಶಿಬಿರ ಪ್ರಾರಂಭದ ಒಂದು ವಾರ ಮುಂಚೆ ಶಿಬಿರ ಹೂಡುವ ಸ್ಥಳದಲ್ಲೇ ಏರ್ಪಡಿಸಿದರೆ ಇನ್ನೂ ಒಳ್ಳೆಯದು.

ತಾರೀಖು: ಶಾಲೆಗಳಿಗೆ ರಜವಿರುವ ಕಾಲದಲ್ಲಾದರೆ ಅನುಕೂಲವಾಗಿರುತ್ತದೆ.

ಶಿಬಿರಾವಧಿ: ಮರಿಗಳ ಶಿಬಿರವು ಒಂದು ದಿನಕ್ಕಿಂತ (24 ಗಂಟೆಗಳು) ಹೆಚ್ಚು ಇರಬಾರದು.

ಸಂಖ್ಯೆ: ಸ್ಕೌಟುಗಳಿಗಿದ್ದಂತೆ ಮರಿಗಳಿಗೆ ಶಿಬಿರಗಳ ಅವಶ್ಯಕತೆಯಿರುವುದಿಲ್ಲ. ಆದ್ದರಿಂದ ಎಲ್ಲಾ ಮಕ್ಕಳನ್ನೂ ಶಿಬಿರಕ್ಕೆ ಕರೆದುಕೊಂಡು ಹೋಗಬೇಕಾಗಿಲ್ಲ. ಮರಿಗಳನ್ನು ಆರಿಸಿಕೊಳ್ಳಬೇಕು. 9 ವರ್ಷಕ್ಕೆ ಮೇಲ್ಪಟ್ಟವರಾಗಿರಬೇಕು, ಕನಿಷ್ಠ ಪ್ರಥಮ ಚರಣ್ ಪದಕವನ್ನು ಪಡೆದವರಾಗಿರಬೇಕು, ಹಿಂದಿನ ಜೀವನದಲ್ಲಿ ಸಾಕಷ್ಟು ವಿಕಾಸ ಹೊಂದಿರುವವರಾಗಿರಬೇಕು. ಇಂತಹವರಾದರೆ ಉತ್ತಮ. ಒಟ್ಟು 18 ಮರಿಗಳಾದರೆ ಸಾಕಷ್ಟಾಯಿತು.

ನಿವೇಶನ ಮತ್ತು ವಸತಿ: ಮನೆಯಿಂದ ಬಹಳ ದೂರವಿರಬಾರದು, ಖಾಯಂ ಕಟ್ಟಡವಿರಬೇಕು. ನಿವೇಶನವು ಎತ್ತರವಾದ ಸ್ಥಳದಲ್ಲಿರಬೇಕು, ಒಳಚರಂಡಿ ವ್ಯವಸ್ಥೆಯಿದ್ದರೆ ಒಳ್ಳೆಯದು. ಕನಿಷ್ಠ ನೀರ್ಗಾಲುವೆಗಳ ವ್ಯವಸ್ಥೆಯಿರಬೇಕು. ಸುತ್ತಮುತ್ತಲೂ ನೋಡಲು ಸುಂದರವಾಗಿರಬೇಕು. ಗಾಳಿ ಮತ್ತು ಬಿಸಿಲುಗಳಿಂದ ರಕ್ಷಣೆಯಿರಬೇಕು. ಮಕ್ಕಳಿಗೆ ಸುರಕ್ಷಿತೆಯ ಪ್ರದೇಶವಾಗಿರಬೇಕು. ರೈಲ್ವೇ ಲೈನುಗಳಿಗೂ, ಆಳವಾದ ನದಿಗಳಿಗೂ, ಗಣಿ ಪ್ರದೇಶಗಳಿಗೂ ಹತ್ತಿರವಿರಬಾರದು. ಆಟ ಪಾಠಗಳಿಗೂ, ಅಭ್ಯಾಸಗಳಿಗೂ ಸಾಕಷ್ಟು ಮಟ್ಟಸವಾದ ಮೈದಾನವಿರಬೇಕು. ವನಪ್ರದೇಶವಾಗಿದ್ದು, ಸೌದೆ ನೀರುಗಳಿಗೆ ಅಭಾವವಿರಬಾರದು. ಸಾಕಷ್ಟು ಹೊರಚ್ಚಾಗಿದ್ದು ಏಕಾಂತತೆ ದೊರಕುವಂತೆ ಇರಬೇಕು.

ವಿನ್ಯಾಸ (ಲೇಔಟ್): ಶಿಬಿರ ವಿನ್ಯಾಸವು ಸರಿಯಾಗಿರಬೇಕು. ಸಾಮಾನು ಸರಂಜಾಮುಗಳ ದಾಸ್ತಾನಿಗಾಗಿ ಸ್ಟೋರ್ ರೂಂ ಅಥವಾ ಬೇರೆಯೇ ಟೆಂಟ್ ಇರಬೇಕು. ಸೌದೆ ದಾಸ್ತಾನು ಮಾಡಲು, ಪಾತ್ರೆಗಳನ್ನು ಜೋಡಿಸಿಡಲು, ಪಾತ್ರೆ ತೊಳೆಯಲು, ಸ್ನಾನ ಮಾಡಲು, ಬೇರೆ ಬೇರೆಯ ವ್ಯವಸ್ಥೆ ಇರಬೇಕು. ಅಡಿಗೆ ಮನೆಗೆ ಹತ್ತಿರದಲ್ಲಿ ಎಲ್ಲಾ ಮರಿಗಳೂ, ಸಹಾಯಕರೂ, ಒಟ್ಟಿಗೆ ಕೂತು, ಊಟ ಮಾಡುವಷ್ಟು ದೊಡ್ಡ ಊಟದ ಮನೆ ಇರಬೇಕು. ಮರಿಗಳೆಲ್ಲರೂ ಮಲಗಿ, ಸುಖವಾಗಿ, ವಿಶ್ರಾಂತಿ ತೆಗೆದುಕೊಳ್ಳಬಹುದಾದ ವಿಶಾಲವಾದ ಹಜಾರವಿರಬೇಕು. ಅದಕ್ಕೆ ಸೇರಿದಂತೆ, ಎಲ್ಲಾ ಅಥವಾ ಕೆಲವು ಸಹಾಯಕರುಗಳ ವಿಶ್ರಾಂತಿಯ ವೇಳೆಯಲ್ಲಿ, ಮರಿಗಳನ್ನು ಗಮನಿಸಲು ಅನುಕೂಲವಾಗುವಂತೆ, ಒಂದು ಕೊಠಡಿಯಿರಬೇಕು. ಪಾಕೀಜು ವ್ಯವಸ್ಥೆಯು ಚೆನ್ನಾಗಿರಬೇಕು. ಫ್ಲಷ್‌ಔಟ್ ಕಕ್ಕಸುಗಳಾದರೆ ಒಳ್ಳೆಯದು. ಕಕ್ಕಸುಗಳು ರಾತ್ರಿ ವೇಳೆಯೂ ಸೇರಿ, ಎಲ್ಲಾ ಕಾಲದಲ್ಲಿಯೂ ಸುಲಭವಾಗಿ ಹೋಗಿ ಬರುವಂತಿರಬೇಕು. ಸ್ನಾನ ಮಾಡಲೂ, ಬಟ್ಟೆ ಒಗೆಯಲೂ, ಮರಿಗಳಿಗೆ ಅನುಕೂಲವಾಗಿರುವಂತೆ, ಸುಸಜ್ಜಿತವಾದ ಬೇರೆ ವ್ಯವಸ್ಥೆಯಿರಬೇಕು.

ಶಿಬಿರ ಸ್ಥಳಕ್ಕೆ ಪೂರ್ವ ಸಿದ್ಧತೆಗಾಗಿ ಭೇಟಿ ನೀಡಿದಾಗ, ಅಕೇಲರು ಸಹಾಯಕರು, ದಿನಸಿ ಅಂಗಡಿಯವರು, ಹಾಲು, ಸೌದೆ ಇತ್ಯಾದಿ ಎಲ್ಲಾ ಅವಶ್ಯಕತೆಗಳಿಗೆ ಸಂಬಂಧಪಟ್ಟ ಎಲ್ಲರನ್ನೂ ಭೇಟಿ ಮಾಡಿ, ಯಾವ ರೀತಿಯ ತೊಂದರೆಯೂ ಆಗದಂತೆ, ಎಲ್ಲವನ್ನೂ ಶಿಬಿರಕ್ಕೆ ಕಾಲಕಾಲಕ್ಕೆ ಸರಿಯಾಗಿ, ಸರಬರಾಜು ಮಾಡುವ ವ್ಯವಸ್ಥೆ ಮಾಡಬೇಕು. ಸ್ಥಳೀಯ ಡಾಕ್ಟರನ್ನು ಭೇಟಿ ಮಾಡಿ ಅವರ ಸಹಕಾರವನ್ನು ಕೋರಬೇಕು.

ಸ್ಕೌಟರುಗಳು ಮತ್ತು ಸಹಾಯಕರುಗಳ ಬಿಡಾರಗಳು, ಮರಿಗಳ ಜೊತೆಯಲ್ಲಲ್ಲದೆ ಬೇರೆಯಾಗಿರಬೇಕು. ಯಾವುದೇ ಸಂದರ್ಭದಲ್ಲಿಯೂ ಅವರು ಮರಿಗಳ ಜೊತೆಯಲ್ಲಿ ಬಿಡಾರ ಮಾಡಬಾರದು.

ಶಿಬಿರವು ವಿಜಯವಂತವಾಗಲು ಟಿಪ್ಪಣಿಗಳು:

1. ಆದಷ್ಟೂ ಮುಂಚೆಯೇ ಯೋಜನೆ ತಯಾರಿಸಬೇಕು.
2. ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು.
3. ಅಕೇಲರೇ ನಿವೇಶನ, ತಾರೀಖು ಮತ್ತು ಸಹಾಯಕರನ್ನು ಆರಿಸಿಕೊಳ್ಳಬೇಕು.
4. ಶಿಬಿರಕ್ಕೆ ಮುಂಚೆ ಮತ್ತು ಶಿಬಿರವು ಮುಗಿದ ಮೇಲೆ ಸ್ಥಳ ಪರಿಶೀಲನೆ ನಡೆಸಬೇಕು.

3. ಹಿಂಡಿನ ವಿಶೇಷೋದ್ದೇಶ ಪ್ರವಾಸವೊಂದರಲ್ಲಿ ಭಾಗವಹಿಸಬೇಕು

ಹೆಸರೇ ಹೇಳುವಂತೆ ಒಂದು ವಿಶೇಷ, ನಿಗದಿತ ಉದ್ದೇಶಕ್ಕಾಗಿ ಪ್ರವಾಸವನ್ನು ಕೈಗೊಳ್ಳಲಾಗುತ್ತದೆ. ಹಿಂಡಿನ ಕಾರ್ಯಕ್ರಮಗಳಲ್ಲಿ ಪ್ರಾಕೃತಿಕ ಅಥವಾ ಚಾರಿತ್ರಿಕ ಅಥವಾ ಸಾಂಸ್ಕೃತಿಕ ವಿಷಯಗಳನ್ನೂ, ಔದ್ಯಮಿಕ ಕಾರ್ಯಾಗಾರಗಳನ್ನೂ ಅವುಗಳ ಅದ್ಭುತಗಳನ್ನೂ ಮಾಹಿತಿಯನ್ನು ತಿಳಿದುಕೊಳ್ಳಲು ಕೈಗೊಳ್ಳುವ, ಈ ಪ್ರವಾಸವು ಮರಿಗಳಿಗೆ ಸಡಗರದಿಂದ ಕೂಡಿದ ರೋಮಾಂಚಕ ಕಾರ್ಯಕ್ರಮವಾಗಿರುತ್ತದೆ.

ಕೋಟೆ ಕೊತ್ತಲುಗಳು, ವಸ್ತು ಸಂಗ್ರಹಾಲಯ, ಪ್ರಾಣಿ ಸಂಗ್ರಹಾಲಯ, ವಿಹಾರ, ಸ್ತೂಪ, ಗುಡಿ ದೇಗುಲಗಳು, ಮಸೀದಿ ಮಜರ್‌ಗಳು, ಪುರಭವನ, ಅಗ್ನಿಶಾಮಕ ದಳ, ವಿಮಾನನಿಲ್ದಾಣ, ಬಂದರು, ಔದ್ಯಮಿಕ ಕ್ಷೇತ್ರಗಳು ಮುಂತಾದ ಪ್ರಮುಖ ಸ್ಥಳಗಳಿಗೆ, ಮರಿಗಳ ವಯಸ್ಸಿಗೆ ತಕ್ಕಂತೆ, ಪ್ರಚೋದಕವಾಗಿಯೂ, ಪ್ರಬೋಧಕವಾಗಿಯೂ ಇರುವ ಪ್ರವಾಸಗಳನ್ನೇರ್ಪಡಿಸಬಹುದು.

ಅಕೇಲರು ತಮ್ಮ ಮರಿಗಳ ಹಿತದೃಷ್ಟಿಯಿಂದ ಮಾತ್ರವಲ್ಲದೆ, ತಮಗೆ ತಿಳಿದಿರುವ ವಿಷಯಗಳನ್ನು ಭೇಟಿ ನೀಡುವ ಹಿಂಡಿನ (ಸ್ಥಳದ) ಮರಿಗಳಿಗೂ ವಿವರಗಳನ್ನು ಮುಟ್ಟಿಸಬೇಕು. ಪ್ರವಾಸ ಹೊರಡುವ ಮುನ್ನ ಎಲ್ಲಾ ಅವಶ್ಯಕ ಸಿದ್ಧತೆಗಳನ್ನೂ ಪೂರೈಸಿ, ಪ್ರವಾಸದ ಪೂರ್ಣ ವಿವರಗಳನ್ನು ಗ್ರೂಪ್ ಲೀಡರಿಗೂ, ತಾಯಿ ತಂದೆಯರಿಗೂ ಕೊಡಬೇಕು.

4. ಕುಣಿಕೆ ಗಂಟು (ಬೋಲೈನ್) ಮತ್ತು ಸುತ್ತೊಂದೆರಡು ಮಲುಕಿನ ಗಂಟು (ರೌಂಡ್ ಟರ್ನ್ ಅಂಡ್ ಟೂ ಹಾಫ್ ಹಿಚಸ್)ಗಳನ್ನು ಹಾಕಬೇಕು ಮತ್ತು ಅವುಗಳ ಪ್ರಯೋಜನವನ್ನು ಕಾಣಿಸಬೇಕು

(ಅ) **ಕುಣಿಕೆ ಗಂಟು**: ಈ ಗಂಟಿನಲ್ಲಿ, ಹಗ್ಗದ ಕೊನೆಯಲ್ಲಿ ಜಾರದೆ ಇರುವಂತಹ ಒಂದು ಕುಣಿಕೆಯಿರುತ್ತದೆ. ಈ ಗಂಟು ನೀರಿನಲ್ಲಿ ಬಿದ್ದವರನ್ನು ರಕ್ಷಿಸಲೂ, ಪ್ರಾಣಿಗಳನ್ನು ಕಟ್ಟಲೂ ಉಪಯೋಗಕ್ಕೆ ಬರುತ್ತದೆ. ಈ ಗಂಟನ್ನು ಕಟ್ಟಲೂ ಸುಲಭ ಮತ್ತು ಬಿಚ್ಚಲೂ ಸುಲಭ. ಇದು ಜಾರುವುದಿಲ್ಲ ಮತ್ತು ಗಜಿಬಿಜಿಯಾಗುವುದಿಲ್ಲ. ಇದನ್ನು "ಗಂಟುಗಳ ರಾಜ" ಎಂದು ಕರೆಯುತ್ತಾರೆ.

ಈ ಗಂಟನ್ನು ಹಾಕುವ ಹಗ್ಗದ ಕೊನೆಯಿಂದ ಅಳತೆ ಮಾಡಿಕೊಂಡು, ಆ ಜಾಗದಲ್ಲಿ ಹಗ್ಗವನ್ನು ಸುರುಳಿ ಹಾಕಿ ಒಂದು ಕುಣಿಕೆ ಮಾಡಿಕೊಳ್ಳಿ. ಈಗ ಹಗ್ಗದ ಕೊನೆಯನ್ನು ಕೆಳಗಿನಿಂದ ತೆಗೆದುಕೊಂಡು ಸಣ್ಣ ಕುಣಿಕೆಯೊಳಗೆ ಹಾದು ಒಂದು ಸುತ್ತುಹಾಕಿ (ಸ್ಥಾನಿಕ ಜಾಗಕ್ಕೆ) ಪುನಃ ಕುಣಿಕೆಯ ಮೇಲೆ ಬಂದು ಒಳಗೆ ತೂರಿಸಿ ಎಳೆದುಕೊಳ್ಳಿ. ಸ್ಥಾನಿಕ ಭಾಗವನ್ನೆಳೆದು ಗಂಟನ್ನು ಬಿಗಿ ಮಾಡಿ.



(ಆ) **ಸುತ್ತೊಂದೆರಡು ಮಲಕು ಗಂಟು**: ಕಂಬಕ್ಕೆ ಹಗ್ಗವನ್ನು ಕಟ್ಟುವ ಈ ಗಂಟಿಗೆ ಹೆಸರೇನೋ ಬಹಳ ಉದ್ದವಾದದ್ದೇ! ಹಗ್ಗಕ್ಕೆ ಎದುರು ಕಡೆಯಿಂದ ಎಳೆತವಿದ್ದರೆ. ಉದಾ: ಟೆಂಟ್‌ನ ಗಯ್‌ಲೈನ್, ಧ್ವಜಸ್ತಂಭದ ಗಯ್‌ಲೈನ್, ಬಟ್ಟೆ ಒಣಗಿಹಾಕುವ ಹಗ್ಗ ಇತ್ಯಾದಿ ಈ ಗಂಟನ್ನು ಉಪಯೋಗಿಸುತ್ತಾರೆ.

ಗಂಟು ಹಾಕುವ ವಿಧಾನ: ಹಗ್ಗದ ತುದಿಯಿಂದ ಕಂಬ ಅಥವಾ ಗೂಟಕ್ಕೆ ಒಂದು ಸುತ್ತು ಹಾಕಿ ಮತ್ತೊಂದು ಸುತ್ತು ಬನ್ನಿ (ಈಗ ಒಂದು ಸುತ್ತು ಪೂರಾ ಕಂಬ ಅಥವಾ ಗೂಟದ ಮೇಲಿದೆ. ಚಿತ್ರ ನೋಡಿ) ಈಗ ಹಗ್ಗದ ಸ್ಥಾನಿಕ ಭಾಗದ ಮೇಲೆ ಎರಡು ಮಲುಕು ಹಾಕಿ. (ಎರಡು ಮಲಕುಗಳೂ ಒಂದೇ ದಿಕ್ಕಿನಲ್ಲಿರಬೇಕು. ಚಿತ್ರ

ನೋಡಿ) ಎರಡು ಮಲುಕುಗಳನ್ನು ಒಂದರ ಮೇಲೊಂದರಂತೆ ಕಂಬದ ಸಮೀಪಕ್ಕೆ ಬರುವಂತೆ ತಳ್ಳಿ ಎಳೆದು ಬಿಗಿ ಮಾಡಿ.

5. **ಅಂಚೆ ಕಛೇರಿ ಅಥವಾ ಬ್ಯಾಂಕ್‌ನಲ್ಲಿ ಸಣ್ಣ ಉಳಿತಾಯದ ಲೆಕ್ಕವೊಂದನ್ನು ಆರಂಭಿಸಬೇಕು. ವಿದ್ಯುತ್ ಮತ್ತು ಕುಡಿಯುವ ನೀರಿನ ಉಳಿತಾಯ ತಿಳಿದಿರಬೇಕು ಅಥವಾ ಕಂಪ್ಯೂಟರ್ ಬಗ್ಗೆ ಅರಿವಿರಬೇಕು.**

ಸಣ್ಣ ಉಳಿತಾಯ ಲೆಕ್ಕ: ಈ ಪರೀಕ್ಷಾಂಶವು ಜೀವನದಲ್ಲಿ ಮಿತವ್ಯಯಿಯಾಗಲು ಕಲಿತು ಅದೇ ರೀತಿ ದೊಡ್ಡವನಾಗಿ ಮುಂದೆ ಮಿತವಾಗಿ ಖರ್ಚು ಮಾಡುವವನೂ, ಉದಾರ ಮನಸ್ಸಿನವನೂ ಆದ ವ್ಯಕ್ತಿಯಾಗಲು ಸಹಾಯವಾಗುತ್ತದೆ.

ಇಂದು ನಮಗೆ ಕಂಡುಬರುತ್ತಿರುವ ಹಣ ಮತ್ತು ಅನುಕೂಲತೆಗಳ ಕೊರತೆ ಮತ್ತು ನಿರುದ್ಯೋಗ ಸಮಸ್ಯೆಗಳು ಜನರು ಮಿತವ್ಯಯಿಗಳಾಗದೆ, ತಮಗೆ ತಾವೇ ತಂದುಕೊಂಡ ಕಷ್ಟಗಳೆನ್ನಬಹುದು. ಇಂದು ಬೆಳೆಯುತ್ತಿರುವ ಜನಾಂಗದ ಪ್ರತಿಯೊಬ್ಬರೂ ಚಿಕ್ಕಂದಿನಿಂದಲೇ ಮಿತವ್ಯಯಿಗಳಾಗಲು ಕಲಿತರೆ ಅದರಿಂದ ದೇಶದ ಸ್ವಭಾವವೇ ಬದಲಾಗಿ, ಏಳಿಗೆ ಹೊಂದುತ್ತದೆ, ಅಭಿವೃದ್ಧಿ ಪಥದೆಡೆಗೆ ಸಾಗುತ್ತದೆ.

ಮರಿಗಳು ಏನನ್ನೂ ಪೋಲು ಮಾಡಬಾರದು. ತಮ್ಮ ಕೈಗೆ ಬಂದ ಪ್ರತಿ ಪೈಸೆಯನ್ನೂ ಉಳಿತಾಯ ಮಾಡಬೇಕು. ತನ್ನ ಕೈಖರ್ಚಿಗಾಗಿ ಮನೆಯಲ್ಲಿ ಕೊಡುವ ಹಣವನ್ನು (ತನ್ನ ಸ್ವಂತ ಪ್ರಯತ್ನದಿಂದ ಸ್ವಲ್ಪ ಭಾಗವನ್ನಾದರೂ ಸರಿಯೆ) ಉಳಿತಾಯ ಮಾಡಬೇಕು. ಪೋಸ್ಟಾಫೀಸುಗಳಲ್ಲಿ ಅಥವಾ ಬ್ಯಾಂಕುಗಳ ಉಳಿತಾಯ ಯೋಜನೆಗಳಲ್ಲಿ ಈ ಹಣವನ್ನು ತೊಡಗಿಸಬಹುದು. ಅಕೇಲರು ಈ ದಿಶೆಯಲ್ಲಿ ಮಾರ್ಗದರ್ಶನ ನೀಡಬಹುದು.

ಉಳಿತಾಯದಲ್ಲಿ ತೊಡಗುವಾಗ ತಾನು ಎಲ್ಲಾ ನಿಯಮಗಳನ್ನು ಓದಿ ತಿಳಿದು ಕೊಂಡಿರುವುದಾಗಿಯೂ, ಒಪ್ಪಿರುವುದಾಗಿಯೂ ಹೇಳಿಕೆ ಕೊಡಬೇಕು. ಮತ್ತು ಖಾತೆಯನ್ನು ತೆರೆಯಲು ಪರಿಚಯ ಮಾಡಿಕೊಡುವವರ ಸಹಿ ಬೇಕು. ಅಕೇಲರು ಉಳಿತಾಯ ಮಾಡುವ ಬಗ್ಗೆ ಮರಿಯ ಸ್ಥಿತಿಗತಿಗಳನ್ನು ಮತ್ತು ಸಾಧ್ಯತೆಯನ್ನು ಪರಿಗಣಿಸಬೇಕು.

ವಿದ್ಯುತ್ ಉಳಿತಾಯ : (i) ಅವಶ್ಯಕತೆ ಇಲ್ಲದಿರುವ ದೀಪಗಳನ್ನು ಉರಿಸಬಾರದು. (ii) ಸಾಮಾನ್ಯವಾಗಿ ಉರಿಸುವ ವ್ಯಾಕ್ಯೂಂ ಬಲ್ಬ್ ಬದಲು ಸಿ.ಎಫ್.ಎಲ್. ಲ್ಯಾಂಪ್‌ಗಳು ವಿದ್ಯುತ್ ಉಳಿತಾಯಕ್ಕೆ ಸಹಾಯಕ (iii) ವಿದ್ಯುದುಪಕರಣಗಳು–

ಹೀಟರ್, ಐರನ್‌ಬಾಕ್ಸ್, ಸ್ಟೌವ್, ಮಿಕ್ಸಿ ಮುಂತಾದವು, ಅನಾವಶ್ಯಕ 'ಆನ್'ನಲ್ಲಿರಬಾರದು. ಎಷ್ಟೋ, ಅಷ್ಟು ಮಿತವಾಗಿ ಉಪಯೋಗಿಸಬೇಕು. (ಏಕೆಂದರೆ ಇವು ಹೆಚ್ಚು ವಿದ್ಯುತ್ ಎಳೆಯುತ್ತವೆ.) (iv) ವಿದ್ಯುತ್ ಪೋಲಾಗುತ್ತಿರುವುದು (ಬೀದಿ ದೀಪಗಳು ಹಗಲಿನಲ್ಲಿ ಉರಿಯುವುದು; ವಿದ್ಯುತ್ ತಂತಿಗಳು ಸರಿಯಾಗಿ ಜೋಡಣೆ ಆಗದೆ ಅಥವಾ ಕಂಬಿಗಳು ಮರಗಿಡಗಳಿಗೆ ತಗುಲಿ ಉರಿಯುವುದರಿಂದ ವಿದ್ಯುತ್ ಪೋಲಾಗುತ್ತದೆ.)

ಮರಿಗಳಾಗಿ ಇಂತಹ ಅಂಶಗಳ ಬಗ್ಗೆ ಅರಿವು ಇದ್ದರೆ, ಹಿರಿಯರಿಗೆ, ಸಂಬಂಧಪಟ್ಟ ಅಧಿಕಾರ ವರ್ಗಕ್ಕೆ ತಿಳಿಸಬಹುದು. ವಯಸ್ಸಿಗೆ ಬಂದು ನಾಗರಿಕರೆನಿಸಿದಾಗ ಸೂಕ್ತ ಕ್ರಮ ತೆಗೆದುಕೊಳ್ಳಲೂ ಅನುಕೂಲ ಆಗುತ್ತದೆ.

ಕುಡಿಯುವ ನೀರಿನ ಉಳಿತಾಯ

ವಿಶ್ವದಲ್ಲಿ 4/5 ಭಾಗ ನೀರಿದ್ದರೂ ಸಹ ನಮಗೆ (ಎಂದರೆ ಇಡೀ ಪ್ರಪಂಚದ ಜೀವರಾಶಿಗೆ) ಕುಡಿಯುವ ನೀರು ದೊರಕುವುದು 10,000ದಲ್ಲಿ 3 ಭಾಗ ಮಾತ್ರ (0.00003)). ಇದನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ನಮ್ಮ ದೇಹದಲ್ಲಿ ಸಹ ಶೇಕಡ 80 ಭಾಗ ನೀರಿನಂಶವಿದೆ. ನೀರಿನಂಶ ಕಮ್ಮಿ ಆದಂತೆ ಅದರ ಪ್ರಭಾವವು ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಅತೀ ಕೊರತೆಯುಂಟಾದಾಗ (ಡಿಹೈಡ್ರೇಷನ್) ಅದು ಸಾವಿಗೂ ಕಾರಣವಾಗಬಹುದು. ಉಳಿತಾಯದ ಬಗ್ಗೆ ಹೇಳುವಾಗ (i) ಕೊಳಾಯಿಗಳಲ್ಲಿ ನೀರು ವೃಥಾ ಸೋರಿ ಹೋಗದಂತೆ ಎಚ್ಚರ ವಹಿಸಬೇಕು. (ii) ನೀರಿನ ಉಪಯೋಗವನ್ನು ಮಿತಗೊಳಿಸಿಕೊಳ್ಳಬೇಕು. (iii) ಉಳಿಸಿದ ಪ್ರತಿ ಹನಿ ನೀರೂ ಬೇರೊಂದು ಜೀವಕ್ಕೆ ಅವಶ್ಯಕ/ಉಪಯೋಗಿ ಎಂಬುದು ನೆನಪಿರಬೇಕು.

ಕಂಪ್ಯೂಟರ್ ಬಗ್ಗೆ ಅರಿವು: ಈಗಿನ ದಿನಗಳಲ್ಲಿ "ಕಂಪ್ಯೂಟರ್" ಬಹೂಪಯೋಗಿ ತಾಂತ್ರಿಕ ಸಾಧನವಾಗಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರವು ಇಡೀ ವಿಶ್ವವನ್ನು ಸಂಕುಚಿತಗೊಳಿಸಿದೆ. ಮನೆಯಲ್ಲಿ ಪಿ.ಸಿ. ಇದ್ದರೆ ಒಳ್ಳೆಯದು. ಅನೇಕ ಶಾಲೆಗಳಲ್ಲಿ ಈಗ ಕಂಪ್ಯೂಟರ್ ಒದಗಿಸಿದ್ದಾರೆ. ಹಾಗಾಗಿ ಮನೆಯಲ್ಲಿ ಹಿರಿಯರನ್ನಾಗಲೀ; ಕಬ್‌ಮಾಸ್ಟರ ಮೂಲಕ ಶಾಲೆಗಳಲ್ಲಿನ ಉಪಾಧ್ಯಾಯರನ್ನಾಗಲಿ ಕೇಳಿಕೊಂಡು ಅತ್ಯವಶ್ಯಕ ವಿವರಗಳನ್ನು ತಿಳಿದುಕೊಳ್ಳಿ. (i) ಪರ್ಸನ್ ಐಡಿ ಮತ್ತು ಪಾಸ್‌ವರ್ಡ್ ತಿಳಿದಿರಬೇಕು. (ii) ಹೋಂ ಪೇಜ್, ಫೇಸ್‌ಬುಕ್ ತಿಳಿದಿರಬೇಕು. (iii) ಹೋಂ ಪೇಜ್‌ನಲ್ಲಿ ನಿಮ್ಮ ಲೆಕ್ಕವನ್ನು ತೆರೆಯಲೂ, ಕೊನೆಯಲ್ಲಿ ಅದನ್ನು

ಮುಕ್ತಾಯ ಮಾಡಲೂ ತಿಳಿದಿರಬೇಕು. (iv) ಸರಳವಾಗಿ ಪತ್ರ ವ್ಯವಹಾರ (e-mail) ಮಾಡಲು ತಿಳಿದಿರಬೇಕು.

6. ಧಾರ್ಮಿಕ ಸಮಾರಂಭವೊಂದರಲ್ಲಿ ಭಾಗವಹಿಸಿ ತಮ್ಮ ಅನುಭವವನ್ನು ಅಕೇಲರಿಗೆ ವಿವರಿಸಬೇಕು.

ಸಚ್ಚಾರಿತ್ರ್ಯವು ನಮ್ಮ ಭಾಗ್ಯವಾದರೆ, ಸದಾಚಾರವು ನಮ್ಮ ಸಂಪತ್ತು. ಇವುಗಳೆರಡಕ್ಕೂ ದೇವರ ಬಗ್ಗೆ ತಿಳುವಳಿಕೆಯು ಬುನಾದಿ. ದೇವರ ವಾಣಿಯು – ನಮ್ಮ ಅಂತರಾತ್ಮ, ನಮ್ಮ ಗುರು ಮತ್ತು ಮಾರ್ಗದರ್ಶಿ. ನಾವು ಒಳ್ಳೆಯ ಜೀವನವನ್ನು ನಡೆಸುವ ಉದ್ದೇಶದಿಂದ ದೇವರನ್ನು ಪೂಜಿಸುತ್ತೇವೆ.

ಪೂರ್ವೇತಿಹಾಸ ಕಾಲದಿಂದಲೂ ಮನುಷ್ಯರು, ಮಾನವಾತೀತ ಶಕ್ತಿಯಾದ ದೇವರು ವಿಶ್ವದ ಲಾಲನೆ ಪೋಷಣೆಗಳಿಗೆ ಆಧಾರವೆಂದು ನಂಬಿದ್ದಾರೆ. ಮಾನವರು ಅವನಿಗಾಗಿ ಹಾತೊರೆದು, ಅವನ ಲೀಲೆಗಳನ್ನು ಅರ್ಥಮಾಡಿಕೊಳ್ಳಲು ತಪಿಸಿ, ಸದಾಚಾರ ಸಂಪನ್ನರಾಗಿ ಜೀವಿಸಲು ಅವನ ಕೃಪೆಗಾಗಿ ಅನವರತವೂ ಪ್ರಾರ್ಥಿಸುತ್ತಾರೆ.

ಜ್ಞಾನಿಗಳು ಆ ಅವನನ್ನು ಅನೇಕ ರೀತಿಗಳಲ್ಲಿ ಪೂಜಿಸುತ್ತಾರೆ. ಈ ಬಗ್ಗೆ ವಿವಿಧ ರೀತಿ, ನೀತಿ ವಿಧಾನಗಳನ್ನನುಸರಿಸುವ ಮತಗಳು– ನಂಬಿಕೆಗಳಿವೆ. ಪ್ರತಿ ಮತವೂ ಅದರದೇ ರೀತಿಯಲ್ಲಿ, ಈ ಮಹಾ ಸತ್ಯವನ್ನು ಅರ್ಥಮಾಡಿಕೊಳ್ಳುತ್ತದೆ. ಎಲ್ಲಾ ಮತಗಳ ಸಾರವೂ ಒಂದೇ. ದೇವರು ಒಬ್ಬನೇ. ಅವನು ಪ್ರೇಮಸ್ವರೂಪಿ. ಸಕಲ ಸೃಷ್ಟಿಯ ವಿಷಯದಲ್ಲಿಯೂ ಅವನು ದಯಾರ್ದ್ರನಾಗಿ ಕೃಪೆ ತೋರುತ್ತಾನೆ. ನಾವೆಲ್ಲರೂ ಅವನ ಮಕ್ಕಳು. ಎಲ್ಲಾ ಮತಗಳೂ ಒಂದೇ ಗುರಿಯತ್ತ ಸಾಗುವ ಬೇರೆ ಬೇರೆ ದಾರಿಗಳು, ಎಲ್ಲರ ಗುರಿಯೂ ದೇವರು. ಈ ಏಕತೆಯನ್ನು ನಾವು ಅರ್ಥಮಾಡಿಕೊಂಡು ಎಲ್ಲಾ ಮತಗಳ ಬಗ್ಗೆಯೂ ಗೌರವಯುತವಾಗಿ ಪ್ರವರ್ತಿಸಬೇಕು.

ಸ್ಕೌಟಿಂಗಿಗೆ ಧಾರ್ಮಿಕ ನಂಬಿಕೆಯೇ ಬುನಾದಿ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಯಾವುದೇ ಒಂದು ಕೋಮು ಅಥವಾ ಪಂಥಕ್ಕೆ ಸೇರಿರುವುದಿಲ್ಲ. ಅದರ ಪ್ರತಿಯೊಬ್ಬ ಸದಸ್ಯನೂ ಅವನವನ ನಂಬಿಕೆ, ಧರ್ಮಗಳ ಬಗ್ಗೆ ಶ್ರದ್ಧಾಸಕ್ತಿಯುಳ್ಳವನಾಗಿ ಇತರರ ಧಾರ್ಮಿಕ ನಂಬಿಕೆಗಳ ಬಗ್ಗೆ ಗೌರವವುಳ್ಳವನಾಗಿ ಪ್ರವರ್ತಿಸುವಂತೆ ಸಂಸ್ಥೆಯು ಆಶಿಸುತ್ತದೆ.

ಹಿಂಡಿನಲ್ಲಿರುವ ಮಕ್ಕಳು ಒಂದಲ್ಲ ಒಂದು ಧರ್ಮಕ್ಕೆ ಸೇರಿದವರಾಗಿರುತ್ತಾರೆ. ಪ್ರತಿ ಮರಿಯೂ ತನ್ನ ಅಂತರಾತ್ಮವು ನುಡಿಯುವ ರೀತಿಯಲ್ಲಿ ತನ್ನ ಧಾರ್ಮಿಕ ನಂಬಿಕೆಗಳಿಗೆ ನಿಷ್ಠಾವಂತನಾಗಿದ್ದು ಅದರಂತೆ ನಡೆದುಕೊಳ್ಳಲು ಸ್ವತಂತ್ರನಾಗಿರುತ್ತಾನೆ. ಅಕೇಲರು, ಮರಿಗಳು ತಮ್ಮ ವೈಯಕ್ತಿಕ ಧರ್ಮಾಚರಣೆಗಳಲ್ಲಿ ಪಾಲ್ಗೊಳ್ಳಲು ಪೂರ್ಣವಾಗಿ ಅವಕಾಶಗಳನ್ನು ಕಲ್ಪಿಸಬೇಕು. ಅದೇ ರೀತಿಯಲ್ಲಿ ಇತರರ ಧಾರ್ಮಿಕ ಉತ್ಸವಗಳಲ್ಲಿ ಪಾಲ್ಗೊಳ್ಳಲೂ ಪ್ರೋತ್ಸಾಹಿಸಬೇಕು. ಇದರಿಂದ ಪರಮತಸಹಿಷ್ಣುತೆ ಮತ್ತು ಇತರ ಧರ್ಮಗಳ ಬಗ್ಗೆ ಗೌರವ ಭಾವನೆಗಳು ಬೆಳೆಯುತ್ತವೆ.

ಮರಿಗಳು ಆಗಾಗ್ಗೆ ಹಿಂಡಿನಲ್ಲಿ ಏರ್ಪಡಿಸುವ ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುವುದು; ಧಾರ್ಮಿಕ ಸಮಾರಂಭಗಳ ವೇಳೆಯಲ್ಲಿ ಹೂವು ಮತ್ತು ಇತರ ಕೊಡುಗೆಗಳನ್ನು ವಿನಿಮಯ ಮಾಡಿಕೊಳ್ಳುವುದು; ಶುಭ ಕಾಮನೆಗಳನ್ನು ಹೇಳುವುದು; ಧಾರ್ಮಿಕ ಸ್ಥಳಗಳಿಗೆ ಏರ್ಪಡಿಸುವ ಪ್ರವಾಸಗಳಲ್ಲಿ ಪಾಲ್ಗೊಳ್ಳುವುದು, ಹತ್ತಿರದ ಧಾರ್ಮಿಕ ನೆಲೆಗಳಲ್ಲಿ- ದೇವಾಲಯ ಇತ್ಯಾದಿ; ಹಿಂಡಿನ ವಿಶೇಷ ಸಭೆಗಳನ್ನು ಏರ್ಪಡಿಸುವುದು; ಯಾತ್ರೆಗಳಲ್ಲಿ ಭಾಗವಹಿಸುವುದು; ಎಲ್ಲಕ್ಕಿಂತಲೂ ಹೆಚ್ಚಾಗಿ ಸ್ಕೌಟರುಗಳ ವೈಯಕ್ತಿಕ ಅನುಕರಣೀಯ ಜೀವನದಿಂದ ಪ್ರಭಾವಿತರಾಗಿ ಮರಿಗಳಲ್ಲಿ ಪರಮತಸಹಿಷ್ಣುತೆ ಮತ್ತು ಅನ್ಯಮತ ಗೌರವ ಭಾವನೆಗಳು ತಾವಾಗಿ ಮೂಡುತ್ತವೆ.

7. **ಈ ಮುಂದಿನ ಪ್ರವೀಣತಾ ಪದಕಗಳಲ್ಲಿ ಒಂದಕ್ಕೆ ಅರ್ಹತೆಯನ್ನು ಗಳಿಸಬೇಕು. (ಅ) ವಿಶ್ವ ರಕ್ಷಣೆ (ವರ್ಲ್ಡ್‌ಕನ್ಸರ್ವೇಷನ್) (ಆ) ಪ್ರಥಮ ಚಿಕಿತ್ಸಕ (ಫಸ್ಟ್‌ಏಯ್ಡರ್) (ಇ) ಸೈಕಲ್ ಸವಾರ (ಸೈಕ್ಲಿಸ್ಟ್) (ಈ) ತೋಟಗಾರ (ಗಾರ್ಡನರ್)**

ಎ.ಪಿ.ಆರ್.ಓ. ಭಾಗ-II ರಲ್ಲಿ ಈ ಪದಕಗಳ ಪಠ್ಯಾಂಶಗಳ ಬಗ್ಗೆ ಹೇಳಲಾಗಿದೆ

8. **ಆಸುಪಾಸಿನಲ್ಲಿ ಒಂದು ಸ್ಕೌಟ್ ಪಟಾಲಂ ಇಲ್ಲವೇ ದಳವು ಕೆಲಸ ಮಾಡುತ್ತಿರುವಾಗ ಗಮನಿಸಿ, ತಮ್ಮ ಅಭಿಪ್ರಾಯಗಳನ್ನು ಅಕೇಲರೊಂದಿಗೆ ಚರ್ಚಿಸಬೇಕು ಅಥವಾ ತಮ್ಮ ನೆರೆಹೊರೆಯವರಲ್ಲಿ ಹಿಂದೆ ಸ್ಕೌಟ್-ಗೈಡ್‌ಗಳಾಗಿದ್ದವರ ವಿಳಾಸಗಳನ್ನು ಸಂಗ್ರಹಿಸಿ, ಅಕೇಲರಿಗೆ ಒಪ್ಪಿಸಬೇಕು**

ಪಟಾಲಂ ಅಥವಾ ದಳವನ್ನು ಗಮನಿಸುವುದು: ಬಾಲಕನು ಮರಿಯಾಗಿ, ಹಿಂಡಿಗೆ ಸೇರಿದಾಗಿನಿಂದ, ಅವನ ವಯಸ್ಸು ಮತ್ತು ಶಕ್ತಿ ಸಾಮರ್ಥ್ಯಗಳು ಅವಕಾಶ

ಕೊಟ್ಟ ಕೂಡಲೇ ಸ್ಕೌಟ್ ಆಗಿ, ಅವರುಗಳು ಮಾಡುವ ಕೆಲಸಗಳಲ್ಲಿ ಭಾಗವಹಿಸುವುದು ಅವನ ಪರಮ ಗುರಿಯಾಗಿರುತ್ತದೆಂಬ ಅಂಶವನ್ನು ಮರಿಗೆ ಅರ್ಥಮಾಡಿಸಬೇಕು.

ಮರಿಯು ಚತುರ್ಥ ಚರಣ್ ಪದಕವನ್ನು ಇನ್ನೇನು ಗಳಿಸುತ್ತಾನೆ ಎನ್ನುವಾಗ, ಅಕೇಲರು ಅವನನ್ನು ಹತ್ತಿರದ ಸ್ಕೌಟ್ ದಳಕ್ಕೆ ತೊಂದರೆಯಾಗದಂತೆ ಕಳುಹಿಸಿ ಕೊಡುವ ಯೋಚನೆ ಮಾಡಬೇಕು. ಈಗಾಗಲೇ ಬಾಂಧವ್ಯ ಬೆಳೆಸದಿದ್ದರೆ, ಈಗಲಾದರೂ ಹತ್ತಿರದ ಸ್ಕೌಟ್ ಮಾಸ್ಟರೊಡನೆ ಗೆಳೆತನ ಬೆಳೆಸಿಕೊಳ್ಳಬೇಕು. ಅವರಿಬ್ಬರೂ ಸೇರಿ, ಸ್ಕೌಟಾಗುವ ಮರಿಗೂ, ಅವನ ಭಾವೀ ಪಟಾಲಂ ನಾಯಕನಿಗೂ ಹೊಂದಾಣಿಕೆ ಬರುವಂತೆ ಮಾಡಬೇಕು.

ಮರಿಯು ಒಂದು ತಿಂಗಳ ಕಾಲ ನೆರೆಹೊರೆಯ ಸ್ಕೌಟ್ ದಳವನ್ನು ಅಥವಾ ಪಟಾಲಂನ್ನು ಗಮನಿಸಿ ತನ್ನ ಅನಿಸಿಕೆಗಳನ್ನು ಅಕೇಲರೊಡನೆ ಹಂಚಿಕೊಳ್ಳಬೇಕು. ಪಟಾಲಂ/ದಳವನ್ನು ಗಮನಿಸುವಾಗ ಮರಿಗೆ ಸ್ಕೌಟುಗಳ ಸಮವಸ್ತ್ರ; ಅವರು ಸಣ್ಣ ಗುಂಪುಗಳಲ್ಲಿ ಅವರದೇ ಆದ ನಾಯಕನೊಡನೆ ಕೆಲಸಗಳನ್ನು ನಿರ್ವಹಿಸುವುದು; ಅವರ ಆಟಗಳು, ಹೊರ ಸಂಚಾರಗಳು, ಶಿಬಿರಾಗ್ನಿ, ಆಶ್ರಯ ಕಟ್ಟುವುದು; ಉಪಕರಣಗಳು (ಗ್ಯಾಡ್ಜೆಟ್ಸ್) ಇತ್ಯಾದಿ ವಿಷಯಗಳಿಂದ ಆಕರ್ಷಿತನಾಗಬಹುದು. ಈ ಎಲ್ಲ ವಿಷಯಗಳನ್ನೂ ಅವನು ಅಕೇಲರೊಡನೆ ಚರ್ಚಿಸಬಹುದು. ಅಕೇಲರು, ಒಂದಲ್ಲ ಒಂದು ದಿನ, ಅವನೂ ಅದೇ ರೀತಿ ಸ್ಕೌಟ್ ಆಗುವನೆಂದೂ, ದಳ/ ಪಟಾಲಂನ ಸದಸ್ಯನಾಗಿ ಅಂತಹ ಚಟುವಟಿಕೆಗಳಲ್ಲಿ ಭಾಗವಹಿಸುವನೆಂದೂ, ಒಳ್ಳೆಯ ಜೀವನ ನಡೆಸಲು ಶಿಕ್ಷಣ ಪಡೆಯುವನೆಂದೂ, ಉತ್ತಮ ಬಾಲಕನೂ ಆಗಿ, ಮುಂದೆ ಉತ್ತಮ ನಾಗರೀಕನೂ ಆಗುವನೆಂದು ತಿಳಿಸಬೇಕು.

ನೆರೆಹೊರೆಯಲ್ಲಿ ಹಿಂದೆ ಸ್ಕೌಟ್/ಗೈಡ್ ಆಗಿದ್ದವರ ವಿಳಾಸಗಳನ್ನು ಸಂಗ್ರಹಿಸಿ ಅಕೇಲರಿಗೆ ಒಪ್ಪಿಸುವುದು

ಶಾಲೆಗೆ ಹೋಗುವುದು, ಆಟವಾಡಲು ಹೋಗುವುದು, ಸ್ನೇಹಿತರ ಮನೆಗೆ ಹೋಗುವುದು, ಮನೆಯಲ್ಲಿ ಹಿರಿಯರಾದವರಿಗೆ ಸಣ್ಣಪುಟ್ಟ ಕೆಲಸಗಳನ್ನು ಮಾಡುವುದು, ಇವೇ ಮುಂತಾದ ಕಾರಣಗಳಿಗಾಗಿ, ಮರಿಯು ದಿನದಲ್ಲಿ ಹಲವಾರು ಬಾರಿ ಮನೆ ಬಿಟ್ಟು, ನೆರೆಹೊರೆಯಲ್ಲಿ ಓಡಾಡಬೇಕಾಗುತ್ತದೆಯಾದ್ದರಿಂದ ಹೊರಗೆ ಹೋಗುತ್ತಿರುತ್ತಾನೆ. ತಾಯಿತಂದೆಯರು, ಅಕೇಲರು, ನೆರೆಹೊರೆಯಲ್ಲಿನ ಇತರ ಹಿರಿಯರು ಸ್ವಲ್ಪಮಟ್ಟಿಗೆ ಮಾರ್ಗದರ್ಶನ ನೀಡಬಹುದಾದರೆ, ಮರಿಯು ಸ್ಥಳೀಯವಾಗಿ ವಾಸಮಾಡುತ್ತಿರುವ, ಈ ಹಿಂದೆ ಸ್ಕೌಟ್/ಗೈಡ್‌ಗಳಾಗಿದ್ದವರ ವಿಳಾಸಗಳನ್ನು ಸಂಗ್ರಹಿಸಬಹುದು.

ಅಕೇಲರು, ಮರಿಯು ವಾಸಿಸುವ ನೆರೆಹೊರೆಯಲ್ಲಿ, ಮುಂದಾಗಿ ತಪಾಸಣೆ ನಡೆಸಿ, ಕೆಲವಾರು ವ್ಯಕ್ತಿಗಳನ್ನು, ಮರಿಯು ಬಂದಾಗ ವಿಳಾಸಗಳನ್ನು ಸಂಗ್ರಹಿಸಲು ಅವನಿಗೆ ಸಹಾಯ ಮಾಡಬೇಕಾಗಿ ಕೋರಿಕೊಂಡಿದ್ದರೆ ಮರಿಯ ಸಾಧನೆ ಮತ್ತಷ್ಟು ಉತ್ತಮಗೊಳ್ಳುತ್ತದೆ.

9. ಇಬ್ಬರು ರಾಷ್ಟ್ರೀಯ ನಾಯಕರ /ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಹೇಳಬೇಕು

ರಾಷ್ಟ್ರೀಯ ನಾಯಕರು, ಸ್ವಾತಂತ್ರ್ಯ ಹೋರಾಟಗಾರರು ಎಂದ ಕೂಡಲೇ ಮಹಾತ್ಮಾಗಾಂಧಿ, ಪಂಡಿತ ಜವಾಹರ್‌ಲಾಲ್ ನೆಹರು, ಸುಭಾಷ್‌ಚಂದ್ರ ಭೋಸ್, ಡಾ॥ ಅನಿಬೆಸೆಂಟ್, ಪಂಡಿತ ಮದನ ಮೊಹನ ಮಾಳವೀಯ, ಹೃದಯನಾಥ ಕುಂಜ್ರು (ಈ ಮೂವರೂ ಸೌಟ್ ಸಂಸ್ಥೆಗೂ ಸಂಬಂಧಿಸಿದವರು). ಹೀಗೆ ಅನೇಕರು, ಇತ್ತೀಚಿನ ಇಂದಿರಾಗಾಂಧಿ, ಡಾ. ಅಬ್ದುಲ್‌ಕಲಾಂ, ಅಟಲ್‌ಬಿಹಾರಿ ವಾಜಪೇಯಿವರೆಗೆ ಅದೆಷ್ಟೋ ನಾಯಕರು ಸ್ಮೃತಿಪಟಲದಲ್ಲಿ ಹಾಯುತ್ತಾರೆ.

ಕಬ್‌ಮಾಸ್ಟರು, ಮರಿಗಳು ಹೆಸರಿಸುವ ಇಬ್ಬರ ಬಗ್ಗೆ ಶಾಲೆಯ ಅಥವಾ ಸಾರ್ವಜನಿಕ ಗ್ರಂಥಾಲಯಗಳಲ್ಲಿ, ವಿವರಗಳನ್ನು ಅಧ್ಯಯನ ಮಾಡಲು, ಟಿಪ್ಪಣಿ ಮಾಡಲು ಹಿಂಡಿನ ಸಭೆಯಲ್ಲಿ ವಿವರಿಸಲೂ ಉತ್ತೇಜನ ನೀಡಬೇಕು.

10. ರಾಷ್ಟ್ರಧ್ವಜ ಮತ್ತು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜದ ಬಗ್ಗೆ ತಿಳಿದಿರಬೇಕು

1. ರಾಷ್ಟ್ರಧ್ವಜ



ಅರ್ಥ: ಧ್ವಜದ 3 ಬಣ್ಣಗಳು ಸಮಪ್ರಮಾಣದ ಸಮಾನಾಂತರ ಪಟ್ಟಿಗಳಾಗಿ ರುತ್ತವೆ. ಮೇಲಿನ ಕೇಸರಿ ಬಣ್ಣವು ತ್ಯಾಗವನ್ನೂ, ಮಧ್ಯದ ಬಿಳುಪು ಸ್ವಚ್ಛತೆಯನ್ನೂ ಕೆಳಗಿನ ಹಸಿರು ಶಾಂತಿ ಸಮೃದ್ಧಿಯನ್ನೂ ಸೂಚಿಸುತ್ತವೆ. ಬಿಳಿಯ ಬಣ್ಣದ ನಡುವಿನ ನೀಲಿಬಣ್ಣದ ಅಶೋಕ ಚಕ್ರವು ಭಾರತದ ಧಾರ್ಮಿಕ

ಪರಂಪರೆಯನ್ನೂ ಸದಾ ಉರುಳುವ ಚಕ್ರದಂತೆ ಜೀವನ ಗತಿ ಹಾಗೂ ದೇಶದ ನಿರಂತರ ಪ್ರಗತಿಯನ್ನೂ ಸೂಚಿಸುತ್ತದೆ. ಚಕ್ರದ 24 ಅರೆಕಾಲುಗಳು ಸಮಯ ಪ್ರಜ್ಞೆಯನ್ನು ಸೂಚಿಸುತ್ತದೆ.

ಎರಡೂ ಧ್ವಜಗಳ ಅಳತೆ 2 : 3

2. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜ



2. ಅರ್ಥ: ನೀಲಿಯ ಒಡಲು, ಸಂಸ್ಥೆಯ ವ್ಯಾಪಕತೆ, ವೈಶಾಲ್ಯತೆಗಳನ್ನು ಸೂಚಿಸುತ್ತದೆ. ಲಾಂಛನದ ಹಳದಿಯ ಬಣ್ಣವು ಸಂಸ್ಥೆಯ ಶ್ರೇಷ್ಠತೆಯನ್ನು ಸಾರುತ್ತದೆ. ತ್ರಿದಳ ಕಮಲವು ಸ್ಕೌಟ್ ಸಂಸ್ಥೆಯನ್ನೂ, ತ್ರಿದಳ ಪತ್ರವು ಗೈಡ್ ಸಂಸ್ಥೆಯನ್ನೂ ಪ್ರತಿನಿಧಿಸುತ್ತದೆ. ಅಶೋಕ ಚಕ್ರವು ಭಾರತ ದೇಶವನ್ನು ಸೂಚಿಸುತ್ತದೆ.

11. ಸರಳ ಯೋಗದ ತಿಳುವಳಿಕೆ ಪಡೆದು ನಿತ್ಯಜೀವನದಲ್ಲಿ ಅದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ಸರಳ ಯೋಗದಲ್ಲಿ ಅನುಸರಿಸಬೇಕಾದ ವಿವರಗಳ ಬಗ್ಗೆ ಸಮೀಪದ "ಯೋಗಶಾಲೆ"ಗೆ ಭೇಟಿ ನೀಡಿ, ಮರಿಗಳಿಗೆ ಕಬ್‌ಮಾಸ್ಟರು ತಿಳಿಸಬೇಕು. ಅಲ್ಲದೆ ಪದ್ಮಾಸನ, ಪ್ರಾಣಾಯಾಮ (ಶ್ವಾಸ ನಿಯಂತ್ರಣ) ಮುಂತಾದ ಸರಳ ಯೋಗ ಕ್ರಮಗಳನ್ನು ತಿಳಿಯಲು ಅನುಕೂಲ ಮಾಡಿಕೊಡಬೇಕು.

ಕಬ್‌ಮಾಸ್ಟರು ತಾವೂ ಹಲವಾರು ಯೋಗಾಸನಗಳನ್ನು ತಿಳಿದು ಅಭ್ಯಾಸ ಮಾಡುವವರಾಗಿ ಅನುಕರಣೀಯ ವ್ಯಕ್ತಿಗಳಾಗಿ ಮರಿಗಳು ಅಭ್ಯಾಸ ಮಾಡುತ್ತಿರುವ ಬಗ್ಗೆ ಗಮನಿಸಬೇಕು.

◆

ಅಧ್ಯಾಯ-19

ಪ್ರವೀಣತಾ ಪದಕಗಳು

(ಸೆಕ್ಷನ್ ಎ; ಅನುಬಂಧ (1); ಎ.ಪಿ.ಆರ್.ಓ.II)

ಸಚ್ಚಾರಿತ್ರ್ಯದ ಬಗ್ಗೆ ಶಿಕ್ಷಣವನ್ನು ಪಡೆಯಲು ಮತ್ತು ಒಬ್ಬ ವ್ಯಕ್ತಿಯು ಉತ್ತಮ ನಾಗರಿಕನಾಗಿ ಬಾಳಲು ಬೇಕಾದ ಗುಣಗಳನ್ನು, ಅಭಿವೃದ್ಧಿಪಡಿಸಿಕೊಳ್ಳಲು "ಪ್ರವೀಣತಾ ಪದಕಗಳು" ಒಂದು ವಿಧಾನವಾಗಿದೆ. ಹಿಂಡಿನ ಸಭೆಗಳಲ್ಲಿ ದೊರಕುವ ಅವಕಾಶಗಳನ್ನು ಮೀರಿ, ಅವನ ಅಭಿರುಚಿ ಮತ್ತು ಸಾಮರ್ಥ್ಯಗಳಿಗೆ ತಕ್ಕಂತೆ ಪ್ರಗತಿ ಹೊಂದಲು, ಪ್ರವೀಣತಾ ಪದಕಗಳು ಅವನಿಗೆ ಬೇಕಾದ ಪ್ರೇರಣೆಯನ್ನು ನೀಡುತ್ತವೆ. ಒಟ್ಟು 18 ಪ್ರವೀಣತಾ ಪದಕಗಳಿವೆ. ಅವುಗಳನ್ನು 5 ಭಾಗಗಳಾಗಿ ವಿಂಗಡಿಸಲಾಗಿದೆ.

ಅ. ಪ್ರಥಮ ಚರಣ್ ಮರಿಯು ಎರಡು ಪ್ರವೀಣತಾ ಪದಕಗಳಿಗೆ ಮೀರದಂತೆ ಪಡೆಯಬಹುದು.

ಆ. ದ್ವಿತೀಯ ಚರಣ್ ಮರಿಯು ಈ ಹಿಂದೆ ಪಡೆದ ಎರಡು ಪದಕಗಳ ಜೊತೆಗೆ ಮತ್ತೆ ಎರಡು ಪ್ರವೀಣತಾ ಪದಕಗಳಿಗೆ ಮೀರದಂತೆ ಪದಕಗಳನ್ನು ಪಡೆಯಬಹುದು.

ಇ. ತೃತೀಯ ಚರಣ್ ಮರಿಯು ಉಳಿದ ಯಾವುದಾದರೂ ಅಥವಾ ಎಲ್ಲಾ ಪ್ರವೀಣತಾ ಪದಕಗಳನ್ನೂ ಪಡೆಯಬಹುದು.

ಈ. "ಚತುರ್ಥ ಚರಣ್" ಪದಕವನ್ನು ರಾಜ್ಯ ಮುಖ್ಯ ಆಯುಕ್ತರಿಂದ ಸಹಿ ಮಾಡಲ್ಪಟ್ಟ ಪತ್ರದೊಂದಿಗೆ ನೀಡಲಾಗುವುದು.

ಉ. ಪ್ರವೀಣತಾ ಪದಕಗಳನ್ನು ಈ ಕೆಳಕಂಡಂತೆ ಐದು ಭಾಗಗಳಾಗಿ ವಿಂಗಡಿಸಲಾಗಿದೆ:

ಗುಂಪು I	1. ಸಂಗ್ರಾಹಕ
ಸಚ್ಚಾರಿತ್ರ್ಯ	2. ತೋಟಗಾರ
(ಪದಕದ ಬಣ್ಣ ನೀಲಿ)	3. ಮನರಂಜಕ

ಗುಂಪು II ದೈಹಿಕ ಆರೋಗ್ಯ (ಪದಕದ ಬಣ್ಣ ಹಸಿರು)	1. ಕ್ರೀಡಾಪಟು 2. ಸೈಕಲ್ ಸವಾರ 3. ಈಜುಗಾರ 4. ತಂಡದ ಆಟಗಾರ
ಗುಂಪು III ಕರಕುಶಲತೆ (ಪದಕದ ಬಣ್ಣ ಹಸಿರು)	1. ಚಿತ್ರಕಾರ 2. ಗೃಹ ಕರ್ಮಿ 3. ಆಟಿಕೆ ಮಾಡುವವ 4. ಪುಸ್ತಕ ಹೊಲಿಯುವವ
ಗುಂಪು IV ಸೇವೆ (ಪದಕದ ಬಣ್ಣ ಕೆಂಪು)	1. ಬಾಣಸಿಗ (ಅಡಿಗೆಯವ) 2. ಪ್ರಥಮ ಚಿಕಿತ್ಸಕ 3. ಮಾರ್ಗದರ್ಶಿ 4. ಮನೆ ತೈನಾತಿ
ಗುಂಪು V (ಪದಕದ ಬಣ್ಣ ಕಿತ್ತಳೆ)	1. ವಿಶ್ವಸಂರಕ್ಷಣೆ 2. ಪರಂಪರೆ 3. ಕಂಪ್ಯೂಟರ್ ಅರಿವು

ಊ. ಪ್ರವೀಣತಾ ಪದಕಗಳ ಪಠ್ಯವಿಷಯವನ್ನು ಈ ಮುಂದೆ ಕೊಡಲಾಗಿದೆ.

ಋ. ಈ ಎಲ್ಲಾ ಪ್ರವೀಣತಾ ಪದಕಗಳನ್ನೂ ಬಲ ತೋಳಿನ ಮೇಲೆ **ಸಮಾನಾಂತರ**ವಾಗಿ ಧರಿಸುವುದು.

ೠ. ನಾಲ್ಕು ಪ್ರವೀಣತಾ ಪದಕಗಳನ್ನು ಗಳಿಸಿದ ತೃತೀಯ ಚರಣ್ ಮರಿಯು ಬಿಳಿಬಣ್ಣದ ದಾರವನ್ನು ತನ್ನ ಬಲಭುಜದ ಮೇಲೆ ಧರಿಸಲು ಅರ್ಹನಾಗುತ್ತಾನೆ.

ಈ ಪದಕಗಳಿಗೆ ಅಕೇಲರು/ ಸಹಾಯಕ ಅಕೇಲರು/ ಮರಿಗಳ ಬೋಧಕ, ಇವರುಗಳಲ್ಲಿ ಯಾರಾದರೂ ಶಿಕ್ಷಣ ಕೊಡಬಹುದು. ಮರಿಗಳಿಗೆ, ಪ್ರವೀಣತಾ ಪದಕಗಳಿಗೆ ಶಿಕ್ಷಣ ಕೊಡುವಾಗ್ಗೆ ಅವರ ಅಭಿರುಚಿ ಮತ್ತು ಸಹಜ ಪ್ರವೃತ್ತಿಗಳಿಗೆ ತಕ್ಕಂತೆ ಅವರಿಗೇ ಬೇಕಾದ ಪದಕಗಳನ್ನು ಆರಿಸಿಕೊಳ್ಳಲು ಅಕೇಲರು ಸಹಾಯ ಮಾಡಿ ಶಿಕ್ಷಣ ಕೊಡಬೇಕು.

ಈ ಪದಕಗಳಿಗೆ ಪರೀಕ್ಷೆಗಳನ್ನು ಸ್ವತಂತ್ರ ಪರೀಕ್ಷಕರು ಮಾಡುತ್ತಾರೆ. ಅವರನ್ನು ಟ್ರೈನಿಂಗ್ ಕೌನ್ಸಿಲರ್‌ರವರು ನಿಯೋಜಿಸುತ್ತಾರೆ. ಈ ನಿಯೋಜಿತ ಪರೀಕ್ಷಕರು ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಗಳು ಮಾಡಿರುವ ಪ್ಯಾನಲ್‌ನಲ್ಲಿ ಒಬ್ಬರಾಗಿರುತ್ತಾರೆ.

ಚಿನ್ನದ ಬಾಣ

ಓರ್ವ ಚತುರ್ಥ ಚರಣ್ ಮರಿಯು 8 ಪ್ರವೀಣತಾ ಪದಕಗಳನ್ನು ಪಡೆದಿದ್ದರೆ ಅದರೊಂದಿಗೆ ವಿಶೇಷ ಪದಕವಾದ 'ಚಿನ್ನದ ಬಾಣ' ಹೆಸರಿನ ಪದಕವನ್ನು ಪಡೆಯುವನು. ಈ ಪದಕವು ನೀಲಿ ಬಣ್ಣದ್ದಾಗಿರುತ್ತದೆ. ಪದಕದ ಅಂಚುಗಳು ಬಂಗಾರ ಬಣ್ಣದ್ದಾಗಿರುತ್ತದೆ. ಮಧ್ಯದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನ ಇರುತ್ತದೆ. 'ಚಿನ್ನದ ಬಾಣ' ಪದಕದ ಜೊತೆಗೆ ರಾಷ್ಟ್ರೀಯ ಆಯುಕ್ತರ ಸಹಿ ಹೊಂದಿದ ಪ್ರಶಸ್ತಿ ಪತ್ರವನ್ನು ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಇವರು ನೀಡುತ್ತಾರೆ.

ಪ್ರವೀಣತಾ ಪದಕಗಳನ್ನು ಸಂಪಾದಿಸಿದಾಗ, ಅವುಗಳನ್ನು ಬಲತೋಳಿನ ಮೇಲೆ ಸಮಾನಾಂತರ ಸಾಲುಗಳಲ್ಲಿ ಧರಿಸಬೇಕು. ಧರಿಸುವ ಪ್ರವೀಣತಾ ಪದಕಗಳ ಪರೀಕ್ಷಾಂಶಗಳ ಬಗ್ಗೆ ಮರಿಗಳು ತಮ್ಮ ಜ್ಞಾನವನ್ನು ತಮ್ಮಲ್ಲೇ ಒರೆಹಚ್ಚಿ ಆಧುನಿಕ ಬೆಳವಣಿಗೆಯೂ ಸೇರಿದಂತೆ ಆಗಾಗ್ಗೆ ಸೂಕ್ತ ವಿಧಾಯಕ ವರ್ಗದಿಂದ ಪರೀಕ್ಷಿಸಿಕೊಳ್ಳುತ್ತಾ ಇರಬೇಕು. ತಿಳುವಳಿಕೆಯ ಪರಿವೆಯು ಸಾಕಷ್ಟಿಲ್ಲವೆಂದು ಸಾಬೀತಾದಲ್ಲಿ ಅಂತಹ ಪ್ರವೀಣತಾ ಪದಕಗಳನ್ನು ಹಿಂತೆಗೆದುಕೊಳ್ಳಲಾಗುವುದು.

ಅನುಬಂಧ

ಪ್ರವೀಣತಾ ಪದಕಗಳ ಪಠ್ಯಾಂಶಗಳು

ಪ್ರವೀಣತಾ ಪದಕಗಳ ಪಠ್ಯಾಂಶಗಳ ಬಗ್ಗೆ ಅನುಮಾನ ಪರಿಹಾರಕ್ಕಾಗಿ "APRO ಭಾಗ–II ಮರಿಗಳ ವಿಭಾಗ" ಪ್ರತಿಯನ್ನು ಹೊಂದಿರಲೇ ಬೇಕು.

1. ಸಂಗ್ರಾಹಕ (Collector)



ಒಂದೇ ಗುಂಪಿಗೆ ಸೇರಿದ ವಸ್ತುಗಳನ್ನು ಒಪ್ಪವಾಗಿ, ಕ್ರಮಬದ್ಧವಾಗಿ ಸೇರಿಸಿ, ಮೂರು ತಿಂಗಳ ಅವಧಿಯಲ್ಲಿ ಅವುಗಳ ಬಗ್ಗೆ ಮಾಹಿತಿ ಪಡೆಯಬೇಕು. ಯಾವ ವಸ್ತುಗಳನ್ನು ಸಂಗ್ರಹಿಸಬೇಕೆಂಬುದನ್ನು ಮರಿಗೇ ಬಿಡಬೇಕು.

ಒಂದೇ ಗುಂಪಿಗೆ ಸೇರಿದ ವಸ್ತುಗಳು ಎಂದರೆ:

ಅಂಚೆ ಚೀಟಿಗಳು, ಅಂಚೆ ಗುರುತುಗಳು, ಚಿತ್ರ ಸಹಿತ ಅಂಚೆಕಾರ್ಡುಗಳು, ಬೆಂಕಿಪೊಟ್ಟಣದ ಮೇಲಿನ ಚಿತ್ರಗಳು, ನಾಣ್ಯಗಳು, ಗರಿಗಳು, ದೀಪದ ಹುಳು, ಪತಂಗ ಗಳು, ಎಲೆಗಳು ಹಾಗೂ ಹೂಗಳು (ಕೊನೆಯ ಎರಡು ವಸ್ತುಗಳು ಫೋಟೋದಿಂದಾ ಗಲಿ, ಒತ್ತು ಚಿತ್ರಗಳಾಗಲಿ (ಕಾರ್ಬನ್ ಇಂಪ್ರೆಷನ್ಸ್)) ಮುಂತಾದವು ಯಾವುದಾದರೂ ಆಗಬಹುದು. ಕನಿಷ್ಠ 25 ವಸ್ತುಗಳನ್ನು ಸಂಗ್ರಹಿಸಬೇಕು.

ಅಥವಾ

ಕನಿಷ್ಠ ಮೂರು ತಿಂಗಳಕಾಲ ದಿನಚರಿ ಮತ್ತು ಮುಖ್ಯ ಘಟನೆಗಳನ್ನು ಟಿಪ್ಪಣಿ ಪುಸ್ತಕದಲ್ಲಿ ಬರೆದಿರಬೇಕು.

2. ತೋಟಗಾರ (Gardener)

i. ಕನಿಷ್ಠ 1.5 ಚ.ಮೀ. ಜಾಗದಲ್ಲಿ ಮೂರು ತಿಂಗಳ ಅವಧಿಯಲ್ಲಿ ಮೂರು ತರಹ ತರಕಾರಿಗಳು ಅಥವಾ ಹೂಗಳನ್ನು ಬೆಳೆಯಬೇಕು.

ii. ಯಾವುದೇ ಪ್ರದೇಶ ಅಥವಾ ತೋಟದಲ್ಲಿರುವ ಈ ಕೆಳಕಂಡವುಗಳಲ್ಲಿ ಕನಿಷ್ಠ ನಾಲ್ಕನ್ನು ಹೆಸರಿಸಬೇಕು.

ಅ) ಮರಗಳು ಅಥವಾ ಪೊದೆ ಗಿಡಗಳು.

ಆ) ಹೂಗಳು ಅಥವಾ ತರಕಾರಿಗಳು.

ಇ) ಸಾಮಾನ್ಯ ಬೆಳೆಗಳು ಮತ್ತು ಸಾಮಾನ್ಯವಾದ ನಾಲ್ಕು ಕಳೆ ಗಿಡಗಳು.

ಈ) ಮುಂದಿರುವ ವಸ್ತುಗಳನ್ನು ಉಪಯೋಗಿಸಲು ತಿಳಿದಿರಬೇಕು: ಸಲಿಕೆ, ಫೋರ್ಕ್, ಗೋರು ಸನಿಕೆ (ಷವೆಲ್) ರೇಕ್ ಅಥವಾ ತತ್ಸಮ ಸ್ಥಳೀಯ ಉಪಕರಣಗಳು.

iii. ಆರು ಪುಟಗಳಿಗೆ ಕಡಿಮೆ ಇಲ್ಲದ ಒಂದು ಚಿಕ್ಕ ಟಿಪ್ಪಣಿ ಪುಸ್ತಕ ಮಾಡಿ. ಅದರ ಪುಟಗಳಲ್ಲಿ ಹೂ, ಎಲೆ ಅಥವಾ ತರಕಾರಿಗಳ ಮಾದರಿ ಒತ್ತಿ ಇಡಬೇಕು. ಕನಿಷ್ಠ 12 ವಿಷಯಗಳನ್ನು ಕಾಣಿಸಬೇಕು.

ಸೂಚನೆ: ನಗರಗಳಲ್ಲಿನ ಹಿಂಡುಗಳು ತೋಟ ಮಾಡಲು ಸ್ಥಳಾವಕಾಶವಿಲ್ಲದೆಡೆ i ಮತ್ತು iiರ ಬದಲಾಗಿ ಈ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಬಹುದು.

i. ಕಿಟಕಿ ಗಿಡ ಪೆಟ್ಟಿಗೆ (**Window Boxes**) ಅಥವಾ ಎರಡು ಅಥವಾ ಹೆಚ್ಚು ಕುಂಡಗಳಲ್ಲಿ ಬೆಳೆಯುವ ಬಹುಕಾಲಿಕ ಗಿಡಗಳನ್ನು ಕನಿಷ್ಠ ಮೂರು ತಿಂಗಳು ಗಮನಿಸಿ, ಪೋಷಿಸಬೇಕು.

ii. ಈ ಮುಂದಿನ ಎರಡನ್ನು ಬೆಳೆಯಬೇಕು.

ಅ. ಹೂವಿನ ಅಥವಾ ತರಕಾರಿ ಗಡ್ಡೆಗಳು (ನೀರಿನಲ್ಲಿ ಮರಳಿನಲ್ಲಿ ಅಥವಾ ಮಣ್ಣಿನಲ್ಲಿ).

ಆ. ಸಾಸಿವೆ, ಕೊತ್ತಂಬರಿ/ಇತರೆ ಸೊಪ್ಪು, ಬಟಾಣಿ, ಕಲ್ಲಂಗಡಿ ಅಥವಾ ತಿಂಗಳ ಹುರುಳಿ (ಮೆತ್ತನೆಯ ಬಟ್ಟೆ ಅಥವಾ ಒತ್ತು ಕಾಗದದ ಮೇಲೆ).

3. ಮನರಂಜಕ (Entertainer)

ಈ ಕೆಳಕಂಡ ಅಂಶಗಳಲ್ಲಿ ಮೂರನ್ನು ಮಾಡಲು ಶಕ್ತನಿರಬೇಕು.

i. ಸರಿಯಾದ ಧಾಟಿಯಲ್ಲಿ ಸರಳವಾದ ಸಂಗೀತವಾದ್ಯವನ್ನು ನುಡಿಸುವುದು. ಅಥವಾ ಸರಿಯಾದ ಧಾಟಿಯಲ್ಲಿ ಸರಳ ಸಂಗೀತ ಹಾಡುವುದು.

ii. ಕಿರು ಪ್ರಹಸನಗಳಲ್ಲಿ ಭಾಗವಹಿಸುವುದು.

iii. ಹಾಡಿಗೆ ತಕ್ಕುದಾದ ನಟನೆ ಹಾಗೂ ಚಲನೆ ಯೊಂದಿಗೆ ಹಾಡೊಂದನ್ನು ಹಾಡುವುದು.

iv. ವೇಷ ಭೂಷಣದೊಂದಿಗೆ ಕಥಾನಿಕ, ಪೌರಾಣಿಕ ಇಲ್ಲವೆ ಐತಿಹಾಸಿಕ ಪಾತ್ರದ ಅಭಿನಯ ಮಾಡುವುದು.

v. ಇತರೆ ಮರಿಗಳಿಗೆ ಪರಿಣಾಮಕಾರಿಯಾಗಿ ಕಥೆಯೊಂದನ್ನು ಹೇಳುವುದು.

ಗುಂಪು-II ದೈಹಿಕ ಆರೋಗ್ಯ

1. ಕ್ರೀಡಾಪಟು (Athlete)

ಈ ಮುಂದಿನ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರಬೇಕು.

i. ಹತ್ತು ಸೆಕೆಂಡುಗಳಲ್ಲಿ 35 ಮೀ. ಓಡಬೇಕು.

ii. 0.6 ಮೀ. ಎತ್ತರ ಜಿಗಿಯಬೇಕು.

iii. 1.8 ಮೀ. ಉದ್ದ ನೆಗೆಯಬೇಕು.

iv. 10.5 ಮೀ. ಎತ್ತರದ ಹಗ್ಗ, ಕಂಬ ಅಥವಾ ತೆಂಗಿನ ಮರವನ್ನು ಏರಬೇಕು.

v. 152ರಿಂದ 162 ಗ್ರಾಂ ತೂಕದ ಚೆಂಡು ಅಥವಾ ಕ್ರಿಕೆಟ್ ಚೆಂಡೊಂದ ನ್ನು 18.30 ಮೀ. ದೂರ ಎಸೆಯಬೇಕು. ಮತ್ತು 9.15 ಮೀ. ದೂರದಿಂದ ಎಸೆದ ಚೆಂಡನ್ನು ಹಿಡಿಯಬೇಕು.

2. ಸೈಕಲ್ ಸವಾರ (Cyclist)



i. ಸೈಕಲ್ ಸವಾರಿ ತಿಳಿದಿರಬೇಕು.

ii. ಸೈಕಲ್ ಒರೆಸುವುದು, ಎಣ್ಣೆ ಹಾಕುವುದು ತಿಳಿದಿರಬೇಕು.

iii. ಟ್ಯೂಬಿಗೆ ಗಾಳಿ ತುಂಬಲು ಮತ್ತು ವಾಲ್ವ್ ಜೋಡಿಸಲು ತಿಳಿದಿರಬೇಕು.

iv. ರಸ್ತೆಯ ಸಂಚಾರ ನಿಯಮಗಳನ್ನು ತಿಳಿದಿರಬೇಕು.

3. ಈಜುಗಾರ (Swimmer)

i. ಯಾವ ರೀತಿಯಲ್ಲಾದರೂ 25 ಮೀ. ಈಜಲು ಬರಬೇಕು.

ii. ಉಪ್ಪು ನೀರಿನಲ್ಲಿ 60 ಸೆಕೆಂಡ್ ಕಾಲ ಅಥವಾ ಶುದ್ಧನೀರಿನಲ್ಲಿ 30 ಸೆಕೆಂಡ್ ಕಾಲ, ಬೆನ್ನುಮೇಲೆ ತೇಲಬೇಕು. ಅಥವಾ ಉಪ್ಪುನೀರಿನಲ್ಲಾದರೆ ಎರಡು ನಿಮಿಷ ಕಾಲ, ಸಿಹಿ ನೀರಿನಲ್ಲಾದರೆ ಒಂದು ನಿಮಿಷ ಕಾಲ ನಿಲುವೀಜು (Tread) ಮಾಡಬೇಕು.

iii. 14 ಮೀ. ದೂರ ಬೆನ್ನುಮೇಲೆ ಈಜಬೇಕು.

iv. ನೀರಿನಲ್ಲಿ ಈಜುವಾಗ ಇಲ್ಲವೇ ನಿಂತಿರುವಾಗ ಮುಳುಗಿ ಏಳಬೇಕು. (Back-Duck dive) ಅಥವಾ ಹಲಗೆ ಅಥವಾ ದೋಣಿಯಿಂದ ಮೊಳಕಾಲಸುತ್ತ ಕೈಬಳಸಿ ಹಿಡಿದು ನೀರಿಗೆ (ಜೇನು ಕುಡಿಕೆಯಂತೆ) (Honey pot) ಧುಮುಕುವುದು.

4. ತಂಡದ ಆಟಗಾರ (Team Player)



i. ಸುವ್ಯವಸ್ಥಿತ ತಂಡಗಳ ಆಟಗಾರನಾಗಿ ಕಾಲ್ಚೆಂಡು, ರೌಂಡರ್ಸ್, ಕ್ರಿಕೆಟ್, ಖೋಖೋ, ಕಬಡ್ಡಿ, ಆಟ್ಯಾಪಾಟ್ಯ ಅಥವಾ ಅದೇ ರೀತಿಯ ವ್ಯವಸ್ಥಿತ ತಂಡಗಳಲ್ಲಿ ನಿತ್ಯ ಆಟಗಾರನಾಗಿರ ಬೇಕು. (ತಂಡವು ಕಬ್‌ಮಾಸ್ಟರ್ ಅಥವಾ ಮರಿಯ ಶಾಲಾ ಉಪಾಧ್ಯಾಯರು ಇಲ್ಲವೆ ಅವರಿಂದ ಒಪ್ಪಿತವಾದ ವ್ಯಕ್ತಿಯ ಅಧೀನದಲ್ಲಿರಬೇಕು.)

ii. ಕನಿಷ್ಠ ಐದು ಪಂದ್ಯಗಳಲ್ಲಿ ಆಡಿರಬೇಕು. ತಂಡದ ನಾಯಕನಿಂದ ಇಲ್ಲವೇ ತಂಡದ ಜವಾಬ್ದಾರಿಯುತ ನಿರ್ವಾಹಕನಿಂದ ಕ್ರೀಡಾ ಮನೋಭಾವದ ಆಟಗಾರನೆಂದು ಶಿಫಾರಸು ಪಡೆದಿರಬೇಕು.

ಗುಂಪು-III ಕರಕುಶಲತೆ (Handicraft)

1. ಚಿತ್ರಗಾರ (Artist)



i. ಸೀಸದ ಕಡ್ಡಿ, ಕುಂಚ, ಪೆನ್ ಅಥವಾ ಬಣ್ಣದ ಬಳಪದಿಂದ ಘಟನೆ ಅಥವಾ ವ್ಯಕ್ತಿ ಚಿತ್ರದ ಸರಳ ಕಥೆಯೊಂದನ್ನು 18×13 ಅಳತೆ ಕಾಗದದಲ್ಲಿ ಬಿಡಿಸಬೇಕು.

ii. ಈ ಕೆಳಗಿನವುಗಳಲ್ಲಿ ಒಂದನ್ನು ಮಾಡಬೇಕು.

ಅ. ಮಸಿಪೆನ್ನು ಇಲ್ಲವೆ ಪೆನ್ಸಿಲ್‌ನಿಂದ ಜೀವಂತ ಅಥವಾ ನೆನಪಿನ ಸಹಾಯದಿಂದ ಪ್ರಾಣಿಯ ಇಲ್ಲವೆ ವ್ಯಕ್ತಿಯ ಚಿತ್ರವೊಂದನ್ನು ಬಿಡಿಸಬೇಕು.

ಆ. ಪ್ರಕೃತಿಯಲ್ಲಿ ಕಾಣುವ ಭೂದೃಶ್ಯ ಅಥವಾ ಸ್ತಬ್ದ ಚಿತ್ರವನ್ನು ಬಿಡಿಸಬೇಕು.

ಇ. ಒಂದು ರೇಖಾಚಿತ್ರದ ಪುಸ್ತಕವನ್ನಿಟ್ಟು ಮೂರು ತಿಂಗಳ ಕಾಲದಲ್ಲಿ ಕನಿಷ್ಠ 12 ಚಿತ್ರಗಳನ್ನು ಬಿಡಿಸಬೇಕು.

ಈ. ಬೆಂಕಿಕಡ್ಡಿ ಸಹಾಯದಿಂದ ನಾಲ್ಕು ಚಿತ್ರಗಳಿಗೆ ಕಡಿಮೆ ಇಲ್ಲದಂತೆ ಚಿತ್ರಕಥೆಯೊಂದನ್ನು ಬಿಡಿಸಬೇಕು.

ಉ. ಸೀಸದ ಕಡ್ಡಿ, ಕುಂಚ, ಲೇಖಣಿ ಅಥವಾ ಬಣ್ಣದ ಕಡ್ಡಿಗಳ ಸಹಾಯದಿಂದ ಸರಳ ಶುಭಾಶಯ ಕಾರ್ಡ್ ರಚಿಸಬೇಕು.

ಊ. ಮೇಣ, ಸಾಬೂನು, ಜೇಡಿಮಣ್ಣು, ರಟ್ಟು ಅಥವಾ ಸೂಕ್ತವಾದ ಇತರೆ ವಸ್ತುಗಳಿಂದ 20 ಸೆಂ.ಮೀ.ಗಿಂತ ಕಡಿಮೆ ಎತ್ತರವಲ್ಲದ ಮನುಷ್ಯ ಇಲ್ಲವೆ ಪ್ರಾಣಿಯ ಮಾದರಿ ರಚಿಸಬೇಕು.

ಸೂಚನೆ: ಮರಿಯ ಸ್ವಾಭಾವಿಕ ಆಸಕ್ತಿಗೆ ಪ್ರತಿ ಸಂದರ್ಭದಲ್ಲೂ ಉತ್ತೇಜನ ನೀಡಬೇಕು. ಕೆಲಸದ ಭಾವ ಮತ್ತು ಗಾಢತೆಗಳನ್ನೂ, ಶೈಕ್ಷಣಿಕ ನಿಯಮಗಳನ್ನೂ ಪಾಲಿಸುವಂತೆ ಪ್ರೇರೇಪಿಸಬೇಕು.

2. ಗೃಹಕರ್ಮಿ (Home Craft)

ಸೂಜಿಗೆ ದಾರ ಪೋಣಿಸಿ ಗುಂಡಿ ಹೊಲಿಯಬೇಕು. ಅಲ್ಲದೆ ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡನ್ನು ಮಾಡಬೇಕು.

ಅ. ಪ್ರಯೋಜನಕಾರಿ ವಸ್ತುವೊಂದನ್ನು ಹೆಣೆಯಬೇಕು ಅಥವಾ ಕಸೂತಿ ಹಾಕಬೇಕು.

ಆ. ಕೈಚೀಲ ಅಥವಾ ಜೋಲಿಗೆ (ಝೂಲಾ, ಜೋಕಾಲಿ)ಯ ಮಾದರಿಯನ್ನು ಹೆಣೆಯಬೇಕು.

ಇ. ಕ್ಯಾನ್‌ವಾಸ್ ಮೇಲೆ ಅಡ್ಡ ಹೊಲಿಗೆಯಿಂದ ಒಂದು ವಿನ್ಯಾಸವನ್ನು ಬಿಡಿಸಬೇಕು.

ಈ. ಕ್ಯಾನ್‌ವಾಸ್ ಇಲ್ಲವೆ ಗೋಣಿ ತಾಟಿನಮೇಲೆ, ಕಂಬಳಿ ಅಥವಾ ಚಾಪೆ ಮಾಡಬೇಕು.

ಉ. ಜೆರ್ಸಿ ಅಥವಾ ಕಾಲುಚೀಲದ ಕಿಂಡಿಗೆ ದಾರದಿಂದ ಎಳೆ ತುಂಬಬೇಕು. ಅಥವಾ ಹರಿದಿರುವುದನ್ನು ತೇಪೆ ಹಾಕಬೇಕು.

ಊ. ತನ್ನ ಕಂಠವಸ್ತ್ರವನ್ನು ಒಗೆದು ಇಸ್ತ್ರಿ ಮಾಡಿಕೊಳ್ಳಬೇಕು.

ಋ. ಕಸಪೊರಕೆ ಮತ್ತು ಕಸದ ಬುಟ್ಟಿಯನ್ನು ಮಾಡಬೇಕು.

ೠ. ತಾಳೆ ಗರಿಯಿಂದ ಉಪಯೋಗೀ ವಸ್ತುವೊಂದನ್ನು ಹೆಣೆಯಬೇಕು.

ಎ. ಮಂಚದ ನವಾರುಪಟ್ಟಿ ಬಲೆಯನ್ನು ಹೆಣೆಯಬೇಕು.

ಏ. ಒಣಹುಲ್ಲಿನಿಂದ ಚಾಪೆ ತಯಾರಿಸಬೇಕು.

ಐ. ತಕಲಿ ಅಥವಾ ಚರಕದ ಸಹಾಯದಿಂದ 50 ಮೀ. ದಾರ ತೆಗೆಯಬೇಕು.

ಒ. ಗ್ರಾಮ್ಯ ರೀತಿಯಲ್ಲಿ ಗೋಡೆ ಅಥವಾ ನೆಲಕ್ಕೆ ಬಣ್ಣ ಬಳಿಯಬೇಕು.

ಓ. ಹುಲ್ಲುಗರಿ, ಬೆತ್ತ, ಜೊಂಡು ಅಥವಾ ಬಿದರಿನಿಂದ ಒಂದು ವಸ್ತುವನ್ನು ತಯಾರಿಸಬೇಕು.

3. ಆಟಿಕೆ ಮಾಡುವವ (Toy Maker)

ದೇವದಾರು ಮರದ ಶಂಖು (Fir Cone) ಚೂರುಪಾರು ಬಟ್ಟೆ, ಕಾಗದ, ಗೂಟ ಇಲ್ಲವೆ ಮೊಳೆ ಮುಂತಾದ ಅನುಪಯುಕ್ತ ವಸ್ತುಗಳಿಂದ ಉಪಯೋಗಕರ ವಸ್ತು ಅಥವಾ ಸಾಧಾರಣ ಗಾತ್ರದ ಎಂಜಿನ್, ಮೋಟಾರು ಕಾರು, ಗೊಂಬೆ ಇಲ್ಲವೆ ಪ್ರಾಣಿಯೊಂದನ್ನು ಮಾಡಬೇಕು.

ಯೋಗ್ಯ ಪ್ರಮಾಣ ಮತ್ತು ಬಣ್ಣಗಳಲ್ಲಿ ಹೊಲದ ಕಣ ಅಥವಾ ಕಾಡುಪ್ರಾಣಿ, ಪೀಠೋಪಕರಣಗಳ ಕುಟೀರ, ಪ್ರಾಣಿಗಳಿರುವ ಉದ್ಯಾನ ಮುಂತಾದ ಸಂಕೀರ್ಣ ಆಟಿಕೆಗಳನ್ನು ತಯಾರಿಸಬೇಕು.

ಸೂಚನೆ: **ದ್ವಿತೀಯ ಚರಣ್ ಪರೀಕ್ಷೆಗೆಂದು ತಯಾರಿಸಿದ ಯಾವ ವಸ್ತುವನ್ನೂ ಈ ಪದಕವನ್ನು ಸಂಪಾದಿಸಲು ಪರಿಗಣಿಸಲಾಗುವುದಿಲ್ಲ.**

4. ಪುಸ್ತಕ ಹೊಲಿಯುವವ (Book Binder)



ಪುಸ್ತಕ ಹೊಲೆಯುವಲ್ಲಿ ಈ ಕೆಳಕಂಡ ಅಂಶಗಳನ್ನು ಅಭ್ಯಾಸ ಮಾಡಿರಬೇಕು.

i. ಒಂದು ಸಾಧಾರಣ ಬರೆಯುವ ಪುಸ್ತಕವನ್ನು ಹೊಲಿದು ರಟ್ಟು ಹಾಕಬೇಕು.

ii. ಎರಡೂ ಕಡೆಯ ಕೊನೆಯ ಹಾಳೆಗಳನ್ನು ಹಿಡಿದು ಹಿಂಭಾಗದಲ್ಲಿ ಅಂಟನ್ನು ಸವರಬೇಕು, ಹಾಗೂ ಬಟ್ಟೆಯನ್ನು ಸುತ್ತಿ ಅಂಟಿಸಬೇಕು ಅದರ ಮೇಲೆ ಎರಡನೆ ಗಟ್ಟಿ ಪದರವನ್ನು ಅಂಟಿಸಬೇಕು.

iii. ಕಾರ್ಡ್ ಬೋರ್ಡ್‌ನ್ನು ಕತ್ತರಿಸಿ ಅದಕ್ಕೆ ಬಟ್ಟೆ ಅಥವಾ ಕಾಗದವನ್ನು ಅಂಟಿಸಬೇಕು.

iv. ಆವಶ್ಯಕತೆ ಇರುವ ಬಾಲಕನಿಗೆ ಒಂದು ಪಠ್ಯಪುಸ್ತಕಕ್ಕೆ ರಟ್ಟು ಹಾಕಿ ಕೊಡಬೇಕು.

v. ಪುಸ್ತಕಕ್ಕೆ ರಟ್ಟು ಹಾಕುವುದನ್ನು ಇನ್ನೊಬ್ಬ ಮರಿಗೆ ಅಥವಾ ಗೆಳೆಯನಿಗೆ ಕಲಿಸಬೇಕು.

ಗುಂಪು-IV ಸೇವೆ

1. ಬಾಣಸಿಗ (ಅಡಿಗೆಯವ- Cook)



i. ಬೆಂಕಿಯು ಬಗ್ಗೆ ಸಾಮಾನ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿದಿರಬೇಕು.

ii. ಬಯಲಿನಲ್ಲಿ ಸೌದೆ ಜೋಡಿಸಿ ಬೆಂಕಿ ಮಾಡಿ ಚಪಾತಿ ಅಥವಾ ಉಪ್ಪಿಟ್ಟು ಅಥವಾ ದಾಲಿಯಾ ಮಾಡಲು ಬರಬೇಕು.

iii. ಅನ್ನ-ಸಾರು ಅಥವಾ ಪಲ್ಯ ಅಥವಾ ಹುಗ್ಗಿ (ಪೊಂಗಲ್) ಮಾಡಲು ಅಥವಾ ಮೊಟ್ಟೆಯನ್ನು ಬೇಯಿಸಲು ತಿಳಿದಿರಬೇಕು.

2. ಪ್ರಥಮ ಚಿಕಿತ್ಸಕ (First Aider)



i. ತರಚುಗಾಯವನ್ನು ಶುದ್ಧಗೊಳಿಸಲು ಮತ್ತು ಚಿಕಿತ್ಸೆ ಮಾಡಲು ತಿಳಿದಿರಬೇಕು.

ii. ಹಸ್ತ, ಪಾದ, ಮತ್ತು ಮೊಣಕಾಲಿನ ಗಾಯಗಳಿಗೆ ಚಿಕಿತ್ಸೆ ಮಾಡಿ ಮುಮ್ಮೂಲೆ ಪಟ್ಟಿ ಕಟ್ಟಲು ಬರಬೇಕು

iii. ಮೂಗಿನ ರಕ್ತಸ್ರಾವ ನಿಲ್ಲಿಸಲು ತಿಳಿದಿರಬೇಕು.

iv. ಮೈಮೇಲಿನ ಬಟ್ಟೆಗೆ ಹತ್ತಿದ ಬೆಂಕಿ ಆರಿಸುವುದು ಹೇಗೆಂದು ತಿಳಿದಿರಬೇಕು. ಮತ್ತು ಸಣ್ಣ ಸುಟ್ಟ ಮತ್ತು ಬೆಂದ ಗಾಯಗಳಿಗೆ ಚಿಕಿತ್ಸೆ, ಉಸಿರುಕಟ್ಟಿದಾಗ, ಹುಳು ಕುಟುಕಿದಾಗ, ಹಾವು ಕಚ್ಚಿದಾಗ ಚಿಕಿತ್ಸೆ ಮಾಡುವುದು ಹೇಗೆಂದು ತಿಳಿದಿರಬೇಕು.

v. ಹಿರಿಯರ ಸಹಾಯ ಕೋರುವ ಅಗತ್ಯತೆಯು ಅವನಿಗೆ ತಿಳಿದಿದೆ ಎಂಬುದನ್ನು ಕಾಣಿಸಬೇಕು.

vi. ಗಾಬರಿ/ಆಘಾತ ಸಂದರ್ಭದಲ್ಲಿ ಸರಳ ಚಿಕಿತ್ಸೆ ತಿಳಿದಿರಬೇಕು.

vii. ಉಳುಕಿಗೆ ಚಿಕಿತ್ಸೆ ತಿಳಿದಿರಬೇಕು, ಮತ್ತು ಪಾದದ ಕೀಲು/ಹದಡು (ankle) ಉಳುಕಿದಾಗ ಪಟ್ಟಿ ಕಟ್ಟುವುದು ಹೇಗೆಂದು ತಿಳಿದಿರಬೇಕು.

3. ಮಾರ್ಗದರ್ಶಿ (Guide)

i. ಗ್ರಾಮಾಂತರದಲ್ಲಿ:

ಅತ್ಯಂತ ಸಮೀಪದ ಆರಕ್ಷಕ ಠಾಣೆ, ಔಷಧಾಲಯ, ಆಸ್ಪತ್ರೆ, ಗ್ರಾಮೀಣ ವೈದ್ಯ ಅಥವಾ ಹಕೀಂ, ಸಮೀಪದ ಬಸ್ ನಿಲ್ದಾಣ, ರೈಲು ನಿಲ್ದಾಣ, ಮ್ಯಾರುಕಟ್ಟೆ, ಧರ್ಮಶಾಲೆ ಅಥವಾ ಛತ್ರ, ಹತ್ತಿರದ ಅಂಚೆ ಮತ್ತು ತಂತಿ ಕಛೇರಿ, ವಿಶ್ರಾಂತಿ ಗೃಹ ಮತ್ತು ಪಶುವೈದ್ಯಶಾಲೆ ಇವುಗಳ ತಿಳುವಳಿಕೆ ಹೊಂದಿರಬೇಕು.

ಅಥವಾ

ii. **ನಗರಗಳಲ್ಲಿ:**

ಅ. ಅತ್ಯಂತ ಸಮೀಪದ ಆರಕ್ಷಕಠಾಣೆ, ಡಾಕ್ಟರ್ ಮನೆ, ಔಷಧಿ ಅಂಗಡಿ, ಸಾರ್ವಜನಿಕ ದೂರವಾಣಿ ಕೇಂದ್ರ, ಅಗ್ನಿಶಾಮಕದಳ, ಬಸ್‌ನಿಲ್ದಾಣ, ರೈಲು ನಿಲ್ದಾಣ, ಪೆಟ್ರೋಲ್ ಬಂಕ್, ವಾಹನ ದುರಸ್ತಿ ಸ್ಥಳ, ಉಪಹಾರಗೃಹ, ಅಂಚೆ ಮತ್ತು ತಂತಿ ಕಚೇರಿಗೆ ಹೋಗುವ ಮಾರ್ಗ ತಿಳಿದಿರಬೇಕು.

ಆ. ಅಗ್ನಿಶಾಮಕದಳ, ಪೋಲೀಸ್ ಮತ್ತು ಆಂಬುಲೆನ್ಸ್ ವಾಹನಗಳಿಗೆ ಕರೆ ನೀಡುವುದನ್ನು ತಿಳಿದಿರಬೇಕು.

ಇ. ಅಪರಿಚಿತರಿಗೆ ಸ್ಪಷ್ಟ ಮತ್ತು ಖಚಿತವಾದ ಮಾರ್ಗಸೂಚಿಯನ್ನು ವಿನಯವಾಗಿ ಮತ್ತು ಪ್ರಾಮಾಣಿಕವಾಗಿ ತಿಳಿಸುವುದನ್ನು ಅರಿತಿರಬೇಕು.

4. ಮನೆ ತೈನಾತಿ (House Orderly)

i. ಆಲೂಗಡ್ಡೆಯನ್ನು ಸುಲಿದು ಬೇಯಿಸಲು ಅಥವಾ ಹುರಿಯಲು ಬರಬೇಕು.



ii. ಹಾಸಿಗೆ ಹಾಸುವುದು, ತಟ್ಟೆ ಮತ್ತು ಊಟದ ಪಾತ್ರೆ ಇತ್ಯಾದಿಗಳನ್ನು ತೊಳೆಯಲು ಬರಬೇಕು.

iii. ಕಿಟಕಿಗಳನ್ನು ಮತ್ತು ಅಲಂಕಾರಿಕ ಹಿತ್ತಾಳೆ ವಸ್ತುಗಳನ್ನು ಶುಭ್ರ ಮಾಡಬೇಕು.

iv. ಕೊಠಡಿಯನ್ನು ಗುಡಿಸಿ ಚೊಕ್ಕಟ ಮಾಡಬೇಕು. ಅಥವಾ ಮೇಜನ್ನು ಒರೆಸಲು ಬರಬೇಕು.

v. ಟೀ ಅಥವಾ ಕಾಫಿ ಅಥವಾ ಯಾವುದೇ ಬಿಸಿ ಪಾನೀಯ ಮಾಡಲು ತಿಳಿದಿರಬೇಕು.

ಗುಂಪು-V

1. ವಿಶ್ವಸಂರಕ್ಷಣೆ (World Conservation)

1. **ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರನ್ನು ಮಾಡಬೇಕು**

ಅ. ಮೃಗಾಲಯ, ಸಸ್ಯೋದ್ಯಾನ, ನೈಸರ್ಗಿಕ, ಚಾರಿತ್ರಿಕ ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡುವುದು. ಅಥವಾ ವನ್ಯಜೀವಿಗಳ ಬಗೆಗಿನ ಚಲನಚಿತ್ರ ನೋಡುವುದು ಮತ್ತು ಆ ಬಗ್ಗೆ ತಾನು ಗಮನಿಸಿರುವುದನ್ನು ಪರೀಕ್ಷಕರಿಗೆ ತಿಳಿಸಬೇಕು.



ಆ. ಕನಿಷ್ಠ ಮೂರು ತಿಂಗಳವರೆಗೆ ತನ್ನದೇ ಆದ ಒಂದು ಸಾಕುಪ್ರಾಣಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು.

ಇ. ಕಾಗದ-ಕಸ ಕಡ್ಡಿಗಳ ನಿರ್ಮಲೀಕರಣ ಕಾರ್ಯದಲ್ಲಿ ಸಾರ್ವಜನಿಕ ಉದ್ಯಾನ, ತೋಟ, ಶಾಲಾ ಆವರಣ ಅಥವಾ ಬೇರೆ ಸಾರ್ವಜನಿಕ ಸ್ಥಳದಲ್ಲಿ ಪ್ರತಿಸಲ ಕನಿಷ್ಠ ಒಂದು ಗಂಟೆಯಂತೆ ಮೂರು ಗಂಟೆ ಕಾಲ ಕೆಲಸ ಮಾಡಬೇಕು.

ಈ. ತನ್ನ ಹಿಂಡಿನೊಂದಿಗೆ ಪ್ರಕೃತಿ ಅಧ್ಯಯನಕ್ಕಾಗಿ ಹೋಗಿದ್ದು, ತನ್ನ ಸಂಗ್ರಹ ಗಳನ್ನು ದಾಖಲೆ ಪುಸ್ತಕದಲ್ಲಿ ಗುರುತಿಸಬೇಕು.

ಉ. ಪಕ್ಷಿಗಳ ಸ್ನಾನ ಮತ್ತು ಆಹಾರಕ್ಕಾಗಿ ಬೋಗುಣಿ ವ್ಯವಸ್ಥೆ (Bird Bath) ಮಾಡಿ ಅದನ್ನು ನೋಡಿಕೊಳ್ಳಬೇಕು.

ಊ. ಪಕ್ಷಿಗಳ ಗೂಡನ್ನು ರಚಿಸಿ ಸ್ಥಾಪಿಸಬೇಕು.

ಋ. ಬೆಳೆಗಳಿಲ್ಲದ ಜಾಗದಲ್ಲಿ ಸಸ್ಯಗಳನ್ನಾಗಲೀ, ಹುಲ್ಲನ್ನಾಗಲೀ, ಬೆಳೆಸಿ, ಕನಿಷ್ಠ ಮೂರು ತಿಂಗಳ ಕಾಲ ರಕ್ಷಿಸಬೇಕು.

ೠ. ತೋಟ ಅಥವಾ ಹಿತ್ತಲಿನಲ್ಲಿ ಕಾಂಪೋಸ್ಟ್ ಗೊಬ್ಬರಗುಂಡಿ ಆರಂಭಿಸಬೇಕು.

ಎ. ಭೂ ಸವೆತದ ಅಪಾಯ ತೋರಿಸಿಕೊಟ್ಟು ಅದನ್ನು ತಡೆಗಟ್ಟುವ ಪ್ರಾಥಮಿಕ ಕ್ರಮಗಳನ್ನು ವಿವರಿಸಬೇಕು.

2. ಗಿಡನೆಡುವುದು, ಚಿಕ್ಕ ಹುಲ್ಲು ಹಾಸು ಮಾಡುವುದು ಅಥವಾ ಇತರೆ ಗಿಡಗಳನ್ನು ಬಾಗಿಲ ಹೊರಗಿನ ಕುಂಡಗಳಲ್ಲಿ, ಮಹಡಿಯಲ್ಲಿ ಅಥವಾ ಮನೆಯೊಳಗಿನ ಹೂ ಕುಂಡಗಳಲ್ಲಿ ನೆಡುವುದು. ಆ ಮೂಲಕ ತನ್ನ ಪರಿಸರವನ್ನು ಉತ್ತಮಗೊಳಿಸಿಕೊಳ್ಳುವುದು.

3. ಈ ಕೆಳಗಿನ ಯೋಜನೆಗಳಲ್ಲಿ ಒಂದನ್ನು ಜಾರಿಗೊಳಿಸಬೇಕು.

   i. ಒಂದು ಚಿಕ್ಕ ಟಿಪ್ಪಣಿ ಪುಸ್ತಕವಿರಿಸಿಕೊಂಡು ಮೃಗಾಲಯದಲ್ಲಿರುವ ಯಾವುದಾದರೂ ಐದು ಪ್ರಾಣಿಗಳ ಬಗೆಗೆ ಅವುಗಳ ಮೂಲ ದೇಶ, ಆಹಾರ, ಅಭ್ಯಾಸಗಳು, ಮೃಗಾಲಯದಲ್ಲಿ ಅವುಗಳ ಬಗೆಗೆ ನೀಡಬೇಕಾದ ವಿಶೇಷ ಗಮನ ಮುಂತಾದುವನ್ನು ಬರೆದುಕೊಂಡು, ಪರೀಕ್ಷಕರಿಗೆ ವಿವರವಾಗಿ ತಿಳಿಸಬೇಕು.

   ii. ತನ್ನ ಹಿಂಡು ಹಿಂಬಾಲಿಸಲು, ಸ್ನೇಹಿತನೊಡಗೂಡಿ ಒಂದು ಪ್ರಾಕೃತಿಕ ಜಾಡನ್ನು (Nature Trail) ವ್ಯವಸ್ಥೆ ಮಾಡಬೇಕು.

   iii. ಒಂದು ಕಾಡು ಪ್ರಾಣಿ, ಮರ, ಮೀನು ಅಥವಾ ಪಕ್ಷಿ, ಇವುಗಳ ಲ್ಲೊಂದನ್ನು ಆರಿಸಿಕೊಂಡು ಅದರ ಬಗ್ಗೆ ಆದಷ್ಟೂ ವಿಷಯಗಳನ್ನು ಶೋಧಿಸಿ ತಿಳಿದುಕೊಂಡು ಪರೀಕ್ಷಕರಿಗೆ ವರದಿ ಒಪ್ಪಿಸಬೇಕು.

ಸೂಚನೆ:

1. **ರಾಜ್ಯ ಮುಖ್ಯ ಆಯುಕ್ತರ ಸಹಿಯ ಪ್ರಶಸ್ತಿ ಪತ್ರದೊಂದಿಗೆ ಈ ಪದಕವನ್ನು ನೀಡಲಾಗುವುದು.**

2. **ಈ ಪದಕವನ್ನು ಶರ್ಟ್‌ನ ಬಲ ಜೇಬಿನ ಹೊಲಿಗೆಯ ಮೇಲ್ಭಾಗದಲ್ಲಿ ಧರಿಸಬೇಕು ಅಥವಾ ಅದೇ ಸ್ಥಳದಲ್ಲಿ ಜೆರ್ಸಿ ಮೇಲೆ ಧರಿಸಬೇಕು.**

2. ಪರಂಪರೆ (Heritage)

ಮರಿಗಳು ತಮ್ಮ ಸ್ಥಳೀಯ ಸಂಸ್ಕೃತಿಯ ಮೂಲ ವಿಚಾರಗಳನ್ನು ಅರ್ಥ ಮಾಡಿಕೊಳ್ಳಬೇಕು.

ತಮ್ಮ ವಿಶಿಷ್ಟ ಟಿಪ್ಪಣಿ ಪುಸ್ತಕದಲ್ಲಿ ಅವರು ಅಧ್ಯಯನ ಮಾಡಿದ್ದನ್ನು ಸಚಿತ್ರ ಸಂಗ್ರಹ ಮಾಡಬೇಕು.

i. ತನ್ನ ಸುತ್ತಲಿನ ಭೌತಿಕ ಪರಿಸರ; ಪ್ರಸಿದ್ಧ ಬೆಟ್ಟಗಳು, ನದಿಗಳು ಇತ್ಯಾದಿ, ಸಾಮಾನ್ಯ ಮರಗಳು ಮತ್ತು ಅವುಗಳ ಉಪಯೋಗ. ಸಾಮಾನ್ಯ ಹಕ್ಕಿಪಕ್ಷಿಗಳು ಸ್ಥಳೀಯ, ಸಸ್ಯವರ್ಗ, ಪ್ರಾಣಿವರ್ಗ ತಿಳಿದಿರಬೇಕು.

ii ಸಾಂಸ್ಕೃತಿಕ ಪರಂಪರೆಯ ವೈಶಿಷ್ಟ್ಯ ಮತ್ತು ಆಚಾರ ಪದ್ಧತಿಗಳು ಹಾಗೂ ತನ್ನ ವಂಶ, ಕುಟುಂಬ ಇವುಗಳ ಸಂಪ್ರದಾಯಗಳ ಬಗ್ಗೆ ತಿಳಿದಿರಬೇಕು.

1. ತನ್ನ ಟಿಪ್ಪಣಿ ಪುಸ್ತಕದಲ್ಲಿ, ತನ್ನ 'ವಂಶವೃಕ್ಷ' -ಪೂರ್ವಜರ ಬಗ್ಗೆ ತಯಾರಿಸಬೇಕು.
2. ಸ್ಥಳೀಯ ಹಬ್ಬಗಳಲ್ಲಿ ಭಾಗವಹಿಸಿ, ಛಾಯಾಚಿತ್ರಗಳಲ್ಲಿ ಅಥವಾ ವರ್ಣನೆಯ ಮೂಲಕ ದಾಖಲಿಸಬೇಕು.
3. ಸಾಂಪ್ರದಾಯಿಕ ಹಾಡು ಮತ್ತು ನೃತ್ಯಗಳು ಹೇಳಲು ತಿಳಿದಿರಬೇಕು.
4. ಸಾಂಪ್ರದಾಯಿಕ ಅಡುಗೆಗಳು ತಿಳಿದಿರಬೇಕು.
5. ಸಾಂಪ್ರದಾಯಿಕ ಉಡುಗೆ ತೊಡುಗೆಗಳು ಹೇಳಲು ತಿಳಿದಿರಬೇಕು.

iii. ತನ್ನ ಸ್ಥಳೀಯ (ಗ್ರಾಮ/ಮೊಹಲ್ಲಾದ) ವಾದ ಹಿಂದಿನ ಮತ್ತು ಇಂದಿನ ಕಲೆ, ಕಟ್ಟಡಗಳು, ಪೂಜಾ ಸ್ಥಳಗಳು, ಸಂಗೀತ, ಸಂಗೀತ ವಾದ್ಯಗಳು, ನೃತ್ಯಗಳು, ಸೂತ್ರದ ಗೊಂಬೆಗಳು, ಆಹಾರ, ವೇಷ-ಭೂಷಣ ಇವುಗಳ ಬಗ್ಗೆ ತಿಳಿದಿರಬೇಕು.

iv. ಪ್ರಾಯೋಗಿಕ ಕೆಲಸ

ಸ್ಥಳೀಯ ಸ್ಮಾರಕಗಳಿಗೆ ಮತ್ತು ವಸ್ತುಸಂಗ್ರಹಾಲಯಗಳಿಗೆ ಭೇಟಿ ನೀಡುವುದು.

ಸ್ಥಳೀಯವಾದ ಪಾರಂಪರಿಕ ಕಲೆಯನ್ನು ಕಲಿಯುವುದು. ಉದಾ: ಕುಂಬಾರಿಕೆ, ರಂಗೋಲಿ ಇತ್ಯಾದಿ.

ಸ್ಥಳೀಯ ಕಥೆ ಮತ್ತು ದಂತಕಥೆಗಳನ್ನು ಅಭಿನಯಿಸುವುದು.

ಇವುಗಳಲ್ಲದೆ ನೃತ್ಯಪಟು, ಕಂಪ್ಯೂಟರ್ ಅರಿತು ಪದಕಗಳ ಬಗ್ಗೆ ವಿವರಬೇಕು.

3. ಕಂಪ್ಯೂಟರ್ (Computer)

ಕಂಪ್ಯೂಟರ್ ಅರಿವು, ಪರೀಕ್ಷಾಂಶ ವಿವರ ಗಳು ರಾಷ್ಟ್ರ ಕಾರ್ಯಾಲಯದಿಂದ ಬರಬೇಕು.

◆

ಅಧ್ಯಾಯ-20

ಹಿಂದಿನ ಚಟುವಟಿಕೆಗಳು

ಹಿಂಡು ಸಾಮಾನ್ಯವಾಗಿ, ಅಕೇಲರು ಮತ್ತು ಅವರ ಸಹಾಯಕರಿಗೆ ದೊರಕುವ ಕಾಲಾವಕಾಶವನ್ನನುಸರಿಸಿ, ಕನಿಷ್ಠ ವಾರಕ್ಕೆರಡು ಬಾರಿ ಸಭೆ ಸೇರುತ್ತದೆ. ಪ್ರತಿ ಸಭೆಯಲ್ಲಿಯೂ 1–1 1/2 ಗಂಟೆಗಳ ಕಾಲ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

ಪ್ರತಿದಿನದ ಕಾರ್ಯಕ್ರಮವನ್ನೂ ಎಚ್ಚರಿಕೆ ವಹಿಸಿ ತಯಾರಿಸಿಕೊಳ್ಳಬೇಕು. ಮರಿಗಳೊಡನೆ ಕಳೆಯುವ ಈ ಕಾಲವನ್ನು ಸದ್ವಿನಿಯೋಗಪಡಿಸಿಕೊಳ್ಳಬೇಕು. ಪ್ರತಿ ಕಾರ್ಯಕ್ರಮವೂ ಪ್ರತ್ಯೇಕತೆಯಿಂದ ಕೂಡಿದ್ದು, ಅಸಾಮಾನ್ಯವಾಗಿಯೂ, ರೋಮಾಂಚಕಾರಿಯಾಗಿಯೂ ಇರುವಂತೆ ಪೂರ್ವಭಾವಿಯಾಗಿ ಯೋಜಿಸಬೇಕು. ಮರಿಗಳನ್ನು ಸಭೆ ನಡೆದಷ್ಟೂ ಕಾಲ, ಚಟುವಟಿಕೆಯಿಂದಿರುವಂತೆ ನೋಡಿಕೊಳ್ಳಬೇಕು. ಕಾರ್ಯಕ್ರಮಗಳು ಮರಿಗಳಿಗೆ ಹಿಡಿಸಬೇಕು. ಸುಖ ಸಂತೋಷ ಪ್ರಧಾನವಾದ ಕಾರ್ಯಕ್ರಮಗಳು, ಸುಲಭವಾಗಿಯೂ, ಸುಗಮವಾಗಿಯೂ, ಏಕಪ್ರಕಾರವಾಗಿಯೂ ನಡೆದುಕೊಂಡು ಹೋಗಬೇಕು.

ಮರಿಗಳ ಘನವಂದನೆ, ಪ್ರಾರ್ಥನೆ ಮತ್ತು ಧ್ವಜ ಸಮಾರಂಭಗಳೊಡನೆ ದಿನದ ಕಾರ್ಯಕ್ರಮವು ಪ್ರಾರಂಭವಾಗುತ್ತದೆ. ಅಕೇಲರು/ಸಹಾಯಕ ಕಬ್‌ಮಾಸ್ಟರು ಅಥವಾ ಇಬ್ಬರೂ ಸೇರಿ ವಿಧಿವತ್ತಾಗಿ ತನಿಖೆ ನಡೆಸುತ್ತಾರೆ. ಎಲ್ಲರೂ ಒಟ್ಟಿಗೆ ತನಿಖೆ ನಡೆಸುವುದಾದರೆ, ವಿಷಯಗಳನ್ನು ಹಂಚಿಕೊಳ್ಳಬಹುದು. ಇದಾದ ಕೂಡಲೇ ಇತರ ದೈನಂದಿನ ಕಾರ್ಯಕ್ರಮಗಳನ್ನು ಪ್ರಾರಂಭಿಸಬಹುದು.

ಪ್ರತಿ ಮರಿಯ ಪ್ರಗತಿ ಮತ್ತು ಸಾಮರ್ಥ್ಯ ವೃದ್ಧಿಯೇ ಕಾರ್ಯಕ್ರಮಗಳ ಮುಖ್ಯ ಗುರಿಯೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಎಲ್ಲಾ ಪರೀಕ್ಷಾಂಶಗಳಲ್ಲಿಯೂ ಮರಿಗಳಿಗೆ ಸರಿಯಾದ ರೀತಿಯಲ್ಲಿ ಶಿಕ್ಷಣ ಕೊಟ್ಟು, ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯವನ್ನು ಉಳಿಸಿಕೊಳ್ಳುವಂತೆ ನೋಡಿಕೊಳ್ಳಬೇಕು. ಆಟಗಳಂತೆ ತೋರುವ ಚಟುವಟಿಕೆಗಳಿಗೆ ಪ್ರಾಧಾನ್ಯತೆ ಕೊಡಬೇಕು. ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಚರಣ್ ಪದಕಗಳ ಪರೀಕ್ಷಾಂಶಗಳು ಹೊರಾಂಗಣದ

ಆಟಗಳಿಗೆ ಸ್ವಾರಸ್ಯಕರ ವಸ್ತುಗಳಾಗಿವೆ. ಆಟಗಳನ್ನು ವ್ಯವಸ್ಥಿತ ರೀತಿಯಲ್ಲಿ ಆಡುವುದರಿಂದ, ಮರಿಗಳು ಸುಖಾನುಭವಗಳನ್ನು ಪಡೆಯುವುದಲ್ಲದೆ, ಪ್ರಥಮ ಚರಣ್, ದ್ವಿತೀಯ ಚರಣ್, ತೃತೀಯ ಚರಣ್ ಮತ್ತು ಚತುರ್ಥ ಚರಣ್ ಪರೀಕ್ಷಾಂಶಗಳಲ್ಲಿ ಪರಿಣಿತರಾಗುತ್ತಾರೆ.

ಆಟಗಳೂ, ಸ್ಪರ್ಧೆಗಳೂ, ಅವರಿಗೆ ಕೊಡುವ ಶಿಕ್ಷಣ ಮತ್ತು ಅವರು ಮಾಡುವ ಕೆಲಸಗಳನ್ನವಲಂಬಿಸಿರುತ್ತದೆ. ಆದ್ದರಿಂದ ಅವರಿಗೆ ಸಾಕಷ್ಟು ಅಭ್ಯಾಸವು ದೊರಕುವಂತೆ ಕಾರ್ಯಕ್ರಮಗಳನ್ನು ರೂಪಿಸಬೇಕು. ಮರಿಗಳಿಗೆ ಸರಿಯಾಗಿ ಅರ್ಥವಾಗುವಂತಿರಬೇಕು.

ಮರಿಗಳು ಪೂರಾ ವೇಳೆ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಿರಬೇಕು. ಚಟುವಟಿಕೆಯಿಂದ ಕೂಡಿರಬೇಕು. ಮಧ್ಯೆ ಮಧ್ಯೆ ವಿಶ್ರಾಂತಿಗೆ ಅವಕಾಶವಿರಬೇಕು. ಮರಿಗಳು ಏನಾದರೊಂದು ಕೆಲಸ ಮಾಡಲು ಬಯಸುತ್ತಾರೆ. ಆದ್ದರಿಂದ ಮಾತು, ವಿವರಣೆಗಳನ್ನು ಕಡಿಮೆ ಮಾಡಿ, ಅವರು ಅಬ್ಯಾಸ ಮಾಡಿ ಕಲಿತುಕೊಳ್ಳಲು ಪ್ರೋತ್ಸಾಹಿಸಬೇಕು.

ವಿವರಣೆ ನೀಡಲೇಬೇಕಾಗಿ ಬಂದಲ್ಲಿ "5 ನಿಮಿಷ ಮಾತು, 10 ನಿಮಿಷ ಕಾಲ ಪ್ರದರ್ಶನ, 85 ನಿಮಿಷಗಳು ಅಭ್ಯಾಸ ಮಾಡುವುದಕ್ಕೆ ಮೀಸಲಾಗಿರಬೇಕು". ಈ ಸೂತ್ರವನ್ನು ಕಾರ್ಯತಃ ವ್ಯವಸ್ಥೆ ಮಾಡಬೇಕು. ಆ 5 ನಿಮಿಷಗಳ ಮಾತನ್ನೂ ಪ್ರದರ್ಶನಕ್ಕಾಗಿಯೇ ವಿನಿಯೋಗಿಸಿದಲ್ಲಿ, ಅದು ಇನ್ನೂ ಹೆಚ್ಚು ಪ್ರಯೋಜನಕಾರಿ ಆದೀತು.

ಹಿಂದಿನ ಕಾರ್ಯಕ್ರಮಗಳಲ್ಲಿ, ಆಟಗಳು ಸಹಜವಾಗಿ ಮುಖ್ಯ ಅಂಶಗಳಾಗಿರುತ್ತವೆ. ಆದರೆ ಒಂದೊಂದರಲ್ಲಿಯೂ ಶಿಕ್ಷಣದ ಮೌಲ್ಯಗಳು ಅಡಕವಾಗಿವೆ. ಒಂದೇ ಆಟವನ್ನು ಬಹಳಷ್ಟು ಕಾಲ ಆಡಿಸಬಾರದು. ಅನೇಕ ಆಟಗಳಿಗೆ ಸಾಧಾರಣವಾಗಿ 5 ನಿಮಿಷಗಳು ಸಾಕಾಗುತ್ತದೆ. ಪರೀಕ್ಷಾಂಶಗಳಿಗೆ ಶಿಕ್ಷಣ ಕೊಡಲೂ, ಮೌಲ್ಯಮಾಪನ ಮಾಡಲೂ, ಆಟಗಳನ್ನು ಉಪಯೋಗಿಸಿಕೊಳ್ಳಬೇಕು. ಆಟಗಳನ್ನಾಡುವ ರೀತಿಯು ಮರಿಗಳ ಸಚ್ಚಾರಿತ್ರ್ಯವನ್ನು ತಿದ್ದುವ ಕಾರ್ಯದಲ್ಲಿ, ಪೂರಕವಾಗಿರಬೇಕು. ಆಟಗಳನ್ನು ಸರಿಯಾದ ರೀತಿಯಲ್ಲಿ ಪ್ರಾರಂಭಿಸಬೇಕು ಮತ್ತು ಸುವ್ಯವಸ್ಥಿತ ರೀತಿಯಲ್ಲಿ ಮುಗಿಸಬೇಕು. ನಿಯಮಗಳ ಪಾಲನೆ ಮತ್ತು ಶಿಸ್ತು ಇವುಗಳನ್ನು ಕಲಿಯುವುದು, ಆಟಗಳನ್ನಾಡುವುದರ ಮುಖ್ಯ ಉದ್ದೇಶವಾಗಿದೆ. ಮೆಚ್ಚಿಕೆಯ ಆಟಗಳೆಂದು ಹೇಳಿ, ಅವುಗಳನ್ನು ಪದೇ ಪದೇ ಆಡಬಾರದು ಮತ್ತು ಹೆಚ್ಚು ಹೊತ್ತು ಆಡುತ್ತಿರಬಾರದು. ಬೇಸರಿಕೆ ಬರುವುದಕ್ಕೆ ಮುಂಚೆ ಆಟವನ್ನು ನಿಲ್ಲಿಸಬೇಕು. ಆಟವನ್ನು ಕಾರಣಾಂತರ

ಗಳಿಂದ ಆಡಲಾಗದಿದ್ದರೆ, ಇಲ್ಲವೆ ಅದು ಮರಿಗಳಿಗೆ ಅಷ್ಟಾಗಿ ರುಚಿಸದಿದ್ದರೆ, ಕೂಡಲೇ ಬದಲೀ ಆಟಗಳನ್ನಾಡಿಸಲು, ಅಕೇಲರು ತಯಾರಾಗಿರಬೇಕು. ಅಂತರ ಷಟ್ಕ ಆಟಗಳಿಗೆ ಅಂಕಗಳಿರಬೇಕು. ಆಟವು ಮುಂದುವರೆ ದಂತೆ, ಎಷ್ಟೇ ಕಡಿಮೆಯಾದರೂ ಸರಿಯೇ, ಎಲ್ಲಾ ಷಟ್ಕಗಳಿಗೂ, ಅಂಕಗಳನ್ನು ಕೊಡಬೇಕು.

ಹಿಂಡಿನ ಸಭೆಗಳಲ್ಲಿ ಆಡಿಸುವ ಆಟಗಳಲ್ಲಿ ವೈವಿಧ್ಯತೆಯಿರಬೇಕು. ಒಂದೆರಡು ಆಟಗಳು ಮಾತ್ರ ಪರೀಕ್ಷಾಂಶಗಳಿಗೆ ಸಂಬಂಧಿಸಿದ್ದು, ಹೆಚ್ಚು ಆಟಗಳು ವಿನೋದ ಮಯವಾಗಿರಬೇಕು. ಕೆಲವು ಚಟುವಟಿಕೆಯಿದ್ದರೆ, ಕೆಲವು ವಿಶ್ರಾಂತಿದಾಯಕವಾಗಿರ ಬೇಕು. ಕೆಲವು ಕೂಗಾಟಗಳಿಂದ ಕೂಡಿದ್ದರೆ, ಕೆಲವು ಉಲ್ಲಾಸಭರಿತವಾಗಿರಬೇಕು. ಆಟಗಾರರನ್ನು ಯಾವುದೇ ಕಾರಣದಿಂದಲೂ, ಆಟದಿಂದ ಹೊರ ಹಾಕದಂತೆ ನೋಡಿಕೊಳ್ಳಬೇಕು. ಅವರನ್ನು ಹಾಗೇನಾದರೂ ಆಟದಿಂದ ತೆಗೆದರೆ, ಮತ್ತೆ ಮತ್ತೆ ಸಜೀವಗೊಳಿಸುವ ವ್ಯವಸ್ಥೆಯಿರಬೇಕು. ಪಲ್ಟಿ ಹೊಡೆಯುವುದು, ತಲೆ ಕೆಳಗೆ ಮಾಡಿ ನಿಲ್ಲುವುದು ಇತ್ಯಾದಿ ಮಾಡಿ, ಮತ್ತೆ ಆಟಕ್ಕೆ ಸೇರಿಸಿಕೊಳ್ಳುವಂತಿರಬೇಕು.

ಆಟಗಳನ್ನಾಡಿಸಲು ಕಲ್ಪನಾ ಶಕ್ತಿಯಿರಬೇಕು. ಒಂದು ರಿಲೇ ಆಟವನ್ನು ತೆಗೆದುಕೊಂಡು, ಅದನ್ನು ಅನೇಕ ರೀತಿಗಳಲ್ಲಿ ಆಡಿಸಬಹುದು. ಈ ರೀತಿ ಬದಲಾವಣೆಗಳನ್ನು ಮಾಡಿ ಆಡಿಸುವುದರಿಂದ, ಮರಿಗಳಿಗೆ, ಒಂದೇ ಆಟವನ್ನು ಆಡಿದಂತೆ ಬೇಸರಿಕೆ ಬರುವುದಿಲ್ಲ. ಬದಲಾವಣೆ ಮಾಡುವುದರಿಂದ ವೈವಿಧ್ಯತೆಯೂ ಬಂದಂತಾಯಿತು.

ಆಟಗಳೇ ಅಲ್ಲದೆ, ಪ್ರಗತಿ ಪರವಾದ ಶಿಕ್ಷಣವೂ ಕಾರ್ಯಕ್ರಮದಲ್ಲಿ ಸೇರಿರಬೇಕು. ಇವುಗಳು ಚರಣ ಪರೀಕ್ಷೆಗಳಿಗೆ ಸಂಬಂಧಿಸಿದ್ದಾದರೆ ಒಳ್ಳೆಯದು. ಬೋಧನೆಯು, ಕೆಲವೇ ನಿಮಿಷಗಳಿಗಿಂತ ಹೆಚ್ಚಾಗಿರಬಾರದು. ಹೇಳಿಕೊಟ್ಟಷ್ಟನ್ನು ಕೂಡಲೇ, ಅಂತರ ಷಟ್ಕ ಸ್ಪರ್ಧೆಗಳ ಮೂಲಕ, ಅಭ್ಯಾಸ ಮಾಡಿಕೊಳ್ಳುವುದು ಒಳ್ಳೆಯದು.

ಪ್ರತಿ ಹಿಂಡಿನ ಸಭೆಯಲ್ಲಿಯೂ ಕೆಲವು ಹೊಸ ರೀತಿಯ, ಅನಿರೀಕ್ಷಿತವಾದ, ವಿಸ್ಮಯಕಾರಕ ಕಾರ್ಯಕ್ರಮಗಳಿರಬೇಕು. ಉದಾ: ಸಹಾಯಕ ಕಬ್‌ಮಾಸ್ಟರು ಅಥವಾ ಅಕೇಲರು ಹೇಳಿಕೊಡುವ ಹೊಸ ಹಾಡಾಗಿರಬಹುದು; ಕುಣಿದಾಟವಿರಬಹುದು; ಕೂಗಾಟವಿರಬಹುದು ಇತ್ಯಾದಿ. ಸೇವಾ ನಕ್ಷತ್ರಗಳ ಕೊಡುಗೆ, ಹುಟ್ಟುಹಬ್ಬದ ಆಚರಣೆ, ಇತ್ಯಾದಿ ಕಾರ್ಯಕ್ರಮಗಳನ್ನೂ ಸಹ ಹಿಂಡಿನ ಸಭೆಗಳಲ್ಲಿ ನಡೆಸಬಹುದು.

ಅಕೇಲರಿಂದ ಕಥೆ ಅಥವಾ ಉದಂತವು, ಹಿಂಡಿನ ಸಭೆಯ ಮುಖ್ಯ ಕಾರ್ಯಕ್ರಮಗಳಲ್ಲೊಂದು. ಆಗೊಮ್ಮೆ ಈಗೊಮ್ಮೆ ಸಹಾಯಕ ಕಬ್‌ಮಾಸ್ಟರು ಕಥೆ ಅಥವಾ ಉದಂತವನ್ನು ಹೇಳಬಹುದು. ವಿಶೇಷ ಅತಿಥಿಗಳು ಹಿಂಡಿಗೆ ಭೇಟಿ ಕೊಟ್ಟಾಗ, ಅವರಿಗೆ ಉದಂತವನ್ನು ಹೇಳಲು ಕೇಳಿಕೊಳ್ಳಬಹುದು. ಆದರೆ, ಹಾಗೆ ಕೇಳಿಕೊಳ್ಳುವುದಕ್ಕೆ ಮುಂಚೆ ಅವರಿಗೆ ಉದಂತ (ಯಾರ್ನ್)ವೆಂದರೇನೆಂದು ತಿಳಿಸಬೇಕು. ಏನೇ ಆದರೂ ಸಾಮಾನ್ಯವಾಗಿ ಕಥೆ, ಉದಂತಗಳು, ಅಕೇಲರಿಗೆ ಸಂಬಂಧಿಸಿದ ವಿಷಯಗಳು.

ನಾಟಕಾಭಿನಯವು ಹಿಂಡಿನ ಕಾರ್ಯಕ್ರಮದ ಒಂದು ಮುಖ್ಯ ಅಂಗವಾಗಿದೆ. ಪ್ರತಿ ಸಭೆಯಲ್ಲಿಯೂ ಇದು ಇರಬೇಕಾಗಿಲ್ಲ. ಅವಶ್ಯಕತೆಯೂ ಇರುವುದಿಲ್ಲ. 15–20 ದಿನಗಳಿಗೊಮ್ಮೆ ಇಟ್ಟುಕೊಂಡಾಗ ಉನ್ನತ ಮಟ್ಟದಲ್ಲಿ ಇಟ್ಟುಕೊಳ್ಳಬೇಕು. ಕಾರ್ಯಕ್ರಮವನ್ನು ಕೂಲಂಕಷವಾಗಿ ಚರ್ಚಿಸಿ, ರೂಪಿಸಿಕೊಳ್ಳಬೇಕು.

ಒಟ್ಟಿನಲ್ಲಿ ಹಿಂಡಿನ ಸಭೆಯ ದಿನದ ಕಾರ್ಯಕ್ರಮವು ಈ ರೀತಿಯಲ್ಲಿ ಇರಬಹುದು.

1. ಪ್ರಾರಂಭ: ಮರಿಗಳ ಘನ ವಂದನೆಯೊಂದಿಗೆ.

   ಅಕೇಲರು "ಪ್ಯಾಕ್ ಪ್ಯಾಕ್ ಪ್ಯಾಕ್" ಕರೆಯುವುದು. ಹಿಂಡು ಮೊದಲು ಬಂಡೆ ವೃತ್ತಕ್ಕೂ, ನಂತರ ಪ್ರದರ್ಶನ ವೃತ್ತಕ್ಕೂ ಬರುವುದು. ಘನ ವಂದನೆಯ ಬಳಿಕ ಪ್ರಾರ್ಥನೆ ಮತ್ತು ಬಾವುಟ ಹಾರಿಸುವುದು. ಸಮವಸ್ತ್ರ, ಕೈಕಾಲು ಮತ್ತು ಉಗುರು ತನಿಖೆ ನಡೆಸುವುದು. ತನಿಖೆಯ ನಂತರ ಹಾಜರಿ, ಚಂದಾವಸೂಲಿ ಇತ್ಯಾದಿ.

   5 ನಿಮಿಷಗಳು

2. ದೈಹಿಕ ಶ್ರಮದ ಆಟಗಳು 5 ನಿಮಿಷಗಳು
3. ಷಟ್ಕಗಳಲ್ಲಿ ಆರಾಳಿಗಳ ನಾಯಕತ್ವದಲ್ಲಿ ಅಕೇಲರು ಸಹಾಯಕ ಕಬ್‌ಮಾಸ್ಟರುಗಳ ಉಸ್ತುವಾರಿಯಲ್ಲಿ, "ಷಟ್ಕದ ಸಭೆಗಳು"

   10 ನಿಮಿಷಗಳು

4. ಮೇಲಿನ ಕಾರ್ಯಕ್ರಮಗಳನ್ನಾಧರಿಸಿ ಷಟ್ಕಗಳ ರಿಲೇ ಆಟಗಳು ಮತ್ತು ಸ್ಪರ್ಧೆಗಳು 10 ನಿಮಿಷಗಳು
5. ನಾಟಕಾಭಿನಯ/ ಕಾಡಿನ ಆಟಗಳು 10 ನಿಮಿಷಗಳು

6. ಸ್ಕೌಟರುಗಳ ನೇತೃತ್ವದಲ್ಲಿ ಗುಂಪು ಕಾರ್ಯಕ್ರಮಗಳು ಅಥವಾ ಕರಕುಶಲ ಕಲೆಗಳು 15 ನಿಮಿಷಗಳು

7. ಚಟುವಟಿಕೆಯಿಂದ ಕೂಡಿದ ಆಟಗಳು 5 ನಿಮಿಷಗಳು

8. ಅವಲೋಕನೆ ಮತ್ತು ಇಂದ್ರಿಯ ಶಿಕ್ಷಣ ಆಟಗಳು (ನಿಶ್ಶಬ್ದವಾದುವುಗಳು) 5 ನಿಮಿಷಗಳು

9. ಕಥೆಗಳು 5 ನಿಮಿಷಗಳು

10. "ವಿಧಾಯಕ ಮರಿಗಳ ವಂದನೆ" ಬಾವುಟ ಇಳಿಸುವುದು, ಮನೆಗೆ ಹೋಗುವ ಮುನ್ನ ತನಿಖೆ (ಮಕ್ಕಳು ಚೊಕ್ಕಟವಾಗಿರುವಂತೆ ನೋಡಿ ಕೊಳ್ಳುವುದು.) 5 ನಿಮಿಷಗಳು

ಒಟ್ಟು 75 ನಿಮಿಷಗಳು

ಕಾರ್ಯಕ್ರಮಗಳ ಪ್ರಾರಂಭ ಮತ್ತು ವಿಧಾಯಕತೆಗಳನ್ನು ವಿಳಂಬ ಮಾಡದಂತೆ ಸಕಾಲದಲ್ಲಿ ಜರುಗಿಸಬೇಕು.

◆

ಅಧ್ಯಾಯ-21

ಹಿಂಡಿನ ಶಿಸ್ತು

ಮರಿಗಳ ಹಿಂಡಿನಲ್ಲಿ ಶಿಸ್ತು ಮುಕ್ತವಾಗಿದ್ದು, ಸಹಕಾರ ಭಾವನೆಯಿಂದ ಕೂಡಿರುತ್ತದೆ. ಅದು ಅಧಿಕಾರಯುಕ್ತವಾದುದೂ ಅಲ್ಲ. ಬರಿಯ ಬಾಹ್ಯಾಚರಣೆಯೂ ಅಲ್ಲ. ಅಕೇಲರು ಮತ್ತು ಸಹಾಯಕ ಕಬ್‌ಮಾಸ್ಟರುಗಳ ವಿಷಯದಲ್ಲಿ ಮರಿಗಳು ಪ್ರೀತಿ, ಗೌರವಗಳನ್ನು ಹೊಂದಿರುತ್ತಾರೆ. ಮರಿಗಳ ವಿಷಯದಲ್ಲಿ ಅವರು ಪರಸ್ಪರವಾದ ಪ್ರೀತಿ ವಾತ್ಸಲ್ಯಗಳನ್ನು ಹೊಂದಿರುತ್ತಾರೆ. ಹಿಂಡಿನ ಜೀವನವು ಸುಖಕರವಾಗಿಯೂ, ಆನಂದದಾಯಕ ವಾಗಿಯೂ ಇರುವಂತೆ ನೋಡಿಕೊಳ್ಳುತ್ತಿರುವ ಸ್ಕೌಟರುಗಳ ಬಗ್ಗೆ ಮರಿಗಳು ಕೃತಜ್ಞತಾಭಾವನೆಯನ್ನು ಹೊಂದಿರುತ್ತಾರೆ. ಅವರ ವೈಯಕ್ತಿಕ ಆದರ್ಶ, ನೀತಿಗಳನ್ನು ಅನುಸರಿಸಿ ಅದರಂತೆ, ಮರಿಗಳು ತಮ್ಮ ನಡೆವಳಿಕೆಯನ್ನು ತಿದ್ದಿಕೊಳ್ಳುತ್ತಾರೆ.

ಹಿಂಡಿನ ಜೀವನವು ಸಾಹಸಮಯವಾಗಿರುವುದರಿಂದ, ಮರಿಗಳು ಹಿಂಡಿನ ಎಲ್ಲಾ ಚಟುವಟಿಕೆಗಳಲ್ಲಿಯೂ ಆಸಕ್ತರಾಗಿರುತ್ತಾರೆ. ಜೊತೆಗೂಡಿ, ಆಡಿ, ಕೆಲಸಗಳನ್ನು ಮಾಡುವುದರಿಂದ, ಒಬ್ಬರಿಗೊಬ್ಬರು ಆಕರ್ಷಿತರಾಗಿ, ಪರಸ್ಪರ ಸುಖ ಸಂತೋಷಗಳನ್ನನುಭವಿಸಿ, ಹಿಂಡಿನಲ್ಲಿ ತಾವು, ಸುಖೀ ಕುಟುಂಬವೊಂದರ ಸದಸ್ಯರೆಂಬ ಭಾವನೆಯನ್ನು ತಳೆಯುತ್ತಾರೆ. ಅಕೇಲರು, ಸಹಾಯಕ ಕಬ್‌ಮಾಸ್ಟರುಗಳು ಈ ಸುಖೀ ಕುಟುಂಬದಲ್ಲಿ ಅಗ್ರಸ್ಥಾನದಲ್ಲಿ ಇರುತ್ತಾರೆ.

ಜೀವನದಲ್ಲಿ "ವ್ಯಕ್ತಿಪೂಜೆ"ಯು ಪ್ರಭಾವ ಬೀರುವ ವಯಸ್ಸಿಗೆ ಬಂದಿಲ್ಲವಾದರೂ ಮರಿಗಳು ತಮ್ಮ ಅಕೇಲರು, ಸಹಾಯಕ ಕಬ್‌ಮಾಸ್ಟರುಗಳ ಬಗ್ಗೆ ತೋರುವ ಪ್ರೀತಿ, ಗೌರವಗಳು, ಅವರ ನಡತೆ, ನಡವಳಿಕೆಗಳನ್ನು ತಿದ್ದುವಲ್ಲಿ, ಶಕ್ತಿಯುತ ಪ್ರೇರಣೆ ಯಾಗುತ್ತದೆ. ತಮ್ಮ ಅಕೇಲರು ಮತ್ತು ಸಹಾಯಕ ಕಬ್‌ಮಾಸ್ಟರುಗಳಿಗೆ ಒಪ್ಪಿಗೆಯಾಗದಂತಹ ಯಾವ ಕೆಲಸವನ್ನೂ ಮರಿಗಳು ಮಾಡುವುದಿಲ್ಲ. ಬದಲಾಗಿ ಅವರ ಮೆಚ್ಚಿಗೆಯನ್ನು ಪಡೆಯಲು ಸದಾ ಪ್ರಯತ್ನಿಸುತ್ತಾರೆ.

ಆದ್ದರಿಂದ ಅಕೇಲರು ಹಿಂಡಿನಲ್ಲಿ ಸರಿಯಾದ, ಆರೋಗ್ಯಕರವಾದ ರೀತಿಯ ಶಿಸ್ತು ಇರುವಂತೆ ಪ್ರಯತ್ನಿಸಬೇಕು. ಅಕೇಲರು ಮರಿಗಳ ವಿಷಯದಲ್ಲಿ, ನಿಷ್ಪಕ್ಷಪಾತವಾಗಿಯೂ, ನ್ಯಾಯವಾಗಿಯೂ ನಡೆದುಕೊಂಡಲ್ಲಿ, ಪ್ರಾಮಾಣಿಕತೆಯಿಂದ

ನಡೆದುಕೊಂಡಲ್ಲಿ, ಹಸನ್ಮುಖಿಯಾಗಿದ್ದಲ್ಲಿ, ಸತತ ಪ್ರಯತ್ನ ನಡೆಸುತ್ತಿದ್ದಲ್ಲಿ, ದಯಾಪರತೆಯಿಂದಲೂ, ವಾತ್ಸಲ್ಯ ಪೂರ್ಣವಾಗಿಯೂ ನಡೆದುಕೊಂಡಲ್ಲಿ, ಹಿಂಡಿನಲ್ಲಿ ಆರೋಗ್ಯಕರ ಶಿಸ್ತು ಇರುತ್ತದೆ. ಅಕೇಲರಿಗೆ ಅನ್ವಯಿಸುವ ಈ ಅಂಶಗಳು, ಸಹಾಯಕ ಕಬ್‌ಮಾಸ್ಟರುಗಳಿಗೂ, ಸಮಾನವಾಗಿ ಅನ್ವಯಿಸುತ್ತವೆ.

ಅಕೇಲರು ಆ ವಯಸ್ಸಿನ ಬಾಲಕರಿಗಿರುವ, ಸಹಜವಾದ ಆಸೆ, ಆಕಾಂಕ್ಷೆಗಳನ್ನು ಗಮನದಲ್ಲಿಟ್ಟುಕೊಂಡು, ಅವರ ವಿಶೇಷ ನಡತೆ, ಪ್ರವೃತ್ತಿಗಳಿಗೆ, ಸಾಕಷ್ಟು ಅವಕಾಶ ನೀಡಬೇಕು. ಮರಿಗಳು ಕೂಗಾಡುವುದಾದರೆ, ನಿಶ್ಯಬ್ದವಾಗಿರಲು ಒತ್ತಡ ತರದೆ, ಆಟಗಳ, ಕೂಗಾಟಗಳ ಮೂಲಕ, ಅದಕ್ಕೆ ಅವಕಾಶ ಮಾಡಿಕೊಟ್ಟು, ಅವಶ್ಯಕತೆ ಬಿದ್ದಾಗ, ಹತೋಟಿಯಲ್ಲಿಟ್ಟುಕೊಳ್ಳುತ್ತಾರೆ; ಸೌಮ್ಯತೆಯಿಂದಿದ್ದರೂ ದೃಢ ಮನಸ್ಸಿನಿಂದಿರುತ್ತಾರೆ, ಅವರಿಗೆ ಒಪ್ಪುವ ರೀತಿಯಲ್ಲಿ ವಿವರಣೆ ನೀಡುತ್ತಾರಾಗಲೀ, ಕೂಗಾಡುವುದಿಲ್ಲ; ಅಣುಕು ಮಾತನಾಡುವುದಿಲ್ಲ, ತಪ್ಪನ್ನು ತೋರಿಸಿ ಹೇಳಬೇಕಾದಾಗ, ಮುಚ್ಚುಮರೆಯಿಲ್ಲದೆ, ಪ್ರಭಾವಯುತವಾಗಿ ತೋರಿಸಿ ಹೇಳಿ, ಮುಂದೆ ಮರೆತುಬಿಡುತ್ತಾರೆ. ಮೂದಲಿಸಿ ಮಾತನ್ನು ಆಡುವುದಿಲ್ಲ. ಒಮ್ಮೆ ತಪ್ಪು ಮಾಡಿದ ಹುಡುಗನನ್ನು, ಯಾವಾಗಲೂ ತಪ್ಪಿತಸ್ಥನೆಂದು ಪರಿಗಣಿಸುವುದಿಲ್ಲ. ಬದಲು ತನ್ನ ತಪ್ಪುಗಳನ್ನು ತಿದ್ದಿಕೊಂಡು, ಉತ್ತಮ ಬಾಲಕನಾಗಲು ಪ್ರಯತ್ನಿಸುತ್ತಿದ್ದಾನೆಂದು ನಂಬುತ್ತಾರೆ. ಅದೇ ರೀತಿ ಅವನನ್ನು ನಡೆಸಿಕೊಳ್ಳುತ್ತಾರೆ.

"ಪ್ಯಾಕ್-ಪ್ಯಾಕ್-ಪ್ಯಾಕ್" -ಇದು ಹಿಂಡಿಗೆ ಪರಿಚಿತವಾದ ಕೂಗು, ಮರಿಗಳು ಒಟ್ಟಿಗೆ ಸೇರಲು, ಮರಿಗಳ ಘನವಂದನೆ ಮಾಡಲು, ಅದು ಸೂಚನೆ, ಅದಕ್ಕೆ ವ್ಯತಿರಿಕ್ತವಾಗಿ ಸುಮ್ಮನೆ "ಪ್ಯಾಕ್" ಎಂದು ಮಾತ್ರ ಹೇಳಿದರೆ, ಅದು ಮರಿಗಳು ಹುಷಾರಾಗಲು ಸೂಚನೆ. ಅಕೇಲರು, ಈ ಸೂಚನೆಗಳನ್ನು ಸೀಟಿಗೆ ಬದಲು ಉಪಯೋಗಿಸುತ್ತಾರೆ. ಆಟಗಳನ್ನಾಡುವ ವೇಳೆಯಲ್ಲಿ ಬಿಟ್ಟರೆ, ಹಿಂಡಿನಲ್ಲಿ ಸೀಟಿಯನ್ನು (ವಿಜಲ್) ಊದುವುದು ಕೂಡದೆಂದು ಅಕೇಲರಿಗೆ ಗೊತ್ತು. ಈ "ಪ್ಯಾಕ್" ಸೂಚನೆಯನ್ನು ವಿಧಿಯಿಲ್ಲದೆ ಹೋದಾಗ ಮಾತ್ರ, ಸಭೆಯನ್ನು ಹತೋಟಿಗೆ ತರಲು ಉಪಯೋಗಿಸಬಹುದು. ಪದೇ ಪದೇ ಉಪಯೋಗಿಸಬಾರದು. ಆ ರೀತಿಯ ಅವಶ್ಯಕತೆಯೂ ಇರುವುದಿಲ್ಲ. ಮರಿಗಳು ಹಿಂಡಿನಲ್ಲಿ "ಏನು ಮಾಡಬೇಕು? ಏನು ಮಾಡಬಾರದು?" ಎಂಬುದನ್ನು ಅನುಭವದಿಂದ ತಿಳಿದುಕೊಳ್ಳುತ್ತಾರೆ. ಅವರು ಮಹದಾಕಾಂಕ್ಷಿಗಳಾದ ಕಾರಣ, ಹಿಂಡಿನ ಸಂಪ್ರದಾಯ ಮತ್ತು ರೀತಿ, ನೀತಿಗಳಿಗೆ, ಹೊಂದಿಕೊಂಡು, ನಡೆದುಕೊಳ್ಳುತ್ತಾರೆ. ಈ ರೀತಿಯಲ್ಲಿ "ಹಿಂಡಿನ ಶಿಸ್ತು" ಬೆಳೆಯುತ್ತದೆ ಮತ್ತು ಕಾಪಾಡಿಕೊಂಡು ಬರುತ್ತದೆ.

◆

ಅಧ್ಯಾಯ-22

ಷಟ್ಕ ಪದ್ಧತಿ

ಮರಿಗಳ ಹಿಂಡಿನಲ್ಲಿ 24 ಮರಿಗಳಿಗೆ ಹೆಚ್ಚು ಅಥವಾ 12 ಮರಿಗಳಿಗೆ ಕಡಿಮೆ ಇರಬಾರದು. ಹಿಂಡನ್ನು 'ಷಟ್ಕ'ಗಳೆಂಬ, ಸಣ್ಣ ಗುಂಪುಗಳನ್ನಾಗಿ ವಿಭಜಿಸಲಾಗುತ್ತದೆ. ಷಟ್ಕಗಳಲ್ಲಿ 4ರಿಂದ 6 ಮರಿಗಳಿರುತ್ತಾರೆ. ಅವುಗಳನ್ನು ಬಣ್ಣಗಳಿಂದ ಗುರುತಿಸ ಲಾಗುತ್ತದೆ. ಅಕೇಲರು "ಆರಾಳಿ"ಗಳನ್ನೂ, "ಸಹಾಯಕ"ರನ್ನೂ ನೇಮಿಸುತ್ತಾರೆ. ಸಹಾಯಕರನ್ನು ನೇಮಿಸುವಾಗ, ಸಹಜವಾಗಿ, ಆರಾಳಿಯ ಅಭಿಪ್ರಾಯವನ್ನು ಕೇಳುತ್ತಾರೆ. ಅವಶ್ಯಕತೆ ಬಿದ್ದರೆ ತನಗೂ, ಸಹಾಯಕ ಕಬ್‌ಮಾಸ್ಟರಿಗೂ ಸಹಾಯಕ ವಾಗಿರಲು, 'ಹಿರಿಯ ಆರಾಳಿ'ಯನ್ನು, ಅಕೇಲರು ನೇಮಿಸುತ್ತಾರೆ.

ಸ್ಕೌಟ್ ದಳದ ಪೆಟ್ರೋಲ್ ಪದ್ಧತಿಗೂ, ಮರಿಗಳ ಹಿಂಡಿನ ಷಟ್ಕ ಪದ್ಧತಿಗೂ ಯಾವುದೇ ರೀತಿಯ ಸಾಮ್ಯತೆಯೂ ಇರುವುದಿಲ್ಲ, ಸ್ಕೌಟ್ ದಳದ ಪೆಟ್ರೋಲು ಒಂದು ಸ್ಥಾಯೀ ಗುಂಪಾಗಿರುತ್ತದೆ. ಪೆಟ್ರೋಲ್ ಲೀಡರನು, ತನ್ನ ಸ್ಕೌಟ್‌ಗಳ ಪ್ರಗತಿಯ ಬಗ್ಗೆ, ಸ್ಥಿರ ರೀತಿಯ ಜವಾಬ್ದಾರಿ ಹೊಂದಿರುತ್ತಾನೆ. ತನ್ನ ಪೆಟ್ರೋಲಿನ ಪ್ರತಿ ಸದಸ್ಯನೂ, ನಿಗದಿತ ಮಟ್ಟಕ್ಕೇರಲು ಪ್ರಯತ್ನಿಸುವುದು ಅವನ ಜವಾಬ್ದಾರಿ. ಪೆಟ್ರೋಲಿನ ಗುರಿ ಮತ್ತು ಸಾಧನೆಗಳೆಡೆಗೆ, ಪೆಟ್ರೋಲನ್ನು ಒಯ್ಯಲು, ಪೆಟ್ರೋಲ್ ಲೀಡರನು ಪೆಟ್ರೋಲಿನ ನೇತಾರನಾಗಿರುತ್ತಾನೆ.

ಷಟ್ಕದ ಬಗ್ಗೆ, ಆರಾಳಿಯ ಜವಾಬ್ದಾರಿಯಿದ್ದರೂ, ಪೆಟ್ರೋಲ್ ಲೀಡರನ ರೀತಿಯ ಜವಾಬ್ದಾರಿ ಇರುವುದಿಲ್ಲ. ಆಟಗಳಲ್ಲಿಯೂ, ಇತರ ಚಟುವಟಿಕೆಗಳಲ್ಲಿಯೂ, ಅಕೇಲರ ಅಂಕೆಯಲ್ಲಿ, ಅವರ ಮಾರ್ಗದರ್ಶನದ ಪ್ರಕಾರ, ಆರಾಳಿಯು ನೇತೃತ್ವ ವಹಿಸುತ್ತಾನೆ.

ಸಮಯಕ್ಕೆ ತಕ್ಕಂತೆ, ಆರಾಳಿಗೆ, ಸಣ್ಣಮಟ್ಟ ಜವಾಬ್ದಾರಿಗಳನ್ನು ಕೊಡಬಹುದು. ಉದಾ: ಅಕೇಲರು ವಿಧಿವತ್ತಾಗಿ ತಪಾಸಣೆ ಮಾಡುವ ಮೊದಲು, ಆರಾಳಿಯು ತನ್ನ ಷಟ್ಕದವರ ನೈರ್ಮಲ್ಯದ ಬಗ್ಗೆ ಪರೀಕ್ಷಿಸಲು ಹೇಳಬಹುದು; ಚಂದಾ ವಸೂಲಿ ಮಾಡಲು ಹೇಳಬಹುದು. ಷಟ್ಕದ ಮೂಲೆ ಮತ್ತು ಸರಂಜಾಮು ಪೆಟ್ಟಿಗೆಯ ಜವಾಬ್ದಾರಿ ಹೇಳಬಹುದು. ಅವರಲ್ಲಿ ಸಾಕಷ್ಟು ಉತ್ಸಾಹ ಮತ್ತು ಚಾಲೂಕುತನವಿದ್ದರೆ

ಆಟಗಳಲ್ಲಿಯೂ, ಸ್ಪರ್ಧೆಗಳಲ್ಲಿಯೂ, ತನ್ನ ಷಟ್ಕದ ಮುಂದಾಳಾಗಬಹುದು, ಚರಣ್ ಪರೀಕ್ಷಾಂಶಗಳ ಪುನರಾವರ್ತನೆಯಲ್ಲಿ ಸಹಾಯಕನಾಗಬಹುದು. ಪ್ರಾರ್ಥನೆ, ಧ್ವಜವಂದನೆ, ಘನವಂದನೆ ಮುಂತಾದ ವಿಷಯಗಳಲ್ಲಿ ಪ್ರಮುಖ ಪಾತ್ರ ವಹಿಸಬಹುದು. ಈ ರೀತಿಯ ಜವಾಬ್ದಾರಿಗಳು ಅಷ್ಟೆ!

ಹಿರಿಯ ಆರಾಳಿ ಮತ್ತು ಆರಾಳಿಗಳು, ನೇತೃತ್ವ ವಹಿಸಬೇಕಾದ ಕಾರಣ, ಅವರುಗಳು ಇತರರಿಗಿಂತ ಮುಂದಿರುವಂತೆ ನೋಡಿಕೊಳ್ಳಬೇಕು. ಅವರು ಆಟಗಳಲ್ಲಿ, ಪರೀಕ್ಷಾಂಶಗಳ ವಿಷಯಗಳಲ್ಲಿ ಅರಿತು, ನುರಿತವರಾದರೆ, ಇತರೆ ಮರಿಗಳು ಅವರ ಬಗ್ಗೆ ಸೂಕ್ತ ಗೌರವವನ್ನು ತೋರಿಸುತ್ತಾರೆ. ಆಗಾಗ್ಗೆ ಅಕೇಲರು, ಅವರಿಗೆ ಜವಾಬ್ದಾರಿಯುತ ಕೆಲಸಗಳನ್ನು ವಹಿಸುವುದರ ಮೂಲಕ ಸಹ ಅವರ ಪ್ರಾಮುಖ್ಯತೆಯನ್ನು ಹೆಚ್ಚಿಸಬಹುದು.

ಆರಾಳಿಯು ಕೆಲವು ವಿಶೇಷಾಧಿಕಾರಗಳನ್ನು ಹೊಂದಿರುತ್ತಾನೆ. ಅವನಿಗೆ ಆಗಾಗ್ಗೆ ವಹಿಸಿಕೊಡುವ ಜವಾಬ್ದಾರಿಗಳ ಜೊತೆಗೆ, "ಆರಾಳಿಗಳ ಸಭೆ"ಯಲ್ಲಿ ಭಾಗವಹಿಸುವ ವಿಶೇಷ ಅಧಿಕಾರವು ಅವನದಾಗಿದೆ.

ಆರಾಳಿಗಳ ಸಭೆಯಲ್ಲಿ ಅಕೇಲರು, ಸಹಾಯಕ ಕಬ್‌ಮಾಸ್ಟರುಗಳು, ಆರಾಳಿಗಳು ಅಥವಾ ಇತರ ನಿಗದಿತ ಸ್ಥಳದಲ್ಲಿ (ಮತ್ತು ಸಣ್ಣ ಹಿಂಡುಗಳಲ್ಲಿ ಸಹಾಯಕರುಗಳೂ) ಸದಸ್ಯರುಗಳಾಗಿರುತ್ತಾರೆ. ಇದೊಂದು ವಿಧ್ಯುಕ್ತವಲ್ಲದ ಸಭೆಯಾಗಿರುತ್ತದೆ. ತಿಂಗಳಿಗೊಮ್ಮೆ ಈ ಸಭೆಯು ಸಾಮಾನ್ಯವಾಗಿ ಅಕೇಲರ ಮನೆಯಲ್ಲಿ ಸೇರಬಹುದು. ಅಂತಹ ಸಭೆಗಳಲ್ಲಿ ಹೊಸ ಹೊಸ ಆಟಗಳನ್ನು ಆಡಬಹುದು. ಹೊಸ ಕಾರ್ಯಕ್ರಮಗಳು, ಹೊರಾಂಗಣ ಸಂಚಾರಗಳು ಮುಂತಾದ ಚಟುವಟಿಕೆಗಳ ಬಗ್ಗೆ ಸಲಹೆಗಳನ್ನು ಕೊಡಬಹುದು. ಆರಾಳಿಗಳು ಅಕೇಲರಿಂದ ಮಾಹಿತಿ ಪಡೆಯಬಹುದು. ಸಾಮಾನ್ಯವಾಗಿ ಆರಾಳಿಗಳ ಸಭೆಯ ಕಾರ್ಯಕಲಾಪಗಳು ಗುಟ್ಟಾಗಿ ನಡೆಯಬೇಕು. ಆರಾಳಿಗಳ ಉತ್ಸಾಹ ಮತ್ತು ಆಸಕ್ತಿಗಳನ್ನು ಹೆಚ್ಚಿಸುವ ಸಲುವಾಗಿ ಈ ರೀತಿ ಮಾಡಲಾಗುತ್ತದೆ. ಈ ಸಭೆಗಳಿಂದ, ಹಿಂಡಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅಕೇಲರು ತಿಳಿದುಕೊಳ್ಳಲು ಸಹಾಯವಾಗುತ್ತದೆ. ಮತ್ತು ಹಿರಿಯ ಸದಸ್ಯರ ಅವಶ್ಯಕತೆಗಳನ್ನು ಗಮನಿಸಲೂ, ಅವರ ನೇತೃತ್ವವನ್ನು ವೃದ್ಧಿಪಡಿಸಿ, ಪ್ರೋತ್ಸಾಹಿಸಲೂ, ಅಕೇಲರಿಗೆ ಸಹಾಯಕವಾಗುತ್ತದೆ. ಆರಾಳಿಗಳಿಗೆ ಬುದ್ಧಿವಾದ ಹೇಳಲೂ, ಅವರ ಕೆಲಸದ ಬಗ್ಗೆ ಮೆಚ್ಚುಗೆ ಸೂಚಿಸಲೂ ಅವಕಾಶವಾಗುತ್ತದೆ. ಗ್ರೂಪ್ ಲೀಡರನ ಮೇಲ್ವಿಚಾರಣೆಯಲ್ಲಿ ಅಕೇಲರು ಹಿಂಡನ್ನು ನಡೆಸುವ ಬಗ್ಗೆ ಪೂರ್ಣ

ಜವಾಬ್ದಾರರಾಗಿರುತ್ತಾರೆ. ಸಹಾಯಕ ಕಬ್‌ಮಾಸ್ಟರು ಅವರಿಗೆ ಸಹಾಯಕರಾಗಿರುತ್ತಾರೆ. ಅಕೇಲರು ಸಾಧ್ಯವಾದಷ್ಟೂ, ಆರಾಳಿಗಳ ಅಭಿಪ್ರಾಯ, ಸಲಹೆಗಳನ್ನು ತಿಳಿದುಕೊಳ್ಳುತ್ತಾರೆ.

ಆರಾಳಿಗಳ ಸಭೆಯು ಆಲೋಚನಾ ಸಭೆ ಮಾತ್ರ. ಯಾವುದೇ ತೀರ್ಮಾನವನ್ನೂ ಅದರಲ್ಲಿ ತೆಗೆದುಕೊಳ್ಳುವುದಿಲ್ಲ. ಹಿಂದಿನ ಆಗುಹೋಗುಗಳ ಬಗ್ಗೆ ಅಭಿಪ್ರಾಯ, ಸಲಹೆಗಳನ್ನು ಸಂಗ್ರಹಿಸಿ, ಅಕೇಲರು ತಮ್ಮದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಆರಾಳಿಗಳ ಸಭೆಯ ಅಭಿಪ್ರಾಯಕ್ಕೆ ವಿರುದ್ಧವಾಗಿ, ಅಕೇಲರ ನಿರ್ಧಾರವಾದರೆ– ಒಮ್ಮೊಮ್ಮೆ ಇರಬಹುದು –ಸಭೆಯು ಅದನ್ನು ಗೆಲುವಿನಿಂದ ಒಪ್ಪಿಕೊಳ್ಳಬೇಕಾದುದೇ. ಆರಾಳಿಗಳಿಗೆ ಅದೂ ಒಂದು ಬಗೆಯ ಶಿಕ್ಷಣವಾಗುತ್ತದೆ. ಆರಾಳಿಗಳು ತೀರ್ಮಾನಗಳನ್ನು ಕೈಗೊಳ್ಳಲು ಇನ್ನೂ ಹಸುಳೆಗಳು ಮತ್ತು ಅಂತಹ ಗುರುತರವಾದ ಜವಾಬ್ದಾರಿಯನ್ನು ಅವರ ಮೇಲೆ ಹೊರಿಸುವುದು ವಿಹಿತವಾಗಿರು ವುದಿಲ್ಲ. ಆದ್ದರಿಂದ ಅವರು ಗುರುತರ ಜವಾಬ್ದಾರಿಯನ್ನು ನಿರ್ವಹಿಸುವಂತಿಲ್ಲ.

ಆರಾಳಿಗಳ ಸಭೆಯು, ಅವರಿಗೆ ತಾಂತ್ರಿಕ ಶಿಕ್ಷಣ ನೀಡುವ ವೇದಿಕೆಯಲ್ಲ. ಆದರೂ ಆರಾಳಿಗಳ ಸಭೆಯು ಮುಗಿದ ಬಳಿಕ, ಅದರ ಭಾಗವಾಗಿಯಲ್ಲದೆ, ಅದರಿಂದ ಬೇರೆಯಾದ, ವಿಶೇಷ ಕಾರ್ಯಕ್ರಮವಾಗಿ, ಆರಾಳಿಗಳಿಗೆ ತಿಳುವಳಿಕೆ ನೀಡುವ, ಸಭೆಯನ್ನು ಅಕೇಲರು ಏರ್ಪಡಿಸಬೇಕು. ಈ ವಿಶೇಷ ಕಾರ್ಯಕ್ರಮದಲ್ಲಿ, ಆರಾಳಿಗಳ ಜೊತೆಗೆ ಸಹಾಯಕರನ್ನೂ, ಹಳಬರಾದ ಬಾಲಕರೊಬ್ಬರಿಬ್ಬರನ್ನೂ ಸೇರಿಸಿಕೊಳ್ಳಬಹುದು.

ಅಂತಹ ತಿಳುವಳಿಕೆಯ ಸಭೆಗೆ, ಹಿಂಡಿನ ಮಂದಗತಿಯ ಬಾಲಕರಿದ್ದರೆ ಅವರನ್ನೂ ಬರಹೇಳಬಹುದು. ನಿಧಾನಸ್ಥ ಬಾಲಕರನ್ನು ಬಯ್ದು ಪ್ರಯೋಜನವಿಲ್ಲ. ಬದಲಾಗಿ, ಅವರಿಗೆ ವೈಯಕ್ತಿಕ ಗಮನ ಹರಿಸಿ, ಆಸಕ್ತರನ್ನಾಗಿ ಮಾಡುವುದರಿಂದ ಹೆಚ್ಚು ಸಹಾಯಕವಾಗುತ್ತದೆ. ಈ ರೀತಿಯ ವಿಶೇಷ ಸಭೆಗೆ ಅವರನ್ನು ಕರೆಯುವುದರಿಂದ ಅವರಿಗೆ ಹೆಮ್ಮೆಯೆನಿಸುತ್ತದೆ. ಅಂತಹ ಸಭೆಗಳಲ್ಲಿ ಅವರಿಗೆ ತಿಳುವಳಿಕೆ ನೀಡಿ, ತಿದ್ದುವುದರ ಜೊತೆಗೆ, ಮುಂದಿನ ಹಿಂಡಿನ ಸಭೆಯಲ್ಲಿ, ಹೊಸ ಆಟಗಳು ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕೊಟ್ಟರೆ, ಅವರು ತಮ್ಮ ಬಗ್ಗೆ ಅಕೇಲರು ವಿಶೇಷ ಗಮನ ಹರಿಸುತ್ತಿರುವುದಾಗಿ ಭಾವಿಸಿ, ಎಂದಿಗಿಂತಲೂ ಹೆಚ್ಚು ಶ್ರಮವಹಿಸಿ, ತಮ್ಮ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದು. ಅವರ ಜೀವನದ ಗತಿಯೇ ಬದಲಾಗಬಹುದು.

ಕೆಲವು ಬಾಲಕರು ತಮ್ಮ ಜಾಣ್ಮೆ ಮತ್ತು ಬುದ್ಧಿಮಟ್ಟವನ್ನು ಪ್ರದರ್ಶಿಸಬಹುದು. ಇತರರಂತಲ್ಲದೆ ಇವರುಗಳಲ್ಲಿ ಉನ್ನತ ಮಟ್ಟವನ್ನು ಆಶಿಸಬಹುದು. ಅಕೇಲರು ಅಂತಹ ಬುದ್ಧಿವಂತ ಬಾಲಕರು ಆತುರಾತುರವಾಗಿ ಪದಕಗಳನ್ನು ಸಂಪಾದಿಸಲು ಬಿಡಬಾರದು. ಅಂತಹವರು ವಿವೇಚನೆಯಿಂದ ವಿಷಯಗಳನ್ನು ಪರಿಶೀಲಿಸುವಂತೆ ನೋಡಿಕೊಳ್ಳಬೇಕು. ಪ್ರತಿಷ್ಠಾ ಪೂಜಕ (ಜಂಭದಕೋಳಿ) ರಾಗದಂತೆ ಎಚ್ಚರ ವಹಿಸಬೇಕು. ಮತ್ತೆ ಕೆಲವು ಶ್ರಮ ಸಾಧ್ಯವಾದ ಮರಿಗಳಿರಬಹುದು. ಅಕೇಲರು, ಅಂತಹವರ ವೈಯಕ್ತಿಕ ಹಿನ್ನೆಲೆಯಲ್ಲಿ ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ತಾಯಿ-ತಂದೆಯರು ಮತ್ತು ಶಾಲೆಯ ಅಧಿಕಾರ ವರ್ಗದೊಡನೆ, ಅವುಗಳ ಪರಿಹಾರಕ್ಕೆ, ಸಾಧ್ಯವಾದಷ್ಟು ಪ್ರಯತ್ನಿಸಬೇಕು. ಇಂತಹ ಶ್ರಮ ಸಾಧ್ಯವಾದ ಮರಿಗಳನ್ನು ಎಚ್ಚರಿಕೆ ವಹಿಸಿ ಅರ್ಥಮಾಡಿಕೊಂಡು, ಅವರೊಡನೆ ಸಹನೆಯಿಂದಲೂ, ವಿವೇಚನೆಯಿಂದಲೂ ವರ್ತಿಸಬೇಕು.

◆

ಅಧ್ಯಾಯ-23

ಹಿಂಡಿನ ಗುಹೆ/ ಕೋಣೆ

ಪ್ರತಿ ಹಿಂಡಿಗೂ ತನ್ನದೇ ಆದ ಕೋಣೆಯಿರಬೇಕು. ಸ್ಕೌಟ್‌ದಳ ಅಥವಾ ರೋವರ್ ತಂಡ ಸಹ ಸೇರಿದ ಗುಂಪಾಗಿದ್ದರೆ ಅದರೊಡನೆ ಹಂಚಿಕೊಳ್ಳಬೇಕು. ತನ್ನದೇ ಕೋಣೆಯಾಗಿದ್ದಲ್ಲಿ ಬಹಳ ಒಳ್ಳೆಯದು. ಷಟ್ಕಗಳಾಗಿ ಭಾಗವಹಿಸುವ ಮರಿಗಳು, ಅದನ್ನು ಸೂಕ್ತವಾಗಿ, ಪೂರ್ಣವಾಗಿ ಅಲಂಕರಿಸುವ ಅವಕಾಶ ಸಿಗುತ್ತದೆ. ಒಂದು ದೊಡ್ಡ ಸಭಾಂಗಣದಂತಹ ಕೋಣೆಯನ್ನು ಹಂಚಿಕೊಂಡಾಗಲೂ ಸಹ, ಸೂಕ್ತವಾದ ಅಲಂಕಾರಿಕ ಸಜ್ಜನ್ನು ತಯಾರಾಗಿಟ್ಟುಕೊಂಡು, ಬೇಕಾದಾಗ ದಿಢೀರನೆ ಅಲಂಕರಿಸಿ, “ಮರಿಗಳತನ”ವು ಎದ್ದು ಕಾಣುವಂತೆಯೂ, ಸಭೆಯು ಮುಗಿದ ಕೂಡಲೇ, ಅದನ್ನು ತೆಗೆದಿಡಲೂ ಬರುತ್ತದೆ.

ಕೋಣೆಯಲ್ಲಿ ಪ್ರತಿ ಷಟ್ಕಕ್ಕೂ, ಒಂದು ಮೂಲೆಯನ್ನು ನಿಗದಿಪಡಿಸುವುದು ಒಳ್ಳೆಯದು. ಯಾವ ರೀತಿ ಅಲಂಕರಿಸಬೇಕು? ಏನೇನನ್ನು ಪ್ರದರ್ಶಿಸಬೇಕು? ಮುಂತಾದ ಅಂಶಗಳನ್ನು, ಅವರೇ ಚರ್ಚಿಸಿ ನಿರ್ಧರಿಸಬೇಕು. ನಿಗದಿತ ಮೂಲೆಯಲ್ಲಿ ಷಟ್ಕದ ಪೆಟ್ಟಿಗೆಗೆ– ಆಟಗಳಿಗೆ ಬೇಕಾದ ಸಾಮಾನುಗಳು, ಷಟ್ಕದ ರಿಜಿಸ್ಟರುಗಳು ಇತ್ಯಾದಿ. ಶೇಖರಿಸಲು ಅವಕಾಶ ಇರುತ್ತದೆ. ಮೂಲೆಗೆ ಪರದೆ ಹಾಕಿಕೊಳ್ಳಬಹುದಾದರೆ, ಅದಕ್ಕೆ ಪ್ರತ್ಯೇಕತೆ ಮತ್ತು ಗೋಪ್ಯತೆಗಳೂ ದೊರೆಯುತ್ತದೆ.

ಹಿಂಡಿಗೆ ಸೇರಿದ ಸರಂಜಾಮು ಪೆಟ್ಟಿಗೆಯನ್ನು ಬೇರೆ ಕಡೆ ಇರಿಸಬೇಕು. ಸಹಾಯಕ ಕಬ್‌ಮಾಸ್ಟರುಗಳಲ್ಲೊಬ್ಬರಿಗೆ ಇದರ ಜವಾಬ್ದಾರಿಯನ್ನು ವಹಿಸಬಹುದು. ಅವರು ಆಗಾಗ್ಗೆ, ಸಾಮಾನುಗಳನ್ನು ಪರಿಶೀಲಿಸಿ, ಅವಶ್ಯಕತೆಯಿದ್ದರೆ ರಿಪೇರಿ ಮಾಡಿಸಿ ಸದಾ ಉಪಯೋಗಕ್ಕೆ ಬರುವ ಸ್ಥಿತಿಯಲ್ಲಿಟ್ಟಿರಬೇಕು.

ಅಕೇಲರಿಗೆ ಪ್ರತ್ಯೇಕವಾಗಿ, ಒಂದು ಪೆಟ್ಟಿಗೆ ಇಲ್ಲವೆ ಬೀರು ಇರಬೇಕು. ಅದರಲ್ಲಿ ಹಿಂಡಿನ ರಿಜಿಸ್ಟರುಗಳು, ಇತರ ಕಡತಗಳನ್ನು ಚೊಕ್ಕಟವಾಗಿ ಇಟ್ಟುಕೊಳ್ಳಬೇಕಾಗುತ್ತದೆ.

◆

ಅಧ್ಯಾಯ-24

ಮರಿಗಳ ಹಿಂಡು ಮತ್ತು ಸ್ಕೌಟ್‌ದಳ

ಮರಿಗಳಿಗೆ ಸ್ಕೌಟಿಂಗ್ ಬಗ್ಗೆ ಅಭಿರುಚಿ ಮತ್ತು ಸದಭಿಪ್ರಾಯವನ್ನು ಮೂಡಿಸುವುದೇ ಕಬ್ಬಿಂಗ್‌ನ ಉದ್ದೇಶವಾಗಿದೆ. ಶಿಕ್ಷಣ ಪಡೆದ ಮರಿಯು "ಎಂದಿಗೆ ಸ್ಕೌಟ್ ಆದೇನು? ಸ್ಕೌಟ್ ಚಟುವಟಿಕೆಗಳಲ್ಲಿ ಭಾಗವಹಿಸಿಯೇನು?" ಎಂದು ಎದುರು ನೋಡುವಂತಿರಬೇಕು. ಅಕೇಲರು, ಹಿಂಡನ್ನು ನಡೆಸುವ ರೀತಿ, ಹಿಂಡಿನ ಜೀವನ ಹಾಗೂ ಹಿಂಡಿನ ಚಟುವಟಿಕೆಗಳು, ಮರಿಯು ಒಳ್ಳೆಯ ಸ್ಕೌಟಾಗುವ ದಿನಕ್ಕಾಗಿ ಹಂಬಲಿಸುವಂತಿರಬೇಕು.

ಎಚ್ಚರಿಕೆಯಿಂದ ಗಮನಿಸಿದರೆ, ಕಬ್ಬಿಂಗ್‌ನಲ್ಲಿ ನಾವು ಪ್ರಯತ್ನಿಸುವ ಎಲ್ಲ ಆಟಪಾಠಗಳೂ, ಮಧ್ಯಂತರದಲ್ಲಿ ನಿಂತು, ಅನೇಕ ವಿಷಯಗಳು ಪೂರ್ಣಗೊಳ್ಳುವುದಿಲ್ಲ. ಮರಿಗಳ ಪುಟ್ಟ ವಯಸ್ಸನ್ನು ಗಮನಿಸಿದರೆ, ಇದು ಅವಶ್ಯಕವೆನಿಸುತ್ತದೆ.

ಅವರೀಗತಾನೇ ಹೊರಗೆ ಅಡಿಯಿಡುತ್ತಿದ್ದು, ವಿಷಯಗಳನ್ನು ತಿಳಿದುಕೊಳ್ಳಲು ಆಸಕ್ತರಾಗಿರುತ್ತಾರೆ. ವಯಸ್ಸಿಗೆ ಸಹಜವಾದ ಸಾಹಸ ಮತ್ತು ಕಲ್ಪನಾ ಪ್ರಪಂಚದಲ್ಲಿ ವಿಹರಿಸುತ್ತಿರುತ್ತಾರೆ. ಆದ್ದರಿಂದ ಅವರ ಈ ಸಹಜ ಪ್ರವೃತ್ತಿಗಳಿಗೆ ಪೂರಕವಾಗಿ ಕಾರ್ಯಕ್ರಮಗಳನ್ನು ಕೇಂದ್ರೀಕರಿಸಬೇಕು. ಅವರು ಸ್ವಾವಲಂಬಿಗಳಾಗುವಂತೆಯೂ ತಯಾರು ಮಾಡಬೇಕು. ಇತರರಿಗೆ, ವಿಶೇಷತಃ ಮನೆಯವರಿಗೆ, ಉಪಯೋಗಕಾರಿಯಾಗಿ, ಆನಂದವನ್ನು ಪಡೆಯುವುದಕ್ಕೆ, ನಾವು ಸಹಾಯಕರಾಗಬೇಕು.

ನಾಲ್ಕು ಚರಣ ಪರೀಕ್ಷೆಗಳು ಮತ್ತು ಪ್ರವೀಣತಾ ಪದಕಗಳು ಸರಳವಾಗಿದ್ದು, ಸಾಮಾನ್ಯ ಬಾಲಕರೂ ಸಹ ಪಡೆಯಲು ಅನುಕೂಲವಾಗಿವೆ. ಅವುಗಳು ಅವರ ಪ್ರಯತ್ನಕ್ಕೆ ಪ್ರತಿಫಲವೆನ್ನಬಹುದು. ಅವರ ಕಾರ್ಯ ಸಾಧನೆಯ "ಹೆಮ್ಮೆ"ಯ ಭಾವನೆಯನ್ನು ತೃಪ್ತಿಗೊಳಿಸುವ ಸಲುವಾಗಿ, ಇವುಗಳನ್ನು ರೂಪಿಸಲಾಗಿದೆ. ಇವೆಲ್ಲವೂ ಸ್ಕೌಟಿಂಗಿಗಾಗಿ ಸಿದ್ಧತೆ ಎನ್ನೋಣವೆ? ಹಾಗೆಂದ ಮಾತ್ರಕ್ಕೆ ಮರಿಗಳ ಕಲಿಕೆಯು, ಅಲ್ಪವಾಗಿದ್ದು, ಮುಂದೆ ಪೂರಾ ಕಲಿಯುತ್ತಾರೆಂದೇನೂ ಅಲ್ಲ. ಈ ಮಟ್ಟದಲ್ಲಿ ಅವರ ಕುತೂಹಲವನ್ನು ಕೆರಳಿಸಿದಂತಾಗಿ, ಮುಂದೆ ಸ್ಕೌಟುಗಳಾದಾಗ ಮತ್ತಷ್ಟು ಕುತೂಹಲ ಕೆರಳುತ್ತದೆ ಮತ್ತು ರಂಜಿಸುತ್ತದೆ.

ಬಾಲಕನು ಮರಿಯಾಗಿ ಸೇರಿದ್ದು ನೊದಲು, ಮುಂದೆ ಸ್ಕೌಟ್ ದಳದಲ್ಲಿ ಸ್ಕೌಟ್ ಆಗುವುದು, ಅವನ ಕಬ್ಬಿಂಗ್ ಶಿಕ್ಷಣದ ಗುರಿಯೆಂಬುದನ್ನು ಅರಿತ ಕೊಳ್ಳಬೇಕು. ಮರಿಯು ವಯಸ್ಸಿಗೆ ಬಂದು, ಶಕ್ತಿವಂತನಾದ ಕೂಡಲೇ ಸ್ಕೌಟ್ ಆಗಿ ಅವರ ಜೊತೆ ಭಾಗವಹಿಸುತ್ತಾನೆ. ಬಾಲಕನಿಗೆ 10 ವರ್ಷ ವಯಸ್ಸಾಯಿತೆಂದರಾಯಿತು. ಅವನು ಸ್ಕೌಟಾಗಿ ಸೇರಿಕೊಳ್ಳಬಹುದು. ಆ ವೇಳೆಗೆ ಅವನು ಚತುರ್ಥ ಚರಣ್ ಮರಿಯಾಗಿ, ಹಲವು ಪ್ರವೀಣತಾ ಪದಕಗಳನ್ನು ಪಡೆದಿದ್ದರಾಯಿತು. ಅವನ ಸ್ಕೌಟ್ ಜೀವನ ಮತ್ತಷ್ಟು ಹಸನಾಗುತ್ತದೆ.

ಮರಿಯು ಹಿಂಡನ್ನು ಬಿಟ್ಟು, ಸ್ಕೌಟ್‌ದಳ ಸೇರುವ ಸಮಾರಂಭಕ್ಕೆ "ಬೀಳ್ಕೊಡುಗೆ" ಅಥವಾ "ಆರೋಹಣ" ಸಮಾರಂಭವೆಂದು ಕರೆಯುತ್ತಾರೆ. ಅದು ಮರಿಯ ಜೀವನದಲ್ಲಿ ಒಂದು ಮಹತ್ವದ ಘಟನೆಯೆನ್ನಬೇಕು. ಈ ರೀತಿ ಹಿಂಡನ್ನು ಬಿಡಲು ತಯಾರಾಗುವ ವೇಳೆಗೆ, ಹಿಂಡಿನೊಡನೆ, ಇತರ ಮರಿಗಳೊಡನೆ, ಅಕೇಲ ರೊಡನೆ, ಸಹಾಯಕ ಕಬ್‌ಮಾಸ್ಟರುಗಳೊಡನೆ ಒಂದು ರೀತಿಯ ಅವಿನಾಭಾವ ಸಂಬಂಧವು ಬೆಳೆದಿರುತ್ತದೆ. ಆದಕಾರಣ ಹಿಂಡನ್ನು ಬಿಟ್ಟು, ಹೊಸ ಗುಂಪು, ಹೊಸ ಜೊತೆ ಮತ್ತು ಹೊಸ ಹಿರಿಯ ಮಾರ್ಗದರ್ಶಕರು ಇವುಗಳನ್ನು ಸೇರಲು ಮನಸ್ಸು ಮಿಡಿಯುತ್ತದೆ. ಕಷ್ಟಕರವೆನಿಸುತ್ತದೆ.

ಅಕೇಲರು ಮತ್ತು ಸಹಾಯಕ ಕಬ್‌ಮಾಸ್ಟರು ಈ ವಿಷಯದಲ್ಲಿ ಹೆಚ್ಚು ಗಮನ ಕೊಟ್ಟರೆ, ಈ ರೀತಿ ಹೋಗಬೇಕಾದುದು ಎಲ್ಲ ಮರಿಗಳೂ ಎದುರಿಸಬೇಕಾದ ಅನಿವಾರ್ಯ ಘಟನೆಯೆಂದೂ, ಅದು ಅವನ ಒಳ್ಳೆಯದಕ್ಕಾಗಿಯೇ ಎಂದೂ, ಆ ರೀತಿ ಮರಿಯಾಗಿದ್ದು, ಸ್ಕೌಟಾಗಿ ಹೋಗುವುದು ಮೆಚ್ಚತಕ್ಕ ವಿಷಯವೆಂದೂ, ಅವನಿಗೆ ಮನದಟ್ಟು ಮಾಡಬೇಕು. ಇನ್ನು ಮುಂದೆಯೂ ಕೂಡ, ಅಕೇಲರು, ಸಹಾಯಕ ಕಬ್‌ಮಾಸ್ಟರುಗಳು, ಮರಿಗಳು, ಎಲ್ಲರೂ ಅವನೊಡನೆ ಸಂಪರ್ಕವಿಟ್ಟುಕೊಂಡು, ಮುಂದುವರೆಯುವುದಾಗಿ ಆಶ್ವಾಸನೆ ನೀಡಬೇಕು.

ಈ ಕಾರಣಕ್ಕಾಗಿ, ಸ್ಕೌಟ್ ಮಾಸ್ಟರು ಹಿಂಡಿನೊಡನೆ ಸಂಪರ್ಕವನ್ನಿಟ್ಟುಕೊಂಡು ಈ ಸಮಾರಂಭದಲ್ಲಿ ಭಾಗವಹಿಸಲಿರುವ ಮರಿಗಳೊಡನೆ ಬಾಂಧವ್ಯವನ್ನು ಬೆಳೆಸಿ ಕೊಳ್ಳಬೇಕು. ಇದರಿಂದ ಮರಿಯ ಮನಸ್ಸಿಗೆ ನೆಮ್ಮದಿಯುಂಟಾಗಿ, ಹಿಂಡಿನಿಂದ, ಇದ್ದಕ್ಕಿದ್ದಂತೆ ಬೇರ್ಪಡಿಸಿದ ಭಾವನೆಯುಂಟಾಗುವುದಿಲ್ಲ.

ಈ ಸಮಾರಂಭವು ಸರಳವಾಗಿಯೂ, ಸಂಕ್ಷೇಪವಾಗಿಯೂ, ಪ್ರಾಮಾಣಿಕ ವಾಗಿಯೂ, ಪ್ರಭಾವಶಾಲಿಯಾಗಿಯೂ ಇರಬೇಕು. ಮರಿಯು ಹಿಂಡಿನಲ್ಲಿ ನಡೆಸಿದ

ಸುರಕ್ಷಿತ ಜೀವನದ ಕೊನೆಯನ್ನೂ ಸ್ಕೌಟ್ ದಳದಲ್ಲಿ ಪ್ರಾರಂಭಿಸಲಿರುವ ಹೊಸ ರೀತಿಯ ಜೀವನವನ್ನೂ ಈ ಸಮಾರಂಭವು ಪ್ರತಿಬಿಂಬಿಸುವಂತಿರಬೇಕು.

ಬೀಳ್ಕೊಡುಗೆ (ಆರೋಹಣ) ಸಮಾರಂಭ

ಹಿಂಡು ವರ್ತುಲಾಕಾರದಲ್ಲಿ ಮೈದಾನದ ಒಂದು ಕಡೆ ನಿಂತಿರುತ್ತದೆ. ಅದರ ಎದುರಿನಲ್ಲಿ ಮೈದಾನದ ಇನ್ನೊಂದು ಕಡೆ ಸ್ಕೌಟ್ ದಳವು ಕುದುರೆ ಲಾಳದ ಆಕಾರದಲ್ಲಿ ನಿಂತಿರುತ್ತದೆ. ಹಿಂಡು ಮತ್ತು ದಳಗಳ ಮಧ್ಯೆ, ಅವುಗಳನ್ನು ಬೇರ್ಪಡಿಸುವ ಗೆರೆಯನ್ನು ಹಾಕಲಾಗುತ್ತದೆ. ಅಕೇಲರು ವೃತ್ತದ ಮಧ್ಯದಲ್ಲಿ, ಸ್ಕೌಟುಗಳ ಕುದುರೆ ಲಾಳಕ್ಕೆ ಮುಖಮಾಡಿ ನಿಂತಿರುತ್ತಾರೆ. ಸಹಾಯಕ ಕಬ್‌ಮಾಸ್ಟರುಗಳು, ವೃತ್ತದ ಹೊರಗೆ, ಅಕೇಲರ ಹಿಂದೆ ಸಾಲಾಗಿ ನಿಂತಿರುತ್ತಾರೆ. ಸಮಾರಂಭವು ಪ್ರಾರಂಭವಾಗುವ ಮುನ್ನ ಅಕೇಲರು, ಆ ದಿನ ನಡೆಯಲಿರುವ ವಿಷಯಗಳನ್ನೂ ಸಮಾರಂಭದ ವಿಶೇಷತೆ ಯನ್ನೂ ವಿವರಿಸಿ ಹೇಳುತ್ತಾರೆ.

ಹಿಂಡು ಮರಿಗಳ ಘನವಂದನೆಯನ್ನು ನೀಡುತ್ತದೆ.

"ಆರೋಹಿಸ"ಲಿರುವ ಮರಿಯನ್ನು ಅಕೇಲರ ಎದುರಿಗೆ ಬರಲು ಹೇಳಲಾಗುತ್ತದೆ. ಹಾಗೆ ಮುಂದೆ ಬಂದ ಮರಿಗೆ ಅಕೇಲರು ಶುಭವನ್ನು ಕೋರಿ, ಮರಿಗಳ ಪ್ರತಿಜ್ಞೆಯನ್ನು ತಾವು ಹೇಳಿಕೊಟ್ಟಂತೆ ಹೇಳಲು ತಿಳಿಸುತ್ತಾರೆ. ಎಲ್ಲರೂ ವಂದನೆ ಮಾಡುತ್ತಾರೆ. ಪ್ರತಿಜ್ಞೆಯನ್ನು ಅನುಕರಿಸಿ ಹೇಳುವಾಗ "ಪ್ರತಿಜ್ಞೆ ಮಾಡುತ್ತೇನೆ" ಎಂದು ಹೇಳುವ ಬದಲು "ಪ್ರತಿಜ್ಞೆ ಮಾಡಿರುತ್ತೇನೆ" ಎಂದು ಹೇಳಬೇಕು. ಪ್ರತಿಜ್ಞೆಯ ಪುನರುಚ್ಚಾರವಾದ ಮೇಲೆ ಸಹಾಯಕ ಕಬ್‌ಮಾಸ್ಟರುಗಳು ವೃತ್ತದೊಳಗೆ ಬಂದು ಮರಿಗೆ 'ವಿದಾಯ' ಹೇಳಿ ಶುಭವನ್ನು ಹಾರೈಸುತ್ತಾರೆ. ಹಿಂಡು ಕೂಗನ್ನು ಕೊಡುತ್ತದೆ.

ಅಕೇಲರು ವೃತ್ತವನ್ನು ತೆರಪು ಮಾಡಲು ಹೇಳುತ್ತಾರೆ. ಸ್ಕೌಟ್‌ದಳದ ಕಡೆಗಿರುವ ವೃತ್ತದ ಭಾಗವು ತೆರವಾಗಿ, ವೃತ್ತವು ಲಾಳಾಕಾರಕ್ಕೆ ಬರುತ್ತದೆ. ಅಕೇಲರು ಬೇರ್ಪಡಿಸುವ ಗೆರೆಯವರೆವಿಗೂ, ಮರಿಯನ್ನು ಕರೆದೊಯ್ಯುತ್ತಾರೆ. ಗೆರೆಯ ಆ ಕಡೆ ಗ್ರೂಪ್‌ಲೀಡರು, ಸ್ಕೌಟ್ ಮಾಸ್ಟರು ಮತ್ತು ಪೆಟ್ರೋಲ್ ಲೀಡರುಗಳು ಕಾಯುತ್ತಿರುತ್ತಾರೆ. ಅಕೇಲರು ಮರಿಯನ್ನು ಪರಿಚಯ ಮಾಡಿ ಅವನ ಸಾಧನೆಗಳನ್ನು ವಿವರಿಸಿ, ಗ್ರೂಪ್ ಲೀಡರ್ ವಶಕ್ಕೆ ಒಪ್ಪಿಸಿ, ಬೀಳ್ಕೊಡುತ್ತಾರೆ. ಸ್ಕೌಟ್ ಮಾಸ್ಟರು ಅವನನ್ನು ಸ್ಕೌಟ್ ದಳಕ್ಕೆ ಸ್ವಾಗತಿಸಿ, ಪೆಟ್ರೋಲ್ ಲೀಡರನನ್ನು ಕರೆದು, ಅವನನ್ನು ಕರೆದೊಯ್ಯಲು ಹೇಳುತ್ತಾರೆ. ಪೆಟ್ರೋಲ್ ಲೀಡರನು, ಅವನಿಗೆ ಹೊಸದಾದ ತನ್ನ ಪೆಟ್ರೋಲಿಗೆ ಕರೆದೊಯ್ದು, ತನ್ನ

ಪೆಟ್ರೋಲಿನ ಸದಸ್ಯರಿಗೆ ಪರಿಚಯ ಮಾಡಿ, ಸಾಲಿನ ಕೊನೆಯಲ್ಲಿನ ತನ್ನ ಸಹಾಯಕನಿಗೆ ಒಪ್ಪಿಸುತ್ತಾನೆ. ಸ್ಕೌಟ್ ದಳವು ಹೊಸಬನನ್ನು ಸ್ವಾಗತಿಸಿ, ದಳದ ಕೂಗನ್ನು ಕೊಡುತ್ತದೆ.

ಇಲ್ಲಿಗೆ ಸಮಾರಂಭವು ಮುಗಿಯುತ್ತದೆ. ಸಮಾರಂಭವು ಮುಗಿದ ಬಳಿಕ "ಸಂತೋಷಕೂಟ"ವನ್ನಿಟ್ಟುಕೊಂಡು ಮರಿಗಳೂ, ಸ್ಕೌಟುಗಳೂ ಸ್ಕೌಟರುಗಳೂ ಭಾಗವಹಿಸಬಹುದು.

ಮರಿಯು ಸ್ಕೌಟ್ ದಳಕ್ಕೆ ಹೋಗುತ್ತಿರುವುದು, ಹಿಂಡಿಗೆ ಹೆಮ್ಮೆಯ ವಿಷಯವಾಗಬೇಕು. ಯಾವುದೇ ದುಃಖಕರ ಪ್ರಸಂಗಕ್ಕೂ ಆಸ್ಪದ ಕೊಡಬಾರದು. ಎಂದಿನಂತೆ ಹಿಂಡಿನಲ್ಲಿ ಹಿತಕರ ವಾತಾವರಣವು ಮುಂದುವರೆಯಬೇಕು.

ಸಮಾರಂಭವು ಪ್ರಾರಂಭವಾದಾಗ ಮರಿಯು ತಾನು ಸಂಪಾದಿಸಿದ ಎಲ್ಲಾ ಪದಕಗಳನ್ನೂ ಧರಿಸಿರುತ್ತಾನೆ. ಹಿಂಡನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ, ಎಂದರೆ ಅಕೇಲರು ಅವನನ್ನು ಬೇರ್ಪಡಿಸುವ ಗೆರೆಯ ಬಳಿಗೆ ಕರೆದೊಯ್ಯುವುದಕ್ಕೆ ಮುಂಚೆ, ಆ ಪದಕಗಳನ್ನು ಹಿಂಡಿನಲ್ಲಿ ಅವನ ಜ್ಞಾಪಕಾರ್ಥವಾಗಿ ಇಟ್ಟುಕೊಳ್ಳಲು ಸೂಕ್ತ ರೀತಿಯಲ್ಲಿ ಹೇಳಬಹುದು. ಅವನು ಸದಸ್ಯತ್ವ ಪದಕವನ್ನು ಬಿಟ್ಟು ಉಳಿದೆಲ್ಲಾ ಪದಕಗಳನ್ನೂ ಹಿಂಡಿಗೆ ಹಿಂದಿರುಗಿಸುತ್ತಾನೆ. ಮುಂದೆ ಅವನು ಸ್ಕೌಟ್ ಜೀವನದಲ್ಲಿ ಪದಕಗಳನ್ನು ಸಂಪಾದಿಸಲು, ಸಿದ್ಧವಾಗಿರುವಂತೆ, ಅಕೇಲರು ಆಶೀರ್ವದಿಸುತ್ತಾರೆ. ಮರಿಗಳ ಹಿಂಡೂ, ಸ್ಕೌಟ್ ದಳವೂ ಒಂದೇ ಗುಂಪಿಗೆ ಸೇರಿದ್ದರೆ ಕಂಠವಸ್ತ್ರವನ್ನು ಬದಲಾಯಿಸುವ ಅವಶ್ಯಕತೆಯಿಲ್ಲ. ಬೇರೆಯಾಗಿದ್ದರೆ ಬದಲಾಯಿಸಬೇಕು.

ಬೀಳ್ಕೊಟ್ಟ ಮೇಲೆ ಮರಿಯನ್ನು ಅಲ್ಲಿಗೇ ಮರೆಯದೆ, ಅವನೊಡನೆ ಅಕೇಲರೂ ಸಹಾಯಕ ಕಬ್‌ಮಾಸ್ಟರುಗಳೂ ಸಂಪರ್ಕವಿಟ್ಟುಕೊಳ್ಳಬೇಕು. ಆಗೊಮ್ಮೆ ಈಗೊಮ್ಮೆ ಅವನನ್ನು ಹಿಂಡಿಗೆ ಬರಲು ಆಹ್ವಾನಿಸಬೇಕು. ಇದರಿಂದ ಅವನಿಗೆ ಹಿಂಡಿನೊಡನೆ ತನಗಿನ್ನೂ ಸಂಬಂಧವಿದೆಯೆಂಬ ಭಾವನೆಯು ಉಳಿದು ಬರುತ್ತದೆ.

◆

ಅಧ್ಯಾಯ-25

ಹಿಂಡಿನ ಲಿಖಾವಟ್ಟುಗಳು

ಪ್ರತಿ ಹಿಂಡೂ ಅವಶ್ಯಕವಾದ ಎಲ್ಲಾ ಲಿಖಾವಟ್ಟುಗಳನ್ನೂ, ಕ್ರಮಬದ್ಧ ವಾಗಿಯೂ, ವ್ಯವಸ್ಥಿತವಾಗಿಯೂ ಇಟ್ಟುಕೊಳ್ಳಬೇಕು. ಅಕೇಲರು ಇದನ್ನು ತಮ್ಮ ವೈಯಕ್ತಿಕ ಜವಾಬ್ದಾರಿಗಳಲ್ಲೊಂದೆಂದು ಪರಿಗಣಿಸಬೇಕು. ಆವಶ್ಯಕತೆಯೆನಿಸಿದರೆ, ತನ್ನ ಸಹಾಯಕ ಕಬ್‌ಮಾಸ್ಟರುಗಳಲ್ಲೊಬ್ಬರಿಗೆ, ಇಲ್ಲವೇ ಕೆಲವರಿಗೆ ಹಂಚಿ, ಅವುಗಳನ್ನು ಆಗಾಗ್ಗೆ, ತಪಾಸಣೆ ಮಾಡಿ ಎಲ್ಲವೂ ವ್ಯವಸ್ಥಿತವಾಗಿ ನಡೆದುಕೊಂಡು ಹೋಗುವಂತೆ ನೋಡಿಕೊಳ್ಳಬೇಕು.

ಹಿಂಡಿಗೆ ಅವಶ್ಯಕವಾದ ದಾಖಲೆಗಳು ಹೀಗಿವೆ:

1. ಹಿಂಡಿನ ದಾಖಲೆ ಪುಸ್ತಕ.
2. ಹಾಜರಿ ಪುಸ್ತಕ
3. ಪ್ರಗತಿ ಪುಸ್ತಕ
4. ದಾಸ್ತಾನು ಪುಸ್ತಕ
5. ಪುಸ್ತಕ ಭಂಡಾರ ಪುಸ್ತಕ
6. ನಗದು ಮತ್ತು ಲೇವಾದೇವಿ ಪುಸ್ತಕ
7. ಹಿಂಡಿನ ದಿನಚರಿ ಪುಸ್ತಕ
8. ಹಿಂಡಿನ ಇತಿಹಾಸ ಪುಸ್ತಕ
9. ಹಿಂಡಿನ ದರ್ಪಣ

ಹಿಂಡಿನ ದಾಖಲೆ ಪುಸ್ತಕ: ಈ ಪುಸ್ತಕವು ಬಾಲಕನನ್ನೂ, ಅವನ ಮನೆಯವರನ್ನೂ, ಅವನ ಶಾಲೆಯನ್ನೂ ತಿಳಿಯಲು ಸಹಾಯಕವಾಗುತ್ತದೆ. ಆದ್ದರಿಂದ ಅದರಲ್ಲಿ ಈ ಕೆಳಕಂಡ ವಿವರಗಳಿರಬೇಕು.

1. ಬಾಲಕನ ಹೆಸರು, ವಯಸ್ಸು, ಹುಟ್ಟಿದ ದಿನ, ಹಿಂಡನ್ನು ಸೇರಿದ ತಾರೀಖು.

2. ಬಾಲಕನ ತಾಯಿ ತಂದೆಯರು/ಪೋಷಕರ ಹೆಸರು, ವೃತ್ತಿ ಮತ್ತು ವಿಳಾಸ.

3. ಶಾಲೆಯ ಹೆಸರು, ಮತ್ತು ಬಾಲಕನು ಓದುತ್ತಿರುವ ತರಗತಿ.

ಬಾಲಕನು ಈಗಾಗಲೇ ಮರಿಯಾಗಿದ್ದು, ಸೂಕ್ತ ವರ್ಗಾವಣೆ ಪ್ರಮಾಣ ಪತ್ರದೊಂದಿಗೆ ಹಿಂಡನ್ನು ಸೇರಿದಲ್ಲಿ, ಸೇರುವ ವೇಳೆಯಲ್ಲಿ ಆ ಮರಿಯ ಪ್ರಗತಿ ಮಟ್ಟ ಹಾಗೂ ವರ್ಗಾವಣೆ ಪ್ರಮಾಣ ಪತ್ರಸಂಖ್ಯೆ ಮತ್ತು ತಾರೀಖುಗಳನ್ನೂ ಮತ್ತು ಅದನ್ನು ನೀಡಿದ ಅಧಿಕಾರವನ್ನೂ ನಮೂದಿಸಬೇಕು.

ಮುಂದೆ ಮರಿಯು ಹಿಂಡನ್ನು ಬಿಟ್ಟು ದಳಕ್ಕೆ ಹೋದಾಗ ಆ ಬಗ್ಗೆ ಪ್ರತ್ಯೇಕ ಕಲಮಿನಲ್ಲಿ ಅಥವಾ ಷರಾ ಕಲಮಿನಲ್ಲಿ ಅದನ್ನು ಗುರುತಿಸಬೇಕು. ಮರಿಯು ಮುಂದೆ ಸೇರಿಕೊಂಡ ಸ್ಕೌಟ್ ದಳ, ಅದರ ವಿಳಾಸ, ಬೀಳ್ಕೊಡುಗೆ ಸಮಾರಂಭದ ತಾರೀಖು ಇವುಗಳನ್ನು ಷರಾ ಕಲಮಿನಲ್ಲಿ ಗುರುತಿಸಬೇಕು. ಕಾರಣಾಂತರಗಳಿಂದ ಮರಿಯು ಹಿಂಡಿಗೆ ಬರುವುದನ್ನು ನಿಲ್ಲಿಸಿಬಿಟ್ಟಲ್ಲಿ ಅದನ್ನು ಸಹ ಗುರುತಿಸಬೇಕು. ಈ ರಿಜಿಸ್ಟರಿಗೆ ಪೂರಕವಾಗಿ, ಪ್ರವೇಶ ಪತ್ರ, ತಾಯಿತಂದೆಯರಿಂದ ಬಂದ ಒಪ್ಪಿಗೆ ಪತ್ರ ಇತ್ಯಾದಿಗಳನ್ನು ಒಟ್ಟಿಗಿಡಲು ಒಂದು ಕಡತವನ್ನು ಅಕೇಲರು ಇಟ್ಟುಕೊಳ್ಳುವುದಾದರೆ ಒಳ್ಳೆಯದು.

ಹಾಜರಿ ಪುಸ್ತಕ: ಇದರಲ್ಲಿ ಷಟ್ಕ ಪ್ರಕಾರ ಮರಿಗಳ ಹೆಸರುಗಳನ್ನು ಸೂಚಿಸಲಾಗುತ್ತದೆ. ಅದರಲ್ಲಿ ಮರಿಯು ಹಿಂಡಿನ ಸಭೆಗಳಿಗೆ ಹಾಜರಿದ್ದನೇ ಇಲ್ಲವೇ ಗುರುತಿಸಲಾಗುತ್ತದೆ. ರಿಜಿಸ್ಟರಿನಲ್ಲಿ ತಿಂಗಳಿಗೊಂದು ಪುಟದಂತೆ ಬರೆಯಬಹುದು ಅಥವಾ 3–4 ತಿಂಗಳಿಗೊಂದು ಪುಟದಂತೆ ಬರೆಯಬಹುದು.

ಪ್ರಗತಿ ಪುಸ್ತಕ: ಮರಿಗಳ ಪರೀಕ್ಷಾಂಶಗಳ ವಿಷಯದಲ್ಲಿ ಮರಿಯು ಪ್ರಗತಿಯನ್ನು ಸಾಧಿಸುತ್ತಿರುವನೇ ಇಲ್ಲವೇ? ಪ್ರಗತಿಯು ತೃಪ್ತಿಕರವಾಗಿದೆಯೇ? ಮತ್ತು ಯೋಜಿತ ರೀತಿಯಲ್ಲಿ ಮುಂದುವರೆಯುತ್ತಿದೆಯೆ? ಎಂಬ ಅಂಶಗಳನ್ನು ನಮೂದಿಸಲಾಗುತ್ತದೆ. ಪ್ರತಿ ಪುಟದಲ್ಲಿಯೂ ಈ ಕೆಳಕಂಡ ಕಲಮ್ಮುಗಳನ್ನು ಮಾಡಿಕೊಳ್ಳಬೇಕು.

1) ಷಟ್ಕದ ಹೆಸರು 2) ಮರಿಯ ಹೆಸರು ಮತ್ತು ಮರಿಗೆ ದೀಕ್ಷೆ ವಹಿಸಿದ ತಾರೀಖು. 3) ಪ್ರಥಮ ಚರಣ ಪದಕವನ್ನು ಸಂಪಾದಿಸಿದ ತಾರೀಖು. 4) ದ್ವಿತೀಯ ಚರಣ ಪದಕವನ್ನು ಸಂಪಾದಿಸಿದ ತಾರೀಖು. 5) ತೃತೀಯ ಚರಣ ಪದಕವನ್ನು ಸಂಪಾದಿಸಿದ ತಾರೀಖು. 6) ಚತುರ್ಥ ಚರಣ ಪದಕವನ್ನು ಸಂಪಾದಿಸಿದ ತಾರೀಖು.

7) ಚಿನ್ನದ ಬಾಣ ಪಡೆದ ತಾರೀಖು. ಪ್ರಮಾಣ ಪತ್ರಸಂಖ್ಯೆ ತಾರೀಖು. 8) ಪ್ರವೀಣತಾ ಪದಕಗಳನ್ನು ಸಂಪಾದಿಸಿದ ತಾರೀಖು- ಪದಕಕ್ಕೊಂದು ಕಲಮ್ಮಿನಂತೆ ಗುರುತಿಸಬೇಕು. 9) ಷರಾ.

ಸಹಜವಾಗಿ ಈ ರಿಜಿಸ್ಟರು ದೊಡ್ಡದಾಗಿರಬೇಕು. ಸುಮಾರು ಗಾತ್ರದ ಬೌಂಡ್ ನೋಟ್ ಪುಸ್ತಕದಲ್ಲಿ ಆರು ಭಾಗಗಳನ್ನಾಗಿ ವಿಭಾಗಿಸಿ. 1) ಪ್ರವೇಶ ಪರೀಕ್ಷೆ (2ರಿಂದ 5) ನಾಲ್ಕು ಚರಣ ಪರೀಕ್ಷೆಗಳು. 6) ಪ್ರವೀಣತಾ ಪದಕಗಳಿಗಾಗಿ ವಿನಿಯೋಗಿಸ ಬಹುದು.

ಇದು ಹಲವು ವಿಧಗಳಲ್ಲಿ ಅಮೂಲ್ಯವಾದ ದಾಖಲೆಯಾಗಿರುತ್ತದೆ. ಇದರಿಂದ ಅಕೇಲರೂ, ಭೇಟಿ ನೀಡುವ ಕಮೀಷನರೂ, ಪ್ರತಿ ಮರಿಯೂ ಹೇಗೆ ಪ್ರಗತಿ ಪಥದಲ್ಲಿ ಮುಂದುವರೆಯುತ್ತಿದ್ದಾನೆಂಬುದನ್ನು ತಿಳಿದುಕೊಳ್ಳಬಹುದು.

ದಾಸ್ತಾನು ಪುಸ್ತಕ: ಹಿಂಡಿಗೆ ಸೇರಿದ ಪ್ರತಿ ವಸ್ತುವನ್ನೂ -ಖರೀದಿಸಿದ್ದಾಗಲೀ/ ಕೊಡುಗೆಯಾಗಲೀ, ನಿಗದಿತ ದಾಸ್ತಾನು ಪುಸ್ತಕದಲ್ಲಿ ಬರೆಯಬೇಕು. ಅದರಲ್ಲಿ ಈ ಕೆಳಕಂಡ ವಿವರಗಳಿರಬೇಕು.

ಕ್ರಮ ಸಂಖ್ಯೆ	ವಸ್ತುವಿನ ಹೆಸರು ಮತ್ತು ವಿವರ	ಹಿಂಡಿಗೆ ಸೇರಿದ ತಾರೀಖು	ಹೇಗೆ ಬಂತು? ಯಾರಿಂದ ಬಂತು? ಖರೀದಿಸಿದ್ದೆ? ಕೊಡುಗೆಯೇ?	ರಸೀದಿ ಸಂ. ಮೌಲ್ಯ	ಷರಾ

ಈ ವಸ್ತುಗಳನ್ನು ಪುಸ್ತಕದ ಬೇರೆ ಬೇರೆ ಭಾಗಗಳಲ್ಲಿ ಈ ಕೆಳಕಂಡ ಶೀರ್ಷಿಕೆಗಳಡಿಯಲ್ಲಿ ವಿಂಗಡಿಸಿ ಬರೆಯಬಹುದು.

1. ಧ್ವಜ ಮತ್ತು ಧ್ವಜದಂಡ
2. ಆಟಕ್ಕೆ ಸಂಬಂಧಿಸಿದ ವಸ್ತುಗಳು
3. ಶಿಕ್ಷಣಕ್ಕೆ ಸಂಬಂಧಿಸಿದ ವಸ್ತುಗಳು
4. ಅಡಿಗೆಗೆ ಸಂಬಂಧಿಸಿದ ವಸ್ತುಗಳು
5. ಶಿಬಿರಕ್ಕೆ ಸಂಬಂಧಿಸಿದ ವಸ್ತುಗಳು
6. ದೀಪಕ್ಕೆ ಸಂಬಂಧಿಸಿದ ವಸ್ತುಗಳು
7. ಆಯುಧ ಮತ್ತು ಸಲಕರಣೆಗಳು
8. ಪುಸ್ತಕಗಳು
9. ಇತರೆ

ಪುಸ್ತಕ ಭಂಡಾರ ಪುಸ್ತಕ: ಪುಸ್ತಕ ಭಂಡಾರಕ್ಕೆ ಸಂಬಂಧಿಸಿದಂತೆ ಪುಸ್ತಕವಿರಬೇಕು. ಅದರಲ್ಲಿ ಈ ಕೆಳಕಂಡ ವಿವರಗಳಿರಬೇಕು.

1) ಪುಸ್ತಕದ ಹೆಸರು 2) ಲೇಖಕರ ಹೆಸರು 3) ಪ್ರಕಾಶಕರು 4) ಬೆಲೆ 5) ರಸೀದಿ ನಂ. ತಾರೀಖು 6) ಷರಾ.

ಅದೇ ಪುಸ್ತಕದ ಇನ್ನೊಂದು ಭಾಗದಲ್ಲಿ ಪುಸ್ತಕಗಳನ್ನು ಎರವು ಕೊಟ್ಟ, ವಾಪಸ್ ಪಡೆದ ವಿವರಗಳಿರಬೇಕು. ಅದರಲ್ಲಿ ಈ ಕೆಳಕಂಡ ವಿವರಗಳಿರಬಹುದು:

1) ಎರವು ಕೊಟ್ಟ ತಾರೀಖು 2) ಪುಸ್ತಕವನ್ನು ಪಡೆದುಕೊಂಡವರ ಹೆಸರು ವಿವರ 3) ಪುಸ್ತಕದ ಹೆಸರು, ಲೇಖಕರು 4) ಪುಸ್ತಕವನ್ನು ವಾಪಸ್ ಪಡೆಯಬೇಕಾದ ತಾರೀಖು 5) ಪುಸ್ತಕವನ್ನು ವಾಪಸ್ ಪಡೆದ ತಾರೀಖು 6) ಪುಸ್ತಕ ಭಂಡಾರದ ಅಧಿಕಾರಿಯ ರುಜು 7) ಷರಾ.

ಪುಸ್ತಕ ಭಂಡಾರ ಸದಸ್ಯತ್ವ ಕಾರ್ಡ್ ಮಾಡಿ ಪುಸ್ತಕವನ್ನು ಎರವು ಕೊಟ್ಟಾಗ, ಕಾರ್ಡ್ ತೆಗೆದುಕೊಂಡು ಪುಸ್ತಕವನ್ನು ವಾಪಸ್ ಪಡೆದಾಗ ಕಾರ್ಡನ್ನು ಹಿಂದಿರುಗಿಸುವುದು ಇನ್ನೊಂದು ಪದ್ಧತಿ.

ನಗದು ಮತ್ತು ಲೇವಾದೇವಿ ಪುಸ್ತಕ: ನಗದು ಮತ್ತು ಲೇವಾದೇವಿಗಳನ್ನು ಒಂದೇ ಪುಸ್ತಕದ ಬೇರೆ ಬೇರೆ ಭಾಗಗಳಲ್ಲಿ ಬರೆಯಬಹುದು. ಇಲ್ಲವೇ ಎರಡು ಬೇರೆಯಾದ ಪುಸ್ತಕಗಳನ್ನು ಉಪಯೋಗಿಸಬಹುದು. ನಗದು ಮತ್ತು ಲೇವಾದೇವಿ ಪುಸ್ತಕದಲ್ಲಿ ಈ ಕೆಳಕಂಡ ಕಲಮ್ಮುಗಳಿರುತ್ತವೆ.

1) ತಾರೀಖು 2) ಜಮಾ ಬಗ್ಗೆ ವಿವರಗಳು 3) ಮೊಬಲಗು 4) ರಸೀದಿ ನಂ. 5) ಖರ್ಚಿನ ವಿವರ 6) ಮೊಬಲಗು 7) ವೋಚರ್ ನಂ. 8) ಷರಾ.

ಸರಿಯಾದ ರಶೀದಿ ಪುಸ್ತಕವನ್ನು ಉಪಯೋಗಿಸಬೇಕು. ಅದು ದ್ವಿಪ್ರತಿಗಳಲ್ಲಿರಬೇಕು. ಜಮಾ ಆದ ಹಣಕ್ಕೆ ನಿಯತ್ತಾಗಿ ರಶೀದಿಯನ್ನು ಕೊಟ್ಟು 4ನೆಯ ಕಲಮ್ಮಿನಲ್ಲಿ ಅದನ್ನು ಗುರುತಿಸಬೇಕು. ಹಾಗೆಯೇ ಖರ್ಚು ಮಾಡಿದ ಹಣಕ್ಕೆ ಸೂಕ್ತ ವೋಚರ್ ಪಡೆದು, ಅವುಗಳಿಗೆ ನಂಬರ್ ಹಾಕಿ 7ನೇ ಕಲಮ್ಮಿನಲ್ಲಿ ಗುರುತಿಸಬೇಕು.

ಲೇವಾದೇವಿ ಪುಸ್ತಕದಲ್ಲಿ ಜಮಾ, ಖರ್ಚುಗಳನ್ನು ವರ್ಗೀಕರಿಸಿದ ರೀತಿಯಲ್ಲಿ ಬರೆಯಬೇಕು. ವರ್ಗೀಕರಣದಲ್ಲಿ ಈ ಕೆಳಕಂಡ ಶೀರ್ಷಿಕೆಗಳಿರಬಹುದು.

ಜಮಾ: 1) ದತ್ತಿ 2) ಚಂದಾ 3) ಕೊಡುಗೆ 4) ಇತರೆ

ಖರ್ಚು: 1) ಶಿಕ್ಷಣ ಸಾಮಗ್ರಿಗಳು 2) ಆಟಗಳು 3) ಶಿಬಿರಗಳು 4) ಪುಸ್ತಕಗಳು 5) ಆಯುಧ ಸಲಕರಣೆಗಳು 6) ಇತರೆ

ಈ ರೀತಿಯ ವರ್ಗೀಕರಣವು ಹಿಂಡಿನ ವಾರ್ಷಿಕ ಬಡ್ಜೆಟ್ ತಯಾರಿಸುವ ವೇಳೆಯಲ್ಲಿ ಬಹಳ ಸಹಾಯವಾಗುತ್ತದೆ.

ಹಿಂಡಿನ ದಿನಚರಿ: ಆಯಾ ದಿನಗಳಲ್ಲಿ ಹಿಂಡಿನಲ್ಲಿ ನಡೆಸಿದ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ಅಗತ್ಯ ವಿವರಗಳೊಂದಿಗೆ ನಮೂದಿಸಬೇಕು. ಎಲ್ಲಾ ಹಿಂಡಿನ ಸಭೆಗಳನ್ನೂ ಯೋಜಿತ ಕಾರ್ಯಕ್ರಮಗಳ ವಿವರಗಳೊಂದಿಗೆ ಬರೆಯಬೇಕು. ಹಿಂಡಿನ ಸಭೆಯೇ ಅಲ್ಲದೆ ಇತರ ಚಟುವಟಿಕೆಗಳ ವಿವರಗಳನ್ನೂ ಬರೆಯಬಹುದು. ಉದಾ: ರ್‍ಯಾಲಿಗಳು, ಸಮಾರಂಭಗಳು, ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ, ವಿಶೇಷ ಹಿಂಡಿನ ಸಭೆಗಳು, ವಿಶೇಷ ಸಮಾರಂಭಗಳು, ಸೇವಾ ಕಾರ್ಯಗಳು ಇತ್ಯಾದಿ. ಎಲ್ಲಾ ದಾಖಲಾತಿಗಳೂ ಸಕ್ರಮವಾಗಿರಬೇಕು. ಸಹಾಯಕ ಕಬ್‌ಮಾಸ್ಟರೊಬ್ಬರಿಗೆ ಈ ಪುಸ್ತಕದ ಜವಾಬ್ದಾರಿಯನ್ನು ವಹಿಸಬಹುದು. ಅವರು ಆಗಿಂದಾಗಲೇ ಪುಸ್ತಕದಲ್ಲಿ ಬರೆದು ಅಕೇಲರ ಸಹಿ ಪಡೆಯಬೇಕು.

ಬೇಕಾದ ಸಮಾಚಾರವನ್ನು ಸುಮ್ಮನೆ ತಿರುವಿ ಹಾಕಿ ಸುಲಭವಾಗಿ ಕಂಡು ಕೊಳ್ಳುವಂತೆ ಕ್ರಮಬದ್ಧವಾಗಿಯೂ, ಸ್ಫುಟವಾಗಿಯೂ, ಬರೆಯಬೇಕು.

ಹಿಂಡಿನ ಇತಿಹಾಸ ಪುಸ್ತಕ: ಇದು ಹಿಂಡಿಗೆ ಸಂಬಂಧಿಸಿದ ಅತಿ ಮುಖ್ಯ ಘಟನೆಗಳನ್ನೊಳಗೊಂಡ ವಿಶೇಷ ದಾಖಲೆ ಪುಸ್ತಕ. ಉದಾ: ಹಿಂಡಿಗೆ ಪ್ರಮುಖ ವ್ಯಕ್ತಿಗಳ ಭೇಟಿ, ವಿಶೇಷ ರೀತಿಯ ಕಾರ್ಯಕ್ರಮಗಳು ಇತ್ಯಾದಿ. ಇದರಲ್ಲಿ ಫೋಟೋಗ್ರಾಫ್ ಗಳು, ಚಿತ್ರಲೇಖನ, ವಾರ್ತಾ ಪತ್ರಿಕೆ, ಸ್ಕೌಟ್ ಪತ್ರಿಕೆಯ ಸುದ್ದಿಯ ತುಂಡುಗಳು ಇತ್ಯಾದಿ. ಇದು ಹಿಂಡಿನ ಇತಿಹಾಸವನ್ನು ರಂಗು ರಂಗಾಗಿ ಪ್ರದರ್ಶಿಸುತ್ತದೆ. ಇದನ್ನು ಬಹಳ ಕಾಲ ಇಟ್ಟುಕೊಳ್ಳಬಹುದು. ಜ್ಞಾಪಿಸಿಕೊಳ್ಳುವಂತಹ ಘಟನೆಗಳೂ, ಭೇಟಿ ಮಾಡಿದ ಪ್ರಮುಖ ವ್ಯಕ್ತಿಗಳು ಹಿಂಡಿಗೆ ನೀಡಿದ ಸಂದೇಶಗಳೂ, ಈ ಪುಸ್ತಕದಲ್ಲಿ ಅಡಕವಾಗಿರುತ್ತದೆ.

ಹಿಂಡಿನ ದರ್ಪಣ: ಇದು ಅಕೇಲರ ಬಳಿ ಇರುವ ವೈಯಕ್ತಿಕ ಹಾಗೂ ಗೋಪ್ಯವಾದ ವಿಷಯಗಳನ್ನು ಗುರುತು ಹಾಕಿಕೊಳ್ಳುವ ಪುಸ್ತಕ. ಅವರು ಪ್ರತಿ ಮರಿಯ ಬಗ್ಗೆ ಗಮನಿಸುವ, ಮೆಚ್ಚಿಕೆಯ ಹಾಗೂ ಖಂಡನಾರ್ಹ ಅಂಶಗಳನ್ನು ಆಗಾಗ್ಗೆ ಗುರುತಿಸಿಕೊಳ್ಳಬೇಕು. ತಮ್ಮ ಪರಾಮರ್ಶೆ ಮತ್ತು ಮಾರ್ಗದರ್ಶನಕ್ಕಾಗಿ ಈ ರೀತಿಯ

ದಾಖಲಾತಿಯನ್ನು ಅವರು ಇಟ್ಟುಕೊಳ್ಳುತ್ತಾರೆ. ಇದು ಬಹಳ ಗೋಪ್ಯವಾದುದಾಗಿದ್ದು, ಬೇರಾರಿಗೂ ತೋರಿಸುವಂತಹುದಲ್ಲ.

ತನ್ನ ಮರಿಗಳನ್ನೂ, ಕಬ್ಬಿಂಗ್ ಅನ್ನೂ ಪ್ರೀತಿಸುವ ಅಕೇಲರು, ಹಿಂಡಿನ ದಾಖಲಾತಿಗಳನ್ನು ಯಾವುದೇ ಕಾರಣದಿಂದಲೂ ತಾತ್ಸಾರ ಮಾಡುವಂತಿಲ್ಲ. ಪ್ರತಿ ಹೆಜ್ಜೆಯಲ್ಲೂ ಅವು ಅವರಿಗೆ ಸಹಾಯಕವಾಗಿರುತ್ತದೆ.

ಅಧ್ಯಾಯ-26

ಗುಂಪು (ಮಂಡಲ, ಗ್ರೂಪ್)

ಸ್ಕೌಟಿಂಗ್ ಎನ್ನುವ ಪದಕ್ಕೆ ವಿಶಾಲವಾದ ಅರ್ಥವಿದ್ದು, ಅದರಲ್ಲಿ 1) ಕಬ್ಬಿಂಗ್ 2) ಸ್ಕೌಟಿಂಗ್ ಮತ್ತು 3) ರೋವರಿಂಗ್ ಈ ಮೂರೂ ವಿಭಾಗಗಳು ಸೇರುತ್ತವೆ. ಈ ಮೂರೂ ಚಟುವಟಿಕೆಗಳು ಸಮಾಜದ ಬೆಳೆಯುವ ಮಕ್ಕಳ ಒಳಿತಿಗಾಗಿ, ಬೆಳೆದ ಯುವಪೀಳಿಗೆಗಾಗಿ ಒಂದಕ್ಕೊಂದು ಪೂರಕವಾಗಿವೆ.

ಮರಿಗಳ ಹಿಂಡು, ಸ್ಕೌಟು ದಳ ಮತ್ತು ರೋವರ್ ತಂಡ, ಈ ಮೂರೂ ಸೇರಿ ಒಟ್ಟಾಗಿ ಕೆಲಸ ಮಾಡುತ್ತಿದ್ದು ಒಂದೇ ಅಧಿಕಾರ ವ್ಯಾಪ್ತಿಯ ದಳವಾಗಿದ್ದರೆ, ಅದನ್ನು ಗುಂಪು (ಗ್ರೂಪ್/ಮಂಡಲ) ಎಂದು ಕರೆಯಲಾಗುತ್ತದೆ. ಗುಂಪಿನ ಪ್ರತಿ ವಿಭಾಗಕ್ಕೂ ಅದರದೇ ಆದ ಸ್ಕೌಟರುಗಳಿರುತ್ತಾರೆ. ಆದರೆ ಎಲ್ಲರೂ ಒಟ್ಟು ಸೇರಿ, ಸಹಕರಿಸಿ, ಸ್ಥಾನಿಕ ಸಮಾಜದ, ಮಕ್ಕಳು ಯುವಕರ ಒಳಿತಿಗಾಗಿ ಕೆಲಸ ಮಾಡುತ್ತಾರೆ. ಸಾಮಾನ್ಯವಾಗಿ ಗುಂಪಿನ ಬೇರೆ ಬೇರೆ ಕಾರ್ಯಕ್ರಮಗಳನ್ನು ಸಮಾಭಾವದಿಂದ, ಸರಿಹೊಂದಿಸಿ ಕೆಲಸವನ್ನು ಮಾಡಲೂ, ಪ್ರತಿ ಸ್ಕೌಟರಿಗೂ, ಅವರ ಅವಶ್ಯಕತೆಗಳಿಗನುಸಾರವಾಗಿ ಕೆಲಸ ಮಾಡಲು ಅವಶ್ಯಕ ಸಲಹೆಗಳನ್ನು ಕೊಡಲೂ, ಆಗಾಗ್ಗೆ ತಿಳುವಳಿಕೆ ನೀಡಲೂ, ಒಬ್ಬ ವಿಶೇಷವಾದ ಸ್ಕೌಟರ್ ಇರುತ್ತಾರೆ. ಅವರೇ ಗ್ರೂಪ್ ಲೀಡರ್ (ಸ್ಕೌಟ್ಸ್).

ಗುಂಪಿನಲ್ಲಿ ಮೂರೂ ವಿಭಾಗಗಳಿದ್ದರೆ ಅದು ಪೂರ್ಣ ಗುಂಪೆನಿಸುತ್ತದೆ. ಒಂದೇ ವಿಭಾಗದ ಎರಡು ಘಟಕಗಳಾಗಲೀ, ಬೇರೆ ಬೇರೆ ವಿಭಾಗದ ಎರಡು ಘಟಕಗಳಾಗಲೀ, ಅಪೂರ್ಣ ಗುಂಪಿನಲ್ಲಿ ಇರಬಹುದು.

ಸ್ವತಂತ್ರ ಗುಂಪುಗಳು ಮತ್ತು ಅಧೀನ ಗುಂಪುಗಳು: ಗುಂಪುಗಳನ್ನು ಸ್ಥಾನಿಕವಾಗಿ ಸ್ಥಾಪಿಸಿಕೊಳ್ಳಬಹುದು. ಇಲ್ಲದಿದ್ದರೆ ಶಾಲೆಗಳು, ಕಾಲೇಜುಗಳು, ಸೊಸೈಟಿಗಳು, ವ್ಯಾಯಾಮ ಶಾಲೆಗಳು ಇತ್ಯಾದಿ ಸಂಘ, ಸಂಸ್ಥೆಗಳ ಅಧೀನದಲ್ಲಿ ಸ್ಥಾಪಿಸಬಹುದು. ಸ್ಥಾನಿಕ ಗುಂಪುಗಳಿಗೆ ಸ್ವತಂತ್ರ ಗುಂಪುಗಳೆಂದು ಕರೆಯುತ್ತಾರೆ. ಸಂಘ, ಸಂಸ್ಥೆಗಳ ಆಡಳಿತ ವ್ಯಾಪ್ತಿಯಲ್ಲಿ ಬರುವ ಗುಂಪುಗಳು ಅಧೀನ ಗುಂಪುಗಳೆನಿಸುತ್ತವೆ. ಅಧೀನ ಗುಂಪುಗಳನ್ನು ಸ್ಥಾಪಿಸಿದ ಸಂಘ ಸಂಸ್ಥೆಗಳು, ಆ

ಗುಂಪುಗಳು ನಿರಂತರವಾಗಿ ನಡೆದುಕೊಂಡು ಹೋಗಲು ಬೇಕಾದ ಎಲ್ಲಾ ರೀತಿಯ ಸಹಾಯ, ಸಹಕಾರ ಮತ್ತು ಬೆಂಬಲಗಳನ್ನು ನೀಡಲು ಒಬ್ಬ ವ್ಯಕ್ತಿಯನ್ನಾಗಲೀ ಇಲ್ಲವೇ ಒಂದು ಸಮಿತಿಯನ್ನಾಗಲೀ ನೇಮಿಸಬಹುದು. ಹೊಣೆಗಾರ ಸಂಸ್ಥೆಯು, ಎ.ಪಿ.ಆರ್.ಓ.ನಲ್ಲಿ ಹೇಳಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಗುರಿ, ನೀತಿ ಮತ್ತು ನಿಯಮಗಳನ್ನು ಒಪ್ಪಿಕೊಳ್ಳುತ್ತದೆ. ಗುಂಪಿಗೆ ಸೇರಿರುವ ಚರ, ಸ್ಥಿರ ಆಸ್ತಿಯ ವಿವರಗಳನ್ನು ಪತ್ರ ಮೂಲಕ, ಸಂಸ್ಥೆಗೆ ನೀಡುತ್ತದೆ. ಹೊಣೆಗಾರ ಸಂಸ್ಥೆಯು ನೋಂದಾವಣಿಯ ಬಗ್ಗೆ ಹೇಳಿರುವ ನಿಯಮಗಳನ್ನು ಒಪ್ಪಿಕೊಳ್ಳುತ್ತದೆ. ಗುಂಪಿಗೆ ಎಲ್ಲಾ ರೀತಿಯ ಸಹಾಯ ಬೆಂಬಲ ನೀಡಲು ಜವಾಬ್ದಾರಿ ವಹಿಸಿಕೊಳ್ಳುತ್ತದೆ. ಈ ಕೆಳಕಂಡ ಕರ್ತವ್ಯಗಳನ್ನು ಪಾಲಿಸಲು ಆಶ್ವಾಸನೆ ನೀಡುತ್ತದೆ.

1) ಗುಂಪಿನ ಸಮಿತಿಯನ್ನು ರಚಿಸುವುದು.
2) ಘಟಕವನ್ನು ಪೂರ್ಣ ಗುಂಪಾಗಿ ವೃದ್ಧಿಪಡಿಸುವುದು.
3) ಗುಂಪಿನ ನಡೆವಳಿಕೆಯಲ್ಲಿ, ಸರಿಯಾದ ಧರ್ಮ, ನಿಷ್ಠೆ, ನೀತಿಗಳನ್ನನು ಸರಿಸುವುದು.
4) ಸಚ್ಚಾರಿತ್ರ್ಯ (ನಡತೆ) ಆರೋಗ್ಯ, ಕರಕುಶಲ ಕಲೆ ಮತ್ತು ಸೇವೆ ಈ ದಿಕ್ಕುಗಳಲ್ಲಿ ಶಿಕ್ಷಣ ನೀಡುವುದು.
5) ಗುಂಪಿಗೆ ಸೂಕ್ತ ಕಾರ್ಯ ಸ್ಥಾನವನ್ನೊದಗಿಸುವುದು ಮತ್ತು ಸ್ಕೌಟುಗಳ ಶಿಕ್ಷಣಕ್ಕೆ ಅವಕಾಶ ಒದಗಿಸುವುದು.

ಸಂವಿಧಾನ: ಪ್ರತಿ ಗುಂಪೂ ತನ್ನದೇ ಆದ ಗ್ರೂಪ್ ಕಮಿಟಿ ಮತ್ತು ಗ್ರೂಪ್ ಕೌನ್ಸಿಲ್‌ಗಳನ್ನು ಹೊಂದಿದ್ದು, ಅವುಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕು. ಈ ಎರಡೂ ಸಮಿತಿಗಳು ಗುಂಪು ಸರಿಯಾದ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಸಹಾಯ ಮಾಡುತ್ತವೆ.

ಗ್ರೂಪ್ ಕೌನ್ಸಿಲ್: ಅಕೇಲರು ಮೊದಲು ಗುಂಪಿಗೆ ನಿಷ್ಠರಾಗಿರುತ್ತಾರೆ. ಅದೊಂದು (ಕೌನ್ಸಿಲ್) ಕೌಟುಂಬಿಕ ತಂಡವಾಗಿರುತ್ತದೆ. ಕ್ರಿಯಾಸಕ್ತ ಗ್ರೂಪ್ ಲೀಡರ್‌ನ ನೇತೃತ್ವದಲ್ಲಿ ಗ್ರೂಪ್ ಕೌನ್ಸಿಲ್ ಗುಂಪಿನ ಐಕ್ಯತೆಗೆ ಹೊಣೆಯಾಗಿರುತ್ತದೆ.

ಗ್ರೂಪ್ ಲೀಡರು ಗುಂಪಿನ ಯಜಮಾನರು, ಅವರು ಗುಂಪಿನಲ್ಲಿ ಯಾವುದೇ ವಿಭಾಗವನ್ನೂ ತಾನೇ ನಡೆಸದಿದ್ದರೂ ಸಹ, ಮೂರೂ ಯೂನಿಟ್‌ಗಳ ಕೆಲಸವನ್ನು ನಿಭಾಯಿಸುತ್ತಾರೆ. ಪ್ರತಿ ವಿಭಾಗದ ಸ್ಕೌಟರುಗಳಿಗೂ ತಮ್ಮ ತಮ್ಮ ಆಲೋಚನಾ

ಮಾರ್ಗವನ್ನವಲಂಬಿಸಿ ಗುರಿ ಸಾಧಿಸಲು ಸಾಕಷ್ಟು ಅವಕಾಶಗಳನ್ನೊದಗಿಸುತ್ತಾರೆ. ವಿವಿಧ ವಿಭಾಗಗಳ ಸ್ಕೌಟರುಗಳು, ಗ್ರೂಪ್ ಲೀಡರ್‌ರ ಸ್ಥಾನಮಾನಗಳನ್ನು ಅರಿತು ಕೊಳ್ಳಬೇಕು. ಗುಂಪಿನ ವಿಷಯದಲ್ಲಿ ಅವರ ಅಭಿಪ್ರಾಯಗಳಿಗೆ ಮಾನ್ಯತೆ ನೀಡಬೇಕು. ತಮ್ಮ ವಿಭಾಗದಲ್ಲಿ ನಡೆಯುತ್ತಿರುವ ಕೆಲಸ ಮತ್ತು ಪ್ರಗತಿಯ ಬಗ್ಗೆ ಅವರಿಗೆ ತಿಳಿಸುತ್ತಿರಬೇಕು. ಇದರಿಂದ ಅವರಿಗೆ ವಿಭಾಗಗಳ ಬಗ್ಗೆ ಆಸಕ್ತಿಯು ಹೆಚ್ಚಿ, ಅವಶ್ಯಕತೆ ಬಿದ್ದರೆ ಸಹಾಯ ಮಾಡುತ್ತಾರೆ. ಎಲ್ಲಾ ಮುಖ್ಯ ಚಟುವಟಿಕೆಗಳನ್ನೂ, ಘಟನೆಗಳನ್ನೂ ಅವರಿಗೆ ತಿಳಿಸಬೇಕು. ಉದಾ: ದೀಕ್ಷಾ ಸಮಾರಂಭ, ಬೀಳ್ಕೊಡುಗೆ ಸಮಾರಂಭ, ಹೊರ ಸಂಚಾರಗಳು, ಪರ್ಯಟನೆಗಳು, ಪೋಷಕರ ದಿನಾಚರಣೆ ಇತ್ಯಾದಿ. ಈ ವಿವಿಧ ಕಾರ್ಯಕ್ರಮಗಳಲ್ಲಿ ಅವರಿಗೆ ಗಣ್ಯಸ್ಥಾನ ನೀಡಬೇಕು. ತಮ್ಮ ಘಟಕದಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಅವರೊಡನೆ ಚರ್ಚಿಸಿ, ಸಲಹೆ ಪಡೆಯಬೇಕು. ಮುಖ್ಯ ನಿರ್ಧಾರಗಳಿಗೆ ಮುಂಚೆ ಅವರ ಅಭಿಪ್ರಾಯವನ್ನು ಪಡೆಯಬೇಕು. ಸ್ಥಳೀಯ/ಜಿಲ್ಲಾ ಸಂಸ್ಥೆಗಳಲ್ಲಿ ಅವರು ಗುಂಪನ್ನು ಪ್ರತಿನಿಧಿಸುತ್ತಾರೆ. ಅವರು ಬಾಲಕರಿಗೆ ನೀಡುವ ಶಿಕ್ಷಣದ ಬಗ್ಗೆ ಸೂಕ್ಷ್ಮವಾಗಿ ತಲೆ ಕೆಡಿಸಿಕೊಳ್ಳದಿದ್ದರೂ, ಪ್ರತಿ ವಿಭಾಗದಲ್ಲಿಯೂ, ಅನುಸರಿಸುವ ಶಿಕ್ಷಣ ವಿಧಾನ ಮತ್ತು ಮೂಲ ತತ್ತ್ವಗಳು ಸರಿಯಾಗಿದೆಯೇ? ಎಂಬ ಬಗ್ಗೆ ಸ್ಥೂಲವಾಗಿ ಖಾತರಿಪಡಿಸಿಕೊಳ್ಳುತ್ತಾರೆ.

ಗ್ರೂಪ್ ಕೌನ್ಸಿಲ್‌ನಲ್ಲಿ ವಿವಿಧ ಭಾಗಗಳ ಸ್ಕೌಟರುಗಳು ಮತ್ತು ಗ್ರೂಪ್ ಲೀಡರು ಇರುತ್ತಾರೆ. ಗ್ರೂಪ್ ಲೀಡರು ಸಮಿತಿಯ ಅಧ್ಯಕ್ಷರು. ಅದರ ಅಧಿಕಾರ ವ್ಯಾಪ್ತಿಯು ಹೀಗಿದೆ:

1. ಗುಂಪಿನ ಎಲ್ಲಾ ವಿಭಾಗಗಳಲ್ಲಿಯೂ, ಅನುಸರಿಸುವ ಶಿಕ್ಷಣ ವಿಧಾನಗಳು ಸಹಜವಾಗಿಯೂ, ವಿವೇಚನೆಯಿಂದಲೂ, ಒಂದು ವಿಭಾಗದಿಂದ ಮುಂದಿನ ವಿಭಾಗಕ್ಕೆ ಮುಂದುವರೆಯುವಂತೆಯೂ ಇರಬೇಕು. ಈ ದಿಶೆಯಲ್ಲಿ ಗ್ರೂಪ್ ಕೌನ್ಸಿಲ್ ಶಿಕ್ಷಣ ವಿಧಾನಗಳನ್ನು ಸಮನ್ವಯ ಮಾಡುತ್ತದೆ.
2. ಎಲ್ಲಾ ಚಟುವಟಿಕೆಗಳನ್ನೂ ಸಮನ್ವಯಪಡಿಸಿ, ಒಂದು ವಿಭಾಗವು ಮತ್ತೊಂದು ವಿಭಾಗದ ಎಲ್ಲೆಯೊಳಗೆ ಸೇರದಂತೆ ನೋಡಿಕೊಳ್ಳುತ್ತದ.
3. ಗುಂಪಿನ ಎಲ್ಲಾ ಶಾಖೆಗಳಲ್ಲಿಯೂ ಸೂಕ್ತ ಮಟ್ಟವನ್ನು ಕಾದಿರಿಸುತ್ತದೆ.
4. ವಿವಿಧ ವಿಭಾಗಗಳಲ್ಲಿ ಉದ್ಭವಿಸುವ ಬಾಲಕರ, ಸಾಮಾನು ಸರಂಜಾಮುಗಳ, ಅವಶ್ಯಕ ಸಹಾಯಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರವೊದಗಿಸುತ್ತದೆ.

5. ಎಲ್ಲಾ ವಿಭಾಗಗಳೂ ಸೇರಿದಂತೆ ಗುಂಪಿನ ಉತ್ಸವಗಳನ್ನೂ, ಸಮಾರಂಭಗಳನ್ನೂ ಏರ್ಪಡಿಸುತ್ತದೆ.

6. ವಿವಿಧ ವಿಭಾಗಗಳಿಗೆ ಬಡ್ಜೆಟ್ ತಯಾರಿಸಿ, ಪ್ರಸ್ತಾವನೆಗಳನ್ನು ಗ್ರೂಪ್ ಕಮಿಟಿಯಲ್ಲಿ ಮಂಡಿಸುತ್ತದೆ.

7. ಗುಂಪಿನ ಮೈದಾನ, ಸಾಮಾನು ಸರಂಜಾಮುಗಳು, ಕೊಠಡಿ, ಇತ್ಯಾದಿಗಳ ಉಪಯೋಗದ ಬಗ್ಗೆ ಸೂಕ್ತ ರೀತಿಯಲ್ಲಿ ಸಮನ್ವಯ ಮಾಡುತ್ತದೆ. ಮತ್ತು

8. ಅನುಭವಗಳು, ಸಲಹೆಗಳು, ಬುದ್ಧಿವಾದ ಇತ್ಯಾದಿಗಳ ಪರಸ್ಪರ ವಿನಿಮಯಕ್ಕೆ ಅನುವು ಮಾಡುತ್ತದೆ.

ಗ್ರೂಪ್ ಕಮಿಟಿ: ಗ್ರೂಪ್ ಕಮಿಟಿಯು, ಗ್ರೂಪ್ ಕೌನ್ಸಿಲ್‌ನಿಂದ ಬೇರೆಯದೇ ಆದ ಸಭೆ. ಗುಂಪಿನಲ್ಲಿರುವ ಸ್ಕೌಟರುಗಳ ಪೈಕಿ ವಿಭಾಗಕ್ಕೆ ಒಬ್ಬರು ಮತ್ತು ಗ್ರೂಪ್ ಲೀಡರು ಇದರ ಸದಸ್ಯರು. ಇವರುಗಳಲ್ಲದೆ ಬಾಲಕರ ತಂದೆ ತಾಯಿಯರು, ಪೋಷಕರು, ಗುಂಪಿನ ಮಾಜಿ ಸದಸ್ಯರು, ಸ್ಕೌಟಿಂಗಿನ ಪುರೋಭಿವೃದ್ಧಿಗೆ ಸಹಾಯ ಮಾಡತಕ್ಕವರು ಮತ್ತು ತಮ್ಮ ಪ್ರಭಾವವನ್ನು ಬೀರಿ ಸಹಾಯ ಮಾಡುವವರನ್ನು ಆಕರ್ಷಿಸಬಲ್ಲವರು, ಹಿತೈಷಿಗಳು, ಇವರುಗಳನ್ನು ಒಳಗೊಂಡಿರುತ್ತದೆ.

ಗ್ರೂಪ್ ಕಮಿಟಿಯ ಕಾರ್ಯವ್ಯಾಪ್ತಿಯು ಹೀಗಿದೆ:

1. ಗುಂಪಿನ ಎಲ್ಲಾ ಭೌತಿಕ ಅವಶ್ಯಕತೆಗಳನ್ನೂ (ಕಟ್ಟಡ; ಮೈದಾನ, ಹಣಕಾಸು ವ್ಯವಸ್ಥೆ ಇತ್ಯಾದಿ) ಒದಗಿಸುವುದು.

2. ಸ್ಥಿರಾಸ್ತಿ ಮತ್ತು ಹಣಕಾಸು ವ್ಯವಸ್ಥೆಗಳ ನಿರ್ವಹಣೆಯನ್ನು ಸರಿಯಾಗಿ ನೋಡಿಕೊಂಡು, ಸ್ಕೌಟರುಗಳು ತಮ್ಮ ಪೂರಾ ಶಕ್ತಿ, ಸಾಮರ್ಥ್ಯಗಳನ್ನು ಬಾಲಕರ ಶಿಕ್ಷಣಕ್ಕಾಗಿಯೇ ವಿನಿಯೋಗಿಸಲು ಅವಕಾಶ ಮಾಡುವುದು.

3. ವಿವಿಧ ವಿಭಾಗಗಳಿಗೆ ಬೇಕಾದ ಅವಶ್ಯಕತೆಗಳು ಅಂದರೆ ಶಿಬಿರ ಪ್ರದೇಶ, ಶಿಕ್ಷಣ ಸಾಮಗ್ರಿಗಳು ಇತ್ಯಾದಿಗಳ ಬಗ್ಗೆ ಸ್ಕೌಟರುಗಳಿಗೆ ಸಹಾಯ ಮಾಡುವುದು.

4. ಸಾರ್ವಜನಿಕರು ಮತ್ತು ಸಾರ್ವಜನಿಕ ಸಂಸ್ಥೆಗಳಿಂದ ದೊರಕಬಹುದಾದ ಸಹಾಯ, ಸಹಕಾರಗಳನ್ನು ಪಡೆಯಲು ತಮ್ಮ ಪ್ರಭಾವವನ್ನು ಬೀರಿ, ಗುಂಪಿನ ಏಳಿಗೆಗೆ ಸಹಕರಿಸುವುದು.

5. ಗುಂಪಿನ ವಿವಿಧ ವಿಭಾಗಗಳು ಯಶಸ್ವಿಯಾಗಿ ನಡೆದುಕೊಂಡು ಹೋಗಲೂ, ಗುಂಪು ನಿರಾತಂಕವಾಗಿ ಮುಂದುವರೆಯಲೂ ಬೇಕಾದ ಸ್ಕೌಟರುಗಳನ್ನೂ, ಬೋಧಕರನ್ನೂ ಅನುಕ್ರಮವಾಗಿ ಒದಗಿಸಬೇಕು.

6. ಇರುವೆಡೆ ಸ್ತಿರಾಸ್ಥಿಯನ್ನು ಕಾಪಾಡಿಕೊಳ್ಳಲೂ, ಅಭಿವೃದ್ಧಿಪಡಿಸಲೂ ಅನುಕೂಲವಾಗುವಂತೆ, ಒಂದು ಟ್ರಸ್ಟ್ ಅನ್ನು ನೋಂದಣಿ ಮಾಡಿ ನಿರ್ವಹಿಸುತ್ತದೆ.

ಗ್ರೂಪ್ ಕೌನ್ಸಿಲ್ ಬಾಲಕರ ಶಿಕ್ಷಣ ಮತ್ತು ಪ್ರಗತಿಗೂ, **ಗ್ರೂಪ್** ಕಮಿಟಿಯು ಗುಂಪಿನ ಹಿತಾಸಕ್ತಿಗಳಿಗೂ, ಸಂರಕ್ಷಣೆಗೂ, ಏಳಿಗೆಗೂ ಜವಾಬ್ದಾರಿಯಾಗಿರುತ್ತದೆ.

ಗುಂಪಿನ ಮರಿಗಳು, ಸ್ಕೌಟುಗಳು ಮತ್ತು ರೋವರ್‌ಗಳ ತಾಂತ್ರಿಕ ಶಿಕ್ಷಣದ ಜವಾಬ್ದಾರಿಯು **ಗ್ರೂಪ್ ಕೌನ್ಸಿಲ್**‌ಗೆ ಸೇರಿದ್ದು. **ಗ್ರೂಪ್ ಕಮಿಟಿ**ಯು ಗುಂಪಿಗೆ ಎಲ್ಲಾ ವಿಧದಲ್ಲಿಯೂ ಉಪಯುಕ್ತವಾಗಿರುವಂತಿರಬೇಕು. ಉದಾ: ಬೇಕಾದ ಹಣಕಾಸು ವ್ಯವಸ್ಥೆ ಮಾಡಿ ಅದು ಸದ್ವಿನಿಯೋಗವಾಗುವಂತೆ ನೋಡಿಕೊಳ್ಳಬೇಕು. ಗುಂಪಿನಲ್ಲಿ ಕೆಲಸ ಮಾಡಲು ಪ್ರಭಾವಶೀಲ ಹಾಗೂ ಯೋಗ್ಯ ಸ್ಕೌಟರುಗಳನ್ನು ಆರಿಸಿ ಸಹಾಯ ಮಾಡಬೇಕು. ಗುಂಪಿಗೂ ಸಾರ್ವಜನಿಕರಿಗೂ, ಪರಸ್ಪರ ಸಂಪರ್ಕವನ್ನು ಏರ್ಪಡಿಸಿ, ಗುಂಪಿಗೆ ಬೇಕಾದ ಎಲ್ಲಾ ರೀತಿಯ ಬೆಂಬಲವನ್ನೂ ಒದಗಿಸುವ ರೀತಿಯಲ್ಲಿ ನಡೆದುಕೊಳ್ಳಬೇಕು.

ಗುಂಪು ಒಂದು ರೀತಿಯಲ್ಲಿ ಕುಟುಂಬವಿದ್ದಂತೆ. ಎರಡು ಆಡಳಿತ ಯಂತ್ರಗಳು ಅದಕ್ಕಾಗಿ ಕೆಲಸ ಮಾಡುತ್ತವೆ. ಅವೇ ಗ್ರೂಪ್ ಕೌನ್ಸಿಲ್ ಮತ್ತು ಗ್ರೂಪ್ ಕಮಿಟಿಗಳು. ಗುಂಪಿನ ಏಳಿಗೆಗಾಗಿ ಇವೆರಡೂ ಮುಖ್ಯ ಅಂಗಗಳು.

◆

ಅಧ್ಯಾಯ-27

ಹಿಂಡನ್ನು ಸಂಘಟಿಸುವುದು ಮತ್ತು ನಡೆಸುವುದು

ಈಗಾಗಲೇ ನಡೆಸುತ್ತಿರುವ ಗುಂಪಿನ ಭಾಗವಾಗಿ ಯಾರಾದರೂ ಹಿಂಡನ್ನು ನಡೆಸಲಿಚ್ಛಿಸಿದರೆ, ಅವರು ಮೊದಲು ಅದರ ಗ್ರೂಪ್ ಲೀಡರನ ಬೆಂಬಲವನ್ನು ಪಡೆಯಬೇಕು. ಸ್ಥಳೀಯ/ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಯವರಿಗೆ, ಆ ಗುಂಪಿನ ಭಾಗವಾಗಿ ಹಿಂಡನ್ನು ಪ್ರಾರಂಭಿಸುತ್ತಿರುವುದಾಗಿ, ಗ್ರೂಪ್ ಲೀಡರ್ ಮೂಲಕ ಪತ್ರ ಬರೆದು, ಅನುಮತಿ ಪಡೆಯಬೇಕು. ಆ ಬಳಿಕ ಹಿಂಡನ್ನು ಪ್ರಾರಂಭಿಸುವ ಬಗ್ಗೆ ಮುಂದುವರೆಯಬಹುದು.

ಆ ರೀತಿ ಕೆಲಸ ಮಾಡುತ್ತಿರುವ ಗುಂಪಿನ ಭಾಗವಾಗಿಯಲ್ಲದೆ, ಹೊಸದಾಗಿ ಹಿಂಡನ್ನು ಪ್ರಾರಂಭಿಸಲಿಚ್ಛಿಸಿದರೆ, ಸ್ಥಳೀಯ/ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಗಳು ಅಥವಾ ಜಿಲ್ಲಾ ಕಮೀಷನರರನ್ನು ಸಂಪರ್ಕ ಮಾಡಬೇಕು. ಅವರುಗಳ ಹೆಸರು, ವಿಳಾಸ ತಿಳಿಯದಿದ್ದರೆ, ರಾಜ್ಯ ಕಛೇರಿಗೆ ಬರೆಯಬಹುದು. ಜಿಲ್ಲಾ ಕಮೀಷನರ ಸೂಕ್ತ ಅನುಮತಿಯನ್ನು ಪಡೆದ ಹೊರತು, ಹಿಂಡನ್ನು ಸಂಘಟಿಸುವ ಬಗ್ಗೆ ಮುಂದುವರೆಯಬಾರದು. ಸ್ಥಳೀಯ/ಜಿಲ್ಲಾ ಸಂಸ್ಥೆಗಳು ಆಯಾ ಪ್ರದೇಶದಲ್ಲಿ ಸ್ಕೌಟ್ ಚಳುವಳಿಯ ಬಗ್ಗೆ ಜವಾಬ್ದಾರರು.

ಮರಿಗಳ ಹಿಂಡನ್ನು ನಡೆಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಕ್ಕೆ ಮುಂಚೆ, ಮರಿಗಳ ವಿಧಾನದ ಬಗ್ಗೆ, ತಕ್ಕಷ್ಟು ಜ್ಞಾನವನ್ನು ಪಡೆಯಬೇಕು. ಮತ್ತು ಕಬ್ಬಿಂಗ್ ಮತ್ತು ಸ್ಕೌಟಿಂಗ್ ನಡುವಣ ಪರಸ್ಪರ ಸಂಬಂಧದ ಬಗ್ಗೆ ಸ್ಥೂಲವಾಗಿ ತಿಳಿದಿರಬೇಕು. ದೊರೆಯುವುದಾದರೆ ಸಂಸ್ಥಾಪಕರು ಬರೆದಿರುವ ವುಲ್ಫ್ ಕಬ್ಸ್ ಹ್ಯಾಂಡ್ ಬುಕ್ ಪುಸ್ತಕವನ್ನೂ ಇತರ ಪುಸ್ತಕಗಳಾದ ಹೌಟು ರನ್ ಎ ಪ್ಯಾಕ್ –ಗಿಲ್‌ಕ್ರಾಪ್ಟ್, ಹಿಂಡನ್ನು ನಡೆಸುವ ರೀತಿ ಕಾಡುಕತೆಗಳು ಮುಂತಾದ ಪುಸ್ತಕಗಳನ್ನು ಓದಿರಬೇಕು. ಮುಂದುವರೆದು ಸ್ಕೌಟಿಂಗಿಗೆ ಮೊದಲ ಹೆಜ್ಜೆ ಕಬ್ಬಿಂಗ್ ಆದುದರಿಂದ ಸಂಸ್ಥಾಪಕರು ಬರೆದಿರುವ "ಸ್ಕೌಟಿಂಗ್ ಫಾರ್ ಬಾಯ್ಸ್" –ಕನ್ನಡದ "ಬಾಲಕರಿಗಾಗಿ ಸ್ಕೌಟಿಂಗ್" ಪುಸ್ತಕವನ್ನು ಓದಿ, ಸ್ಕೌಟಿಂಗ್ ಎಂದರೇನು? ಎಂದು ತಿಳಿದಿರಬೇಕು. ಅಲ್ಲದೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ "ಗುರಿ, ನೀತಿ, ನಿಯಮಗಳು ಮತ್ತು ಸಂಘಟನೆ" (ಮರಿಗಳ

ವಿಭಾಗ) ಮತ್ತು ಮರಿಗಳ ಪುಸ್ತಕ, ಕಬ್‌ಮಾಸ್ಟರುಗಳ ಕೈಪಿಡಿ ಇವುಗಳನ್ನು ಜೊತೆ ಮಾಡಿಕೊಂಡು ಮುಂದುವರೆಯಬೇಕು.

ಈ ರೀತಿ ಪುಸ್ತಕಗಳ ಮೂಲಕ ತಾತ್ತ್ವಿಕವಾಗಿ ಕಬ್ಬಿಂಗ್‌ನ ಪರಿಚಯ ಮಾಡಿಕೊಳ್ಳುವುದರ ಜೊತೆಗೆ, ಮರಿಗಳ ಹಿಂಡನ್ನು ಪ್ರಾರಂಭಿಸಲಿರುವ ವ್ಯಕ್ತಿಯು, ಔಪಚಾರಿಕವಾಗಿ ಕಬ್‌ಮಾಸ್ಟರುಗಳ ಮೂಲತರಬೇತಿ ಶಿಬಿರದಲ್ಲಿ ಶಿಕ್ಷಣ ಪಡೆದು, ಮೊದಲಿಗೆ ಈಗಾಗಲೇ ನಡೆಯುತ್ತಿರುವ ಹಿಂಡಿನೊಡನೆ ಸಂಪರ್ಕವಿಟ್ಟುಕೊಂಡು, ಹಿಂಡನ್ನು ನಡೆಸುವ ಬಗ್ಗೆ, ಕ್ರಿಯಾಶೀಲ ಅನುಭವವನ್ನು ಪಡೆಯುವುದೊಳ್ಳೆಯದು. ಜಿಲ್ಲಾ ಕಮೀಷನರ್ ಸಹಾಯದಿಂದ, ಈ ಕೆಲಸ ಮಾಡಬಹುದು. ಒಂದೆರಡು ತಿಂಗಳ ಕಾಲ ಕೆಲಸ ಮಾಡುತ್ತಿರುವ ಹಿಂಡನ್ನು ಗಮನಿಸಿ, ಪುಸ್ತಕವನ್ನು ಓದಿಕೊಂಡರಾಯಿತು. ಕ್ರಿಯಾಶೀಲ ಅನುಭವ ಮತ್ತು ಜ್ಞಾನವನ್ನು ಪಡೆಯಲು ಸ್ವಲ್ಪ ಕಾಲ ಹಿಡಿಯಬಹುದು. ಆದರೆ ಪ್ರಾರಂಭ ಮಾಡಿ, ಮುಗ್ಗರಿಸುವುದಕ್ಕಿಂತ, ನಿಧಾನವಾದರೂ ಸರಿಯಾಗಿ ಪ್ರಾರಂಭಿಸಿ ನಡೆಸುವುದು ಮೇಲು.

ಪ್ರಾರಂಭಿಸಲಿರುವ ಹಿಂಡು ಸ್ವತಂತ್ರ ದಳವೇ ಅಥವಾ ಅಧೀನ ದಳವೇ ಎಂಬ ಬಗ್ಗೆ ಮೊದಲು ತೀರ್ಮಾನಿಸಬೇಕು. ನಡೆಸುತ್ತಿರುವ ಗುಂಪಿನ ಭಾಗವಾಗಿ ಪ್ರಾರಂಭ ಮಾಡಿದರೆ, ಹಿಂಡು ಅದೇ ಹೆಸರು ಮತ್ತು ರೂಪಗಳನ್ನು ತಳೆಯುತ್ತದೆ. ಹೊಸದಾಗಿ ಬೇರೆಯದಾಗಿ ಪ್ರಾರಂಭಿಸುವುದಾದರೆ, ಯಾವುದಾದರೂ ಸಂಸ್ಥೆಯ ಅಧೀನದಲ್ಲಿ ನಡೆಸುವುದೋ ಅಥವಾ ಸ್ವತಂತ್ರ ಹಿಂಡಾಗಿಯೋ ರೂಪು ತಳೆಯುತ್ತದೆ.

ಮೊದಲಿಗೆ ಹಿಂಡಿನ ಸಭೆ ಸೇರುವ ಸ್ಥಳವನ್ನು ನಿರ್ಧರಿಸಬೇಕು. ನಡೆಸುತ್ತಿರುವ ಗುಂಪಿನ ಭಾಗವಾಗಿ ಪ್ರಾರಂಭಿಸಿದರೆ, ಹಿಂಡು ಅದೇ ಜಾಗದಲ್ಲಿ ಸಭೆ ಸೇರುತ್ತದೆ. ಗ್ರೂಪ್ ಲೀಡರ್‌ನೊಡನೆ ಚರ್ಚಿಸಿ, ಸಭೆ ಸೇರುವ ದಿನ ಮತ್ತು ಕಾಲಗಳನ್ನು ನಿರ್ಧರಿಸಿದರಾಯಿತು. ಹಿಂಡನ್ನು ಹೊಸದಾಗಿಯೇ ಆರಂಭಿಸುವುದಾದರೆ ಸಭೆ ಸೇರುವ ಸ್ಥಳವನ್ನು ಮೊದಲು ನಿರ್ಧರಿಸಬೇಕು.

ಇದಕ್ಕಾಗಿಯೇ ಒಂದು ನಿರ್ದಿಷ್ಟ ಸ್ಥಳವು ಅವಶ್ಯಕವಾದುದು. ಒಂದು ಸಣ್ಣ ಪರ್ಣಶಾಲೆ, ಕಣಜದ ಮನೆ (ಧಾನ್ಯಶೇಖರಣೆ) (Barn) ಉಪಯೋಗಿಸುತ್ತಿಲ್ಲದ ಕುದುರೆ ಲಾಯ/ಕೊಟ್ಟಿಗೆ ಮನೆ, ಅವಶ್ಯಕತೆಯಿಲ್ಲದ ನೆಲಮಾಳಿಗೆ, ಯಾವುದಾದರೂ ಸರಿಹೊಂದುತ್ತದೆ. ಬಹಳಷ್ಟು ಯಶಸ್ವೀ ಗುಂಪುಗಳು ಈ ರೀತಿಯ ವಿಚಿತ್ರ ಸ್ಥಳಗಳನ್ನು ಆರಿಸಿಕೊಂಡಿರುವುದನ್ನು ನಾವು ಗಮನಿಸಬಹುದು. ಯಾವುದೇ ಜಾಗವನ್ನು ಆರಿಸಿದರೂ, ಅದು ಆಕರ್ಷಕವಾಗಿರಬೇಕು. ಗೆಲುವು ತರುವಂತಿರಬೇಕು. ಅಂತಹ ಸ್ಥಳಗಳು ವಸತಿ ಪ್ರದೇಶಗಳಿಂದ ದೂರವಿದ್ದರೆ, ಮರಿಗಳ ಗಲಾಟೆ ಮಾಡುವ ಸಹಜ

ಪ್ರವೃತ್ತಿಗೆ ಅಡ್ಡ ಬರುವುದಿಲ್ಲ ಮತ್ತು ಹಿಂಡಿನ ಸಭೆಗಳ ವೇಳೆಯಲ್ಲಿ ನೆರೆಹೊರೆಯವರಿಗೆ ತೊಂದರೆ ಆಗದಂತೆ ಸಭೆಗಳನ್ನು ನಡೆಸಬಹುದು. ಅಷ್ಟೇ ಅಲ್ಲದೆ ವಿನಾಕಾರಣ ಮರಿಗಳ ಕೂಗಾಟಕ್ಕೆ ಅಡ್ಡಿಯಿರುವುದಿಲ್ಲ.

ಬಾಲಕರನ್ನು ಸೇರಿಸುವುದು: ಬಾಲಕರನ್ನು ಸೇರಿಸುವುದು ಕಷ್ಟಕರವಾದುದೇನೂ ಅಲ್ಲ. ಸಾಮಾನ್ಯವಾಗಿ, ನಾವು ನೋಡಿಕೊಳ್ಳಬಹುದಾದಕ್ಕಿಂತಲೂ ಹೆಚ್ಚು ಬಾಲಕರು ಬರುತ್ತಾರೆ. ಆದರೆ ಹೆಚ್ಚು ಬಾಲಕರನ್ನು ಸೇರಿಸಿ ಪ್ರಾರಂಭ ಮಾಡುವುದು ಮೂರ್ಖತನವೆನಿಸೀತು. ಅಕೇಲರಾಗುವವರು, ನೆರೆಹೊರೆಯ ಬಾಲಕರೊಡನೆ ಕಲೆತು ಅವರನ್ನು ಅರ್ಥಮಾಡಿಕೊಳ್ಳಬೇಕು. ಇದನ್ನು ಆಟಗಳ ಮೂಲಕ ಸಾಧಿಸಬಹುದು. ಮೊದಲ ಕೆಲವು ದಿನಗಳು ಬರಿಯ ಆಟಗಳನ್ನಾಡಿಸಬೇಕು. ಮುಂದೊಂದು ದಿನ ಕಬ್ಬಿಂಗ್ ಬಗ್ಗೆ ಸೂಕ್ಷ್ಮವಾಗಿ ತಿಳಿಸಬೇಕು. ಮರಿಗಳು ಮಾಡುವ ಕೆಲಸ ಮತ್ತು ಕಾಲ್ಪನಿಕ ಕೆಲಸಗಳು, ಆನಂದದಾಯಕ ಕಾರ್ಯಕ್ರಮಗಳು, ಪ್ರತಿಜ್ಞೆ, ನಿಯಮಗಳನ್ನು ಪಾಲಿಸುವುದರಲ್ಲಿ ಅವರ ಸಲಿವು ಇವುಗಳನ್ನು ತಿಳಿಸಬೇಕು. ಇದಿಷ್ಟನ್ನೂ ಆರಿಸಿಕೊಂಡ ಮೊದಲ ದಿನದ ಸಭೆಯಲ್ಲಿ ತಿಳಿಸಬಹುದು. ಬಾಲಕರ ಉತ್ಕಂಠತೆಯನ್ನು ಗಮನಿಸಬೇಕು. ಅವರಲ್ಲಿ ಬೆರಳೆಣಿಸುವಷ್ಟು ಮಂದಿಯನ್ನು ಮಾತ್ರ ಮೊದಲಿಗೆ ಆರಿಸಿಕೊಳ್ಳಬೇಕು. ಉಳಿದವರಿಗೆ ಅವರು ಸೇರಿಕೊಳ್ಳುವ ಬಗ್ಗೆ ಮುಂದೆ ತಿಳಿಸುವುದಾಗಿ ಹೇಳಬೇಕು. ಪ್ರಾರಂಭಕ್ಕೆ 12 ಮಂದಿ ಬಾಲಕರು ಸಾಕಷ್ಟಾಯಿತು.

ಮರಿಗಳಾಗಲು ವಯೋಮಿತಿ ಹೀಗಿದೆ. ಮರಿಯಾಗುವ ಬಾಲಕನಿಗೆ 5 ವರ್ಷ ವಯಸ್ಸು ಮುಗಿದಿರಬೇಕು. 10ನೆಯ ಜನ್ಮದಿನ ಆಗಿರಬಾರದು. ಯಾವುದೇ ಕಾರಣದಿಂದಲೂ ವಯೋಮಿತಿಯನ್ನು ಸಡಿಲಿಸಬಾರದು. ಈ ವಯೋಮಿತಿ (5+ರಿಂದ 10ರವರೆಗೆ)ಗೆ ಒಳಪಡದ ಬಾಲಕರನ್ನು ತೆಗೆದುಕೊಳ್ಳುವ ಯೋಚನೆಯನ್ನು ಕನಸಿನಲ್ಲೂ ಮಾಡಬಾರದು.

ತಾಯಿ, ತಂದೆಯರು: ಬಾಲಕರಿಗೆ ಶಿಕ್ಷಣ ನೀಡುವ ಸ್ಕೌಟ್ ವಿಧಾನದಲ್ಲಿ ಕಬ್ಬಿಂಗ್ ಆಗಲಿ, ಸ್ಕೌಟಿಂಗ್ ಆಗಲಿ– ತಾಯಿ ತಂದೆಯರ ಪಾತ್ರ ಮಹತ್ವದ್ದು. ಸ್ಕೌಟ್ ಕೆಲಸಗಾರರು –ಅಕೇಲರಾಗಲೀ, ಸ್ಕೌಟ್ ಮಾಸ್ಟರಾಗಲೀ, ಬಾಲಕರ ತಾಯಿ ತಂದೆಯರೊಡನೆ, ಸನ್ನಿಹಿತವಾಗಿರಬೇಕು. ಆದ್ದರಿಂದ ಅಕೇಲರಾಗುವವರು, ತಾಯಿ ತಂದೆಯರನ್ನು ಆಗಾಗ್ಗೆ ಭೇಟಿಮಾಡಿ, ಅವರನ್ನು ತಿಳಿದು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಅವರನ್ನು ಮನೆಯಲ್ಲಿ ಭೇಟಿ ಮಾಡಿ, ಕಬ್ಬಿಂಗ್ ಬಗ್ಗೆ ವಿವರಿಸಿ ಹೇಳಿ, ಅವರ ಮಗ/ಬಾಲಕನನ್ನು ಹಿಂಡಿಗೆ ಕಳುಹಿಸಲು ಕೋರಬೇಕು. ಅವರ ಅನುಮತಿ ಪಡೆದ ಮೇಲೆ ಹಿಂಡನ್ನು ಪ್ರಾರಂಭ ಮಾಡಬೇಕು. ಇಂದಲ್ಲ ನಾಳೆ ಪ್ರವೇಶ ಪತ್ರಗಳನ್ನು ಕೊಟ್ಟು, ಅವರು ಅದನ್ನು ಸಹಿ ಮಾಡಿ, ಹಿಂದಿರುಗಿಸಲು ಹೇಳಬೇಕು.

ಹಾಗೆ ಬಂದ ಪ್ರವೇಶ ಪತ್ರಗಳನ್ನು ವಿಶೇಷ ಕಡತದಲ್ಲಿ ಭದ್ರಪಡಿಸಬೇಕು. ಅವಶ್ಯಕತೆಯಿದ್ದರೆ, ಅದನ್ನು ಮುಂದೆ ಪರಾಮರ್ಶಿಸಲು ಅವಕಾಶವಾಗುತ್ತದೆ.

ಶಿಕ್ಷಣ: ಹಿರಿಯರ ದೃಷ್ಟಿಕೋನದಲ್ಲಿ, ಕಬ್ಬಿಂಗ್ ಅಮೂಲ್ಯವಾದ, ಸಚ್ಚಾರಿತ್ರ್ಯದ ಬಗ್ಗೆ ಶಿಕ್ಷಣ ನೀಡುವುದಾಗಿದೆ. ಆದರೆ ಪುಟ್ಟ ಮಕ್ಕಳ ದೃಷ್ಟಿಕೋನವೇ ಬೇರೆ. ಬಾಲಕರು ಸಹಾ ಸಮಯ ಮತ್ತು ಒಳ್ಳೆಯ ಭ್ರಾತೃರೂಪದ ಜೀವನಕ್ಕಾಗಿ, ಹಿಂಡನ್ನು ಹುಡುಕಿ ಕೊಂಡು ಬರುತ್ತಾರೆ. ಅವರ ಈ ಆಶಯವನ್ನು ಪೂರ್ಣಗೊಳಿಸುವುದು ಅಕೇಲರ ಕರ್ತವ್ಯವಾಗಿದೆ. ಅವರ ನಿರೀಕ್ಷೆ, ಆಕಾಂಕ್ಷೆಗಳು, ಹಿಂಡಿನ ಜೀವನದಲ್ಲಿ ಒದಗಿಬರಬೇಕು. ಪರೋಕ್ಷವಾಗಿ ಸಚ್ಚಾರಿತ್ರ್ಯವನ್ನು ತಿದ್ದುವ ಕಾರ್ಯಕ್ರಮವನ್ನು ರೂಪಿಸಿಕೊಂಡು ಕಾರ್ಯತತ್ಪರರಾಗಿ ಗುರಿ ಸಾಧಿಸಬೇಕು.

ಹಿಂಡಿಗೆ ಸೇರಿದ ಹೊಸ ಬಾಲಕರಿಗೆ, ಹಿಂಡಿನ ಮೊದಲನೆಯ ದಿನದ ಕಾರ್ಯಕ್ರಮವು ಪ್ರಭಾವಶಾಲಿಯಾಗಿರುವಂತೆ ಮಾಡುವುದು ಅಕೇಲರ ಕರ್ತವ್ಯವಾಗಿದೆ. (ಈ ದಿಶೆಯಲ್ಲಿ ದೊರಕುವುದಾದರೆ ಗಿಲ್‌ಕ್ರಾಪ್ಟ್‌ನ "ವುಲ್ಫ್ ಕಬ್ಸ್" ಪುಸ್ತಕದ ನಾಲ್ಕನೆಯ ಅಧ್ಯಾಯವನ್ನು ಮನನ ಮಾಡಿಕೊಳ್ಳುವುದು ಬಹಳ ಸಹಾಯಕವಾಗುತ್ತದೆ.)

ಮೊದಲ ಕೆಲವು ದಿನಗಳನ್ನು ಆಟಗಳು, ಕಾಡು ಜೀವನದ ಕತೆಗಳು, ಸಾಹಸಮಯ ಕತೆಗಳು, ಮರಿಗಳ ಘನವಂದನೆ, ಮರಿಗಳ ವಂದನೆ, ಮರಿಗಳ ನಿಯಮ ಮತ್ತು ಪ್ರತಿಜ್ಞೆ ಇವುಗಳಿಗೆ ಮೀಸಲಾಗಿಡಬಹುದು. ಈ ವೇಳೆಗೆ ಕೆಲವು ಮರಿಗಳು ಈ ವಿಷಯಗಳನ್ನು ಗ್ರಹಿಸಿದ್ದು, ಮರಿಗಳಾಗಿ ದೀಕ್ಷೆ ಪಡೆಯಲು ತಯಾರಾಗಿರುತ್ತಾರೆ. ಅವರುಗಳಿಗೆ ದೀಕ್ಷೆ ವಹಿಸಬೇಕು. ಅವರನ್ನೀಗ ಪ್ರಥಮ ಚರಣ ಪರೀಕ್ಷೆಗಳು ಇತ್ಯಾದಿ ಕಡೆಗೆ ಒಯ್ಯುಬಹುದು. ಈಗ ಮತ್ತಷ್ಟು ಬಾಲಕರನ್ನು ಸೇರಿಸಿಕೊಳ್ಳಬಹುದು.

ಪ್ರತಿಜ್ಞೆ, ನಿಯಮಗಳು ಮೊದಲನೆಯ, ಬಹು ಮುಖ್ಯವಾದ ಹೆಜ್ಜೆ. ಆದ್ದರಿಂದ ಅಕೇಲರು ತಾವೇ ಸ್ವತಃ ಈ ವಿಷಯಗಳನ್ನು ವಿವರಿಸಬೇಕು. ಇತರರಿಗೆ ವಹಿಸಬಾರದು.

ಆಟಗಳು: ಈ ವಿಷಯವು ಹಿಂಡಿನ ಜೀವನದ ಬಹುತೇಕ ಭಾಗವನ್ನು ಆಕ್ರಮಿಸುತ್ತವೆ. ಆಟಗಳು ವಿಧ ವಿಧ. ಸಾಮಾನ್ಯ ಹಿಂಡಿನ ಆಟಗಳನ್ನಾಡಿಸಬಹುದು. ಅಂತರ ಷಟ್ಕ ಆಟಗಳು, ಇಂದ್ರಿಯ ಶಿಕ್ಷಣ ಆಟಗಳು, ರಿಲೇ ಆಟಗಳು, ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಚರಣಗಳ ಪರೀಕ್ಷಾಂಶಗಳ ಆಟಗಳು ಇತ್ಯಾದಿ ಆಟಗಳನ್ನು ಆಡಿಸಬಹುದು. ಇದರಿಂದ ಪರೀಕ್ಷಾಂಶಗಳನ್ನು ಅಭ್ಯಾಸ ಮಾಡಲೂ ಮೌಲ್ಯಮಾಪನ ಮಾಡಲೂ ಅವಕಾಶವಾಗುತ್ತದೆ.

ಕಥೆಗಳಿಂದ ಮರಿಗಳ ಕಲ್ಪನಾಶಕ್ತಿಗೆ ಇಂಬು ದೊರಕಿದಂತಾಗುತ್ತದೆ. ಅಕೇಲರು ಕಥೆಗಳ ಸಹಾಯದಿಂದ, ಮರಿಗಳಿಗೆ ಅಮೂಲ್ಯವಾದ ಪಾಠಗಳನ್ನು ಕಲಿಸಬಹುದು. ಕಥೆಗಳನ್ನು ಹೇಳಬೇಕೇ ಹೊರತು, ಅವುಗಳ ನೀತಿಯನ್ನು ಹೇಳಬಾರದು. ಮರಿಗಳಿಗೆ ಸಾಹಸಮಯ ಕಥೆಗಳು ಬಹಳ ಇಷ್ಟವಾಗುತ್ತದೆ. ಮರಿಗಳ ಹಿಂಡು, ಕಾಡಿನ ವಾತಾವರಣದಲ್ಲಿ, ಕಾಡಿನ ಕಥೆಗಳ ಆಧಾರದ ಮೇಲೆ ನಡೆಯುವುದರಿಂದ ಕಾಡು ಕಥೆಗಳು, ಮರಿಗಳ ಶಿಕ್ಷಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಹಾಗೆಂದ ಮಾತ್ರಕ್ಕೆ ಕಥೆಗಳನ್ನು ಕಾಡಿನ ಕಥೆಗಳಿಗೇ ಸೀಮಿತಗೊಳಿಸಬೇಕಾಗಿಲ್ಲ. ಸಾಹಸಮಯ ಕಥೆಗಳು, ಕಾಲ್ಪನಿಕ ಕಥೆಗಳು, ಹಾಸ್ಯ ಕಥೆಗಳು, ಚಾರಿತ್ರಿಕ ಕಥೆಗಳು, ಧಾರ್ಮಿಕ ಕಥೆಗಳು, ಶೌರ್ಯ ಕಥೆಗಳು ಇತ್ಯಾದಿ, ಯಾವುದಾದರೂ ಸರಿಯೆ, ಆದರ್ಶಮಯವಾಗಿದ್ದರಾಯಿತು. ಹಿಂಡಿನ ಸಭೆಯು ಕಥೆ ಅಥವಾ ಉದಂತಗಳಿಲ್ಲದೆ, ಪೂರ್ಣಗೊಳ್ಳುವುದಿಲ್ಲ.

ನಾಟಕಾಭಿನಯವು ಮರಿಗಳ ಕಲ್ಪನಾ ಶಕ್ತಿ, ಜಾಣತನ ಮತ್ತು ಸಾಹಸ ಪ್ರವೃತ್ತಿಗಳ ಬೆಳವಣಿಗೆ ಇವುಗಳಿಗೆ ಪೂರ್ಣ ಅವಕಾಶವನ್ನು ಕಲ್ಪಿಸುತ್ತದೆ. ಆದ್ದರಿಂದ ಆಗಾಗ್ಗೆ ಮರಿಗಳಿಗೆ, ಈ ಚಟುವಟಿಕೆ ಸಾಕಷ್ಟಿರಬೇಕು.

ಹಿಂಡಿನಲ್ಲಿ ಗುಣಮಟ್ಟವನ್ನು ಹೆಚ್ಚಿಸುವ ಕಾರ್ಯವು ಮುಖ್ಯವಾದುದು, ಗಣನೀಯವಾದುದು. ಮರಿಯು ಹೊಸ ವಿಷಯಗಳನ್ನು ಕಲಿಯಲು ಇಚ್ಛಿಸುತ್ತಾನೆ. ಹೊಸ ಹೊಸ ವಿಷಯಗಳನ್ನು ಕಲಿಸುವುದರಿಂದ, ಕೆಲಸವು ಸ್ವಾರಸ್ಯಕರವಾದುದೆಂದೂ, ಗೌರವಾರ್ಹವಾದುದೆಂದೂ, ಅವನು ಅರ್ಥ ಮಾಡಿಕೊಳ್ಳಲೆಂಬುದು ನಮ್ಮ ಅಭಿಲಾಷೆ. ಆ ಕಾರಣದಿಂದಲೇ ಪರೀಕ್ಷೆಗಳೂ ಮತ್ತು ಪದಕಗಳೂ, ಮರಿಗಳ ಶಿಕ್ಷಣ ಕಾರ್ಯಕ್ರಮ ದಲ್ಲಿ ಅಡಕವಾಗಿರುವುದು. ದಿನದ ಕಾರ್ಯಕ್ರಮದಲ್ಲಿ ಸ್ವಲ್ಪ ಸ್ವಲ್ಪವಾಗಿ, ವಿಷಯಗಳನ್ನು ತಿಳಿಸಬೇಕು. ವಿಷಯಗಳನ್ನು ತಿಳಿಸುವಾಗ, ಕಲ್ಪನಾ ಪ್ರಪಂಚದಲ್ಲಿ ವಿಹರಿಸುವ ರೀತಿಯಲ್ಲಿ, ಸ್ವಾರಸ್ಯಕರವಾಗಿ ವಿವರಿಸಬೇಕು. ಆಟಗಳು, ಕೆಲಸಗಳು, ಒಂದಾದ ಮೇಲೊಂದರಂತೆ ಇರಬೇಕು.

ಎಲ್ಲಾ ಚಟುವಟಿಕೆಗಳೂ ಹೊರಾಂಗಣ ಪ್ರದೇಶದಲ್ಲಿರಬೇಕೆಂಬುದು ನಿಯಮ. ಮರಿಗಳನ್ನು ಕಿಕ್ಕಿರಿದ ರಸ್ತೆಗಳಿಂದಲೂ, ಮಲಿನವಾದ ಕೊಠಡಿಗಳಿಂದಲೂ, ದೂರವಾಗಿ ಕರೆದೊಯ್ದು, ಸೃಷ್ಟಿಕರ್ತನ ಅರಿವು ಮೂಡುವ ಹೊರಾಂಗಣ ಪ್ರದೇಶವನ್ನು ಆರಿಸಿಕೊಂಡು, ಅವರು ಆನಂದಿಸಲು ಅವಕಾಶ ಮಾಡಿಕೊಡಬೇಕು. ಹಿಂಡಿನ ಎಲ್ಲಾ ಕಾರ್ಯಕ್ರಮಗಳನ್ನೂ ಹೊರಾಂಗಣದಲ್ಲಿ ನಡೆಸಲು ಯೋಜಿಸಬೇಕು. ಆಗಾಗ್ಗೆ ಮರಿಗಳನ್ನು ಹೊರ ಸಂಚಾರಕ್ಕೆ ಕರೆದೊಯ್ದು ಸ್ವಲ್ಪವಾದರೂ, ನಿಸರ್ಗವನ್ನು

ನೋಡಲು ಅವಕಾಶ ಮಾಡಿಕೊಡಬೇಕು. ಹೊರಾಂಗಣದ ಬಗ್ಗೆ ಪ್ರೀತಿಯು ಸ್ಫುರಿಸುವಂತೆ ಮಾಡಬೇಕು. ಪ್ರಕೃತಿ ಸೌಂದರ್ಯವನ್ನೂ, ಪ್ರಕೃತಿಯ ವೈಚಿತ್ರ್ಯಗಳನ್ನೂ ಕಾಣುವ, ಮೆಚ್ಚಿಕೊಳ್ಳುವ, ಅನುಭವಿಸುವ ಮತ್ತು ಆನಂದಿಸುವ, ತಿಳುವಳಿಕೆಯನ್ನು ಮೂಡಿಸಬೇಕು.

ಕರಕುಶಲ ಕಲೆಗಳಿಗೆ ಹಿಂಡಿನ ಕಾರ್ಯಕ್ರಮಗಳಲ್ಲಿ ಪ್ರಾಶಸ್ತ್ಯ ನೀಡಬೇಕು. ಆಟಗಳಲ್ಲಿಯೂ, ಪರೀಕ್ಷಾಂಶಗಳಲ್ಲಿಯೂ ಅಷ್ಟಾಗಿ ಕಾಣಿಸದೇ ಇರುವ ಬಾಲಕರು, ಕರಕುಶಲ ಕಲೆಗಳಲ್ಲಿ ಮೇಲುಗೈಯಿರಬಹುದೆಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳ ಬೇಕು. ಅವರಿಗೆ ಈ ದಿಶೆಯಲ್ಲಿ ಸಂಪೂರ್ಣವಾಗಿ ಉತ್ತೇಜನ ನೀಡಬೇಕು. ಅವರು ತಮ್ಮ ಪರೀಕ್ಷಾಂಶಗಳಲ್ಲಿ ಹೇಗೆ ಮಾಡುತ್ತಾರೆ? ಇವರ ಸಹಜ ಪ್ರವೃತ್ತಿಗಳೇನು? ಎಂಬ ಅಂಶಗಳನ್ನು ಗಮನಿಸಿ, ಸೂಕ್ತ ಪ್ರವೀಣತಾ ಪದಕಗಳನ್ನು ಆರಿಸಿಕೊಳ್ಳಲು ಸಲಹೆಯನ್ನು ನೀಡಬೇಕು. ಹಿಂಡಿನ ಜೀವನ ಮತ್ತು ಹಿಂಡನ್ನು ನಡೆಸುವ ರೀತಿಯಲ್ಲಿ ಮರಿಗಳಿಗೆ, ಸಾಕಷ್ಟು ವಿನೋದವೂ, ಆನಂದವೂ, ದೊರಕುವಂತಿರಬೇಕು. ಹಿಂಡಿನ ಗುಹೆಯು/ ಕೋಣೆಯು ಅದರದೇ ಆದ ರೀತಿಯಲ್ಲಿ, ಕಬ್ಬಿಂಗ್‌ನ ಸಾಹಸ ಮತ್ತು ಕಲ್ಪನೆಗಳಿಗೆ ಪೂರಕವಾಗಿರಬೇಕು.

ಮೊದಲ ತಂಡದ ಬಾಲಕರಲ್ಲಿ ಕೆಲವರು ಆರಾಳಿಗಳಾಗಲೂ, ಸಹಾಯಕ ರಾಗಲೂ ತಮ್ಮ ಸಾಮರ್ಥ್ಯವನ್ನು ತೋರಿಸಿಕೊಳ್ಳಬಹುದು. ಅವರವರ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಅವರನ್ನು ಷಟ್ಕಗಳ ಪುನರ್‌ರಚನೆಯ ವೇಳೆ ಉಪಯೋಗಿಸಿಕೊಳ್ಳಬಹುದು. ಮೊದಲ ತಂಡದ ಬಾಲಕರಿಗೆ ವ್ಯವಸ್ಥಿತವಾಗಿಯೂ, ಏಕಪ್ರಕಾರವಾಗಿಯೂ ಶಿಕ್ಷಣ ನೀಡಿದ ಬಳಿಕ, ಅವರು ಕೆಲವರಾದರೂ, ಪ್ರಥಮ ದ್ವಿತೀಯ ಚರಣ್ ಪರೀಕ್ಷೆಗಳನ್ನು ಮುಗಿಸಿ ತೃತೀಯ ಚರಣ್ ಪಡೆಯುವ ಹಂತಕ್ಕೆ ಬಂದಾಗ, ಅವರಿಗೆ ಹಿಂಡಿನ ಸಂಪ್ರದಾಯಗಳ ಬಗ್ಗೆ ಗೌರವ ನಿಷ್ಠೆಗಳು ಅಚಲವಾಗಿವೆಯೆಂದು ಖಚಿತಪಡಿಸಿಕೊಂಡು, ಮತ್ತಷ್ಟು ಬಾಲಕರನ್ನು ಸೇರಿಸಿಕೊಳ್ಳುವ ಮತ್ತು ಹಿಂಡನ್ನು ಪುನರ್‌ರಚಿಸುವ ಯೋಚನೆ ಮಾಡಬೇಕು. ಮೊದಲ ಪುನರ್‌ರಚನೆ ಮಾಡುವಾಗ ಹಿಂಡಿನಲ್ಲಿ 24 ಬಾಲಕರ ಸಂಖ್ಯೆಯೇ ಗರಿಷ್ಠ ಮಿತಿಯೆಂಬ ಅಂಶವನ್ನು ಗಮನದಲ್ಲಿರಿಸಿಕೊಂಡು, 18 ಬಾಲಕರಿಂದ ಮೂರು ಷಟ್ಕಗಳನ್ನೂ ಮತ್ತಷ್ಟು ಕಾಲಾನಂತರ ನಾಲ್ಕನೆ ಷಟ್ಕದ ಯೋಚನೆಯನ್ನೂ ಮಾಡಬಹುದು. ಆ ವೇಳೆಗೆ ಹಿಂಡನ್ನು ಪ್ರಾರಂಭಿಸಿ 1 ವರ್ಷವಾಗಿರುತ್ತದೆ. ಹಿಂಡಿನ ಗುಣಮಟ್ಟವನ್ನೂ ಕಾಯ್ದಿರಿಸಿದಂತಾಗುತ್ತದೆ.

◆

ಅಧ್ಯಾಯ-28

ಸಹಕಾರ

ಬಾಲಕರ ತಾಯಿ ತಂದೆಯರಿಂದ ದೊರಕುವ ಸಹಕಾರಕ್ಕೆ ತಕ್ಕಂತೆ ಗೆಲುವು ಸಾಧಿಸಲು ಅನುಕೂಲವಾಗುತ್ತದೆ. ತಾಯಿ ತಂದೆ ಅಥವಾ ಪೋಷಕರು, ಪ್ರವೇಶ ಪತ್ರಕ್ಕೆ ಸಹಿ ಹಾಕಿದಾಗಲೇ, ಬಾಲಕನ ಶಿಕ್ಷಣದ ವಿಷಯದಲ್ಲಿ, ತಮ್ಮ ಪಾತ್ರವನ್ನು ನಿರ್ವಂಚನೆಯಿಂದ, ನಿರ್ವಹಿಸಲು ಒಪ್ಪಿಕೊಂಡಂತೆ. ಮರಿಗಳ ಶಿಕ್ಷಣ ಕಾರ್ಯಕ್ರಮವು ಭಾಗಶಃ ಹಿಂಡಿನಲ್ಲಾದರೆ, ಭಾಗಶಃ ಮರಿಗಳ ಮನೆಯಲ್ಲಿ ನಡೆಯುತ್ತದೆ. ಮರಿಯ ಆರೋಗ್ಯವು ಅವನ ಸ್ವಂತ ಜವಾಬ್ದಾರಿಯಾಗಿರುತ್ತದೆ. ಅವನ ಮನೋಗತ ಉದ್ದೇಶಗಳು ಹಲವಾರು. ಅದರ ಸಾಧನೆಗೆ ಅವನು ಕೆಲಸ ಮಾಡುತ್ತಾನೆ. ಅವನು ಉಪಕಾರಗಳನ್ನು ಮಾಡಬೇಕು. ತನ್ನ ಮನೆಯವರಿಗೆ ಮತ್ತು ನೆರೆಹೊರೆಯವರಿಗೆ ಉಪಯುಕ್ತವಾಗಲು ಕಲಿಯಬೇಕು. ಆದಕಾರಣ ಅವನ ಬಗೆಗೆ ಮನೆಯಲ್ಲಿರುವವರ ಜವಾಬ್ದಾರಿ ಅಧಿಕವಾದುದು ಮತ್ತು ವಾಸ್ತವಿಕವಾಗಿ ಅವರು ಸಹಾಯಕರಾಗಿರಬಹುದು. ಆದ್ದರಿಂದ ಅಕೇಲರು ಅವರುಗಳನ್ನು ಆಗಾಗ್ಗೆ ಭೇಟಿಮಾಡಿ, ಅವರ ಪಾತ್ರವೇನು? ಎಂಬ ಬಗ್ಗೆ ಅವರಿಗೆ ತಿಳಿಸಿ, ಅವರ ಬಾಲಕನ ಶಿಕ್ಷಣವು ಸರಿಯಾದ ರೀತಿಯಲ್ಲಿ ಮುಂದುವರೆಯಲು, ಉಪಾಯವಾಗಿ ಅವರ ಸಹಕಾರವನ್ನು ಪಡೆಯಬೇಕು.

ಅವರ ಬಾಲಕನ ವಿಷಯದಲ್ಲಿ ಅವರ ಸಹಕಾರವನ್ನು ಆಶಿಸುವುದರ ಜೊತೆಗೆ, ಅವರಲ್ಲಿ ಕೆಲವರಾದರೂ, ಒಟ್ಟಾರೆ ಹಿಂಡಿಗೆ ಉಪಯುಕ್ತರಾಗುವ ಬಗ್ಗೆ ಸಹ ಸಹಕಾರವನ್ನು ಪಡೆಯಬಹುದು. ಉದಾ: ಬೋಧಕರಾಗಿ, ಪರೀಕ್ಷಕರಾಗಿ, ಸಹಾಯಕರಾಗಿ ಇತ್ಯಾದಿ –ಈ ಉದ್ದೇಶದಿಂದ ಅವರುಗಳನ್ನು ಹಿಂಡಿನ ಕಾರ್ಯ ಚಟುವಟಿಕೆಗಳಲ್ಲಿ ಆದಷ್ಟೂ ಉಪಯೋಗಿಸಿಕೊಳ್ಳಬೇಕು. ಈ ಕೆಳಕಂಡ ಸಲಹೆಗಳು, ಉಪಯೋಗಕ್ಕೆ ಬರಬಹುದು.

1. ಬಾಲಕನು ಹಿಂಡಿಗೆ ಸೇರುವಾಗ ಅವನ ತಾಯಿ ತಂದೆಯರು, ಅವನ ಜೊತೆ ಬರಬೇಕೆಂದು ಹೇಳಬೇಕು. ಹಾಗೆ ಅವರು ಬಂದಾಗ, ಹಾರ್ದಿಕವಾಗಿ ಸ್ವಾಗತಿಸಬೇಕು. ಅಂದಿನ ಹಿಂಡಿನ ಸಭೆಯನ್ನು ವೀಕ್ಷಿಸಲು ಕೇಳಿಕೊಳ್ಳಬೇಕು. ಮತ್ತೆ ಮತ್ತೆ ಭೇಟಿಕೊಡಲೂ, ಹಿಂಡು ಹೇಗೆ ನಡೆಯುತ್ತದೆಂಬ ಬಗ್ಗೆ, ಆಸಕ್ತಿವಹಿಸಲೂ ಸಹ ಕೇಳಿಕೊಳ್ಳಬೇಕು.

2. ಗ್ರೂಪ್ ಕಮಿಟಿಯಲ್ಲಿ ಉಪಯುಕ್ತ ಸದಸ್ಯರಾಗಬಲ್ಲ ತಾಯಿ ತಂದೆಯರನ್ನು ಅಕೇಲರು ಸಂಪರ್ಕ ಮಾಡಿ, ಅಂತಹವರನ್ನು ಗ್ರೂಪ್ ಕಮಿಟಿಯಲ್ಲಿ ಸದಸ್ಯರಾಗಲು ಕೇಳಿಕೊಳ್ಳಬೇಕು.

3. ಹಿಂಡಿನಲ್ಲಿ ಕೆಲವು ರೀತಿಯ ಸಹಾಯಗಳಿಗಾಗಿ ಮಹಿಳೆಯರ ತಂಡ ವೊಂದಿದ್ದರೆ ಬಹಳ ಸಹಾಯವಾಗುತ್ತದೆ. ಇದಕ್ಕಾಗಿ ತಾಯಂದಿರನ್ನು, ಅಕ್ಕಂದಿರನ್ನು ಕೇಳಿಕೊಳ್ಳಬಹುದು. ಈ ತಂಡವು ಕಸೂತಿ ಕೆಲಸ, ಸಂಗೀತ, ಚಿತ್ರಕಲೆ ಮುಂತಾದ ವಿಷಯಗಳಲ್ಲಿ ಶಿಕ್ಷಣ ನೀಡಲು ಸಹಾಯ ಮಾಡಬಹುದು.

4. ಕಾರು ಮುಂತಾದ ವಾಹನಗಳನ್ನು ಹೊಂದಿರುವ ಅಥವಾ ತಮ್ಮ ಪ್ರಭಾವವನ್ನು ಉಪಯೋಗಿಸಿ, ಹೊಂದಿರುವವರನ್ನು ಸಹಾಯಕ್ಕೆ ಕರೆತರಬಲ್ಲ, ತಾಯಿ ತಂದೆಯರನ್ನು "ಸಂಚಾರ ಸಾರಿಗೆ ಸಮಿತಿ" ಸದಸ್ಯರಾಗಲು, ಕೇಳಿಕೊಳ್ಳಬಹುದು. ಹಿಂಡಿನ ಹೊರ ಸಂಚಾರ ಮತ್ತು ಪರ್ಯಟನೆಗಳ ಸಂದರ್ಭಗಳಲ್ಲಿ, ಇವರು ಪರಿಣಾಮಕಾರಿಯಾಗಿ, ಸಹಾಯಕರಾಗಬಲ್ಲರು.

5. ಅವರ ಬಾಲಕರು ಭಾಗವಹಿಸುವ ಸಮಾರಂಭಗಳ ವೇಳೆಯಲ್ಲಿ ಆಯಾ ತಾಯಿ ತಂದೆಯರನ್ನು, ಅಕೇಲರು ಆಹ್ವಾನಿಸಬೇಕು. ಇದರಿಂದ ಬಾಂಧವ್ಯವು ಬಲಗೊಳ್ಳುತ್ತದೆ.

6. ಅರ್ಹತೆ ಇರುವ ತಾಯಿ ತಂದೆಯರನ್ನು ಪದಕಗಳ ವಿಷಯದಲ್ಲಿ ಬೋಧಕರಾಗಿ ಸಹಾಯ ಮಾಡಲು ಕೇಳಿಕೊಳ್ಳಬಹುದು. ಅವರನ್ನು ಪರೀಕ್ಷಕರನ್ನಾಗಿ ನಿಯಮಿಸಲೂ ಸಹ ಜಿಲ್ಲಾ ಕಮೀಷನರನ್ನು ಕೇಳಿಕೊಳ್ಳ ಬಹುದು.

7. ಶಿಬಿರದಲ್ಲಿ ಸಹ ತಾಯಿ ತಂದೆಯರ ಸಹಾಯವನ್ನು ಪಡೆಯಬಹುದು. ಉದಾ: ವಾಹನ ವ್ಯವಸ್ಥೆ, ಅಡಿಗೆ ಮನೆಯ ಉಸ್ತುವಾರಿ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಅವರನ್ನು ಉಪಯೋಗಿಸಿಕೊಳ್ಳಬಹುದು.

8. ಪರ್ಯಟನೆಗಳು; ಕೈಗಾರಿಕಾ ಕ್ಷೇತ್ರಕ್ಕೆ ಭೇಟಿ; ಚಾರಿತ್ರಿಕ ಸ್ಥಳಕ್ಕೆ ಭೇಟಿ; ನೈಸರ್ಗಿಕ ಸ್ಥಳಕ್ಕೆ ಭೇಟಿ; ತೋಟಗಾರಿಕೆ, ಪ್ರಥಮ ಚಿಕಿತ್ಸೆ, ಚಿತ್ರಕಲೆ ಮುಂತಾದ ವಿಷಯಗಳಲ್ಲಿ ಶಿಕ್ಷಣ; ಕಥೆ ಹೇಳುವುದು; ಹಾಡುಗಳನ್ನು ಹೇಳಿಕೊಡುವುದು ಇತ್ಯಾದಿ ಸಂದರ್ಭಗಳಲ್ಲಿ ತಾಯಿ ತಂದೆಯರ ಸಹಕಾರವು ಅಮೂಲ್ಯವಾದುದು.

ತಾಯಿ ತಂದೆಯರ ಸಹಕಾರವು ಹಿಂಡಿನ ಏಳಿಗೆಗೆ ಬಹಳ ಮುಖ್ಯವಾದುದು. ಅದರಿಂದುಂಟಾಗುವ ಪ್ರಯೋಜನವು ಅಪಾರವಾದುದು. ಸ್ವತಂತ್ರ ದಳಗಳಲ್ಲಿ ತಾಯಿ ತಂದೆಯರ ಪಾತ್ರವು, ಈ ದಿಶೆಯಲ್ಲಿ ಸ್ವಲ್ಪ ಹೆಚ್ಚಾಗಿಯೇ ಇರುತ್ತದೆಯೆಂದು ಹೇಳಬೇಕು. ಶಾಲಾ ಸಂಸ್ಥೆಗಳಲ್ಲಿರುವ ಅಧೀನ ದಳಗಳಲ್ಲಿ, ತಾಯ್ತಂದೆಯರ ಪಾತ್ರವು ಅಷ್ಟಿಲ್ಲವಾದರೂ ತಾವಾಗಿ ಮುಂದೆ ಬಂದವರ ಸಹಾಯ ಸಹಕಾರಗಳನ್ನು ಪಡೆದರೆ, ಕಬ್ಬಿಂಗ್‌ನ ಗುಣಮಟ್ಟವು ಉತ್ತಮಗೊಳ್ಳುವುದರಲ್ಲಿ ಸಂದೇಹವಿರುವುದಿಲ್ಲ.

ಅಕೇಲರು ಬರಿಯ ತಾಯಿ ತಂದೆಯರೊಡನೆ ಮಾತ್ರ, ಬಾಂಧವ್ಯವನ್ನು ಬೆಳೆಸಿಕೊಂಡರೆ ಸಾಲದು, ನೆರೆಹೊರೆಯ ಗುಂಪುಗಳು, ದಳಗಳ ಸಹಾಯ, ಸಹಕಾರಗಳನ್ನೂ ಪಡೆಯಬೇಕು.

ಸ್ಥಳೀಯ ಸಂಸ್ಥೆಗಳು, ಪೌರಾಡಳಿತ ಸಂಸ್ಥೆಗಳು ಮುಂತಾದವುಗಳ ಆಡಳಿತ ವರ್ಗ, ಸದಸ್ಯರು, ಸರ್ಕಾರದ ವಿವಿಧ ಇಲಾಖೆಗಳು ಹೀಗೆ ಸಾರ್ವಜನಿಕ ಸಂಪರ್ಕವು ಹೆಚ್ಚಿದಂತೆ ಸ್ಥಳೀಯವಾಗಿ, ಸ್ಕೌಟ್ ಚಳುವಳಿಯ ಅಭಿವೃದ್ಧಿಯೂ ಹೆಚ್ಚುತ್ತದೆ.

◆

ಅಧ್ಯಾಯ-29

ಕಬ್‌ಮಾಸ್ಟರು ಮತ್ತು ತರಬೇತಿ

ಕಬ್‌ಮಾಸ್ಟರ ಕೆಲಸಕ್ಕೆ ತರಬೇತಿಯು ಅಗತ್ಯವಾಗಿದೆ. ಕೆಲವು ಅವಶ್ಯಕವಾದ ಪುಸ್ತಕಗಳನ್ನು ಓದಿಯೂ, ಕೆಲಸ ಮಾಡುತ್ತಿರುವ ಹಿಂಡನ್ನು ಗಮನಿಸಿಯೂ, ತಮ್ಮದೇ ಆದ ಹಿಂಡನ್ನು ಪ್ರಾರಂಭಮಾಡಲು ಕೆಲವರಿಗೆ ಸಾಧ್ಯವಾಗಬಹುದು. ಇದರಿಂದ ಅವರಿಗೆ ಹಿಂಡನ್ನು ನಡೆಸುವ ಅನುಭವವು ಸಿಗಬಹುದು. ಆದರೆ ಹಿಂಡಿನ ಪೂರ್ಣ ಜವಾಬ್ದಾರಿಯನ್ನು ಹೊತ್ತು ಮರಿಗಳಿಗೆ ಪರಿಣಾಮಕಾರೀ ಶಿಕ್ಷಣವನ್ನು ಕೊಡುವ ಸಾಮರ್ಥ್ಯವನ್ನು ಪಡೆಯಬೇಕಾದರೆ, ಸೂಕ್ತ ತರಬೇತಿ ಶಿಬಿರಗಳಲ್ಲಿ ಭಾಗವಹಿಸಲೇ ಬೇಕಾದ ಅವಶ್ಯಕತೆಯಿದೆ. ಆ ರೀತಿ ಕಬ್‌ಮಾಸ್ಟರು ಭಾಗವಹಿಸಬಹುದಾದ, ವಿವಿಧ ರೀತಿಯ ಅತ್ಯವಶ್ಯಕ ಶಿಬಿರಗಳು 4 ಹಂತದಲ್ಲಿವೆ.

1. ಸಾಮಾನ್ಯ ಮಾಹಿತಿ ಶಿಬಿರ.
2. ಮೂಲ ತರಬೇತಿ ಶಿಬಿರ.
3. ಮುಂದುವರೆದ ಅಥವಾ ಪ್ರೌಢ ತರಬೇತಿ ಶಿಬಿರ.

3ಅ. ತರಬೇತಿ ಅಧ್ಯಯನ

4. ಹಿಮಾಲಯ ವುಡ್ ಬ್ಯಾಡ್ಜ್ ಶಿಬಿರ.

ಇವುಗಳಲ್ಲಿ ಮೊದಲನೆಯದು ಹೆಸರೇ ತಿಳಿಸುವಂತೆ, ಕಬ್ ಮಾಸ್ಟರು ಪಡೆಯಲೇಬೇಕಾದ ಪ್ರಾಥಮಿಕ ತರಬೇತಿ. 7 ದಿನಗಳ ಈ ಶಿಬಿರದಲ್ಲಿ, ಕಬ್ ಮಾಸ್ಟರು ಹಿಂಡನ್ನು ನಡೆಸಲು ಬೇಕಾದ ಕಾರ್ಯಾರ್ಥ, ಸರಳ ತಿಳುವಳಿಕೆಯನ್ನು ಕೊಡುತ್ತದೆ. ಮರಿಗಳ ಶಿಕ್ಷಣದಲ್ಲಿ ಅನುಸರಿಸಬೇಕಾದ ವಿಶೇಷ ವಿಧಾನಗಳನ್ನು ತಿಳಿಸುತ್ತದೆ.

ಕಬ್‌ಮಾಸ್ಟರಾಗಿ ಸನ್ನದು ಪಡೆಯುವ ಮುನ್ನ ಈ ಶಿಬಿರದಲ್ಲಿ ಭಾಗವಹಿಸಿ ಪ್ರಮಾಣ ಪತ್ರ ಪಡೆದಿರಬೇಕು: ಈ ನಿಯಮವು ಸಹಾಯಕ ಕಬ್‌ಮಾಸ್ಟರಿಗೂ ಅನ್ವಯಿಸುತ್ತದೆ.

ಮೂಲ ತರಬೇತಿ ಮುಗಿಸಿ, ಸನ್ನದು ಪಡೆದು ಕೆಲವು ಕಾಲ ಹಿಂಡನ್ನು ನಡೆಸಿ ಅನುಭವ ಪಡೆಯುತ್ತಿದ್ದಂತೆ, ಪ್ರೌಢ ತರಬೇತಿ ಪಡೆಯಲು ಅವಕಾಶಗಳಿಗಾಗಿ ಎದುರು

ನೋಡಬೇಕು. ಪ್ರೌಢ ತರಬೇತಿಯು ಕಬ್‌ಮಾಸ್ಟರ್ ಮಾಡುವ ಕೆಲಸ ಮತ್ತು ಮರಿಗಳಿಗೆ ನೀಡುವ ಶಿಕ್ಷಣದ ಬಗ್ಗೆ ಮತ್ತಷ್ಟು ಸೂಕ್ಷ್ಮ ಪರಿಜ್ಞಾನವನ್ನು ನೀಡುತ್ತದೆ.

ತೀವ್ರವಾದ ವಿನಯ ಭಾವನೆಯಿಂದಲೂ, ಪ್ರಾಮಾಣಿಕತೆಯಿಂದಲೂ ಮತ್ತು ಶ್ರದ್ಧೆಯಿಂದಲೂ ತನ್ನ ಜವಾಬ್ದಾರಿಗಳನ್ನು ನಿರ್ವಹಿಸಿ ತನ್ನ ಹಿಂಡಿನ ಮರಿಗಳೊಂದಿಗೆ "ಕಬ್ಬಿಂಗ್" ಅನ್ನು ಮಾಡಿದ್ದಾದರೆ, ತಾನು ಹೆಚ್ಚು ಕಲಿಯಲು ಸಾಧ್ಯವಾಗುತ್ತದೆಂಬ ಶಿಕ್ಷಣದ ಮೂಲ ಅಂಶವನ್ನು ಸದಾ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಅಭ್ಯರ್ಥಿಯು ತನ್ನ ಕಾರ್ಯದಲ್ಲಿ ಮುಂದುವರೆಯುವ ಉದ್ದೇಶವುಳ್ಳವನಾಗಿರುವನೆಂದೂ ಕಬ್ಬಿಂಗ್‌ನಲ್ಲಿ ಹೆಚ್ಚು ಹೆಚ್ಚು ಅನುಭವ, ಜ್ಞಾನಗಳನ್ನು ಪಡೆದು, ತನ್ನ ನಿಪುಣತೆಯನ್ನು ಸಂಸ್ಥೆಯ ಏಳಿಗೆಗಾಗಿ ಧಾರೆಯೆರೆಯುವರೆಂದೂ ಭಾವಿಸುವುದು, ಹಿಮಾಲಯ ವುಡ್‌ಬ್ಯಾಡ್ಜ್ ಅನ್ನು ನೀಡುವುದರ ಮುಖ್ಯ ಗುರುತಾಗಿದೆ.

ಹಿಮಾಲಯ ವುಡ್‌ಬ್ಯಾಡ್ಜ್ ಪಡೆದ ಬಳಿಕ ಎಂದಿನಂತೆ ತಮ್ಮ ಅಧ್ಯಯನ ಕಾರ್ಯವನ್ನು ಮುಂದುವರೆಸುತ್ತಾ, ಕಾಲೋಚಿತವಾಗಿ, ತಮ್ಮ ತಿಳುವಳಿಕೆ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುತ್ತಾ, ಜೊತೆಗೆ ವೈಯಕ್ತಿಕವಾಗಿ, ನ್ಯೂನಾತಿರೇಕಗಳಿಲ್ಲದ ಸ್ಕೌಟ್ ಜೀವನವನ್ನು ನಡೆಸುತ್ತಾ, ಇತರರಿಗೆ, ಎಂದರೆ ಮರಿಗಳಿಗೆ (ಸ್ಕೌಟುಗಳಿಗೆ, ರೋವರ್‌ಗಳಿಗೆ) ಮತ್ತು ಇತರ ಸ್ಕೌಟರುಗಳಿಗೆ ಮಾದರಿಯಾಗಬೇಕು.

ಹಿಮಾಲಯ ವುಡ್‌ಬ್ಯಾಡ್ಜ್ ಶಿಬಿರವನ್ನು ರಾಷ್ಟ್ರೀಯ ಕಛೇರಿಯ, ಅಧಿಕೃತ ಮನ್ನಣೆ ಪಡೆದು ನಡೆಸಲಾಗುತ್ತದೆ. ಆ ಶಿಬಿರದಲ್ಲಿ ಭಾಗವಹಿಸಿ, ಉತ್ತೀರ್ಣರಾಗಿ, ಪಡೆಯುವ ಪ್ರಮಾಣಪತ್ರ ಮತ್ತು ವೃಕ್ಷಮಣಿಗಳು ಪಾರ್ಚ್‌ಮೆಂಟ್ ಮತ್ತು ಬೀಡ್ಸ್‌ಗಳು ರಾಷ್ಟ್ರೀಯ ಕಛೇರಿಯ ಸ್ವತ್ತಾಗಿರುತ್ತದೆ. ಅವಶ್ಯಕತೆ ಬಿದ್ದರೆ, ಸೂಕ್ತ ಕಾರಣಗಳಿಂದ ಅದನ್ನು ವಾಪಸ್ ಪಡೆಯುವ ಹಕ್ಕೂ ರಾಷ್ಟ್ರ ಕಾರ್ಯಾಲಯಕ್ಕಿರುತ್ತದೆ.

ಹಿಮಾಲಯ ವುಡ್‌ಬ್ಯಾಡ್ಜ್ ಧಾರಕರು ಆಪ್ತ ಹಾಗೂ ಸುಖೀ ಕುಟುಂಬದ ಸದಸ್ಯರಾಗಿದ್ದು ರಾಷ್ಟ್ರ ಕಛೇರಿಯು ಸಂಘಟಿಸುವ, ಪುನರ್ಮಿಲನ ಸಮಾವೇಶದಲ್ಲಿ ರಾಷ್ಟ್ರಮಟ್ಟದಲ್ಲಿ ಒಮ್ಮೆಯಾದರೂ ಸೇರುವ ಅವಕಾಶವಿರುತ್ತದೆ.

◆

ಅಧ್ಯಾಯ-30

ನಮ್ಮ ಮುಂದಿನ ಸವಾಲುಗಳು

ಭಾರತದಲ್ಲಿ ನಾವೆಷ್ಟೇ ಪ್ರಾಮಾಣಿಕವಾಗಿ ಕಬ್ಬಿಂಗ್‌ನ ಬೆಳವಣಿಗೆಗಾಗಿ ಪ್ರಯತ್ನ ನಡೆಸುತ್ತಿದ್ದರೂ, ಹಲವು ಯಥಾರ್ಥವಾದ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

ಹಿಂಡುಗಳೂ ಸೇರಿದಂತಿರುವ ಸ್ವತಂತ್ರ ಗುಂಪುಗಳು ಬಹಳ ಕಡಿಮೆ. ಅಂತಹ ಗುಂಪುಗಳಿಗೆ (ಹಿಂಡುಗಳಿಗೆ) ಆರ್ಥಿಕ ಸಂಪನ್ಮೂಲಗಳೂ, ಬೆಂಬಲವೂ ಸಾಕಷ್ಟು ಇರುವುದಿಲ್ಲ.

ಆರ್ಥಿಕವಾಗಿ ಶಾಲೆಗಳಿಗೆ ಸೇರಿದ ಹಿಂಡುಗಳೂ ಸಹ ಅಷ್ಟೇ ದುರ್ಬಲ ವಾಗಿವೆ. ಏಕೆಂದರೆ ಪ್ರಾಥಮಿಕ ಶಿಕ್ಷಣವನ್ನು ಉಚಿತವೆಂದು ಸಾರಿದ ಮೇಲೆ ಯಾವುದೇ ರೀತಿಯ ವಿಶೇಷ ಶುಲ್ಕವನ್ನೂ ಬಾಲಕರಿಂದ ವಸೂಲು ಮಾಡುವಂತಿಲ್ಲ.

ಮರಿಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಕಾರ್ಯಾಲಯವು ಸಾಹಿತ್ಯವನ್ನು ಎಷ್ಟೇ ಒದಗಿಸಿದರೂ ಸಹ, ವಿಶಾಲ ಭಾರತದಲ್ಲಿನ ಭಾಷಾ ಸಮಸ್ಯೆಯ ಕಾರಣ (ಇಂಗ್ಲಿಷ್, ಹಿಂದಿ) (ಪ್ರಾಥಮಿಕ ಶಿಕ್ಷಣವು ಆ ಕಾರಣ ಪ್ರಾದೇಶಿಕ ಭಾಷೆಯಲ್ಲಿ ಸಾಹಿತ್ಯವು ಬೆಳೆಯಬೇಕು. ನಮ್ಮಲ್ಲಿ ಕನ್ನಡ ಭಾಷಾ ಮಾಧ್ಯಮದಲ್ಲಿರುತ್ತದೆ) ಅದು ಹಿಂಡುಗಳ ಮಟ್ಟದಲ್ಲಿ ಉಪಯೋಗವಿಲ್ಲವಾಗಿದೆ.

ಅಕೇಲರು ತಮ್ಮ ಅಮೂಲ್ಯವಾದ ಕಾಲವನ್ನೂ, ಬಿಡುವು ವೇಳೆಯನ್ನೂ, ಸಾಂಸಾರಿಕ ಸೌಕರ್ಯಗಳನ್ನೂ ತ್ಯಾಗ ಮಾಡಬಹುದಾದರೂ, ಹಿಂಡನ್ನು ನಡೆಸಲು ಬೇಕಾದ ಹಣವನ್ನೂ ಖರ್ಚುಮಾಡಲು ತೊಂದರೆಯಾಗುತ್ತದೆ. ಮೇಲು ಖರ್ಚಿಗಾದರೂ ಅಕೇಲರಿಗೆ ಆರ್ಥಿಕ ಬೆಂಬಲ ನೀಡುವುದು ಉಚಿತವೆನಿಸುತ್ತದೆ. ಸ್ಥಾನಿಕವಾಗಿ ಈ ಸೌಲಭ್ಯವು ಹೆಚ್ಚಬೇಕು.

ಸರಿಯಾದ, ಬಲವಾದ ಮರಿಗಳ ಶಿಕ್ಷಣದ ನೆಲೆಗಟ್ಟಿನ ಮೇಲೆ ಪರಿಣಾಮ ಕಾರಿಯಾದ ಸ್ಕೌಟ್ ಶಿಕ್ಷಣವು ಬೆಳವಣಿಗೆ ಹೊಂದುವುದೆಂದು ನಾವುಗಳು ನಂಬುವುದಾದರೆ ಸ್ಕೌಟಿಂಗಿನಲ್ಲಿರುವ ಎಲ್ಲಾ ಹಿರಿಯರೂ ಮೇಲೆ ಕಾಣಿಸಿರುವ ನಾಲ್ಕು

ಅಂಶಗಳನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಮರಿಗಳ ಶಿಕ್ಷಣವನ್ನು ಬಲಪಡಿಸಬೇಕು. ಉತ್ತಮ ಮರಿಗಳು ಮುಂದೆ ಉತ್ತಮ ಸ್ಕೌಟ್ ಮತ್ತು ರೋವರ್ ಆಗುತ್ತಾರೆ. ಇನ್ನೂ ಮುಂದೆ ಭಾರತದ ಉತ್ತಮತರ ನಾಗರಿಕರೆನಿಸುತ್ತಾರೆ.

ಪ್ರದೇಶ, ದತ್ತ ಸ್ವೀಕಾರ

ಸಮಾಜಸೇವೆ ಮತ್ತು ಸಮಾಜಾಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮ ಕಾರಿಯಾಗಿ ನಿರ್ವಹಿಸಿ, ಯಾವುದೇ ರಸ್ತೆ, ಮೊಹಲ್ಲಾ, ಶಾಲೆ, ಸಾರ್ವಜನಿಕ ಸ್ಥಳ ಇವೇ ಮುಂತಾದ ಪ್ರದೇಶವೊಂದರ "ದತ್ತ ಸ್ವೀಕಾರ" ಮಾಡಿಕೊಳ್ಳಲು ಗಮನಹರಿಸ ಬೇಕೆಂದು ಇದೀಗ ರಾಷ್ಟ್ರ ಸಂಸ್ಥೆಯ ನೀತಿಯಾಗಿದೆ.

ತೊನ್ನು ರೋಗದ ಅರಿವು, ನಿರ್ಮಲೀಕರಣ ಕಾರ್ಯಕ್ರಮ, ಪ್ರಕೃತಿ ಸಂರಕ್ಷಣೆ ಮುಂತಾದ ನಾವು ಆರಿಸಿಕೊಂಡಿರುವ ವಿವಿಧ ಸೇವಾ ಕಾರ್ಯಗಳನ್ನು, ದತ್ತು ಸ್ವೀಕಾರ ಮಾಡಿಕೊಂಡ ಯಾವುದೇ ಒಂದು ಪ್ರದೇಶದಲ್ಲಿ ಕೇಂದ್ರೀಕರಿಸಿದ್ದಾದರೆ ಆ ಪ್ರದೇಶದ, ಸಮಾಜದ ಅಭಿವೃದ್ಧಿಗೆ ಅದು ಸಹಕಾರಿಯಾಗುತ್ತದಷ್ಟೇ ಅಲ್ಲದೆ, ಘಟಕದ ಸೇವಾಕಾರ್ಯವು ಎದ್ದು ಕಾಣುತ್ತದೆ.

"ತೃತೀಯ ಚರಣದ ಪರೀಕ್ಷಾಂಶವೊಂದು, ಈ ರೀತಿ ಮರಿಗಳು ಯಾವುದಾದರೊಂದು ಸಾರ್ವಜನಿಕ ಸ್ಥಳವನ್ನು ದತ್ತು ಸ್ವೀಕಾರ ಮಾಡಿಕೊಂಡು, ಅಲ್ಲಿ ಹಿಂಡಿನ ಉಪಕಾರವನ್ನು (ಸೇವೆ) ಮಾಡಲು ಉತ್ತೇಜನ ಕೊಡುತ್ತದೆ".

ಆದ್ದರಿಂದ ಅಕೇಲರುಗಳು, ಮರಿಗಳು ತಮ್ಮ ವೈಯಕ್ತಿಕ, ಷಟ್ಕದ ಮತ್ತು ಹಿಂಡಿನ ಉಪಕಾರವನ್ನು (ಸೇವೆಯನ್ನು) ಅವರವರು "ದತ್ತ ಸ್ವೀಕಾರ" ಮಾಡಿಕೊಂಡ ಪ್ರದೇಶದಲ್ಲಿಯೇ ಮಾಡಲು ಮಾರ್ಗದರ್ಶನವನ್ನು ನೀಡಿದರೆ, ಮರಿಗಳು ಮಾಡಿದ ಸೇವೆಯು ಅಂತಹ ಪ್ರದೇಶದಲ್ಲಿ ಎದ್ದು ಕಾಣುತ್ತದೆ ಮತ್ತು ಪ್ರದರ್ಶನಾತ್ಮಕವಾಗಿರುತ್ತದೆ.

ಇದರಿಂದ ಹಿಂಡು ಮತ್ತು ಸಮಾಜ ಇವುಗಳ ನಡುವಿನ ಅವಿಚ್ಛಿನ್ನ ಸಂಬಂಧ (ಬಾಂಧವ್ಯ) ಮತ್ತು ಹೊಂದಾಣಿಕೆಗಳು ಬೆಳೆಯುತ್ತವೆ. ಹಿಂಡಿನ ಏಳಿಗೆಗೆ ಸಹಾಯಕವಾಗುತ್ತದೆ.

◆

ಓದಲು ಉಪಯುಕ್ತವಾದ ಪುಸ್ತಕಗಳು

ಸ್ಕೌಟಿಂಗ್ ಫಾರ್ ಬಾಯ್ಸ್	– ಲಾರ್ಡ್ ಬೇಡನ್ ಪೊವೆಲ್
ವುಲ್ಫ್ ಕಬ್ಸ್ ಹ್ಯಾಂಡ್ ಬುಕ್	– ಲಾರ್ಡ್ ಬೇಡನ್ ಪೊವೆಲ್
ಗೇಮ್ಸ್ ಫಾರ್ ಕಬ್ಸ್	– ಗಿಲ್ ಕ್ರಾಪ್ಟ್
ಆಲ್ ದಿ ಮೌಗ್ಲಿ ಸ್ಟೋರೀಸ್	– ಕಿಪ್ಲಿಂಗ್
ಜಸ್ಟ್ ನೋ ಸ್ಟೋರೀಸ್	– ಕಿಪ್ಲಿಂಗ್
ಟೇಲ್ಸ್ ಫ್ರಂ ಪಂಚತಂತ್ರ	– ಇ.ಎಫ್.ಡಾಡ್
100 ಐಡಿಯಾಸ್ ಫಾರ್ ಪ್ಯಾಕ್ ಮೀಟಿಂಗ್ಸ್	– ಸ್ಕೌಟರ್ಸ್ ಸೀರೀಸ್
ಸ್ಪೆಷಲ್ ಪ್ಯಾಕ್ ಮೀಟಿಂಗ್ಸ್	– ಸ್ಕೌಟರ್ಸ್ ಸೀರೀಸ್
ಜಂಗಲ್ ಲೋರ್	– ಸ್ಕೌಟರ್ಸ್ ಸೀರೀಸ್
ಪ್ಯಾಕ್ ಹಾಲಿಡೇಸ್	– ಸ್ಕೌಟರ್ಸ್ ಸೀರೀಸ್
ಕ್ಯಾಪಿಂಗ್ ಫಾರ್ ಕಬ್ಸ್	– ಸ್ಕೌಟರ್ಸ್ ಸೀರೀಸ್
ಎ.ಪಿ.ಆರ್.ಓ. I ಮತ್ತು II	– ಎನ್.ಹೆಚ್.ಕ್ಯೂ

◆

ಕನ್ನಡ ಪುಸ್ತಕಗಳು

ಕಾಡಿನ ಕತೆಗಳು – ಮು. ವೆಂಕಟಕೃಷ್ಣಪ್ಪ

ಮರಿಗಳ ಪುಸ್ತಕ – ಎಂ.ಹೆಚ್. ರಾಮಚಂದ್ರರಾವ್

ಗುರಿ, ನೀತಿ, ನಿಯಮಗಳು ಮತ್ತು ಸಂಘಟನೆ
(ಸ್ಕೌಟ್ ಶಾಖೆ ಎ.ಪಿ.ಆರ್.ಓ. ಪಾರ್ಟ್–II)
ಮರಿಗಳ ವಿಭಾಗ – ಕರ್ನಾಟಕ ರಾಜ್ಯ ಕಛೇರಿ

ಕಬ್‌ಮಾಸ್ಟರಿಗೆ ಯೋಜನೆ ಮತ್ತು
ಕಾರ್ಯನಿರೂಪಣೆ – ಕರ್ನಾಟಕ ರಾಜ್ಯ ಕಛೇರಿ

ಕಾಡು ಕುಣಿತಗಳು – ಕರ್ನಾಟಕ ರಾಜ್ಯ ಕಛೇರಿ

ಹಿಂಡನ್ನು ನಡೆಸುವ ರೀತಿ – ಕರ್ನಾಟಕ ರಾಜ್ಯ ಕಛೇರಿ

ಕಬ್ ಮಾಸ್ಟರುಗಳ ಕೈಪಿಡಿ – ಕರ್ನಾಟಕ ರಾಜ್ಯ ಕಛೇರಿ

ಕಬ್ಸ್‌ಗಳ ಪ್ರಗತಿಪರ ಪದಕಗಳು



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ

ದೂರದರ್ಶಿತ್ವ - 2024

2024ರ ವೇಳೆಗೆ, ಅತ್ಯಂತ ಕ್ರಿಯಾಶೀಲ ಯುವಚಳವಳಿಯಾದ ಅಂತರರಾಷ್ಟ್ರೀಯ ವ್ಯಾಪ್ತಿಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಮೌಲ್ಯಾಧಾರಿತವಾದ, ಅತ್ಯಾಕರ್ಷಕ ಗುಣಗಳುಳ್ಳ, ಸ್ವಾವಲಂಬಿಯಾದ, ಲಿಂಗತಾರತಮ್ಯವಿಲ್ಲದ ಯುವಜನಾಂಗದ ಅವಶ್ಯಕತೆಗಳಿಗನುಗುಣವಾಗಿ ಬೆಳೆಯುತ್ತದೆ.

ಅಲ್ಲದೆ, ಸಮರ್ಥ ನಾಯಕರುಗಳ ಪರಿಣಾಮಕಾರಿ ಮಾರ್ಗದರ್ಶನದ ಮೂಲಕ ಮುಂದುವರೆದ ತಂತ್ರಜ್ಞಾನ, ಉತ್ತಮ ಆಡಳಿತ ವ್ಯವಸ್ಥೆಯುಳ್ಳ ಸವಾಲಿನಿಂದ ಕೂಡಿದ ಸಂಸ್ಥೆಯಾಗುತ್ತದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ

ದೂರದರ್ಶಿತ್ವ - 2024

2024ರ ವೇಳೆಗೆ, ಅತ್ಯಂತ ಕ್ರಿಯಾಶೀಲ
ಯುವಚಳವಳಿಯಾದ ಅಂತರರಾಷ್ಟ್ರೀಯ ವ್ಯಾಪ್ತಿಯ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು
ಮೌಲ್ಯಾಧಾರಿತವಾದ, ಅತ್ಯಾಕರ್ಷಕ ಗುಣಗಳುಳ್ಳ,
ಸ್ವಾವಲಂಬಿಯಾದ, ಲಿಂಗತಾರತಮ್ಯವಿಲ್ಲದ
ಯುವಜನಾಂಗದ ಅವಶ್ಯಕತೆಗಳಿಗನುಗುಣವಾಗಿ ಬೆಳೆಯುತ್ತದೆ.

ಅಲ್ಲದೆ, ಸಮರ್ಥ ನಾಯಕರುಗಳ ಪರಿಣಾಮಕಾರಿ
ಮಾರ್ಗದರ್ಶನದ ಮೂಲಕ ಮುಂದುವರೆದ ತಂತ್ರಜ್ಞಾನ,
ಉತ್ತಮ ಆಡಳಿತ ವ್ಯವಸ್ಥೆಯುಳ್ಳ ಸವಾಲಿನಿಂದ ಕೂಡಿದ
ಸಂಸ್ಥೆಯಾಗುತ್ತದೆ.